ಗುರುವಾರ, ಫೆಬ್ರುವರಿ 29, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ನಟಿ ಅದಿತಿ ರಾವ್ ಹೈದರಿ ಅವರು ಕಾಣಿಸಿಕೊಂಡಿದ್ದು ಹೀಗೆ...



ಕರ್ನಾಟಕ ಸರ್ಕಾರ

ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
Bengaluru International Film Festival
29 FEB - 07 MAR | 2024

ಬೆಂಗಳೂರಿನಲ್ಲಿ ಜಗತ್ತು • The world in Bengaluru

15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
ಉದ್ಘಾಟನಾ ಸಮಾರಂಭ

29 ಫೆಬ್ರವರಿ 2024, ಗುರುವಾರ, ಸಂಜೆ 5:00 ಕ್ಕೆ | ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಪೂರ್ವದ್ವಾರ, ಬೆಂಗಳೂರು

200+ FILMS ಸಿನಿಮಾಗಳು | 60+ COUNTRIES ದೇಶಗಳು | 15 SECTIONS ವಿಭಾಗಗಳು | 13 SCREENS ಪ್ರದರ್ಶನ ಕೇಂದ್ರಗಳು

ಸರ್ವರಿಗೂ ಆದರದ ಸ್ವಾಗತ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಚಿತ್ರೋತ್ಸವ ದಿನಾಂಕ:
29 ನೇ ಫೆಬ್ರವರಿ ಯಿಂದ 07 ನೇ ಮಾರ್ಚ್ 2024 ರ ವರೆಗೆ

ಸಂಜೆ 5.00 ಗಂಟೆಯಿಂದ ರಿಕಿ ಕೇಜ್ ಇವರಿಂದ ಕಾರ್ಯಕ್ರಮ

ಪ್ರದರ್ಶನ ಕೇಂದ್ರಗಳು:
ಪಿವಿಆರ್ ಸಿನಿಮಾಸ್
ಒರಾಯನ್ ಮಾಲ್, ರಾಜಾಜಿನಗರ
ಡಾ|| ರಾಜ್‌ಕುಮಾರ್ ಭವನ
ಚಾಮರಾಜಪೇಟೆ
ಸುಚಿತ್ರ ಫಿಲಂ ಸೊಸೈಟಿ
ಬನಶಂಕರಿ 2ನೇ ಹಂತ

ಚಿತ್ರೋತ್ಸವದ ಸ್ಮರಣ ಸಂಚಿಕೆ ಬಿಡುಗಡೆ
ಡಾ. ಶಿವರಾಜಕುಮಾರ್
ಖ್ಯಾತ ಚಲನಚಿತ್ರ ನಟರು



ಚಿತ್ರೋತ್ಸವದ ರಾಯಭಾರಿ
ಶ್ರೀ ಡಾಲಿ ಧನಂಜಯ
ಖ್ಯಾತ ಚಲನಚಿತ್ರ ನಟ ಹಾಗೂ ನಿರ್ಮಾಪಕರು

ನುಡಿದಂತೆ ನಡೆದಿದ್ದೇವೆ...

ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹ ಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170 | ಗೃಹಲಕ್ಷ್ಮಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000 | ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
BIFFESblr biffes.org
CMofKarnataka https://dipr.karnataka.gov.in/
ಕರ್ನಾಟಕ ವಾರ್ತೆ

110 ಹಳ್ಳಿಗಳಿಗೆ 100 ಟ್ಯಾಂಕರ್‌ಗಳಿಂದ ನೀರು ಪೂರೈಕೆ • ಪ್ರತಿ ವಾರ್ಡ್‌ಗೆ ಎಂಜಿನಿಯರ್ ನಿಯೋಜನೆ

ಟ್ಯಾಂಕರ್ ನೀರಿಗೆ ದರ ನಿಗದಿ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಖಾಸಗಿ ಟ್ಯಾಂಕರ್‌ಗಳು ಪೂರೈಸುತ್ತಿರುವ ನೀರಿನ ದರಕ್ಕೆ ಕಡಿವಾಣ ಹಾಕಲು ಬಿಬಿಎಂಪಿ ಹಾಗೂ ಜಲಮಂಡಳಿ ನಿರ್ಧರಿಸಿದ್ದು, ಶೀಘ್ರವೇ ಏಕರೂಪದ ದರ ನಿಗದಿ ಮಾಡಲಿವೆ.

‘ನೀರಿನ ಟ್ಯಾಂಕರ್‌ಗಳ ಮಾಲೀಕರ ಪ್ರತ್ಯೇಕ ಸಂಘಗಳಿಲ್ಲ. ಲಾರಿ ಮಾಲೀಕರ ಸಂಘಗಳೊಂದಿಗೆ ಇವರಿದ್ದಾರೆ. ಆದರೂ ಸಾರಿಗೆ ಇಲಾಖೆಯಿಂದ ಮಾಲೀಕರ ಮಾಹಿತಿಯನ್ನು ಪಡೆದು ಅವರೊಂದಿಗೆ ಒಂದೆರಡು ದಿನದಲ್ಲಿ ಸಭೆ ನಡೆಸಲಾಗುತ್ತದೆ. ಯಾವ ರೀತಿಯಲ್ಲಿ ದರ ನಿಗದಿ ಮಾಡಬೇಕೆಂದು ನಿರ್ಧರಿಸಿ, ಅದನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತದೆ. ಅದಕ್ಕಿಂತ ಹೆಚ್ಚಿನ ಹಣ ಪಡೆಯುವಂತಿಲ್ಲ’ ಎಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಲ್ಲಿ ಹೆಚ್ಚಿನ ನೀರಿನ ಸಮಸ್ಯೆ ಉಂಟಾಗಿದ್ದು, ಆ ನೀರಿನ ಕೊರತೆಯನ್ನು ಟ್ಯಾಂಕರ್ ನೀರಿನ ಮೂಲಕ ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 30 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಈ 110 ಹಳ್ಳಿಗಳಿದ್ದು, ಪ್ರತಿ ವಾರ್ಡ್‌ಗೆ ನೀರಿನ ನಿರ್ವಹಣೆಗಾಗಿಯೇ ಎಂಜಿನಿಯರ್ ಒಬ್ಬರನ್ನು ನಿಯೋಜಿಸಲಾಗುತ್ತದೆ. ಜಲಮಂಡಳಿಯಿಂದ ಸಹಾಯಕ ಎಂಜಿನಿಯರ್ ಮಟ್ಟದ ವರನ್ನೂ ನೇಮಿಸಲಾಗುತ್ತಿದೆ. ಈ ಅಧಿಕಾರಿಗಳ ಹೆಸರು ಹಾಗೂ ಮೊಬೈಲ್ ಸಂಖ್ಯೆಯನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತದೆ. ಆಯಾ ವ್ಯಾಪ್ತಿಯ ಜನರು ತಮ್ಮ ಸಂಕಷ್ಟಗಳನ್ನು ಅವರಿಗೆ ಹೇಳಿಕೊಂಡು ಪರಿಹಾರ ಕಂಡುಕೊಳ್ಳಬಹುದು ಎಂದು ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

‘ಹಳ್ಳಿಗಳಲ್ಲಿ ನೀರಿನ ಟ್ಯಾಂಕ್ ವ್ಯವಸ್ಥೆ ಇಲ್ಲ. ಬದಲಿಗೆ ಕೊಳವೆಬಾವಿಗಳಿಂದ ಪೈಪ್‌ಗಳ ಮೂಲಕ ಮನೆಗಳಿಗೆ ನೀರಿನ ಸಂಪರ್ಕವಿದೆ. ಕೊಳವೆಬಾವಿಗಳು ಬತ್ತಿರುವುದರಿಂದ ನೀರು ಪೂರೈಕೆ ಸಮಸ್ಯೆಯಾಗುತ್ತದೆ. ಹೀಗಾಗಿ, ಅತಿಹೆಚ್ಚು ನೀರಿನ ಸಮಸ್ಯೆ ಇರುವ ಕೊಳೆಗೇರಿ ಹಾಗೂ ಅತಿ ಬಡವರು ನೆಲೆಸಿರುವ ಪ್ರದೇಶಗಳಲ್ಲಿ 5 ಸಾವಿರದಿಂದ 6 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್‌ಗಳನ್ನು ಇರಿಸಿ, ಟ್ಯಾಂಕರ್‌ಗಳ ಮೂಲಕ ಅವುಗಳಿಗೆ ನೀರು ತುಂಬಿಸಲಾಗುತ್ತದೆ. ಅಲ್ಲಿಂದ ಸ್ಥಳೀಯರು ನೀರು ಪಡೆಯಬಹುದು’ ಎಂದರು.

200 ಟ್ಯಾಂಕರ್ ವಶಕ್ಕೆ: ‘ರಾಜ್ಯ ಸರ್ಕಾರ ನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಿರುವುದರಿಂದ, ವಿಪತ್ತು ನಿರ್ವಹಣೆ ಕಾಯ್ದೆ ಅನ್ವಯವಾಗುತ್ತದೆ. ನಗರ ಜಿಲ್ಲಾಧಿಕಾರಿಯವರು 200 ಟ್ಯಾಂಕರ್‌ಗಳನ್ನು ವಶಪಡಿಸಿಕೊಂಡು ಜಲಮಂಡಳಿಗೆ ಶೀಘ್ರವೇ ನೀಡುತ್ತಾರೆ’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಈ 200 ಟ್ಯಾಂಕರ್‌ಗಳಲ್ಲಿ 100 ಟ್ಯಾಂಕರ್‌ಗಳನ್ನು ಜಲಮಂಡಳಿಯು 110 ಹಳ್ಳಿಗಳಿಗೆ ನೀರು ಪೂರೈಸಲು ಬಿಬಿಎಂಪಿ ವಶಕ್ಕೆ ನೀಡುತ್ತದೆ. ಇನ್ನುಳಿದ 100 ಟ್ಯಾಂಕರ್‌ಗಳಿಂದ ನಗರದ ಇತರೆ ಪ್ರದೇಶಗಳಿಗೆ ಜಲಮಂಡಳಿ ನೀರು ಪೂರೈಸಲಿದೆ. ಟ್ಯಾಂಕರ್ ಮಾಲೀಕರಿಗೆ ಸಲ್ಲಬೇಕಾದ ಹಣ ಪಾವತಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸೋರಿಕೆಗೆ ತಡೆ: ನಗರದಲ್ಲಿ ನೀರು ಸರಬರಾಜಿನ ಸೋರಿಕೆಯನ್ನು ಕಡಿಮೆಗೊಳಿಸಲಾಗುತ್ತಿದ್ದು, ಪ್ರಸ್ತುತ ಶೇ 25ರಿಂದ ಶೇ 28ರಷ್ಟು ಸೋರಿಕೆ ಇದೆ. ಕೇಂದ್ರ ಭಾಗದಲ್ಲಿರುವ ಕೊಳವೆಮಾರ್ಗ ತುಕ್ಕು ಹಿಡಿದಿರುವುದರಿಂದ ಸೋರಿಕೆ ಹೆಚ್ಚಾಗುತ್ತಿದೆ. ಕೊಳವೆಮಾರ್ಗಗಳನ್ನು ಹಂತಹಂತವಾಗಿ ಬದಲಾಯಿಸಲಾಗುವುದು. ಈ ಸೋರಿಕೆ ತಡೆದರೆ ಸುಮಾರು 5 ಎಂಎಲ್‌ಡಿ ನೀರು ಪೂರೈಕೆಗೆ ಲಭ್ಯವಾಗುತ್ತದೆ ಎಂದು ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಕೈಗಾರಿಕೆಗಳಿಗೆ ನೀರು ಪೂರೈಕೆ ಪ್ರಮಾಣವನ್ನು ಕಡಿತ ಮಾಡಿದ್ದು, ಅವರಿಗೆ ಸಂಸ್ಕರಿಸಿದ ನೀರು ಬಳಸಲು ಮನವಿ ಮಾಡಿಕೊಂಡಿದ್ದೇವೆ ಎಂದರು.

ಕಾವೇರಿ ಐದನೇ ಹಂತದಿಂದ ಏಪ್ರಿಲ್ ಅಂತ್ಯಕ್ಕೆ ನಗರಕ್ಕೆ ನೀರು ಬರಲಿದೆ. ಅಲ್ಲಿಂದ 110 ಹಳ್ಳಿಗಳಿಗೆ ಮೊದಲ ಆದ್ಯತೆಯಲ್ಲಿ ನೀರು ಸರಬರಾಜು ಮಾಡಲಾಗುತ್ತದೆ. ಮೇ ಮೊದಲ ಅಥವಾ ಎರಡನೇ ವಾರದಲ್ಲಿ ನೀರು ಪೂರೈಕೆಯಾಗಲಿದೆ ಎಂದು ಪುನರುಚ್ಚರಿಸಿದರು.

ಕುವೆಂಪುನಗರದ ಮನೆಯೊಂದರಲ್ಲಿ ಟ್ಯಾಂಕರ್ ನೀರನ್ನು ತುಂಬಿಸಿಕೊಂಡ ಮಹಿಳೆ ಪ್ರಜಾವಾಣಿ ಚಿತ್ರ: ಎಚ್‌.ಜಿ.ಪ್ರಶಾಂತ್

‘ಟ್ಯಾಂಕರ್ ಮಾಫಿಯಾಗೆ ಕಡಿವಾಣ ಹಾಕಿ’

ಬೆಂಗಳೂರು: ‘ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಟ್ಯಾಂಕರ್ ಮಾಫಿಯಾ ಮಿತಿಮೀರಿದೆ. ಇದರಲ್ಲಿ ಮಾಜಿ ಕಾರ್ಪೊರೇಟರ್‌ಗಳು, ಶಾಸಕರ ಸಂಬಂಧಿಗಳೇ ಹೆಚ್ಚಿದ್ದು, ಇದಕ್ಕೆ ಕಡಿವಾಣ ಹಾಕಬೇಕು’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಆಗ್ರಹಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾವೇರಿ ನೀರು ಬೆಂಗಳೂರಿನ ಎಲ್ಲ ಮನೆಗಳಿಗೆ ತಲುಪುತ್ತಿಲ್ಲ. ಇದಕ್ಕೆ ಪರ್ಯಾಯವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಏನನ್ನೂ ಮಾಡಿಲ್ಲ. ನಗರದಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿಯ 108 ಕೊಳವೆಬಾವಿಗಳು ಹಾಗೂ ಬಿಬಿಎಂಪಿ 1,534 ಬೋರ್‌ವೆಲ್‌ಗಳನ್ನು ಕೊರೆಸಿದೆ. ಆದರೂ ನಗರದ ಎಲ್ಲಾ ಮನೆಗಳಿಗೂ ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲ’ ಎಂದು ಆರೋಪಿಸಿದರು.

ಟ್ಯಾಂಕರ್ ನೀರು ಸರಬರಾಜು ಅನಧಿಕೃತ, ಇದಕ್ಕೆ ಕಾನೂನಿನಲ್ಲಿ ಅನುಮತಿಯೇ ಇಲ್ಲ. ಆದರೂ ಬೆಂಗಳೂರಿನಲ್ಲಿ ನೀರು ಸರಬರಾಜು ಮಾಫಿಯಾ ತೀವ್ರವಾಗಿದೆ. ಬೇಸಿಗೆ ಆರಂಭವಾಗುವ ಮುನ್ನವೇ ₹600 ಇರಬೇಕಿದ್ದ ಟ್ಯಾಂಕರ್ ನೀರಿನ ಬೆಲೆ ₹3 ಸಾವಿರಕ್ಕೆ ಮುಟ್ಟಿದೆ ಎಂದರು.

ಬೆಂಗಳೂರು ನಗರ ಘಟಕದ ಅಧ್ಯಕ್ಷ ಸತೀಶ್, ಮಾಧ್ಯಮ ಉಸ್ತುವಾರಿ ಅನಿಲ್ ನಾಚಪ್ಪ, ಸಂಘಟನಾ ಕಾರ್ಯದರ್ಶಿ ಅಶೋಕ್ ಮೃತ್ಯುಂಜಯ, ಸತ್ಯವತಿ ಭಾಗವಹಿಸಿದ್ದರು.

2 ವರ್ಷದಲ್ಲಿ ಸಂಸ್ಕರಣೆ ಸಾಮರ್ಥ್ಯ 2,100 ಎಂಎಲ್‌ಡಿ

ತ್ಯಾಜ್ಯ ನೀರನ್ನು ಮರುಬಳಕೆ ಮಾಡಲು ಜಲಮಂಡಳಿ ಕಾರ್ಯನಿರ್ವಹಿಸುತ್ತಿದ್ದು, ಮುಂದಿನ ಎರಡು ವರ್ಷಗಳಲ್ಲಿ ಸಂಸ್ಕರಿಸಿದ ನೀರಿನ ಸಾಮರ್ಥ್ಯ 2,100 ಎಂಎಲ್‌ಡಿಗೆ ತಲುಪಲಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಪ್ರಸ್ತುತ 33 ತ್ಯಾಜ್ಯ ಸಂಸ್ಕರಣೆ ಘಟಕಗಳಿಂದ (ಎಸ್‌ಟಿಪಿ) 1,380 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣೆಯಾಗುತ್ತಿದೆ. 20 ಎಸ್‌ಟಿಪಿಗಳು ನವೀಕರಣವಾಗುತ್ತಿವೆ, 14 ಹೊಸ ಎಸ್‌ಟಿಪಿಗಳನ್ನು ಸ್ಥಾಪಿಸಲಾಗುತ್ತಿದೆ. ಇವೆಲ್ಲ ಮುಗಿದ ಮೇಲೆ 2,100 ಎಂಎಲ್‌ಡಿ ಸಂಸ್ಕರಿಸಿದ ನೀರು ಲಭ್ಯವಾಗಲಿದ್ದು, ಇದರ ಬಳಕೆಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ತೃತೀಯ ಹಂತದಲ್ಲಿ ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡಿ ಏಳು ಕೆರೆಗಳಿಗೆ ಹರಿಸಲಾಗುತ್ತಿದೆ. ಇದರಿಂದ ಅಂತರ್ಜಲ ವೃದ್ಧಿಯಾಗಿ, ಕೊಳವೆಬಾವಿಗಳಲ್ಲಿ ನೀರು ಹೆಚ್ಚಾಗುತ್ತದೆ. ಇನ್ನೂ 179 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಹೆಚ್ಚು ಹಣ ಕೇಳಿದರೆ ದೂರು ನೀಡಿ...

‘ಒಂದು ಟ್ಯಾಂಕರ್ ನೀರಿಗೆ ಒಂದು ಸಾವಿರ, ಎರಡು ಸಾವಿರ ರೂಪಾಯಿ ದರ ವಿಧಿಸಲಾಗುತ್ತಿದೆ ಎಂದು ಮಾಧ್ಯಮಗಳಲ್ಲಿ ಹೇಳಲಾಗುತ್ತಿದೆ. ಯಾವ ಭಾಗದಲ್ಲಿ ಯಾರು ಹೆಚ್ಚು ಹಣ ಕೇಳುತ್ತಿದ್ದಾರೆ ಎಂಬ ಮಾಹಿತಿ ಇದ್ದರೆ, ನಾಗರಿಕರು ನಿಯಂತ್ರಣ ಕೊಠಡಿಗೆ (080 2222 1188) ಕರೆ ಮಾಡಿ ದೂರು ನೀಡಬಹುದು. ನಾವು ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಮಾಹಿತಿ ನೀಡದಿದ್ದರೆ ನಾವು ಕ್ರಮ ಕೈಗೊಳ್ಳುವುದಾದರೂ ಹೇಗೆ’ ಎಂದು ತುಷಾರ್ ಗಿರಿನಾಥ್ ಪ್ರಶ್ನಿಸಿದರು.

ಟ್ಯಾಂಕರ್ ನೋಂದಣಿ ಆಗದಿದ್ದರೆ ಜಪ್ತಿ

ನಗರದಲ್ಲಿ 3,500 ನೀರಿನ ಟ್ಯಾಂಕರ್‌ಗಳಿವೆ ಎಂಬ ಮಾಹಿತಿ ಸಾರಿಗೆ ಇಲಾಖೆಯಿಂದ ಲಭ್ಯವಾಗಿದೆ. ಈ ಎಲ್ಲ ಟ್ಯಾಂಕರ್‌ಗಳ ಮಾಲೀಕರು ಬಿಬಿಎಂಪಿಯ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಮಾರ್ಚ್ 7ರೊಳಗೆ ನೋಂದಣಿಯಾಗದಿದ್ದರೆ, ಮರುದಿನದಿಂದಲೇ ಟ್ಯಾಂಕರ್‌ಗಳನ್ನು ಜಪ್ತಿ ಮಾಡಲಾಗುತ್ತದೆ ಎಂದು ತುಷಾರ್ ಗಿರಿನಾಥ್ ಎಚ್ಚರಿಸಿದರು.

ನೀರಿನ ಪೂರೈಕೆಗೆ ಟ್ಯಾಂಕರ್‌ಗಳ ಮಾಲೀಕರು ಟ್ರೇಡ್ ಲೈಸೆನ್ಸ್ ಪಡೆದಿಲ್ಲ. ಆ ಪರವಾನಗಿ ವ್ಯಾಪ್ತಿಗೆ ನೀರಿನ ಪೂರೈಕೆ ಸೇರಿಲ್ಲ. ಹೀಗಾಗಿ, ಸ್ವಯಂ ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ. ಈ ನೋಂದಣಿ ಮಾರ್ಚ್ 1ರಿಂದ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ರಾಜ್ಯದ ತೆರಿಗೆ ಹಣ ಇಲ್ಲೇ ವಿನಿಯೋಗ: ನಿರ್ಮಲಾ

ಬೆಂಗಳೂರು: ‘ನಿವ್ವಳ ನೇರ ತೆರಿಗೆ ಸಂಗ್ರಹದಲ್ಲಿ ಕರ್ನಾಟಕವು ನಿಗದಿತ ಗುರಿಯನ್ನು ಮೀರಿದೆ. ಇದಕ್ಕೆ ಅನುಗುಣವಾಗಿಯೇ ಈ ತೆರಿಗೆ ಹಣವನ್ನು ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಿಗೆ ವಿನಿಯೋಗಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ನಗರದಲ್ಲಿ ಬುಧವಾರ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ವಸತಿ ಸೌಕರ್ಯ ಒದಗಿಸಲು ನಿರ್ಮಿಸುತ್ತಿರುವ ‘ಹೊಂಗಿರಣ’ ಸಂಕೀರ್ಣಕ್ಕೆ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

‘ಕರ್ನಾಟಕದಲ್ಲಿ ತೆರಿಗೆ ರೂಪದಲ್ಲಿ ಸಂಗ್ರಹಿಸಿದ ಹಣವು ಎಲ್ಲಿಗೂ ಹೋಗುವುದಿಲ್ಲ. ರಸ್ತೆ, ಮೆಟ್ರೊ, ರೈಲು, ಸಬರ್ಬನ್ ರೈಲ್ವೆ ಯೋಜನೆ, ಮಂಗಳೂರು ಬಂದರು, ‘ಕಲ್ಯಾಣ’ ಕರ್ನಾಟಕದ ಅಭಿವೃದ್ಧಿಗೆ ಈ ಹಣವು ಬಳಕೆಯಾಗುತ್ತದೆ’ ಎಂದು ಹೇಳಿದರು.

‘ದೇಶದ ಅಭಿವೃದ್ಧಿಗೆ ಬೆಂಗಳೂರಿನ ಪ್ರಜೆಗಳು ನೀಡುತ್ತಿರುವ ಕೊಡುಗೆ ಅನನ್ಯವಾದುದು. ಅದನ್ನು ಎಂದಿಗೂ ಕಡಿಮೆಯಾಗಿಲ್ಲ. ಇದಕ್ಕೆ ನಾನು ಆಭಾರಿಯಾಗಿದ್ದೇನೆ’ ಎಂದರು.

ತೆರಿಗೆ ಪಾಲು ಹಂಚಿಕೆ, ಅನುದಾನ, ನೆರವು ನೀಡಿಕೆಯಲ್ಲಿ ಕೇಂದ್ರ ಸರ್ಕಾರವು ಅನ್ಯಾಯ ಎಸಗುತ್ತಿದೆ ಎಂದು ರಾಜ್ಯ ಸರ್ಕಾರ ಆರೋಪಿಸಿತ್ತು. ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಡಿ ‘ಚಲೋ ದೆಹಲಿ’ ಕೂಡ ಹಮ್ಮಿಕೊಳ್ಳಲಾಗಿತ್ತು.

‘ಪಾಕಿಸ್ತಾನ್ ಜಿಂದಾಬಾದ್’ ತನಿಖೆಗೆ ನಾಲ್ಕು ತಂಡ ರಚನೆ

ಬೆಂಗಳೂರು: ವಿಧಾನಸೌಧದಲ್ಲಿ ಕಿಡಿಗೇಡಿಯೊಬ್ಬ ‘ಪಾಕಿಸ್ತಾನ್ ಜಿಂದಾಬಾದ್’ ಘೋಷಣೆ ಕೂಗಿದ್ದಾನೆ ಎಂಬ ಆರೋಪ ಸಂಬಂಧ ದಾಖಲಾಗಿರುವ ಪ್ರಕರಣದ ತನಿಖೆಗೆ ವಿಧಾನಸೌಧ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ನಾಲ್ಕು ತಂಡ ರಚಿಸಲಾಗಿದೆ.

ವಿದ್ಯುನ್ಮಾನ ಮಾಧ್ಯಮದಿಂದ ವಿಡಿಯೊ ಹಾಗೂ ಆಡಿಯೊ ಪಡೆದು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಹೇಳಿದರು.

ವಿಧಾನಸೌಧದಲ್ಲಿ ಅಳವಡಿಸಿರುವ ಸಿ.ಸಿ ಟಿವಿ ಕ್ಯಾಮೆರಾಗಳಲ್ಲಿ ಸೆರೆ ಆಗಿರುವ ತುಣುಕು ಮತ್ತು ಮೊಬೈಲ್‌ನಲ್ಲಿ ಸೆರೆಯಾಗಿರುವ ವಿಡಿಯೊಗಳನ್ನೂ ಪರಿಶೀಲಿಸಲಾಗುತ್ತಿದೆ. ರಾಜ್ಯಸಭಾ ಸದಸ್ಯ ಸೈಯದ್ ನಾಸೀರ್ ಹುಸೇನ್ ಪಕ್ಕದಲ್ಲಿ ನಿಂತಿದ್ದ ಒಬ್ಬ ವ್ಯಕ್ತಿಯಿಂದ ಹೇಳಿಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಜಂತುಹುಳು ಮಾತ್ರೆ ಸೇವಿಸಿ ವಿದ್ಯಾರ್ಥಿನಿ ಸಾವು

ಬೆಂಗಳೂರು: ಶಾಲೆಯಲ್ಲಿ ನೀಡಲಾಗಿದ್ದ ನಾಲ್ಕು ಜಂತುಹುಳು ಮಾತ್ರೆಗಳನ್ನು ಸೇವಿಸಿ, ಅಸ್ವಸ್ಥಗೊಂಡಿದ್ದ 9 ವರ್ಷದ ವಿದ್ಯಾರ್ಥಿನಿ ಮಂಗಳವಾರ ರಾತ್ರಿ ಮೃತಪಟ್ಟಿದ್ದಾಳೆ. ಜೋಯಾ ಖಾನ್ ಮೃತ ವಿದ್ಯಾರ್ಥಿನಿ.

‘ನಿರ್ಲಕ್ಷ್ಯ ವಹಿಸಿದ ಆರೋಪದ ಮೇರೆಗೆ ಬನಶಂಕರಿ 2ನೇ ಹಂತದ ಕರಿಸಂದ್ರ ಸರ್ಕಾರಿ ಉರ್ದು ಶಾಲೆ ಹಾಗೂ ಸರಿಯಾಗಿ ಚಿಕಿತ್ಸೆ ನೀಡದ ಬನಶಂಕರಿಯ ಸೇವಾಕ್ಷೇತ್ರ ಆಸ್ಪತ್ರೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಬನಶಂಕರಿ ಠಾಣೆ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

‘ಮನೆಗೆ ಬಂದು ಮಾತ್ರೆಗಳನ್ನು ಸೇವಿಸಿದ್ದರಿಂದ ವಿದ್ಯಾರ್ಥಿನಿ ಅಸ್ವಸ್ಥಗೊಂಡಿದ್ದಳು. ತಕ್ಷಣವೇ ಆಕೆಯನ್ನು ಸೇವಾಕ್ಷೇತ್ರ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿ ಸರಿಯಾದ ಚಿಕಿತ್ಸೆ ನೀಡದೇ ಮನೆಗೆ ಕಳುಹಿಸಿದ್ದರು. ಮನೆಗೆ ಬಂದ ಮೇಲೆ ಮತ್ತೆ ಬಳಲಿದಂತೆ ಕಂಡ ವಿದ್ಯಾರ್ಥಿನಿಯನ್ನು ಪೋಷಕರು ಮತ್ತೆ ಆಸ್ಪತ್ರೆಗೆ ಕರೆದೊಯ್ದಿದ್ದರು. ಆಗಲೂ ಚಿಕಿತ್ಸೆ ನೀಡಿರಲಿಲ್ಲ ಎಂಬ ಆರೋಪವಿದೆ’ ಎಂದು ಪೊಲೀಸರು ಹೇಳಿದರು.

‘ಶಿಕ್ಷಕರೇ ನಿರ್ಲಕ್ಷ್ಯದಿಂದ ನಾಲ್ಕು ಮಾತ್ರೆಗಳನ್ನು ನೀಡಿದ್ದರೆ ಅಥವಾ ಶಾಲೆಯಲ್ಲಿ ವಿದ್ಯಾರ್ಥಿನಿಗೆ ಮಾತ್ರೆಗಳು ಸಿಕ್ಕಿದ್ದವೇ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಸೆಲ್ಫಿ ವಿಡಿಯೊ ಮಾಡಿ ಯುವಕ ಆತ್ಮಹತ್ಯೆ

ಮೇಲುಕೋಟೆ (ಮಂಡ್ಯ): ಇಲ್ಲಿನ ದೇವರಹಳ್ಳಿಯ ಪ್ರಸನ್ನ (35) ಎಂಬುವವರು ಮಂಗಳವಾರ ಬೆಂಗಳೂರಿನ ನಾಗದೇವನಹಳ್ಳಿಯ ಸ್ನೇಹಿತರ ಕೊಠಡಿಯಲ್ಲಿ ಸೆಲ್ಫಿ ವಿಡಿಯೊ ಮಾಡಿ, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ನನ್ನ ಸಾವಿಗೆ ಅರಕನಕೆರೆ ಗ್ರಾಮದ ಇಬ್ಬರೂ ವ್ಯಕ್ತಿಗಳು ಕಾರಣ. ಮಾನಸಿಕವಾಗಿ ಚಿತ್ರ ಹಿಂಸೆ ನೀಡುತ್ತಿದ್ದಾರೆ. ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದು, ನಾನೇ ಸಾಯುತ್ತಿದ್ದೇನೆ’ ಎಂದು ವಿಡಿಯೊದಲ್ಲಿ ತಿಳಿಸಿದ್ದಾರೆ. ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆ: ಪ್ರಸನ್ನ ಅವರ ಕುಟುಂಬಸ್ಥರು, ಸ್ನೇಹಿತರು ಅರಕನಕೆರೆ ಗ್ರಾಮಕ್ಕೆ ಬುಧವಾರ ಶವ ತಂದು ಪ್ರತಿಭಟಿಸಿದರು.

ಗುರುವಾರ, ಫೆಬ್ರುವರಿ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 60 | ಪುಟ 18

• www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
24.28 ಕೋಟಿ ಜನ ಬಡತನದಿಂದ ಹೊರಗೆ ಬಂದಿದ್ದು ಕಾಗದದ ಮೇಲಿನ ಅಂದಾಜು ಮಾತ್ರ

ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪ್ರಕಟ 8

ಮೊಟ್ಟೆ ಧಾರಣೆ ಕುಸಿತ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,304	21,951	₹64,160 (ಬೆಂಗಳೂರು)	₹71,800 (ಬೆಂಗಳೂರು)	82.91

ಜಾತಿವಾರು ಜನಗಣತಿ: ವರದಿ ಸಲ್ಲಿಕೆ ಇಂದು

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ನಡೆಸಿದ್ದ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ (ಜಾತಿವಾರು ಜನಗಣತಿ) ವರದಿಯು ರಾಜ್ಯ ಸರ್ಕಾರಕ್ಕೆ ಗುರುವಾರ ಅಧಿಕೃತವಾಗಿ ಸಲ್ಲಿಕೆಯಾಗಲಿದೆ. 6

ನಾಲ್ವರು ವಿದ್ಯಾರ್ಥಿಗಳು ನೀರುಪಾಲು

ಮೂಲ್ಕಿ/ಮಂಗಳೂರು: ಸುರತ್ಕಲ್ ವಿದ್ಯಾದಾಯಿನಿ ಅನುದಾನಿತ ಪ್ರೌಢಶಾಲೆಯ ನಾಲ್ವರು ವಿದ್ಯಾರ್ಥಿಗಳ ಶವ ಹಳೆಯಂಗಡಿ ಬಳಿಯ ನಂದಿನಿ ನದಿಯಲ್ಲಿ ಕರಿತೋಟದ ರೈಲ್ವೆ ಸೇತುವೆ ಕೆಳಗೆ ಪತ್ತೆಯಾಗಿವೆ. 9

‘19 ಲಕ್ಷ ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ ವಿತರಣೆ’ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಏ.1ರಿಂದ ಜಾರಿ: ಎಲ್ಲ ವರ್ಗಗಳಿಗೂ ಸಿಹಿ ಸುದ್ದಿ ನೀಡಿದ ಕೆಇಆರ್‌ಸಿ

ವಿದ್ಯುತ್ ದರ ತುಸು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ವಿದ್ಯುತ್ ದರ ಪರಿಷ್ಕರಣೆ ಆದೇಶವನ್ನು ಬುಧವಾರ ಪ್ರಕಟಿಸಿದ್ದು, ಎಲ್ಲ ವರ್ಗಗಳ ಗ್ರಾಹಕರಿಗೆ ವಿದ್ಯುತ್ ಬಿಲ್‌ನ ಭಾರ ತುಸು ತಗ್ಗಲಿದೆ.

ಗೃಹ ಬಳಕೆಯವರಿಗೆ ಇಂಧನ ಬಳಕೆ ಮೇಲಿನ ದರ ಕಡಿತಗೊಳಿಸಿದರೆ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಬಳಕೆದಾರ ವರ್ಗದವರಿಗೆ ನಿಗದಿತ ಶುಲ್ಕದಲ್ಲೂ ಇಳಿಕೆ ಮಾಡಿದೆ.

ಆಯೋಗದ ಈ ಕ್ರಮದಿಂದ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಮೇಲಿನ ವಿದ್ಯುತ್ ಹೊರೆ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಲಿದೆ. ಏಪ್ರಿಲ್ 1 ರಿಂದ ಹೊಸ ದರಗಳು ಜಾರಿಗೆ ಬರಲಿವೆ.

ಯಾರಿಗೆ, ಎಷ್ಟು ಇಳಿಕೆ?: ಗೃಹ ಬಳಕೆಯಲ್ಲಿ 100 ಯೂನಿಟ್‌ಗಳಿಗಿಂತ ಹೆಚ್ಚು ವಿದ್ಯುತ್ ಬಳಸುವ ಗ್ರಾಹಕರಿಗೆ ಪ್ರತಿ ಯೂನಿಟ್ ಮೇಲೆ ₹1.10 ಇಳಿಕೆ ಮಾಡಲಾಗಿದೆ. ಪ್ರಸ್ತುತ ಪ್ರತಿ ಯೂನಿಟ್ ದರ ₹7 ಇದೆ. ಸರ್ಕಾರ 200 ಯೂನಿಟ್ ಒಳಗೆ ಬಳಸುವವರಿಗೆ ಗೃಹಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ನೀಡುವುದರಿಂದ ಈ ಸೌಲಭ್ಯಕ್ಕೆ ಒಳಪಟ್ಟವರಿಗೆ ದರ ಇಳಿಕೆಯ ಪ್ರಯೋಜನ ಸಿಗುವುದಿಲ್ಲ. ಈ ಯೋಜನೆಯ ಸೌಲಭ್ಯ ಪಡೆಯದವರು ಹಾಗೂ ತಿಂಗಳಿಗೆ 100 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸುವವರಿಗೆ ಇದರ ಲಾಭ ಸಿಗಲಿದೆ.

ಎಚ್‌.ಟಿ ವಾಣಿಜ್ಯ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ ₹1.25 ಪೈಸೆ ಹಾಗೂ ನಿಗದಿತ ಶುಲ್ಕವನ್ನು ಪ್ರತಿ ಕೆವಿಎಗೆ (ಕಿಲೋವ್ಯಾಟ್) ₹10 ಇಳಿಕೆ ಮಾಡಿದೆ. ಎಚ್‌.ಟಿ. ವಿದ್ಯುತ್ ಬಳಸುವ ಕೈಗಾರಿಕೆಗಳಿಗೆ ಪ್ರತಿ ಯೂನಿಟ್‌ಗೆ 50 ಪೈಸೆ ಹಾಗೂ ನಿಗದಿತ ಶುಲ್ಕವನ್ನು ಪ್ರತಿ ಕೆವಿಎಗೆ ₹10 ಇಳಿಕೆ ಮಾಡಲಾಗಿದೆ.

ಕೈಗಾರಿಕೆಗಳಿಗೆ ಅನುಕೂಲ:

- ಎಲ್‌.ಟಿ. ವಿದ್ಯುತ್ ಬಳಸುವ ಕೈಗಾರಿಕಾ ಸ್ಥಾವರಗಳಿಗೆ ಪ್ರತಿ ಯೂನಿಟ್‌ಗೆ ₹1 ಕಡಿತಗೊಳಿಸಿದೆ. ರಾಜ್ಯದಲ್ಲಿ 5.62 ಲಕ್ಷ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿವೆ. 150 ಕೆವಿಎ ಒಳಗೆ ಬರುವ ಎಲ್ಲ ಕೈಗಾರಿಕೆಗಳಿಗೆ ಇದರ ಲಾಭ ಸಿಗುತ್ತದೆ. ಉತ್ಪಾದನಾ ವಲಯದಲ್ಲಿ ಹೆಚ್ಚಿನ ಉತ್ಪಾದನೆಗೆ ಇದು ಸಹಕಾರಿಯಾಗಲಿದೆ. ಎಲ್‌.ಟಿ. ವಾಣಿಜ್ಯ ಸ್ಥಾವರಗಳ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ 50 ಪೈಸೆ ಇಳಿಕೆ ಮಾಡಲಾಗಿದೆ.
- ಖಾಸಗಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಪ್ರತಿ ಯೂನಿಟ್‌ಗೆ 40 ಪೈಸೆ ಹಾಗೂ ನಿಗದಿತ ಶುಲ್ಕವನ್ನು ಪ್ರತಿ ಕೆವಿಎಗೆ ₹10 ಕಡಿತಗೊಳಿಸಿದೆ. ಎಚ್‌.ಟಿ ವಿದ್ಯುತ್ ಬಳಕೆಯ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ನಿಗದಿತ ಶುಲ್ಕ ಪ್ರತಿ ಕೆವಿಎಗೆ ₹10 ಇಳಿಕೆ ಮಾಡಿದೆ.

6ನೇ ಪುಟ ನೋಡಿ

ಬಿಲ್ ನೋಡಿ, ಪಾವತಿಸುವ ಸೌಲಭ್ಯ

ಗ್ರಾಹಕರು ತಮ್ಮ ವಿದ್ಯುತ್ ಮೀಟರ್ ನೋಡಿಕೊಂಡು ಹಣ ಪಾವತಿಸುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಇದಕ್ಕೆ ಅಗತ್ಯವಾದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲು ಎಸ್ಕಾಂಗಳಿಗೆ ನಿರ್ದೇಶನ ನೀಡಿದೆ. ಅಲ್ಲದೇ, ಪ್ರಿಪೇಯ್ಡ್ ಮೀಟರ್ ವ್ಯವಸ್ಥೆ ಅಳವಡಿಕೆಗೆ ಅಗತ್ಯಕ್ರಮಕ್ಕೆ ಕೆಇಆರ್‌ಸಿ ಸೂಚಿಸಿದೆ.

ಎಲ್ಲರಿಗೂ ಒಂದೇ ಸ್ಲ್ಯಾಬ್ ದರ

ಹಿಂದೆ 100 ಯೂನಿಟ್ ಒಳಗೆ ಬಳಸುವ ಪ್ರತಿ ಯೂನಿಟ್‌ಗೆ ₹ 4.50, ನಂತರದ ಪ್ರತಿ ಯೂನಿಟ್‌ಗೆ ₹7 ದರ ಇತ್ತು. ಈಗ ಎರಡು ಹಂತವನ್ನು ತೆಗೆದು ಒಂದೇ ಸ್ಲ್ಯಾಬ್ ಮಾಡಿ, ಪ್ರತಿ ಯೂನಿಟ್‌ಗೆ ₹5.90 ನಿಗದಿಪಡಿಸಲಾಗಿದೆ. ಇಂಧನ ಬಳಕೆ ಶುಲ್ಕಗಳಿಗೆ ಒಂದೇ ಸ್ಲ್ಯಾಬ್(ಹಂತ) ಪರಿಚಯಿಸಿರುವುದರಿಂದ ಈಗ ಎಲ್‌ಟಿ ಬಳಕೆದಾರರು ಒಂದಕ್ಕಿಂತ ಹೆಚ್ಚು ಮೀಟರ್ ಪಡೆಯಬಹುದು.

ಪ್ರತಿಭಟನೆ ಕಾಂಗ್ರೆಸ್ ನಾಯಕ ನಾಸಿರ್ ಹುಸೇನ್ ಅವರು ರಾಜ್ಯಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ ‘ಪಾಕಿಸ್ತಾನ್ ಜಿಂದಾಬಾದ್’ ಎಂಬ ಘೋಷಣೆಗಳನ್ನು ಕೂಗಲಾಗಿದೆ ಎಂದು ಆರೋಪಿಸಿ ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರತಿಭಟಿಸಿದರು –ಪಿಟಿಐ ಚಿತ್ರ

‘ಜಿಂದಾಬಾದ್ ಆರೋಪ’ ಇಡೀ ದಿನ ನಡೆಯದ ಕಲಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದಲ್ಲಿ ಕಿಡಿಗೇಡಿಯೊಬ್ಬ ‘ಪಾಕಿಸ್ತಾನ್ ಜಿಂದಾಬಾದ್’ ಎಂದು ಘೋಷಣೆ ಕೂಗಿದ್ದಾನೆ’ ಎಂದು ಆರೋಪಿಸಿ ವಿಧಾನಮಂಡಲದ ಉಭಯ ಸದನಗಳಲ್ಲಿ ಬಿಜೆಪಿ ಗದ್ದಲ ಎಬ್ಬಿಸಿದ್ದರಿಂದಾಗಿ ಬುಧವಾರದ ಕಲಾಪ ಸುಗಮವಾಗಿ ನಡೆಯಲಿಲ್ಲ.

ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರು ಗದ್ದಲ ಎಬ್ಬಿಸಿ, ಧರಣಿ ನಡೆಸಿದಾಗ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು. ವಿಧಾನಪರಿಷತ್ತಿನಲ್ಲಿ ಇದೇ ವಿಷಯದ ಚರ್ಚೆಯ ವೇಳೆ, ಏಕವಚನ ಬಳಸಿದ್ದಾರೆಂದು ಸಿಟ್ಟಿಗೆದ್ದ ಬಿಜೆಪಿ ಸದಸ್ಯರು ಕಾಂಗ್ರೆಸ್ ಸದಸ್ಯರತ್ತ ಮುನ್ನುಗ್ಗಿದ ಘಟನೆಯೂ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿ, ವಿತ್ತೀಯ ಮಸೂದೆಗೆ ಒಪ್ಪಿಗೆ ಪಡೆಯಬೇಕಾಗಿರುವುದರಿಂದ ಕಲಾಪವನ್ನು ಶುಕ್ರವಾರದವರೆಗೆ ವಿಸ್ತರಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯರು ಉಭಯ ಸದನಗಳಲ್ಲಿ ವಿಷಯವನ್ನು ಪ್ರಸ್ತಾಪಿಸಿದರು. ‘ವಿಧಾನಸೌಧದ ಇತಿಹಾಸದಲ್ಲೇ ಇಂತಹದ್ದೊಂದು ಘಟನೆ ಈವರೆಗೆ ನಡೆದಿಲ್ಲ. ಇಂತಹ ಘೋಷಣೆ ಕೂಗಿದವರ ವಿರುದ್ಧ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಮೌನವಹಿಸಿರುವುದು ನೋಡಿದರೆ ಪ್ರಕರಣದ ಗಂಭೀರತೆಯ ಅರಿವಾಗಿಲ್ಲ. ಘಟನೆಯ ನೈತಿಕ ಹೊಣೆಯನ್ನು ಮುಖ್ಯಮಂತ್ರಿಯವರೇ ಹೊತ್ತುಕೊಳ್ಳಬೇಕು’ ಎಂದೂ ಆಗ್ರಹಿಸಿದರು. ಈ ಕುರಿತು ಪರ–ವಿರೋಧ ವಾಗ್ವಾದಗಳೂ ನಡೆದವು. ಗಲಾಟೆ ಮಧ್ಯೆಯೇ, ನಾಲ್ಕು ಮಸೂದೆಗಳಿಗೆ ಪರಿಷತ್ತಿನಲ್ಲಿ ಅಂಗೀಕಾರ ಪಡೆಯಲಾಯಿತು.

ಇನ್ನಷ್ಟು ಸುದ್ದಿಗಳು 6

‘ಅಧಿಕಾರಿಗಳ ಕೊಲೆಗೆ ಡಿವೈಎಸ್‌ಪಿ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದಲ್ಲಿ ಆರೋಪಿಯಾಗಿರುವ ಆಂತರಿಕ ಭದ್ರತಾ ವಿಭಾಗದ ಡಿವೈಎಸ್‌ಪಿ ಶ್ರೀಧರ್ ಕೆ. ಪೂಜಾರ್ ತಮ್ಮ ಬಂಧನಕ್ಕೆ ಬಂದಿದ್ದ ಎಸ್‌ಐಟಿಯ ಇಬ್ಬರು ಅಧಿಕಾರಿಗಳಿಗೆ ಕಾರು ಗುದ್ದಿಸಿ, ಕೊಲೆಗೆ ಯತ್ನಿಸಿ ಪರಾರಿಯಾಗಿದ್ದಾರೆ ಎಂದು ದೂರಲಾಗಿದೆ.

ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಡಿವೈಎಸ್‌ಪಿ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ಸಿಐಡಿ ಘಟಕದ ವಿಶೇಷ ತನಿಖಾ ತಂಡದ ಎಎಸ್‌ಐ ಭಾಸ್ಕರ್ ಹಾಗೂ ಇನ್‌ಸ್ಪೆಕ್ಟರ್ ಜಿ. ಅನಿಲ್‌ಕುಮಾರ್ ಅವರನ್ನು ನಿಂದಿಸಿ, ಪ್ರಾಣ ಬೆದರಿಕೆ ಹಾಕಿ, ಕೊಲೆಗೆ ಯತ್ನಿಸಿದ್ದಾರೆ ಎಂದು ದೂರು ನೀಡಲಾಗಿದೆ.

‘ಸೈಬರ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಸಿಐಡಿಯ ಡಿವೈಎಸ್‌ಪಿ ಬಿ.ಬಾಲರಾಜು ಅವರ ಸೂಚನೆ ಮೇರೆಗೆ ಆರೋಪಿಯನ್ನು ಬಂಧಿಸಲು ತೆರಳಿದ್ದೆವು. ಮಂಗಳವಾರ ಬೆಳಿಗ್ಗೆ ಸೆಂಟ್ರಲ್ ಕಾಲೇಜು ಬಳಿಯ ಮೆಟ್ರೊ ನಿಲ್ದಾಣದ ಬಳಿ ಕಾರಿನಲ್ಲಿ ವಕೀಲರ ಜೊತೆಗೆ ಶ್ರೀಧರ್ ಕುಳಿತಿದ್ದರು. ಠಾಣೆಗೆ ಬರುವಂತೆ ತಿಳಿಸಲಾಯಿತು. ಆಗ ನಮ್ಮನ್ನು ನಿಂದಿಸಿದರು. ಬೈಕ್‌ಗೆ ಕಾರಿನಿಂದ ಡಿಕ್ಕಿ ಹೊಡೆಸಿ ಅಲ್ಲಿಂದ ತೆರಳಿದರು’ ಎಂದು ಭಾಸ್ಕರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

12ನೇ ಪುಟ ನೋಡಿ

ಇನ್‌ಸ್ಪೆಕ್ಟರ್ ಬಂಧನ

ಬಿಟ್ ಕಾಯಿನ್ ಪ್ರಕರಣ

ಲಕ್ಷ್ಮೀಕಾಂತಯ್ಯ

ಬೆಂಗಳೂರು: ಬಿಟ್‌ಕಾಯಿನ್ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ವಿಶೇಷ ತನಿಖಾದಳದ (ಎಸ್‌ಐಟಿ) ಅಧಿಕಾರಿಗಳು ಮತ್ತೊಬ್ಬ ಆರೋಪಿ, ಪೊಲೀಸ್ ಇನ್‌ಸ್ಪೆಕ್ಟರ್ ಲಕ್ಷ್ಮೀಕಾಂತಯ್ಯ ಅವರನ್ನು ಬುಧವಾರ ಬಂಧಿಸಿದ್ದಾರೆ. ಇವರು ಕಡೂರಿನ ಪೊಲೀಸ್ ತರಬೇತಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

12ನೇ ಪುಟ ನೋಡಿ

ಒಳ ಪುಟಗಳು
6 ನದಿಪಾತ್ರಗಳ ಸ್ವಚ್ಛತೆ:12 ಸಂಸ್ಥೆಗಳಿಂದ ಅಧ್ಯಯನ 12
ಹಿಮಾಚಲ ಪ್ರದೇಶ: ಸರ್ಕಾರ ಉಳಿಸಿಕೊಳ್ಳಲು ‘ಕೈ’ ಹರಸಾಹಸ 8

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ರಾಷ್ಟ್ರೀಯ ಜೀವನೋಪಾಯ ಸಂಸ್ಥೆ, ಕರ್ನಾಟಕ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ

ಬನ್ನಿ, ಮಹಿಳಾ ಉದ್ಯಮಶೀಲತೆಯನ್ನು ಸಂಭ್ರಮಿಸೋಣ ಮತ್ತು ಬೆಂಬಲಿಸೋಣ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,

ಉದ್ಘಾಟನೆ : ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ದಿನಾಂಕ: 29ನೇ ಫೆಬ್ರವರಿ–9ನೇ ಮಾರ್ಚ್ 2024
ಸಮಯ : ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 9.00 ರ ತನಕ
ಸ್ಥಳ : ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಬೆಂಗಳೂರು

250 ಮಳಿಗೆಗಳು
ಮಹಿಳಾ ಸ್ವ-ಸಹಾಯ ಸಂಘಗಳಿಂದ ತಯಾರಿಸಲಾದ ಕರಕುಶಲ ವಸ್ತುಗಳು

ಆಹಾರ ಮಳಿಗೆಗಳು
ಒಂದೇ ಸೂರಿನಡಿ ದೇಶದ ಖಾದ್ಯಗಳನ್ನು ಸವಿಯೋಣ

ಇಲಾಖಾ ಕಾರ್ಯಕ್ರಮದಲ್ಲಿ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ ಅವರು ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಪಾಲ್ಗೊಂಡಿರುವುದು.

ನೃತ್ಯ ವೈಭವ
ಸಾಂಪ್ರದಾಯಿಕ ಹಾಗೂ ಸಮಕಾಲೀನ ನೃತ್ಯ ಪ್ರದರ್ಶನಗಳು

ಫ್ಯಾಷನ್ ಶೋ
ಕರ್ನಾಟಕದ ಜವಳಿ ಹಾಗೂ ಪಾರಂಪರಿಕ ಉಡುಪುಗಳು

ತಾರಾ ಮೆರಗು
ಖ್ಯಾತ ಕಲಾವಿದರಿಂದ ಸುಮಧುರ ಗಾಯನ, ಸಂಗೀತ ಕಛೇರಿಗಳು

ಕರ್ನಾಟಕ – ಸೃಜನಶೀಲತೆ ಹಾಗೂ ಸಂಸ್ಕೃತಿಯ ಕಣಜ

ನುಡಿದಂತೆ ನಡೆದಿದ್ದೇವೆ...
ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ – 10 kg
ಗೃಹಲಕ್ಷ್ಮಿ – ₹2000
ಯುವನಿಧಿ – ₹3000 | ₹1500

ಚಲನಚಿತ್ರೋತ್ಸವಕ್ಕೆ 'ಡಾಲಿ' ಧನಂಜಯ ರಾಯಭಾರಿ

ಬೆಂಗಳೂರು: ಕರ್ನಾಟಕ ಚಲನಚಿತ್ರ ಅಕಾಡೆಮಿ ಇದೇ 29ರಿಂದ ಮಾ.7ರವರೆಗೆ ಹಮ್ಮಿಕೊಂಡಿರುವ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ರಾಯಭಾರಿಯಾಗಿ ನಟ 'ಡಾಲಿ' ಧನಂಜಯ ಅವರನ್ನು ನೇಮಿಸಲಾಗಿದೆ.

ಈ ಬಗ್ಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಎಂ.ಜೆಸಿಂತ ಆದೇಶ ಹೊರಡಿಸಿದ್ದಾರೆ. ವಿಧಾನಸೌಧದ ಮುಂಭಾಗ ಗುರುವಾರ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಲನಚಿತ್ರೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಈ ಚಿತ್ರೋತ್ಸವದ ಬಗ್ಗೆ ಹೆಚ್ಚಿನ ಪ್ರಚಾರಕ್ಕೆ 'ಡಾಲಿ' ಧನಂಜಯ ಅವರನ್ನು ರಾಯಭಾರಿಯನ್ನಾಗಿ ನೇಮಿಸಲಾಗಿದೆ ಎಂದು ತಿಳಿಸಲಾಗಿದೆ.

ಕೇಂದ್ರೀಯ ವಿದ್ಯಾಲಯ,
ಡೀಸೆಲ್ ಲೋಕೋ ಶೆಡ್ ಕೃಷ್ಣರಾಜಪುರಂ,
ಬೆಂಗಳೂರು – 560036

04.03.2024 ರಂದು (ಸೋಮವಾರ) ಕೇಂದ್ರೀಯ ವಿದ್ಯಾಲಯ ಡೀಸೆಲ್ ಲೋಕೋ ಶೆಡ್, ಕೃಷ್ಣರಾಜಪುರಂ, ಬೆಂಗಳೂರು 560036 ರಲ್ಲಿ **TGT** ಹಿಂದಿ, ಸಂಸ್ಕೃತ, ಗಣಿತ, ಸಾಮಾಜಿಕ ಅಧ್ಯಯನ, ಇಂಗ್ಲೀಷ್ ಹುದ್ದೆಗಳಿಗೆ ಬೆಳಿಗ್ಗೆ 10.00 ಗಂಟೆಯಿಂದ 10.30 ಗಂಟೆಯವರೆಗೆ ಗುತ್ತಿಗೆ ಶಿಕ್ಷಕರ ಸಂದರ್ಶನ. ಪಿಆರ್‌ಟಿ ಬೆಳಿಗ್ಗೆ 10.00 ರಿಂದ 11.00 ರವರೆಗೆ ಕಂಪ್ಯೂಟರ್ ಬೋಧಕರು, ಕನ್ನಡ ಶಿಕ್ಷಕರು, ಕ್ರೀಡಾ ತರಬೇತುದಾರ, ಯೋಗ ಬೋಧಕರು, ಶಿಕ್ಷಣ ಸಲಹೆಗಾರರು, ನರ್ಸ್, ವಿಶೇಷ ಶಿಕ್ಷಕರು, ಬೆಳಿಗ್ಗೆ 10.00 ರಿಂದ 12.00 ಗಂಟೆಯವರೆಗೆ ಪರಿಶೀಲನೆಗಾಗಿ ಅಭ್ಯರ್ಥಿಗಳು ಪಾಸ್‌ಪೋರ್ಟ್ ಅಳತೆಯ ಫೋಟೋ ಮತ್ತು ಪ್ರಮಾಣಪತ್ರಗಳ ಫೋಟೋ ಪ್ರತಿಯನ್ನು ಮೂಲದೊಂದಿಗೆ ತರಲು ಸೂಚಿಸಲಾಗಿದೆ. ಹಾಜರಾತಿ ಸಮಯ ಬೆಳಿಗ್ಗೆ 08.30. ವಿವರಗಳಿಗಾಗಿ ವೆಬ್‌ಸೈಟ್ **https://krishnarajapuram.kvs.ac.in** ಗೆ ಲಾಗ್ ಇನ್ ಮಾಡಿ.

ಪ್ರಿನ್ಸಿಪಾಲ್

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿವೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
C000476	50	9468	1725501 - 1725550	ಭೋಟೆ ಲಾಲ್ ತಿವಾರಿ (ಮೃತ) ಗೋಪಾಲ ಚಂದ್ರ ತಿವಾರಿ
C000476	50	33198	2629743 - 2629792	ಭೋಟೆ ಲಾಲ್ ತಿವಾರಿ (ಮೃತ) ಗೋಪಾಲ ಚಂದ್ರ ತಿವಾರಿ

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/ P/CIR/ 2022/8ರಂತೆ ಷೇರುದಾರರಿಂದ ಮುಖ ಬೆಲೆ ರೂ 10ರ ಹಳೆಯ ಷೇರು ಪ್ರಮಾಣ ಪತ್ರಗಳನ್ನು ಹಿಂದಿರುಗಿಸಲು ಅಗತ್ಯವಿರುವ ಪ್ರಕ್ರಿಯೆಯ ಹೊರತಾಗಿಯು ದೃಢೀಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 28, 2024

ಮಾನಸ. ಆರ್
ಕಂಪನಿ ಸೆಕ್ರಟರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಕ್ಯೂಎ&ಕ್ಯೂಸಿ) ವಿಭಾಗ,
ಪಶ್ಚಿಮ ವಲಯ, ಕೊಠಡಿ ಸಂ.101, ಅನೆಕ್ಸ್–3 ಕಟ್ಟಡ,
ಬೃಬೆಂಮಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು– 560 002.
ಸಂಖ್ಯೆ:ಕಾಪಾಅ(ಕ್ಯೂಎ&ಕ್ಯೂಸಿ)/ಪೂರ್ವ/ಟೆಂಡರ್/15/2023–24 ದಿನಾಂಕ:28.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ [ಬೃ.ಬೆಂ.ಮ.ಪಾಲಿಕೆ], ಗುಣಮಟ್ಟ ಖಾತ್ರಿ/ಗುಣಮಟ್ಟ ನಿಯಂತ್ರಣ ವಿಭಾಗ, ಪಶ್ಚಿಮ ವಲಯ, ಬೃ.ಬೆಂ.ಮ.ಪಾಲಿಕೆ ಇವರು ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಸೇರಿದಂತೆ ಯೋಜನೆ ನಿರ್ವಹಣೆಗೆ ಸಲಹಾ ಸೇವೆಗಳನ್ನು [ಪಿ.ಎಂ.ಸಿ] ಒದಗಿಸಲು ತದ್ರೂಪಿ ಕಾಮಗಾರಿಗಳನ್ನು ಯಶಸ್ವಿಯಾಗಿ ಮಾಡಿರುವ ಅರ್ಹ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಗೋವಿಂದರಾಜನಗರ ಕ್ಷೇತ್ರದ ವಾರ್ಡ್ ಸಂಖ್ಯೆ 103, 104, 105, 106 ಮತ್ತು 125ರಲ್ಲಿ ಕಟ್ಟಡಗಳ ಸಮಗ್ರ ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–ಜಿಆರ್‌ಎನ್–21) **ಇಎಂಡಿ ಮೊತ್ತ: ₹ 30,625/–**
2	ಗೋವಿಂದರಾಜನಗರ ಕ್ಷೇತ್ರದ ವಾರ್ಡ್ ಸಂಖ್ಯೆ 126, 127, 128 ಮತ್ತು 131 ರಲ್ಲಿ ಕಟ್ಟಡಗಳ ಸಮಗ್ರ ಅಭಿವೃದ್ಧಿ ಮಾಡುವ ಮತ್ತು ಇತರೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–ಜಿಆರ್‌ಎನ್–22) **ಇಎಂಡಿ ಮೊತ್ತ: ₹ 33,000/–**
3	ಬೃ.ಬೆಂ.ಮ.ಪಾಲಿಕೆ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಪ್ಯಾಕೇಜ್ 3ರ ಅಡಿಯಲ್ಲಿ ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು 8 ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡುವ ಕಾಮಗಾರಿಗಳಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–3) **ಇಎಂಡಿ ಮೊತ್ತ: ₹ 2,10,000/–**
4	ಬೃ.ಬೆಂ.ಮ.ಪಾಲಿಕೆ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಪ್ಯಾಕೇಜ್ 4ರ ಅಡಿಯಲ್ಲಿ ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು 6 ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡುವ ಕಾಮಗಾರಿಗಳಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–4) **ಇಎಂಡಿ ಮೊತ್ತ: ₹ 2,11,500/–**
5	ಸಂಪಿಗೆ ರಸ್ತೆ, ರಾಜಾಜಿನಗರ, ಮಹಾಲಕ್ಷ್ಮಿ ಬಡಾವಣೆ, ಪೀಣ್ಯ, ಜಾಲಹಳ್ಳಿ, ದಾಸರಹಳ್ಳಿ ಮತ್ತು ನಾಗಸಂದ್ರ ಹಸಿರು ಮಾರ್ಗ ಸಂಪರ್ಕ ಮೆಟ್ರೋ ನಿಲ್ದಾಣಗಳ ಮೇಲೆ "ಲಾಸ್ಟ್ ಮೈಲ್ ಕನೆಕ್ಟಿವಿಟಿ" ಸ್ಥಾಪಿಸಲು ಬೆಂಗಳೂರು ನಗರದ ಮೆಟ್ರೋ ಕಾರಿಡಾರ್ಸ್‌ಗೆ ಪ್ರಮುಖ ರಸ್ತೆಗಳನ್ನು "ಟೆಂಡರ್ ಶ್ಯೂರ್ ಮಾಡಲ್" ಅಡಿಯಲ್ಲಿ ಸಂಪರ್ಕಿಸಲು ಪಾದಚಾರಿ ಮಾರ್ಗಗಳ ಮರು ಅಭಿವೃದ್ಧಿ ಹಾಗೂ ನಿರ್ಮಾಣ ಮಾಡುವ ಕಾಮಗಾರಿಗಳಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು ಒದಗಿಸುವುದು. [8 ರಸ್ತೆಗಳು – ಎಸ್.ಸಿ. ರಸ್ತೆ, ಡಾ॥ ರಾಜಕುಮಾರ್ ರಸ್ತೆ [ನವರಂಗ್ ಇಂದ] ಮಹಾಲಕ್ಷ್ಮಿ ಬಡಾವಣೆ ಮುಖ್ಯರಸ್ತೆ, ಪೈಪ್‌ಲೈನ್ ರಸ್ತೆ, ವಾಚ್ ಕಾರ್ಖಾನೆ ರಸ್ತೆ, ಜಾಲಹಳ್ಳಿ ಅಡ್ಡರಸ್ತೆ, ಕೆರೆ ರಸ್ತೆ ಮತ್ತು ಹೆಸರುಘಟ್ಟ ರಸ್ತೆ] **ಇಎಂಡಿ ಮೊತ್ತ: ₹ 77,500/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **29.02.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್–ಪೂರ್ವಭಾವಿ ಸಭೆಯನ್ನು ದಿನಾಂಕ **04.03.2024**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **11.03.2024**ರ ಸಂಜೆ **4:30** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **12.03.2024**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
(ಕ್ಯೂಎ&ಕ್ಯೂಸಿ) ವಿಭಾಗ

ಮದುವೆ ಆಗುವುದಾಗಿ ಹೇಳಿ ಮೋಸ, ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿ

250ಕ್ಕೂ ಹೆಚ್ಚು ಮಹಿಳೆಯರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ಗಳಲ್ಲಿ ನಕಲಿ ಖಾತೆ ಸೃಷ್ಟಿಸಿ, ಪತಿಯಿಲ್ಲದ ಹಾಗೂ ವಿಚ್ಛೇದಿತ ಮಹಿಳೆಯರನ್ನು ಗುರಿಯಾಗಿಸಿ ಮದುವೆಯಾಗುವುದಾಗಿ ನಂಬಿಸಿ ಸಾವಿರಾರು ರೂಪಾಯಿ ಪಡೆದು ವಂಚಿಸುತ್ತಿದ್ದ ಬಟ್ಟೆ ಅಂಗಡಿಯೊಂದರ ಕೆಲಸಗಾರನನ್ನು ರೈಲ್ವೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ನರೇಶ್‌ಪುರಿ ಗೋಸ್ವಾಮಿ

ಕಾಟನ್‌ಪೇಟೆ ನಿವಾಸಿ ನರೇಶ್‌ಪುರಿ ಗೋಸ್ವಾಮಿ(47) ಬಂಧಿತ ಆರೋಪಿ.

'ಆರೋಪಿಯು ಎರಡು ವರ್ಷಗಳಿಂದ ರಾಜ್ಯದ 17 ಮಹಿಳೆಯರು ಸೇರಿದಂತೆ ಬೇರೆ ಬೇರೆ ರಾಜ್ಯಗಳ 250ಕ್ಕೂ ಹೆಚ್ಚು ಮಹಿಳೆಯರೊಂದಿಗೆ ಚಾಟಿಂಗ್ ನಡೆಸಿ ವಂಚಿಸಿರುವುದು ಪೊಲೀಸ್ ತನಿಖೆ ವೇಳೆ ಗೊತ್ತಾಗಿದೆ' ಎಂದು ರೈಲ್ವೆ ಪೊಲೀಸ್ ವಿಭಾಗದ ಡಿಐಜಿ ಎಸ್.ಡಿ.ಶರಣಪ್ಪ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ರಾಜಸ್ಥಾನದ 56, ಉತ್ತರಪ್ರದೇಶದ 32, ದೆಹಲಿಯ 32, ಮಧ್ಯಪ್ರದೇಶದ 16, ಮಹಾರಾಷ್ಟ್ರದ 13, ಗುಜರಾತ್‌ನ 11, ತಮಿಳುನಾಡಿನ 6, ಬಿಹಾರ ಮತ್ತು ಜಾರ್ಖಂಡ್‌ನ 5, ಆಂಧ್ರಪ್ರದೇಶದ ಇಬ್ಬರು ಮಹಿಳೆಯರನ್ನು ಮದುವೆ ಆಗುವುದಾಗಿ ವಂಚಿಸಿದ್ದಾನೆ' ಎಂದು ವಿವರಿಸಿದರು.

ಆರೋಪಿ ಸೃಷ್ಟಿಸಿಕೊಂಡಿದ್ದ ಪ್ರೊಫೈಲ್

'ನಗರದ ರೈಲ್ವೆ ನಿಲ್ದಾಣಕ್ಕೆ ಕೊಯಮತ್ತೂರಿನ ಮಹಿಳೆಯೊಬ್ಬರ ಪೋಷಕರನ್ನು ಕರೆಸಿಕೊಂಡು ಸುಳ್ಳು ಹೇಳಿ ದುಡ್ಡು ಪಡೆದು ವಂಚಿಸಿದ್ದ. ಅವರು ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದರು.

'ರಾಜಸ್ಥಾನದ ಆರೋಪಿ 20 ವರ್ಷಗಳಿಂದ ಕಾಟನ್‌ಪೇಟೆಯ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದ. ಈತನ ಪತ್ನಿ, ಮಕ್ಕಳು ರಾಜಸ್ಥಾನದಲ್ಲೇ ನೆಲೆಸಿದ್ದಾರೆ. ವೆಬ್‌ಸೈಟ್‌ನಲ್ಲಿ ಅವಿವಾಹಿತ ಎಂದು ನಕಲಿ ಖಾತೆ ಸೃಷ್ಟಿಸಿಕೊಂಡಿದ್ದ. ಸಾಫ್ಟ್‌ವೇರ್ ಎಂಜಿನಿಯರ್ ಎಂದು ಹೇಳಿಕೊಳ್ಳುತ್ತಿದ್ದ. ಯಾರಾದರೂ ತನ್ನ ಬಗ್ಗೆ ವಿಚಾರಣೆ ನಡೆಸಿದರೆ ಮಾಧ್ಯಮ ಪ್ರತಿನಿಧಿ ಹಾಗೂ ಮಾಧ್ಯಮ ಸಂಸ್ಥೆಯೊಂದರ ಉಪಾಧ್ಯಕ್ಷ ಎಂದೂ ಹೇಳಿಕೊಳ್ಳುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಬೇರೆಯವರ ಹೆಸರಿನಲ್ಲಿ 2 ಸಿಮ್ ಕಾರ್ಡ್, ಮೊಬೈಲ್ ಅನ್ನು ಕಾಳಸಂತೆಯಲ್ಲಿ ಖರೀದಿಸಿದ್ದ. ಈ ಮೊಬೈಲ್ ನಂಬರ್ ಬಳಸಿಕೊಂಡು ಮ್ಯಾಟ್ರಿಮೋನಿಯಲ್‌ನಲ್ಲಿ ನಕಲಿ ಹೆಸರು, ಫೋಟೊ, ಹುದ್ದೆ ಉಲ್ಲೇಖಿಸಿ ಪ್ರೊಫೈಲ್ ಸೃಷ್ಟಿಸಿದ್ದ. ವಿಚ್ಛೇದಿತರನ್ನು ವಿವಾಹ ಆಗುವುದಾಗಿ ಹೇಳಿಕೊಂಡಿದ್ದ. ಕೆಲವು ದಿನಗಳ ಹಿಂದೆ ವಿಳಾಸ ಬದಲಾಯಿಸಿ, ಕಸ್ಟಂ ಅಧಿಕಾರಿ ಎಂದು ಹೇಳಿಕೊಂಡಿದ್ದ. 'ಅಗರ್‌ಸೇನ್ ವೈವಾಹಿಕ ಮಂಚ್' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸೇರಿಕೊಂಡು ಮಹಿಳೆಯರ ವಿವರ ಪಡೆದುಕೊಳ್ಳುತ್ತಿದ್ದ. ಹಿಂದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ 'ವಧು-ವರರು ಬೇಕಾಗಿದ್ದಾರೆ' ಎಂಬ ಜಾಹೀರಾತುಗಳನ್ನು ಗಮನಿಸಿ, ಅಲ್ಲಿನ ಮಹಿಳೆಯರ ಮೊಬೈಲ್ ನಂಬರ್‌ಗೆ ಕರೆ ಮಾಡಿ ಮದುವೆ ಆಗುವುದಾಗಿ ನಂಬಿಸುತ್ತಿದ್ದ. ರಾತ್ರಿ ವೇಳೆ ಕರೆ ಮಾಡಿ ಮಹಿಳೆಯರ ಜೊತೆಗೆ ಅಸಭ್ಯವಾಗಿ ಮಾತನಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

ರೈಲ್ವೆ ಎಸ್‌ಪಿ ಸೌಮ್ಯಲತಾ ನೇತೃತ್ವದಲ್ಲಿ ಡಿವೈಎಸ್‌ಪಿ ರವಿಕುಮಾರ್, ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸಂತೋಷ್ ಎಂ. ಪಾಟೀಲ್, ಬೆಂಗಳೂರು ಠಾಣೆ ಪಿಎಸ್‌ಐ ಶರಣ ಬಸವರಾಜ ಸಿ.ಬಿರಾದಾರ ಮತ್ತು ತಂಡ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದೆ.

ಚಿಕ್ಕಪ್ಪನ ಸೋಗಿನಲ್ಲಿ ಭೇಟಿ

'ಕೊಯಮತ್ತೂರಿನ ಮಹಿಳೆಯೊಬ್ಬರನ್ನು ಪರಿಚಯಿಸಿಕೊಂಡಿದ್ದ ಆರೋಪಿ, ಆಕೆಯನ್ನು ಮದುವೆ ಆಗುವುದಾಗಿ ನಂಬಿಸಿದ್ದ. ಹೀಗಾಗಿ, ಆಕೆಯ ಪೋಷಕರನ್ನು ಮದುವೆ ಮಾತುಕತೆಗೆ ನಗರ ರೈಲ್ವೆ ನಿಲ್ದಾಣಕ್ಕೆ ಕರೆಸಿಕೊಂಡಿದ್ದ. ರೈಲ್ವೆ ನಿಲ್ದಾಣದಲ್ಲೇ ಮಹಿಳೆಯ ಪೋಷಕರನ್ನು ಯುವಕನ ಚಿಕ್ಕಪ್ಪನ ಸೋಗಿನಲ್ಲಿ ಭೇಟಿಯಾಗಿದ್ದ ಆರೋಪಿ ಅವರಿಂದ ಹಣ ವಂಚಿಸಿದ್ದ. ಮನೆಯಲ್ಲೇ ಪರ್ಸ್ ಬಿಟ್ಟು ಬಂದಿದ್ದು, ರೈಲ್ವೆ ಟಿಕೆಟ್ ಬುಕ್ ಮಾಡಲು ₹10 ಸಾವಿರ ಬೇಡಿಕೆ ಸಲ್ಲಿಸಿದ್ದ. ಈತನನ್ನು ನಂಬಿದ್ದ ಪೋಷಕರು ಹಣ ನೀಡಿದ್ದರು. ಟಿಕೆಟ್ ಬುಕ್ ಮಾಡಿ ಬರುತ್ತೇನೆ ಎಂದು ಹೇಳಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಪ್ರತ್ಯೇಕ ಅಪಘಾತ: ಮೂವರ ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಹಾಗೂ ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ– ಹೊಸೂರು ರಸ್ತೆ ಮೇಲ್ಸೇತುವೆಯಲ್ಲಿ ನಡೆದ ಅಪಘಾತದಲ್ಲಿ ಮಡಿವಾಳ ಕೆರೆ ಸಮೀಪದ ನಿವಾಸಿಗಳಾದ ಸವಾರ ಅಭಿನಂದನ್ (25) ಮತ್ತು ಹಿಂಬದಿ ಕೂತಿದ್ದ ದೀಕ್ಷಾ (25) ಮೃತಪಟ್ಟಿದ್ದಾರೆ. ಇಬ್ಬರೂ ಸ್ನೇಹಿತರು. ಮಂಗಳವಾರ ರಾತ್ರಿ 12 ಗಂಟೆ ಸುಮಾರಿಗೆ ಘಟನೆ ನಡೆದಿದೆ.

'ಅಭಿನಂದನ್ ಆನ್‌ಲೈನ್ ವ್ಯವಹಾರ ನಡೆಸುತ್ತಿದ್ದರೆ, ದೀಕ್ಷಾ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ದ್ವಿಚಕ್ರ ವಾಹನದಲ್ಲಿ ಕೋನಪ್ಪ ಅಗ್ರಹಾರ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿ- ಹೊಸೂರು ಮೇಲುಸೇತುವೆಯಲ್ಲಿ ತಮಿಳುನಾಡು ಕಡೆಗೆ ಹೋಗುತ್ತಿದ್ದರು. ಆಗ ಹಿಂದಿನಿಂದ ವೇಗವಾಗಿ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಸಹಾಯಕ ಸಾವು: ವಾಹನ (ಬಹುಚಕ್ರದ ವಾಹನ) ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಚಾಲಕನ ಸಹಾಯಕ ಮೃತಪಟ್ಟಿದ್ದು, ಮೇಲ್ವಿಚಾರಕ ಸೇರಿ ಮೂವರು ಗಾಯಗೊಂಡಿರುವ ಘಟನೆ ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಿಹಾರ ಮೂಲದ ವಿಜಯ್ ಉಪಾಧ್ಯಾಯ (25) ಮೃತಪಟ್ಟವರು.

ಜೆಸಿಬಿಗೆ ಬೆಂಕಿ ಹಚ್ಚಿದ ಒತ್ತುವರಿದಾರ

ಪ್ರಜಾವಾಣಿ ವಾರ್ತೆ

ಯಲಹಂಕ: ಶಿವಕೋಟೆ ಗ್ರಾಮದಲ್ಲಿ ಒತ್ತುವರಿ ತೆರವು ಮಾಡಲು ಬಂದ ಜೆಸಿಬಿ ವಾಹನಕ್ಕೆ ಒತ್ತುವರಿದಾರ ಬುಧವಾರ ಬೆಂಕಿಹಚ್ಚಿದ್ದಾರೆ.

ಶಿವಕೋಟೆ ಗ್ರಾಮದ ಸರ್ವೆ ನಂ. 10/7ರಲ್ಲಿ ಹಾದುಹೋಗಿರುವ ಬಂಡಿಜಾಡು ನಕಾಶೆ ರಸ್ತೆ ಒತ್ತುವರಿಯಾಗಿದ್ದು, ಯಲಹಂಕ ತಹಶೀಲ್ದಾರ್ ಅನಿಲ್‌ಕುಮಾರ್ ಅರೋಲಿಕರ್ ನೇತೃತ್ವದಲ್ಲಿ ಕಂದಾಯ ಇಲಾಖೆಯ ಸಿಬ್ಬಂದಿ, ಪೊಲೀಸ್ ಬಂದೋಬಸ್ತ್‌ನೊಂದಿಗೆ ಬೆಳಿಗ್ಗೆ ಒತ್ತುವರಿ ತೆರವುಗೊಳಿಸಲು ಮುಂದಾದರು.

ಈ ವೇಳೆ ರೊಚ್ಚಿಗೆದ್ದ ಒತ್ತುವರಿದಾರರಾದ ಸಿ. ಬಚ್ಚೇಗೌಡ ಮತ್ತು ಅವರ ಮಗ ಚೇತನ್ ಸೀಮೆಎಣ್ಣೆ ಮತ್ತು ಪೆಟ್ರೋಲ್ ತುಂಬಿದ ಗಾಜಿನ ಬಾಟಲ್‌ಗಳಿಗೆ ಬೆಂಕಿಹಚ್ಚಿ, ಜೆಸಿಬಿ ವಾಹನದ ಮೇಲೆ ಎಸೆದರು. ಜೆಸಿಬಿ ಬೆಂಕಿ ಹತ್ತಿಕೊಂಡು ಉರಿದಿದ್ದರಿಂದ ಹಾನಿಯಾಯಿತು. ಚಾಲಕ ವಾಹನದಿಂದ ಜಿಗಿದು ಓಡಿ ಅಪಾಯದಿಂದ ಪಾರಾದರು. ಕಂದಾಯ ಇಲಾಖೆಯ ಸಿಬ್ಬಂದಿ ಹಾಗೂ ಸ್ಥಳೀಯರು ಬೆಂಕಿಯನ್ನು ನಂದಿಸಿದರು.

ಜೆಸಿಬಿ ವಾಹನಕ್ಕೆ ಬೆಂಕಿಹಚ್ಚಿದ ಆರೋಪಿಗಳನ್ನು ರಾಜಾನುಕುಂಟೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿದೆ. ಜೆಸಿಬಿ ವಾಹನಕ್ಕೆ ಹಾನಿಯಾಗಿ ಉಂಟಾಗಿರುವ

ಬೆಂಕಿ ಹೊತ್ತಿಕೊಂಡು ಉರಿದ ಜೆಸಿಬಿ ವಾಹನ

ನಷ್ಟವನ್ನು ಬಚ್ಚೇಗೌಡ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಭರಿಸಲಾಗುವುದು ಎಂದು ತಹಶೀಲ್ದಾರ್ ಅನಿಲ್‌ಕುಮಾರ್ ತಿಳಿಸಿದರು.

ಮತ್ತೊಂದು ಜೆಸಿಬಿ ವಾಹನದ ಮೂಲಕ ಬಾಕಿಯಿದ್ದ ಒತ್ತುವರಿಯನ್ನು ತೆರವುಗೊಳಿಸಲಾಯಿತು. ಇದರಿಂದ ತಮ್ಮ ಜಮೀನುಗಳಿಗೆ ಕೃಷಿ ಚಟುವಟಿಕೆಗಳಿಗೆ ತೆರಳಲು ರಸ್ತೆಯಿಲ್ಲದೆ ತೊಂದರೆ ಅನುಭವಿಸುತ್ತಿದ್ದ ಸುಮಾರು 30 ರೈತ ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದು ಅವರು ಮಾಹಿತಿ ನೀಡಿದರು.

ಕಾನ್‌ಸ್ಟೆಬಲ್‌ಗೆ ಇರಿತ: 6 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು–ಬೆಂಗಳೂರು ಮಾರ್ಗದಲ್ಲಿ ಸಂಚರಿಸುವ ಗೋಲ್ ಗುಂಬಜ್ ರೈಲಿನಲ್ಲಿ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಇರಿದಿದ್ದ ಪ್ರಕರಣದಲ್ಲಿ ಆರು ಮಂದಿಯನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ರಸ್ತೆಯ ಕಸ್ತೂರಬಾ ನಗರ ನಿವಾಸಿಗಳಾದ ಮೊಹಮದ್ ಇರ್ಫಾನ್(19), ದರ್ಶನ್(21), ಮಹಮದ್ ಇಮ್ರಾನ್(20), ಮೋಹಿನ್ ಪಾಷ(21), ಮುನಿರಾಜು ಅಲಿಯಾಸ್ ಚಿನ್ನಿ(24) ಹಾಗೂ ಜೆ.ಜೆ.ನಗರದ ಫೈಸಲ್ ಖಾನ್(22) ಬಂಧಿತರು. ಘಟನೆ ನಡೆದು 24 ತಾಸಿನ ಒಳಗಾಗಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಗೋಲ್ ಗುಂಬಜ್ ರೈಲಿನಲ್ಲಿ ಕರ್ತವ್ಯ ನಿರತ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಸತೀಶ್ ಚಂದ್ರ ಅವರಿಗೆ ಆರೋಪಿಗಳು ಚಾಕುವಿನಿಂದ ಇರಿದಿದ್ದರು. ಈ ಸಂಬಂಧ ದಾಖಲಾದ ಪ್ರಕರಣದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

ರೈಲಿನಲ್ಲಿ ಕಳ್ಳತನ ಪ್ರಕರಣಗಳ ಪತ್ತೆ, ತಡೆಗಟ್ಟುವ ಕರ್ತವ್ಯಕ್ಕೆ ಸತೀಶ್ ಚಂದ್ರ ಅವರನ್ನು ನಿಯೋಜಿಸಲಾಗಿತ್ತು. ರೈಲಿನ ಎಸ್ ಬೋಗಿಯ ಶೌಚಾಲಯದ ಎದುರು ಆರು ಮಂದಿ ಗುಂಪಿತ್ತು. ಇಬ್ಬರು ಆರೋಪಿಗಳು ರೈಲು ಬೋಗಿಯ ಬಳಿ ಸಿಗರೇಟ್ ಸೇದುತ್ತಿದ್ದರೆ, ಉಳಿದ ನಾಲ್ವರು ಬಾಗಿಲ ಬಳಿ ಕುಳಿತು ಅಸಭ್ಯವಾಗಿ ವರ್ತಿಸುತ್ತಿದ್ದರು. ಆಗ ಕಾನ್‌ಸ್ಟೆಬಲ್ ಬುದ್ಧಿ ಬುದ್ಧಿಮಾತು ಹೇಳಿದ್ದರು. ಇದರಿಂದ ಕುಪಿತಗೊಂಡ ಆರೋಪಿಗಳು, ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದರು. ಅಷ್ಟರಲ್ಲಿ ರೈಲು ಮದ್ದೂರು ರೈಲು ನಿಲ್ದಾಣಕ್ಕೆ ಬಂದಿತ್ತು. ಸ್ಥಳೀಯರ ನೆರವಿನಿಂದ ಇಬ್ಬರು ಆರೋಪಿಗಳನ್ನು ಹಿಡಿದು ಬಂಧಿಸಲಾಗಿತ್ತು. ನಾಲ್ವರು ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ಬಳಿಕ ವಿಶೇಷ ತಂಡ ರಚಿಸಿ, 24 ತಾಸಿನ ಒಳಗೆ ಉಳಿದ ನಾಲ್ವರನ್ನು ಬಂಧಿಸಲಾಯಿತು ಎಂದು ರೈಲ್ವೆ ಪೊಲೀಸರು ಹೇಳಿದರು.

44 ಕಾರ್ಯಕರ್ತರಿಗೆ ನಿಗಮ, ಮಂಡಳಿ ಅಧ್ಯಕ್ಷ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಗೂ ಮೊದಲೇ, ಕಾಂಗ್ರೆಸ್‌ನ 44 ಮುಖಂಡರು ಹಾಗೂ ಕಾರ್ಯಕರ್ತರಿಗೆ ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನ ಭಾಗ್ಯ ಸಿಕ್ಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ನೇಮಕಾತಿ ಪಟ್ಟಿಗೆ ಬುಧವಾರ ಅನುಮೋದನೆ ನೀಡಿದ್ದು, ಆಯಾ ಇಲಾಖೆಗಳಿಗೆ ರವಾನೆಯಾಗಿದೆ. ಗುರುವಾರ (ಫೆ.29) ಇಲಾಖೆಗಳಿಂದ ಪ್ರತಿಯೊಬ್ಬರಿಗೂ ವೈಯುಕ್ತಿಕವಾಗಿ ನೇಮಕ ಆದೇಶ ರವಾನೆಯಾಗಲಿದೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು ಅಧಿಕಾರಕ್ಕೆ ಬಂದಿತ್ತು. 135 ಸ್ಥಾನ ಗೆದ್ದು ಅಧಿಕಾರ ಹಿಡಿದಿದ್ದರಿಂದಾಗಿ, ಸಚಿವ ಸ್ಥಾನದ ಆಕಾಂಕ್ಷಿಗಳ ಪಟ್ಟಿ ದೊಡ್ಡದಿತ್ತು. ಸಚಿವಗಿರಿ ಕೈತಪ್ಪಿದ ಶಾಸಕರ ಅಸಮಾಧಾನ ತಣಿಸಲು ನಿಗಮ–ಮಂಡಳಿಗಳಿಗೆ ನೇಮಕ ಮಾಡುವ ಭರವಸೆ ನೀಡುತ್ತಾ ಬರಲಾಗಿತ್ತು. 32ರಿಂದ 35 ಶಾಸಕರಿಗೆ ಅವಕಾಶ ನೀಡುವ ಕುರಿತು ಚರ್ಚೆ ನಡೆದಿತ್ತು. ಸಾಕಷ್ಟು ಸಮಯದ ನಂತರ ಪಟ್ಟಿ ಸಿದ್ಧಪಡಿಸಲಾಗಿತ್ತು. ಶಾಸಕರ ಜತೆಗೇ ಪಕ್ಷದ ಕಾರ್ಯಕರ್ತರಿಗೂ ಅವಕಾಶ ನೀಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದರಿಂದ ಮತ್ತೆ ವಿಳಂಬವಾಗಿತ್ತು.

ನಂತರ ಶಾಸಕರು ಹಾಗೂ ಪಕ್ಷದ ಕಾರ್ಯಕರ್ತರನ್ನು ಒಳಗೊಂಡ ಪಟ್ಟಿ ಸಿದ್ಧಪಡಿಸಲಾಗಿತ್ತು. 34 ಶಾಸಕರಿಗೆ ನಿಗಮ–ಮಂಡಳಿ ಅಧ್ಯಕ್ಷ ಸ್ಥಾನದ ಜತೆಗೆ ಮಂತ್ರಿಗಿರಿಯ ಸೌಲಭ್ಯ ನೀಡಲಾಗಿತ್ತು.

37 ಕಾರ್ಯಕರ್ತರ ಪಟ್ಟಿ ಸಿದ್ಧವಾಗಿದ್ದರೂ ಅದು ಬಿಡುಗಡೆಯಾಗಿರಲಿಲ್ಲ. ಮುಖ್ಯಮಂತ್ರಿ ಹಾಗೂ ಸಚಿವರ ಗಮನಕ್ಕೆ ತರದೆ ಕೆಲ ಹೆಸರು ಸೇರ್ಪಡೆಯಾಗಿವೆ ಎಂಬ ಅಸಮಾಧಾನ ಸ್ಫೋಟವಾದ ಕಾರಣ ಪಟ್ಟಿ ತಡೆಹಿಡಿಯಲಾಗಿತ್ತು. ಪಟ್ಟಿ ಸಿದ್ಧಪಡಿಸುವ ಮುನ್ನ ತಮ್ಮ ಅಭಿಪ್ರಾಯ ಕೇಳಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ, ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಹಲವರು ಅಸಮಾಧಾನ ವ್ಯಕ್ತಪಡಿಸಿದ್ದರು. 17ಕ್ಕೂ ಹೆಚ್ಚು ಸಚಿವರು ತಮ್ಮ ಇಲಾಖೆ ವ್ಯಾಪ್ತಿಯ ನಿಗಮ–ಮಂಡಳಿಗಳಿಗೆ ತಮ್ಮನ್ನು ಕೇಳದೇ ನೇಮಕ ಮಾಡುತ್ತಿರುವುದು ಸರಿಯಲ್ಲ ಆಕ್ಷೇಪ ವ್ಯಕ್ತಪಡಿಸಿದ್ದರು. ಕೊನೆಗೂ ಒಂದೂವರೆ ತಿಂಗಳ ನಂತರ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ನಿಗಮ–ಮಂಡಳಿ ಅಧ್ಯಕ್ಷಗಾದಿ ದೊರೆತಿದೆ.

'ಗ್ಯಾರಂಟಿ' ಅನುಷ್ಠಾನ ಸಮಿತಿಗೆ ಎಚ್.ಎಂ.ರೇವಣ್ಣ ಅಧ್ಯಕ್ಷ



ಸರ್ಕಾರದ ಐದು ಗ್ಯಾರಂಟಿ ಯೋಜನೆಯಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಮಾಜಿ ಸಚಿವ ಎಚ್.ಎಂ.ರೇವಣ್ಣ ಅವರನ್ನು ನೇಮಕ ಮಾಡಲಾಗಿದೆ. ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಲಾಗಿದೆ.

ಉಪಾಧ್ಯಕ್ಷರಾಗಿ ಮೆಹರೂಜ್ ಖಾನ್, ಪುಷ್ಪಾ ಅಮರನಾಥ್, ಎಸ್.ಆರ್.ಪಾಟೀಲ ಮತ್ತು ಸೂರಜ್ ಹೆಗ್ಡೆ ಅವರ ಹೆಸರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದಿಸಿದ್ದಾರೆ.

ಜಾಮ್‌ತಾರಾ: ರೈಲು ಹರಿದು ಇಬ್ಬರು ಸಾವು

ಜಾಮ್‌ತಾರಾ (ಪಿಟಿಐ): ಜಾರ್ಖಂಡ್‌ನಲ್ಲಿ ಬುಧವಾರ ಸಂಜೆ ರೈಲು ಹರಿದು ಕನಿಷ್ಠ ಇಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಲ್‌ಝರಿಯಾ ನಿಲ್ದಾಣದ ಬಳಿ ಹಲವರ ಮೇಲೆ ರೈಲು ಹರಿದಿದೆ ಎನ್ನಲಾಗಿದೆ. ಜಾಮ್‌ತಾರಾ ಪೊಲೀಸ್ ಉಪ ವಿಭಾಗಾಧಿಕಾರಿ ಮುಜಿಬುರ್ ರಹಮಾನ್ ಇಬ್ಬರ ಸಾವನ್ನು ಖಚಿತಪಡಿಸಿದ್ದಾರೆ.

ವಿದ್ಯಾಸಾಗರ್–ಕಾಶಿತಾನ್ ನಡುವೆ ಸಂಚರಿಸುವ ಆಂಗನ್ ಎಕ್ಸ್‌ಪ್ರೆಸ್ ರೈಲು ಯಾರೋ ಚೈನ್ ಎಳೆದ ಕಾರಣದಿಂದಾಗಿ ನಿಂತಿತ್ತು. ಇನ್ನೊಂದು ಹಳಿ ಮೇಲೆ ಮೆಮು ರೈಲು ಇಬ್ಬರ ಮೇಲೆ ಹರಿಯಿತು. ಆ ಇಬ್ಬರು ಆಂಗನ್ ಎಕ್ಸ್‌ಪ್ರೆಸ್‌ನ ಪ್ರಯಾಣಿಕರಲ್ಲ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಚೇತನ್ ನಂದ್ ಸಿಂಗ್ ಹೇಳಿದ್ದಾರೆ. ಅವಘಡದಲ್ಲಿ ಇನ್ನಷ್ಟು ಜನರು ಮೃತಪಟ್ಟಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಸುಧಾ, ಮಯೂರ ಓದಿರಿ

IN THE COURT OF THE HON'BLE II ADDL. JUNIOR CIVIL JUDGE, RANGA REDDY DISTRICT, AT HAYATHNAGAR
O.S.No. 321 of 2021

Between:
Sri Bellamkonda Rama Rao & others ...Plaintiffs
And
Sri S.Mathivanan ...Defendant

To,
Sri S.Mathivanan, S/o. Sri M.Selvaraj, Aged about 55 years, Occ: Pvt. Service, R/o. Flat No. 601, Block 18, Suncity Apartments, Sarjapur Outer Ring Road, Near Sobha Garnet Ibblur, Bangalore South- 560102, Karnataka State.

Please take notice that the Plaintiffs have instituted a Suit against youfor Declaration. You are hereby summoned to appear in this Court in personor by a Pleader duly instructed and able to answer all material questions relatingto the Suit on 18-03-2024 at 10-30 A.M. in the forenoon to answer the claim, and further you are hereby directed to file on that day a written statement of your defense and to produce on the said day all documents inyour possession or power upon which you base your defense.

Take notice that in default of your appearance on the day abovementioned date, the suit be heard and determined in your absence.

//By order of the Court//

VIGNENDRA VARMA RATHOD, ASWIN SAHITH GUPTHA, M.RAJU & K.SAI KUMAR, ADVOCATES
PREM KUTIR, H.No.3-9-518/11, Road No.3, Bhavani Nagar, Mansoorabad, Hyderabad- 68. Cell: 90326 96177.
Email:ipcvvr@gmail.com

ನಗರದಲ್ಲಿ ಇಂದು

ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ವಿಜ್ಞಾನ ವಸ್ತು ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ರಸ್ತೆ, ಬೆಳಿಗ್ಗೆ 10

'ವಚನ ಸಾಹಿತ್ಯ ಮತ್ತು ಚಳವಳಿ–ಕಾಯಕ ಶರಣರು' ರಾಷ್ಟ್ರೀಯ ವಿಚಾರಸಂಕಿರಣ, 'ಕಾಯಕ ಶರಣರು' ಮತ್ತು 'ದಲಿತ ಸಾಹಿತ್ಯ ವಿಮರ್ಶೆ' ಪುಸ್ತಕಗಳ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಪುಸ್ತಕ ಬಿಡುಗಡೆ: ಜಯಕರ ಎಸ್.ಎಂ., ಅತಿಥಿಗಳು: ಶೇಖ್ ಲತೀಫ್, ಸುಬ್ಬು ಹೊಲೆಯಾರ್, ಅಧ್ಯಕ್ಷತೆ: ಮುನಿಯಪ್ಪ, ಪ್ರಾಸ್ತಾವಿಕ ನುಡಿ: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಉಪಸ್ಥಿತಿ: ಬಿ.ಸಿ. ಮುತ್ತುರಾಜು, ಬಿ.ಕೆ. ಸುರೇಶ್, ಆಯೋಜನೆ: ಕನ್ನಡ ಅಧ್ಯಯನ ಕೇಂದ್ರ, ಶೂದ್ರ ಪ್ರತಿಷ್ಠಾನ, ಸ್ಥಳ: ಜಿ.ಎಸ್.ಎಸ್. ಸಭಾಂಗಣ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30



ಮೂಡ್ನಾಕೂಡು ಚಿನ್ನಸ್ವಾಮಿ

'ಅನ್ನಭಾಗ್ಯ ದಶಮಾನೋತ್ಸವ': ಉದ್ಘಾಟನೆ: ಸಿದ್ದರಾಮಯ್ಯ, ಗ್ರಾಹಕರ ಸಂರಕ್ಷಣಾ ಹಕ್ಕುಗಳ ವಸ್ತುಪ್ರದರ್ಶನಕ್ಕೆ ಚಾಲನೆ: ಡಿ.ಕೆ. ಶಿವಕುಮಾರ್, ತೂಕ, ಅಳತೆಗಳ ಗ್ರಾಹಕರ ಜಾಗೃತಿ ಕೈಪಿಡಿ ಬಿಡುಗಡೆ: ಕೆ.ಎಚ್. ಮುನಿಯಪ್ಪ, ಆಹಾರ ನಿಗಮದ ಸುವರ್ಣ ಮಹೋತ್ಸವದ ವಿಡಿಯೊ ಬಿಡುಗಡೆ: ಬಿ.ಜಿ. ಗೋವಿಂದಪ್ಪ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಆಯೋಜನೆ: ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ, ಸ್ಥಳ: ಕೃಷ್ಣ ವಿಹಾರ, ಅರಮನೆ ಮೈದಾನ, ಬೆಳಿಗ್ಗೆ 11

ವೈ. ವೆಂಕಟೇಶಪ್ಪ ಅವರಿಗೆ ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ಎಂ. ಕೃಷ್ಣಪ್ಪ, ಕೆ. ರಾಮಕೃಷ್ಣ ರೆಡ್ಡಿ, ಅಧ್ಯಕ್ಷತೆ: ಮುದ್ದುಕೃಷ್ಣ ಕೆ.ಆರ್., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 11

ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಆರ್. ಅಶೋಕ, ಪ್ರಮಾಣಪತ್ರ ವಿತರಣೆ: ತೇಜಸ್ವಿ ಸೂರ್ಯ, ಆಯೋಜನೆ: ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ಸ್ಥಳ: ಬನಶಂಕರಿ ದೇವಸ್ಥಾನದ ಅವರಣ, ಬೆಳಿಗ್ಗೆ 11.30

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ: ಉದ್ಘಾಟನೆ- ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಬಾಲಿವುಡ್ ನಿರ್ದೇಶಕ ಜಬ್ಬಾರ್ ಪಟೇಲ್, ನಟ ಶಿವರಾಜ್ ಕುಮಾರ್, ಬಾಂಗ್ಲಾದೇಶದ ನಟಿ ಅಜಮೇರಿ ಬಂದೋನ. ಸ್ಥಳ : ವಿಧಾನಸೌಧದ , ಸಮಯ: ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

ಪದಗ್ರಹಣ ಕಾರ್ಯಕ್ರಮ: ಉದ್ಘಾಟನೆ: ಹಂಸಲೇಖ, ಸಿ. ಸೋಮಶೇಖರ್, ಅತಿಥಿಗಳು: ಲಹರಿ ವೇಲು, ಎಸ್.ಜಿ. ಸಿದ್ಧರಾಮಯ್ಯ, ದಿನೇಶ್ ಕುಮಾರ್ ಎನ್. ಜೋಶಿ ಅಬಸೆ, ಆಯೋಜನೆ: ಕರ್ನಾಟಕ ಪ್ರೆಸ್‌ಕ್ಲಬ್ ಕೌನ್ಸಿಲ್, ಸ್ಥಳ: ಆರ್.ಜಿ. ರಾಯಲ್ ಹೋಟೆಲ್, ಯಶವಂತಪುರ, ಸಂಜೆ 5

ಎಲ್. ನಾಗಮಣಿ, ಆರ್. ಲಕ್ಷ್ಮೀನಾರಾಯಣ ದತ್ತಿ ಸಂಗೀತ ಕಾರ್ಯಕ್ರಮ: ಜನಪದ ಗೀತೆಗಳ ಗಾಯನ: ಗೌರಮ್ಮ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಕನ್ನಡ ಹೋರಾಟ 'ಹೆಜ್ಜೆ ಗುರುತುಗಳು' ಪುಸ್ತಕ ಬಿಡುಗಡೆ: ಜಾಣಗೆರೆ ವೆಂಕಟರಾಮಯ್ಯ, ಅತಿಥಿಗಳು: ಪಿ.ವಿ. ನಾರಾಯಣ, ರು. ಬಸಪ್ಪ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಎಚ್.ಡಿ. ದೇವೇಗೌಡ ಅವರ ಕುರಿತು ನೇ.ಭ. ರಾಮಲಿಂಗಾ ಶೆಟ್ಟಿ ಅವರು ಬರೆದಿರುವ 'ಮಣ್ಣಿನ ಮಗ' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ಪುಸ್ತಕ ಬಿಡುಗಡೆ: ಮಹೇಶ ಜೋಶಿ, ಅಧ್ಯಕ್ಷತೆ: ಟಿ.ಎ. ನಾರಾಯಣಗೌಡ, ಪುಸ್ತಕದ ಕುರಿತು: ಹಂ.ಪ. ನಾಗರಾಜಯ್ಯ, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಬಿ.ಆರ್. ಸುದರ್ಶನ್, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಕರ್ನಾಟಕ ವಾದ್ಯ ಸಂಗೀತ: ಕೊಳಲು: ರಾಘವೇಂದ್ರ ಶೃಂಗೇರಿ, ಶ್ರೇಯಸ್, ಮ್ಯಾಂಡೋಲಿನ್: ಶ್ರೀವತ್ಸ ಕಶ್ಯಪ್, ಪಿಟೀಲು: ಶ್ರೀಹರ್ಷ, ಮೃದಂಗ: ಅನಿರುದ್ಧ ವಾಸುದೇವ್, ತಬಲಾ: ನಟರಾಜ ಶೃಂಗೇರಿ, ಕೀ–ಬೋರ್ಡ್: ರಮೇಶ್ ಟಿ.ಎಸ್., ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಹರಿದಾಸ ನಮನ: ಗಾಯನ: ರಶ್ಮಿ ಮಧುಸೂದನ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಚೌಡೇಶ್ವರಿ ನಗರ: ಮಾರ್ಚ್ 4ರಂದು ದೇವರ ವಿಗ್ರಹ ಪ್ರತಿಷ್ಠಾಪನೆ ಕಾರ್ಯಕ್ರಮ

ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಶವಂತಪುರ ಹೋಬಳಿ ಚೌಡೇಶ್ವರಿ ನಗರದ ಲಗ್ಗೆರೆಯ 50 ಅಡಿ ಮುಖ್ಯರಸ್ತೆಯಲ್ಲಿ ನಿರ್ಮಾಣವಾಗಿದೆ ಎನ್ನಲಾದ ದುರ್ಗಾ ಪರಮೇಶ್ವರಿ ದೇವಾಲಯದಲ್ಲಿ ಮಾರ್ಚ್ 4ರಂದು ನಡೆಸಲು ಉದ್ದೇಶಿಸಿರುವ ದೇವರ ವಿಗ್ರಹ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಪೊಲೀಸರಿಗೆ ಹೈಕೋರ್ಟ್ ನಿರ್ದೇಶಿಸಿದೆ.

'ಕೋವಿಡ್-19ರ ಲಾಕ್‌ಡೌನ್ ನಿರ್ಬಂಧವಿದ್ದ ದಿನಗಳಲ್ಲಿ ಲಗ್ಗೆರೆ ಮುಖ್ಯರಸ್ತೆಯ ಪಾದಚಾರಿ ಮಾರ್ಗ ಒತ್ತುವರಿ ಮಾಡಿ ದೇವಾಲಯ ನಿರ್ಮಿಸಲಾಗಿದೆ' ಎಂದು ಆರೋಪಿಸಿ ಡಿ.ದಾಕ್ಷಾಯಣಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಯಥಾಸ್ಥಿತಿ ಕಾಯ್ದುಕೊಳ್ಳುವುದನ್ನು ಬಿಬಿಎಂಪಿ ವಾರ್ಡ್ ನಂ. 73ರ ಹಾಲಿ ಸಹಾಯಕ ಕಾರ್ಯಕಾರಿ ಎಂಜಿನಿಯರ್ ಖಾತರಿಪಡಿಸಬೇಕು. ಈ ವಿಷಯದಲ್ಲಿ ಅಗತ್ಯಬಿದ್ದರೆ ಆರ್‌ಎಂಸಿ ಯಾರ್ಡ್ ಸಹಾಯಕ ಪೊಲೀಸ್ ಆಯುಕ್ತ ಹಾಗೂ ರಾಜಗೋಪಾಲ ನಗರ ಠಾಣೆ ಇನ್‌ಸ್ಪೆಕ್ಟರ್ ನೆರವು ಪಡೆಯಬಹುದು. ದೇವಸ್ಥಾನ ನಿರ್ಮಾಣವಾಗಿದೆ ಎನ್ನಲಾದ ಪಾದಚಾರಿ ಮಾರ್ಗದಲ್ಲಿ ಸಂಬಂಧಿಸಿದ ನಗರ ಯೋಜನಾ ಇಲಾಖೆ ಸಹಾಯಕ ನಿರ್ದೇಶಕ, ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಸೇರ್ಪಡೆ: ಅರ್ಜಿದಾರರ ಪರ ವಕೀಲ ಎನ್.ಪಿ.ಅಮೃತೇಶ್ ಮನವಿಯಂತೆ ಆರ್‌ಎಂಸಿ ಯಾರ್ಡ್ ಸಹಾಯಕ ಪೊಲೀಸ್ ಆಯುಕ್ತರು ಮತ್ತು ರಾಜಗೋಪಾಲ ನಗರ ಠಾಣೆ ಇನ್‌ಸ್ಪೆಕ್ಟರ್ ಅವರನ್ನು ಅರ್ಜಿಯಲ್ಲಿ ಹೆಚ್ಚುವರಿ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲು ನ್ಯಾಯಪೀಠ ಇದೇ ವೇಳೆ ಅದೇಶಿಸಿದೆ.

ಅತೃಪ್ತಿ: ವಿವಾದಿತ ಜಾಗದ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು 2023ರ ಡಿಸೆಂಬರ್ 21ರಂದು ಮತ್ತು 2024ರ ಫೆಬ್ರುವರಿ 20ರಂದು ಹೊರಡಿಸಿದ್ದ ಆದೇಶವನ್ನು ಪಾಲಿಸದ ನಗರ ಯೋಜನಾ ಇಲಾಖೆ ಸಹಾಯಕ ನಿರ್ದೇಶಕರ ಕ್ರಮದ ಬಗ್ಗೆ ನ್ಯಾಯಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ನ್ಯಾಯಾಲಯದ ಆದೇಶದಂತೆ ವಿವಾದಿತ ಸ್ಥಳದ ಪರಿಶೀಲನೆ ನಡೆಸಿ ವರದಿ ಸಲ್ಲಿಸಿಲ್ಲ. ವರದಿ ಸಲ್ಲಿಸದೇ ಇರುವುದಕ್ಕೆ ಕಾರಣವನ್ನೂ ತಿಳಿಸಿಲ್ಲ. ಇದು ನ್ಯಾಯಾಲಯದ ನಿರ್ದೇಶನವನ್ನು ಉದ್ದೇಶಪೂರ್ವಕವಾಗಿ ಪಾಲಿಸಿಲ್ಲ ಎಂಬುದನ್ನು ತೋರಿಸುತ್ತದೆ. ಮತ್ತೊಂದೆಡೆ ರಾಜಗೋಪಾಲ ನಗರ ಠಾಣಾ ಪೊಲೀಸರು ಕೋರ್ಟ್‌ನ ಈ ಆದೇಶದ ಪ್ರತಿಯನ್ನು ದುರ್ಗಾ ಪರಮೇಶ್ವರಿ ಸೇವಾ ಸಮಿತಿಗೂ ತಲುಪಿಸಿಲ್ಲ' ಎಂದು ನ್ಯಾಯಪೀಠ ಅತೃಪ್ತಿ ಹೊರಹಾಕಿದೆ.

ಪ್ರಕರಣವೇನು?: 'ಕೋವಿಡ್-19ರ ಲಾಕ್‌ಡೌನ್ ನಿರ್ಬಂಧವಿದ್ದ ದಿನಗಳಲ್ಲಿ ಲಗ್ಗೆರೆಯ 50 ಅಡಿ ಮುಖ್ಯ ರಸ್ತೆಯ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ದುರ್ಗಾ ಪರಮೇಶ್ವರಿ ಸೇವಾ ಸಮಿತಿಯು ದುರ್ಗಾ ಪರಮೇಶ್ವರಿ ದೇವಸ್ಥಾನ ನಿರ್ಮಿಸಿದೆ. ಹಾಗಾಗಿ, ಸ್ಥಳ ಪರಿಶೀಲನೆ ನಡೆಸಿ ಒತ್ತುವರಿ ತೆರವುಗೊಳಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

'ದೇವಾಲಯದಲ್ಲಿ ಮಾರ್ಚ್ 4ರಂದು ದೇವರ ವಿಗ್ರಹ ಪ್ರತಿಷ್ಠಾಪನೆ ನಿಗದಿಯಾಗಿದೆ. ಒಂದೊಮ್ಮೆ ದೇವರ ವಿಗ್ರಹ ಪ್ರತಿಷ್ಠಾಪನೆ ನೆರವೇರಿದರೆ, ಒತ್ತುವರಿ ತೆರವು ಕಷ್ಟವಾಗುತ್ತದೆ ಎಂಬುದನ್ನು ಇತ್ತೀಚಿನ ವಿಚಾರಣೆ ವೇಳೆ ಅರ್ಜಿದಾರರು ನ್ಯಾಯಪೀಠದ ಗಮನಕ್ಕೆ ತಂದಿದ್ದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ.

ಇಂದು ಸಂಚಾರ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಫೆ.29ರಂದು ಇಲ್ಲಿನ ಅರಮನೆ ಮೈದಾನದಲ್ಲಿ 'ಅನ್ನಭಾಗ್ಯ ದಶಮಾನೋತ್ಸವ' ಹಸಿವು ಮುಕ್ತ ಕರ್ನಾಟಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಂಚಾರ ಮಾರ್ಗದಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ.

ಬಸ್, ಟೆಂಪೊ ಟ್ರಾವೆಲರ್, ಕಾರು ಹಾಗೂ ಬೈಕ್‌ಗಳಲ್ಲಿ ಕಾರ್ಯಕ್ರಮಕ್ಕೆ ಬರುವ ಸಾರ್ವಜನಿಕರು ಕೃಷ್ಣ ವಿಹಾರ್ ಅರಮನೆ ಮೈದಾನ ಪ್ರವೇಶಿಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಬದಲಿ ಮಾರ್ಗ ಹೀಗಿದೆ:

ಅರಮನೆ ರಸ್ತೆ: ಮೈಸೂರು ಬ್ಯಾಂಕ್ ವೃತ್ತದಿಂದ ವಸಂತನಗರದ ಕೆಳಸೇತುವೆ ವರೆಗೆ. ಎಂ.ವಿ. ಜಯರಾಮ ರಸ್ತೆ: ಅರಮನೆ ರಸ್ತೆ, ಬಿ.ಡಿ.ಎ ಜಂಕ್ಷನ್‌ನಿಂದ ಚಕ್ರವರ್ತಿ ಲೇಔಟ್ ಸೇರಿದಂತೆ ವಸಂತನಗರ ಕೆಳಸೇತುವೆಯಿಂದ ಹಳೇ ಉದಯ ಟಿ.ವಿ ಜಂಕ್ಷನ್ ವರೆಗೆ (ಎರಡೂ ದಿಕ್ಕಿನಿಂದ). ಬಳ್ಳಾರಿ ರಸ್ತೆ: ಎಲ್‌ಆರ್‌ಡಿಇಯಿಂದ ಹೆಬ್ಬಾಳವರೆಗೆ.

ಕನ್ನಿಂಗ್ ಹ್ಯಾಂ ರಸ್ತೆ: ಬಾಳೇಕುಂದ್ರಿ ವೃತ್ತದಿಂದ ಲಿ ಮೆರಿಡಿಯನ್ ಕೆಳಸೇತುವೆ ವರೆಗೆ. ಮಿಲ್ಲರ್ ರಸ್ತೆ: ಜಯಮಹಲ್ ರಸ್ತೆ ಹಾಗೂ ಬೆಂಗಳೂರು ಅರಮನೆ ಸುತ್ತಮುತ್ತಲ ರಸ್ತೆಗಳು. ಯಶವಂತಪುರ ಮತ್ತು ಮೇಖ್ರಿ ವೃತ್ತ ರಸ್ತೆ: ಯಶವಂತಪುರ -ಟಾಟಾ ವಿಜ್ಞಾನ ಸಂಸ್ಥೆ- ಮೇಖ್ರಿ ವೃತ್ತದವರೆಗೆ. ರಮಣ ಮಹರ್ಷಿ ರಸ್ತೆ: ತರಳಬಾಳು ರಸ್ತೆ.

ಕಂಟೋನ್‌ಮೆಂಟ್ ರಸ್ತೆ: ಕ್ವೀನ್ಸ್ ರಸ್ತೆ, ತಿಮ್ಮಯ್ಯ ವೃತ್ತ, ಬಾಳೆಕುಂದ್ರಿ ವೃತ್ತ. ಸರ್ ಸಿವಿ ರಾಮನ್ ರಸ್ತೆ: ಬಾಷ್ಯಂ ವೃತ್ತ, ಸ್ಯಾಂಕಿ ರಸ್ತೆ, ಸರ್ಕಲ್ ಮಾರಮ್ಮ, ಬಿಎಚ್‌ಇಎಲ್ ವೃತ್ತ. ಯಶವಂತಪುರ ಮೇಲ್ಸೇತುವೆ: ಮಾರಪ್ಪನ ಪಾಳ್ಯ, ಪಾರಿಜಾತ ಜಂಕ್ಷನ್, ಓರಾಯನ್ ಮಾಲ್, ರಾಜಕುಮಾರ್ ರಸ್ತೆ.

ವಾಹನ ನಿಲುಗಡೆ ನಿಷೇಧಿತ ರಸ್ತೆಗಳು: ಪ್ಯಾಲೆಸ್ ರಸ್ತೆ, ಜಯಮಹಲ್ ರಸ್ತೆ, ರಮಣಮಹರ್ಷಿ ರಸ್ತೆ, ಮೌಂಟ್ ಕಾರ್ಮಲ್ ಕಾಲೇಜು ರಸ್ತೆ, ಎಂ.ವಿ. ಜಯರಾಮ್ ರಸ್ತೆ, ಸಿ.ವಿ. ರಾಮನ್ ರಸ್ತೆ, ನಂದಿದುರ್ಗ ರಸ್ತೆ. ಮೇಖ್ರಿ ವೃತ್ತದಿಂದ ಯಶವಂತರಪುರ ರಸ್ತೆವರೆಗೆ, ವಸಂತನಗರ ರಸ್ತೆ, ಬಳ್ಳಾರಿ ರಸ್ತೆ, ತರಳಬಾಳು ರಸ್ತೆ.

ಮಾರ್ಗ ಬದಲಾವಣೆ ಮಾಡುವ ಸ್ಥಳಗಳು: ಸಿಎಂಟಿಐ ಜಂಕ್ಷನ್, ಮೈಸೂರು ಬ್ಯಾಂಕ್ ಜಂಕ್ಷನ್, ಹೆಬ್ಬಾಳ ಜಂಕ್ಷನ್, ಓಲ್ಡ್ ಉದಯ ಟಿ.ವಿ ಜಂಕ್ಷನ್, ಹಜ್ ಕ್ಯಾಂಪ್ ನಂದಿದುರ್ಗ ರಸ್ತೆ, ಯಶವಂತಪುರ ಗೋವರ್ಧನ್ ಬಳಿ, ನೈಸ್ ರಸ್ತೆ ಜಂಕ್ಷನ್.

ಸರಕು ಸಾಗಣೆ ವಾಹನ ನಿಷೇಧ: ಭಾರಿ ಸರಕು ಸಾಗಾಣಿಕೆ ವಾಹನಗಳ ಸಂಚಾರವನ್ನು ಅಂದು ಬೆಳಿಗ್ಗೆ 7ರಿಂದ ಮಧ್ಯಾಹ್ನ 12 ಹಾಗೂ ಮಧ್ಯಾಹ್ನ 3ರಿಂದ ರಾತ್ರಿ 10ರ ವರೆಗೆ ನಿಷೇಧಿಸಲಾಗಿದೆ. ಬೆಳಿಗ್ಗೆ 7ರಿಂದ 9ರ ವರೆಗೆ ಕಾವೇರಿ ಜಂಕ್ಷನ್ ಕೆಳಸೇತುವೆಯಲ್ಲಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ALVA'S EDUCATION FOUNDATION (R.)
Vidyagiri-Moodubidire - 574 227
REQUIRED
HOSTEL MANAGER (Male)
STUDENT WELFARE OFFICER (Male/Female)
WARDENS (Male / Female)
Qualification: Any Master Degree with good communication skills. Ex Army Personnel can also apply.
Food and Accommodation is provided.
Eligible candidates can send the updated resume to
Email: adminrguhs@alvas.org
9632938007, 9590513518

ಇನ್‌ಸ್ಪೆಕ್ಟರ್ ಸೇರಿ ನಾಲ್ವರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮದ್ಯ ಸೇವಿಸಿ ಕಾರು ಚಲಾಯಿಸುತ್ತಿದ್ದೀರಾ' ಎಂದು ಯುವತಿಯನ್ನು ಬೆದರಿಸಿ ಹಣದ ಪಡೆದಿದ್ದ ಆರೋಪದ ಮೇರೆಗೆ ಜೀವನ್‌ಬಿಮಾ ನಗರ ಸಂಚಾರ ಪೊಲೀಸ್ ಠಾಣೆಯ ನಾಲ್ವರು ಸಿಬ್ಬಂದಿಯನ್ನು ನಗರ ಪೊಲೀಸ್ ಕಮಿಷನರ್ ದಯಾನಂದ್ ಅಮಾನತು ಮಾಡಿದ್ದಾರೆ.

ಸಂಚಾರ ವಿಭಾಗದ ಇನ್‌ಸ್ಪೆಕ್ಟರ್ ವೆಂಕಟಾಚಲಪತಿ, ಹೆಡ್ ಕಾನ್‌ಸ್ಟೆಬಲ್‌ಗಳಾದ ಗಿರೀಶ್, ಕಡೇಮನಿ ಹುಚ್ಚು ಸಾಬ್ ಹಾಗೂ ಕಾನ್‌ಸ್ಟೆಬಲ್ ಬಸಪ್ಪ ಅಮಾನತುಗೊಂಡ ಸಿಬ್ಬಂದಿ.

'ಯುವತಿಯಿಂದ ಬೇರೊಬ್ಬರ ಮೊಬೈಲ್ ಸಂಖ್ಯೆಗೆ ಹಣವನ್ನು ಗೂಗಲ್ ಪೇ ಮಾಡಿಸಿಕೊಂಡಿದ್ದು ತನಿಖೆಯಲ್ಲಿ ಮೇಲ್ನೋಟಕ್ಕೆ ಸಾಬೀತಾಗಿದೆ. ಹೀಗಾಗಿ ನಾಲ್ವರನ್ನು ಅಮಾನತು ಮಾಡಲಾಗಿದೆ' ಎಂದು ಪೂರ್ವ ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದ್ದಾರೆ.

'ಯುವತಿಯ ತಂದೆ 'ಎಕ್ಸ್' ಖಾತೆಯಲ್ಲಿ ಘಟನೆ ವಿವರ ಬರೆದು, ಪೊಲೀಸ್ ಅಧಿಕಾರಿಗಳಿಗೆ ಟ್ಯಾಗ್ ಮಾಡಿದ್ದರು. ಈ ದೂರು ಆಧರಿಸಿ, ತನಿಖೆ ನಡೆಸಿ ನಾಲ್ವರನ್ನು ಅಮಾನತು ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಆರಂಭದಲ್ಲಿ ₹ 15 ಸಾವಿರ ಕೇಳಿದ್ದರು. ಅಷ್ಟು ಹಣವಿಲ್ಲವೆಂದು ಮಗಳು ಹೇಳಿದ್ದಳು. ಸುಮ್ಮನಾಗದ ಪೊಲೀಸರು, ಗೂಗಲ್ ಪೇ ಮೂಲಕ ಹಣ ₹5,000 ಪಡೆದಿದ್ದರು. ತಪಾಸಣೆ ವೇಳೆ ಮಹಿಳಾ ಸಿಬ್ಬಂದಿ ಸಹ ಸ್ಥಳದಲ್ಲಿ ಇರಲಿಲ್ಲ' ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದರು.

'ಅಂದು ಪಾನಮತ್ತರಾಗಿ ಚಾಲನೆ ಮಾಡುತ್ತಿದ್ದ ಚಾಲಕರನ್ನು ತಡೆದು ಪ್ರಕರಣ ದಾಖಲಿಸುತ್ತಿದ್ದರು. ಅದೇ ರಸ್ತೆಯಲ್ಲಿ ಯುವತಿ ಕಾರಿನಲ್ಲಿ ಬರುತ್ತಿದ್ದರು. ಕಾರು ತಡೆದು ಆಲ್ಕೋಮೀಟರ್‌ನಿಂದ ಯುವತಿಯನ್ನು ಪರೀಕ್ಷಿಸಿದ್ದ ಕಾನ್‌ಸ್ಟೆಬಲ್‌ಗಳು, ನೀವು ಮದ್ಯ ಕುಡಿದಿದ್ದೀರಾ ಎಂದು ಹೇಳಿ ₹ 15 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು. ಹಣ ಕೊಡದಿದ್ದರೆ ಪ್ರಕರಣ ದಾಖಲಿಸಿ ಕಾರು ಜಪ್ತಿ ಮಾಡುವುದಾಗಿ ಬೆದರಿಕೆ ಹಾಕಿದ್ದರು. ತಮ್ಮ ಬಳಿ ಹಣವಿಲ್ಲವೆಂದು ಯುವತಿ ಹೇಳಿದ್ದರು. ಆಗ ಬೇರೊಬ್ಬರ ಮೊಬೈಲ್‌ನಿಂದ ಗೂಗಲ್ ಪೇ ಮಾಡಿಸಿಕೊಂಡಿದ್ದರು. ಈ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಧಿಕೃತ ಡೀಲರ್ಸ್: ಬೆಂಗಳೂರು: ಶಾಂತಲಕ್ಷ್ಮಿ ಎಲೆಕ್ಟ್ರಿಕಲ್ಸ್ ✆9845505597 | ಶ್ರೀ ಮಾರುತಿ ಎಂಟರ್‌ಪ್ರೈಸಸ್ ✆9731358294 | ಗುರು ಅಸೋಸಿಯೇಟ್ಸ್ 9480826460 | ಜೆ.ವಿ.ಬಿ. ಫ್ಲೋಟೆಕ್ 9845446176 | ಎ.ಎನ್. ಎಂಟರ್‌ಪ್ರೈಸಸ್ ✆9901163007 | ಸಿಂಟ್ರಾನ್‌ಸೇಲ್ಸ್ ಕಾರ್ಪೋರೇಷನ್ ✆9844425588 | ತಿರುಮಲ ಎಂಟರ್‌ಪ್ರೈಸಸ್ ✆9886091121 | ಶ್ರೀ ಮಂಜುನಾಥ ಏಜೆನ್ಸಿಸ್ ✆7892648452 | ಇ.ಎಸ್.ಪಿ.ಆರ್. ಎಲೆಕ್ಟ್ರಿಕಲ್ ಸರ್ವೀಸ್ಸ್ ✆9845469172 | ವಿನಾಯಕ ಮಾರ್ಕೆಟಿಂಗ್ ✆9448379398 | ವಿಎಸ್‌ಪಿ ಪಂಪ್ಸ್ ✆9880165527 | ಎಎಸ್ ಆಗ್ರೋಟೆಕ್ ✆9740166606 | ಮಂಜುನಾಥ್ ಎಂಟರ್ ಪ್ರೈಸಸ್ ✆9880871679 | ರಾಮನಗರ : ಮಂಜುಶ್ರೀ ಎಲೆಕ್ಟ್ರಿಕಲ್ಸ್ ✆9242220554 | ರಾಜಾನಕುಂಟೆ : ಮಂಜುನಾಥ ಟ್ರೇಡರ್ಸ್ ✆9343736456 | ದೇವನಹಳ್ಳಿ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ವಿಜಯಪುರ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ಹೊಸಕೋಟೆ : ಪ್ರಭು ಎಲೆಕ್ಟ್ರಿಕಲ್ಸ್ ✆9448081876 | ಕನಕಪುರ : ಶ್ರೀ ಮಂಜುನಾಥೇಶ್ವರ ಎಂಟರ್‌ಪ್ರೈಸಸ್ ✆9972049822 | ಕೆಂಗೇರಿ: ಎಸ್.ಎಲ್.ವಿ. ಪಂಪ್ಸ್ ✆9448513248 | ಪೀಣ್ಯ: ವಿನಾಯಕ ಎಂಟರ್‌ಪ್ರೈಸಸ್ ✆9741414592 | ನೆಲಮಂಗಲ : ಗುರು ಅಸೋಸಿಯೆಟ್ಸ್ ✆9448373404 | ಕೋಲಾರ : ಉಮಾ ಎಲೆಕ್ಟ್ರಿಕಲ್ಸ್ ✆9902808605 | ಓಂಕಾರ ಏಜೆನ್ಸಿಸ್ ✆9880190749 | ಶ್ರೀನಿವಾಸಪುರ : ವಿಜಯಲಕ್ಷ್ಮಿ ಏಜೆನ್ಸಿಸ್ ✆9845141512 | ಬಂಗಾರಪೇಟೆ : ವರದರಾಜ ಏಜೆನ್ಸಿಸ್ ✆8971981066 | ಬಾಗೇಪಲ್ಲಿ : ಮಾರುತಿ ಎಂಟರ್‌ಪ್ರೈಸಸ್ ✆9844406508 | ಚಿಕ್ಕಬಳ್ಳಾಪುರ : ಮಂಜುನಾಥ ಎಲೆಕ್ಟ್ರಿಕಲ್ಸ್ ✆9448886619 | ಚಿಂತಾಮಣಿ : ರಾಜೇಶ್ವರಿ ಟ್ರೇಡರ್ಸ್ ✆9880156246 | ಶಿಡ್ಲಘಟ್ಟ : ರಾಜೇಶ್ವರಿ ಎಂಟರ್‌ಪ್ರೈಸಸ್ ✆9880856246 | ಗುಡಿಬಂಡೆ : ನಾಗರಾಜ ಎಂಟರ್‌ಪ್ರೈಸಸ್ ✆9880104195 | ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ಸ್ಟೋರ್ಸ್ ✆9448664483 | ಹೆಚ್.ಕ್ರಾಸ್ : ಉಮಾ ಇಂಜಿನಿಯರಿಂಗ್ ವರ್ಕ್ಸ್ ✆9448165195 | ಗೌರಿಬಿದನೂರು : ಶ್ರೀನಿವಾಸ ಎಲೆಕ್ಟ್ರಿಕ್ ಸ್ಟೋರ್ಸ್ ✆9448314982 | ಮಾಲೂರು : ಶ್ರೀದೇವಿ ಎಲೆಕ್ಟ್ರಿಕಲ್ಸ್ ✆9961320501 | ಚೇಳೂರು : ಮಾರುತಿ ಎಲೆಕ್ಟ್ರಿಕಲ್ಸ್ ✆9448950429 | ತುಮಕೂರು : ಗುರು ಏಜೆನ್ಸಿಸ್ ✆8095242587 | ಶಿರಾ : ಗುರು ಎಂಟರ್ ಪ್ರೈಸಸ್ ✆9448093767 | ಮಧುಗಿರಿ : ಪ್ರಸಾದ ಎಂಟರ್‌ಪ್ರೈಸಸ್ ✆9448250601 | ತಿಪಟೂರು : ಶ್ರೀನಿವಾಸ ಎಂಟರ್‌ಪ್ರೈಸಸ್ ✆9448106005 | ಚಿಕ್ಕನಾಯಕನಹಳ್ಳಿ : ಸಿದ್ಧಶ್ರೀ ಟ್ರೇಡರ್ ✆7624844129 | ಪೇರಸಂದ್ರಾ : ಶ್ರೀ ನಂಜುಡೇಶ್ವರ ಎಂಟರ್‌ಪ್ರೈಸಸ್ ✆9886534395 | ದೊಡ್ಡಬಳ್ಳಾಪುರ : ಕಾಪರ್ತಿ ಏಜೆನ್ಸಿಸ್ ✆9880165527 | ವಿ.ಎಸ್.ಪಿ ಪಂಪ್ಸ್ ✆9448379398 | ಮುಳಬಾಗಿಲು : ರೆಡ್ಡಿ ಎಲೆಕ್ಟ್ರಿಕಲ್ಸ್ ✆9986995862 |

ಜಾಹೀರಾತು

ಜಾಗತಿಕ ಅಪರೂಪದ ಕಾಯಿಲೆ ದಿನಾಚರಣೆ 2024 ರಂದು ಭರವಸೆ ಮತ್ತು ಸುಧಾರಣೆಯ ಅಭಯ

ಜಾಗತಿಕ ಅಪರೂಪದ ಕಾಯಿಲೆಗಳ ದಿನ 2024 ದಿನಾಚರಣೆಯು ಭರವಸೆ ಮತ್ತು ಪ್ರತಿಫಲನದ ದಾರಿದೀಪವಾಗಿ ಎದುರಾಗುತ್ತಲಿದೆ ಮತ್ತು ಅಪರೂಪದ ಕಾಯಿಲೆಗಳ ಕ್ಷೇತ್ರದಲ್ಲಿನ ಸವಾಲುಗಳ ಮೇಲೆ ಬೆಳಕು ಬೀರುತ್ತದೆ ಹಾಗೂ ಸವಾಲುಗಳನ್ನು ಎದುರಿಸಿ ಜಯಶಾಲಿಯಾಗುತ್ತದೆ. ಫೆಬ್ರವರಿ 29 ಜಾಗತಿಕ ಜಾಗೃತಿ ದಿನವೆಂದೇ ಪರಿಗಣಿಸಲಾಗುತ್ತದೆ, ಅಸಾಮಾನ್ಯ ಕಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳು ಅನುಭವಿಸುತ್ತಿರುವ ಸಮಸ್ಯೆಗಳನ್ನು ಅನಾವರಣಗೊಳಿಸುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ (ಐಜಿಐಸಿಎಚ್) ಉಪನ್ಯಾಸಕರು ಮತ್ತು ವಿಭಾಗದ ಮುಖ್ಯಸ್ಥರೂ ಆಗಿರುವ ಡಾ. ವೈಕುಂಠರಾಜು ಕೆ. ಎನ್. ರವರ ಕಥೆಯು, ವಿಶೇಷವಾಗಿ ಅಪರೂಪದ ಕಾಯಿಲೆಗಳ ಮತ್ತು ನ್ಯೂರಾಲಾಜಿಕಲ್ ಅಸ್ವಸ್ಥತೆಗಳ ಕ್ಷೇತ್ರದಲ್ಲಿ ನೀಡಿರುವ ಪರಿಶ್ರಮ ಮತ್ತು ಸಾಧಿಸಲಾಗಿರುವ ಸಾಧನೆಗಳಿಗೆ ನಿದರ್ಶನವಾಗಿದೆ.

ಡಾ. ವೈಕುಂಠರಾಜು ರವರು ಪಿಡಿಯಾಟ್ರಿಕ್ ನ್ಯೂರಾಲಜಿಯಲ್ಲಿ ವಿಶಿಷ್ಟ ವ್ಯಕ್ತಿಯಾಗಿದ್ದು, ಅಪರೂಪದ ನ್ಯೂರಾಲಾಜಿಕಲ್ ಅಸ್ವಸ್ಥತೆಗಳ ರಹಸ್ಯವನ್ನು ಬಹಿರಂಗಪಡಿಸುವಲ್ಲಿ ಇವರು ತಮ್ಮ 15 ವರ್ಷಗಳನ್ನೇ ಸಮರ್ಪಿಸಿದ್ದಾರೆ. ಇವರ ಜೀವನಯಾನವು ರೋಗಿಗಳಿಗೆ ಮತ್ತು ಅವರ ಕುಟುಂಬಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಅವಿಶ್ರಾಂತವಾಗಿ ದುಡಿದ ಹಿರಿಮೆ ಪಾತ್ರವಾಗುತ್ತದೆ. ಇತ್ತೀಚೆಗಷ್ಟೆ, ಅಸೋಸಿಯೇಷನ್ ಆಫ್ ಚೈಲ್ಡ್ ನ್ಯೂರಾಲಜಿ, ಇಂಡಿಯಾ (ಎಒಸಿಎನ್) ರವರಿಂದ, ಚೈಲ್ಡ್ ನ್ಯೂರಾಲಜಿ ಕ್ಷೇತ್ರಕ್ಕೆ ನೀಡಲಾಗಿರುವ ಅತ್ಯುನ್ನತ ಕೊಡುಗೆಯ ಆಧಾರದಲ್ಲಿ ನೀಡಲಾಗುವ ಪ್ರಶಸ್ತಿಗೆ ಡಾ. ರಾಜು ಭಾಜನರಾಗಿದ್ದು, ಸ್ಪೈನಲ್ ಮಸ್ಕ್ಯುಲಾರ್ ಅಟ್ರೋಫಿ (ಎಸ್‌ಎಂಎ) ಮತ್ತು ಇನ್ನಿತರ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವವರ ಪಾಲಿಗೆ ಭರವಸೆಯ ಬೆಳಕಾಗಿ ಪರಿಣಮಿಸಿದ್ದಾರೆ.

ಎಸ್‌ಎಂಎ, ಇದೊಂದು ವಿನಾಶಕಾರಿ ಆನುವಂಶಿಕ ಅಸ್ವಸ್ಥತೆಯಾಗಿದ್ದು, ಬೆನ್ನುಹುರಿಯಲ್ಲಿನ ಮೋಟಾರ್ ನ್ಯೂರಾನ್‌ಗಳ ಮೇಲೆ ಪರಿಣಾಮ ಬೀರುವ ಮೂಲಕ ಸ್ನಾಯುಗಳ ದೌರ್ಬಲ್ಯತೆ ಮತ್ತು ಅಟ್ರೋಫಿಗೆ ಕಾರಣವಾಗುತ್ತದೆ. ಹಿಂದಿನ ದಿನಗಳಲ್ಲಿ, ಎಸ್‌ಎಂಎ ಎಂಬುದನ್ನು ತಪ್ಪಾಗಿ ತಿಳಿದುಕೊಳ್ಳಲಾಗುತ್ತಿತ್ತು ಅಥವಾ ಅದನ್ನು ಇನ್ನಿತರೆ ಅಸ್ವಸ್ಥತೆಗಳ ಜೊತೆಗೆ ಸಮೀಕರಿಸಲಾಗುತ್ತಿದ್ದು, ಹೀಗಾಗಿಯೇ ಇದರ ಚಿಕಿತ್ಸೆಯಲ್ಲಿ ವಿಳಂಬ ಉಂಟಾಗಿ ಅಸಮರ್ಪಕ ಚಿಕಿತ್ಸೆ ಲಭ್ಯವಾಗುತ್ತಿತ್ತು. ಆದರೆ, ಡಾ. ರಾಜು ರವರ ಅಸಾಧಾರಣ ಕಾರ್ಯಸಾಧನೆಯಿಂದಾಗಿ, ಭಾರತದಲ್ಲಿ ಎಸ್‌ಎಂಇ ತಪಾಸಣೆ ಮತ್ತು ಚಿಕಿತ್ಸೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು.

ಸಮರ್ಪಿತ ಸಂಶೋಧಕರ ಮತ್ತು ವೈದ್ಯಕೀಯ ವೃತ್ತಿಪರರ ತಂಡದ ಸಹಭಾಗಿತ್ವದಲ್ಲಿ, ಡಾ. ರಾಜು ರವರು ತ್ವರಿತ ಎಸ್‌ಎಂಎ ಪತ್ತೆ ಮಾಡುವ ಮತ್ತು ಚಿಕಿತ್ಸಾ ಮಧ್ಯಸ್ಥಿಕೆ ಕಾರ್ಯತಂತ್ರಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಸಾಕಷ್ಟು ಶ್ರಮಪಡುತ್ತಿದ್ದಾರೆ. ಇವರು ತಮ್ಮ ಅವಿಶ್ರಾಂತ ಪರಿಶೋಧನೆ ಮತ್ತು ಅಪೂರ್ವ ಸಂಶೋಧನೆಗಳ ಮುಖಾಂತರ, ಜೆನೆಟಿಕ್ ಟೆಸ್ಟಿಂಗ್ ಪ್ರೊಟೊಕಾಲ್‌ಗಳನ್ನು ಅಳವಡಿಸಿಕೊಂಡು, ಬಾಧಿತ ವ್ಯಕ್ತಿಗಳಲ್ಲಿನ ಎಸ್‌ಎಂಎ ಸಮಸ್ಯೆಯನ್ನು ತ್ವರಿತವಾಗಿ ಮತ್ತು ನಿಖರವಾಗಿ ಪತ್ತೆ ಮಾಡಲು ಸಮರ್ಥರಾಗಿದ್ದಾರೆ.

ಎಒಸಿಎನ್@ಚೈಲ್ಡ್‌ನ್ಯೂರಾಕಾನ್ 2024ರಲ್ಲಿ "ಚೈಲ್ಡ್ ನ್ಯೂರಾಲಜಿ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ನೀಡಲಾಗುವ ಪ್ರಶಸ್ತಿ" ಸ್ವೀಕರಿಸುತ್ತಿರುವ **ಡಾ. ವೈಕುಂಠರಾಜು**

ಅಲ್ಲದೆ, ಡಾ. ರಾಜು ರವರ ಸಾಧನೆಗಳು ತಪಾಸಣೆಗಳನ್ನು ಮೀರಿ, ಎಸ್‌ಎಂಎ ಸಂಬಂಧಿತ ವಿನೂತನ ಚಿಕಿತ್ಸಾ ವಿಧಾನಗಳ ಅಭಿವೃದ್ಧಿ ಮತ್ತು ಅಳವಡಿಕೆ ನಿಟ್ಟಿನಲ್ಲಿ ಕೂಡ ಸಾಕಷ್ಟು ಕೊಡುಗೆಗಳು ಸಂದಾಯವಾಗಿವೆ. ಸಾಂಪ್ರದಾಯಿಕ ಚಿಕಿತ್ಸೆಗಳು ಸೀಮಿತ ಉಪಶಮನ ನೀಡುತ್ತವೆ, ಆದರೆ ಅತ್ಯಾಧುನಿಕ ಜೀನ್ ಥೆರಪಿ ಮತ್ತು ಆವಿಷ್ಕಾರಿ ಫಾರ್ಮಾಕೊಲಾಜಿಕಲ್ ಚಿಕಿತ್ಸೆಗಳು, ಎಸ್‌ಎಂಎ ನಿರ್ವಹಣೆಗೆ ಹೊಸ ಮಾರ್ಗಗಳನ್ನು ಹಾಕಿ ಕೊಟ್ಟಿವೆ. ಎಸ್‌ಎಂಎ ಸುಳಿಗೆ ಸಿಲುಕಿ ಆರ್ಥಿಕವಾಗಿ ಮತ್ತು ಭಾವನಾತ್ಮಕವಾಗಿ ಬಳಲುತ್ತಿರುವ ಅಸಂಖ್ಯಾತ ಕುಟುಂಬಗಳಿಗೆ, ಡಾ. ರಾಜು ರವರು ಪಟ್ಟು ಬಿಡದೆ ನೀಡುವ ಪರಿಣಾಮಕಾರಿ ಚಿಕಿತ್ಸೆಗಳು ಹೊಸ ಭರವಸೆ ನೀಡಿವೆ.

ಎಸ್‌ಎಂಎ ಚಿಕಿತ್ಸೆಗೆ ಸಂಬಂಧಿಸಿದಂತೆ ಎಂಆರ್‌ಎನ್‌ಎ ಸ್ಪ್ಲೈಸಿಂಗ್ ಔಷಧಿಗಳ ಕ್ಷೇತ್ರದಲ್ಲಿ ಒಂದು ಮಹತ್ತರ ಬೆಳವಣಿಗೆ ಉಂಟಾಗಿದೆ. ಈ ಔಷಧಿಗಳು, ಎಸ್‌ಎಂಎ ಸಂಬಂಧಿತ ಜೆನೆಟಿಕ್ ಕಾರ್ಯತಂತ್ರವನ್ನು ಗುರಿಯಾಗಿಸಿಕೊಳ್ಳುತ್ತವೆ, ಮೋಟಾರ್ ನ್ಯೂರಾನ್‌ಗಳ ಉಳಿವಿಗೆ ಮುಖ್ಯವಾಗಿರುವ ಕ್ರಿಯಾತ್ಮಕ ಎಸ್‌ಎಂಎನ್ ಪ್ರೋಟಿನ್ ಉತ್ಪಾದನೆಯನ್ನು ಮರುಸ್ಥಾಪಿಸುತ್ತವೆ. ಡಾ. ರಾಜು ರವರ ಸಂಶೋಧನೆಯು ಎಸ್‌ಎಂಎ ಸಂಬಂಧಿಸಿದಂತೆ ಎಂಆರ್‌ಎನ್‌ಎ ಸ್ಪೈಸಿಂಗ್ ಔಷಧಿಗಳ ಪರಿಣಾಮಕತ್ವ ಮತ್ತು ಸುರಕ್ಷತೆಯನ್ನು ಖಚಿತಪಡಿಸುವ ಮೂಲಕ, ಅವುಗಳನ್ನು ವೈದ್ಯಕೀಯ ಬಳಕೆಯಲ್ಲಿ ಉಪಯೋಗಿಸಿಕೊಳ್ಳಲು ದಾರಿ ಮಾಡಿ ಕೊಟ್ಟಿವೆ.

ಅಷ್ಟೆ ಅಲ್ಲದೆ, ಡಾ. ರಾಜು ರವರ 200ಕ್ಕೂ ಹೆಚ್ಚು ಪ್ರಕಟಣೆಗಳನ್ನು ಹೊಂದಿರುವ ಕಾರ್ಯಚೌಕಟ್ಟು, ಪಿಡಿಯಾಟ್ರಿಕ್ ನ್ಯೂರಾಲಜಿ ಮತ್ತು ಅಪರೂಪದ ಕಾಯಲೆಗಳ ಕ್ಷೇತ್ರದಾದ್ಯಂತ ಜ್ಞಾನದ ಮೈಲುಗಲ್ಲಿನ ಮಾದರಿಯಲ್ಲಿ ಸೇವೆ ಸಲ್ಲಿಸುತ್ತಲಿದೆ. ಅಪರೂಪದ ಕಾಯಿಲೆಗಳು ಕುರಿತಾದ ಇವರ ಮೂಲ ಪರಾಮರ್ಶೆಗಳು ಮತ್ತು ಪ್ರಕರಣಗಳ ವರದಿಗಳು ಭಾರತೀಯರಲ್ಲಿ ಜಾಗೃತಿ ಮತ್ತು ಅರಿವು ಹಾಗೂ ಎಪಿಡೆಮಿಯಾಲಜಿಕಲ್ ಅಂಶಗಳನ್ನು ಹೆಚ್ಚಿಸಿವೆ. ಈ ಸಂಶೋಧನಾ ಸಂಪತ್ತು ಕೇವಲ ವೈದ್ಯಕೀಯ ವಿಧಾನಗಳನ್ನು ಮಾತ್ರ ತಿಳಿಸುವುದಿಲ್ಲ, ಅಪರೂಪದ ಕಾಯಿಲೆಗಳ ಚಿಕಿತ್ಸೆ ಮತ್ತು ಚಿಕಿತ್ಸಾ ಸಂಪರ್ಕಗಳನ್ನು ಸುಧಾರಿಸುವ ನೀತಿ ಚಾಲನೆಗೊಳಿಸುವುದನ್ನು ಕೂಡ ಉತ್ತೇಜಿಸುತ್ತವೆ.

ಅದಾಗ್ಯೂ, ಸಮಗ್ರ ಎಸ್‌ಎಂಎ ಚಿಕಿತ್ಸೆಯ ಮಾರ್ಗದಲ್ಲಿ ಸಾಕಷ್ಟು ಅಡೆತಡೆಗಳು ಇದ್ದೇ ಇವೆ. ವಿಶೇಷವಾಗಿ ಸಂಪನ್ಮೂಲ ನಿರ್ಬಂಧಿತ ಭಾರತದಂತಹ ಪ್ರದೇಶಗಳಲ್ಲಿ ಎಫ್‌ಡಿಎ ಅನುಮೋದಿತ ಔಷಧಿಗಳ ಲಭ್ಯತೆಯೆ ಒಂದು ಪ್ರಮುಖ ತೊಂದರೆಯಾಗಿ ಪರಿಣಮಿಸಿದೆ. ಈಗಾಗಲೇ ಅಪರೂಪದ ಕಾಯಿಲೆಗಳ ಸಂಕೀರ್ಣತೆಗಳಿಂದ ಬಳಲುತ್ತಿರುವ ಕುಟುಂಬಗಳ ಮೇಲೆ ಎಸ್‌ಎಂಎ ಚಿಕಿತ್ಸೆಯ ಭಾರಿ ವೆಚ್ಚವು ಇನ್ನಿಲ್ಲದಂತಹ ಒತ್ತಡ ಬೀಳುತ್ತದೆ. ಈ ಸಂದರ್ಭದಲ್ಲಿ ಡಾ. ರಾಜು ರವರು, ಎಸ್‌ಎಂಎ ದಿಂದ ಬಳಲುತ್ತಿರುವ ಎಲ್ಲಾ ರೋಗಿಗಳಿಗೂ ಜೀವದಾಯಕ ಔಷಧಿಗಳು ಲಭ್ಯವಾಗುವಂತೆ ಮಾಡಲು ಸರ್ಕಾರದ ಮಧ್ಯಸ್ಥಿಕೆ ಮತ್ತು ಆರ್ಥಿಕ ನೆರವು ಅತ್ಯಗತ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಜಾಗತಿಕ ಅಪರೂಪದ ಕಾಯಿಲೆಗಳ ದಿನದಂದು, ಡಾ. ರಾಜು ರವರ ಸಂದೇಶವು ಸಾಕಷ್ಟು ಸ್ಪಷ್ಟವಾಗಿದೆ ಮತ್ತು ತುರ್ತು ಉಪಕ್ರಮಗಳ ಅಗತ್ಯತೆಯನ್ನು ಸಾರಿ ಹೇಳುತ್ತಿದೆ. ಎಸ್‌ಎಂಎ ಮಾದರಿಯ ಅಪರೂಪದ ಕಾಯಿಲೆಗಳ ಹತೋಟಿಗೆ ಹೆಚ್ಚುವರಿ ಸಂಶೋಧನಾ ಧನಸಹಾಯ, ವ್ಯವಸ್ಥಿತ ನಿಯಂತ್ರಣ ನೀತಿಗಳು ಮತ್ತು ಅವಶ್ಯಕ ಚಿಕಿತ್ಸೆಗಳ ಲಭ್ಯತೆಗೆ ಸುಧಾರಿತ ಮಾರ್ಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಆದ್ಯತೆ ನೀಡಬೇಕೆಂದು ಇವರು, ನೀತಿ ನಿಯಮಗಳನ್ನು ರೂಪಿಸುವವರಿಗೆ, ವೈದ್ಯಕೀಯ ವೃತ್ತಿಪರರಿಗೆ ಮತ್ತು ಜಾಗತಿಕ ಸಮುದಾಯಕ್ಕೆ ಕರೆ ನೀಡಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುವ ಮೂಲಕ ಮತ್ತು ಪರಸ್ಪರ ಸಹಭಾಗಿತ್ವವನ್ನು ಹೆಚ್ಚಿಸಿಕೊಳ್ಳುವ ಮೂಲಕ, ಅಪರೂಪದ ಕಾಯಿಲೆಗಳಿಂದ ಎದುರಾಗುವ ಸವಾಲುಗಳನ್ನು ನಾವು ಸಮರ್ಥವಾಗಿ ಎದುರಿಸಬಹುದು ಮತ್ತು ಎಲ್ಲರನ್ನೂ ಒಳಗೊಳ್ಳುವ ಒಂದು ಉಜ್ವಲ ಭವಿಷ್ಯಕ್ಕೆ ದಾರಿ ಕಂಡುಕೊಳ್ಳಬಹುದು ಎಂಬುದು ಡಾ. ರಾಜು ರವರ ನಂಬಿಕೆಯಾಗಿದೆ.

ಜಾಗತಿಕ ಅಪರೂಪದ ಕಾಯಿಲೆಗಳ ದಿನದ ಈ ಮಹತ್ವದ ದಿನದಮದು ನಾವು, ಡಾ. ರಾಜು ರವರ ಅದ್ಭುತ ಸಾಧನೆಗಳಿಂದ ಪ್ರೇರಿತರಾಗೋಣ. ಇವರ ಸಮರ್ಪಣಾ ಮನೋಭಾವ, ಅಪೂರ್ವ ಸಂಶೋಧನೆ ಮತ್ತು ಸಹಾನುಭೂತಿ ತುಂಬಿದ ಆರೈಕೆಗಳು, ಎಸ್‌ಎಂಎ ಮತ್ತು ಇನ್ನಿತರ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ದಾರಿದೀಪವಾಗಲಿ, ನಾವೆಲ್ಲಾ ಒಂದಾಗಿ ಭರವಸೆಯನ್ನು ಆಲಂಗಿಸಿಕೊಳ್ಳೋಣ, ಸುಧಾರಣೆಯನ್ನು ಹೆಚ್ಚಿಸೋಣ ಮತ್ತು ವಿಶ್ವದಾದ್ಯಂತ ದಿನನಿತ್ಯ ಅಪರೂಪದ ಕಾಯಿಲೆಗಳ ಸಂಕೀರ್ಣತೆಗಳನ್ನು ಧೈರ್ಯವಾಗಿ ಎದುರಿಸುತ್ತಿರುವವರಿಗೆ ಉತ್ತೇಜನ ನೀಡಲು ಒಗ್ಗಟ್ಟಿನಿಂದ ಮುನ್ನಡೆಯೋಣ. ●

ಇಂದಿನಿಂದಲೇ ಕಾರ್ಯಾಚರಣೆ, ಪರವಾನಗಿ ಅಮಾನತಿಗೆ ಬಿಬಿಎಂಪಿ ಕ್ರಮ

ಶೇ 60 ಕನ್ನಡ ಬಳಸದ ಮಳಿಗೆಗಳಿಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸದ ವಾಣಿಜ್ಯ ಮಳಿಗೆಗಳ 'ವ್ಯಾಪಾರ ಪರವಾನಗಿ' ಅಮಾನತು ಮಾಡಿ, ಫೆ.29ರಿಂದ ಬೀಗ ಹಾಕಲು ಬಿಬಿಎಂಪಿ ನಿರ್ಧರಿಸಿದೆ.

ಸರ್ಕಾರ, ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಮತ್ತು ಮಂಜೂರಾತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ಕೈಗಾರಿಕೆ ಮತ್ತು ವ್ಯವಹಾರ ಉದ್ಯಮಗಳು, ಟ್ರಸ್ಟ್‌ಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೋಟೆಲ್‌ಗಳ ನಾಮಫಲಕಗಳಲ್ಲಿ ಕನ್ನಡವನ್ನು ಶೇ 60ರಷ್ಟು ಪ್ರದರ್ಶಿಸಬೇಕು. ಮೇಲ್ಭಾಗದಲ್ಲಿ ಕನ್ನಡ ಪ್ರದರ್ಶಿತವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ವಿಶೇಷ ರಾಜ್ಯ ಪತ್ರಿಕೆ ಅಧಿಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು.

ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಅಧಿಸೂಚನೆಯಂತೆ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲ ವಾಣಿಜ್ಯ ಮಳಿಗೆಗಳು ಫೆ.28ರೊಳಗೆ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಅಳವಡಿಸಿಕೊಳ್ಳಲು ಸೂಚಿಸಿ, 55,187 ಮಳಿಗೆಗಳಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಫೆ.28ರ ವೇಳೆಗೆ 52,134 ವಾಣಿಜ್ಯ ಉದ್ದಿಮೆಗಳು ಸೂಚನೆಯನ್ನು ಪಾಲಿಸಿವೆ. ಉಳಿದ 3,044 ವಾಣಿಜ್ಯ ಉದ್ದಿಮೆಗಳು ಯಾವುದೇ ಬದಲಾವಣೆ ಮಾಡಿಕೊಂಡಿಲ್ಲ. ರಾಜರಾಜೇಶ್ವರಿ ನಗರ ವಲಯದಲ್ಲಿ ಅತಿ ಹೆಚ್ಚು ಬಾಕಿ ಉಳಿದಿದ್ದು, ಯಲಹಂಕ, ಬೊಮ್ಮನಹಳ್ಳಿ ವಲಯ ನಂತರದ ಸ್ಥಾನದಲ್ಲಿವೆ.

ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಪ್ರದರ್ಶಿಸದಿರುವ ವಾಣಿಜ್ಯ ಉದ್ದಿಮೆಗಳ ಉದ್ದಿಮೆ ಪರವಾನಗಿಗಳನ್ನು ಅಮಾನತುಗೊಳಿಸಬೇಕು. ಮಳಿಗೆಗಳಿಗೆ ಬೀಗಮುದ್ರೆ ಹಾಕಬೇಕು ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ಅವರು ಫೆ.28ರಂದು ಸುತ್ತೋಲೆ ಹೊರಡಿಸಿದ್ದಾರೆ.

ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಅನುಷ್ಠಾನದ ವಿವರ

ವಲಯ	ಮಳಿಗೆಗಳಿಗೆ ನೋಟಿಸ್	ಅನುಷ್ಠಾನಗೊಳಿಸಿರುವ ಮಳಿಗೆಗಳು	ಬಾಕಿ
ಆರ್.ಆರ್. ನಗರ	6,253	5,593	660
ಯಲಹಂಕ	6,165	5,541	624
ಬೊಮ್ಮನಹಳ್ಳಿ	13,516	13,014	502
ಪಶ್ಚಿಮ	7,113	6,772	341
ಪೂರ್ವ	8,634	8,258	376
ಮಹದೇವಪುರ	5,967	5,730	237
ದಕ್ಷಿಣ	5,982	5,748	234
ದಾಸರಹಳ್ಳಿ	1,548	1,478	70
ಒಟ್ಟು	55,178	52,134	3,044

ಸೂಚನಾ ಫಲಕಗಳಲ್ಲಿ ಇಂಗ್ಲಿಷ್: ಆಕ್ಷೇಪ

ಬೆಂಗಳೂರು: ನಗರದ ವಿವಿಧ ರಸ್ತೆಗಳಲ್ಲಿ ಅಳವಡಿಸಲಾಗಿರುವ ಸೂಚನಾ ಫಲಕಗಳಲ್ಲಿ ಕನ್ನಡವನ್ನು ಸಮರ್ಪಕವಾಗಿ ಬಳಸದ ಬಿಬಿಎಂಪಿ, ಆಂಗ್ಲ ಪದಗಳಿಗೆ ಆದ್ಯತೆ ನೀಡಿದೆ ಎಂದು ಕನ್ನಡ ಗೆಳೆಯರ ಬಳಗ ಆಕ್ಷೇಪ ವ್ಯಕ್ತಪಡಿಸಿದೆ.

ಈ ಬಗ್ಗೆ ನಗರದ ವಿವಿಧೆಡೆ ಬಳಗದ ಸದಸ್ಯರು ಪರಿಶೀಲನೆ ನಡೆಸಿದ್ದಾರೆ. ಬಸವನಗುಡಿಯಲ್ಲಿ 'ಬುಲ್ ಟೆಂಪಲ್ ಪಾರ್ಕ್ ರಸ್ತೆ' ಎಂದು ಇಂಗ್ಲಿಷ್ ಪದಗಳನ್ನು ಕನ್ನಡದಲ್ಲಿ ಬರೆಯಲಾಗಿದೆ. ಇದೇ ರೀತಿ ವಿಶ್ವೇಶ್ವರಪುರದಲ್ಲಿ 'ಕನ್ನಿಕಾ ಪರಮೇಶ್ವರಿ ಟೆಂಪಲ್ ರಸ್ತೆ' ಎಂದು, ಬನಶಂಕರಿ ಮೊದಲ ಹಂತವನ್ನು 'ಬಿಎಸ್‌ಕೆ 1ನೇ ಹಂತ' ಎಂದು, ಜಯನಗರದ 9ನೇ ಮುಖ್ಯರಸ್ತೆಯನ್ನು '9ನೇ ಮೈನ್ ರಸ್ತೆ' ಎಂದು ಸೂಚನಾ ಫಲಕ ಹಾಕಲಾಗಿದೆ. ಇದೇ ರೀತಿ ನಗರದ ವಿವಿಧೆಡೆಯ ಸೂಚನಾ ಫಲಕಗಳಲ್ಲಿ ಕನ್ನಡ, ಇಂಗ್ಲಿಷ್ ಪದಗಳನ್ನು ಬಳಸಲಾಗಿದೆ. ತಿಲಕನಗರದಲ್ಲಿನ ಸೂಚನಾ ಫಲಕಗಳಲ್ಲಿ ಮೊದಲ ಸಾಲಿನಲ್ಲಿ ಮಾತ್ರ ಕನ್ನಡ ಇದ್ದು, ಉಳಿದ ಎಲ್ಲ ಮಾಹಿತಿ ಇಂಗ್ಲಿಷ್‌ನಲ್ಲಿದೆ. ದಂಡು ಪ್ರದೇಶದ ಕೆಲವು ರಸ್ತೆ, ವೃತ್ತದ ಫಲಕಗಳು ಇಂಗ್ಲಿಷ್‌ನಲ್ಲಿ ಮಾತ್ರ ಇವೆ ಎಂದು ಬಳಗ ತಿಳಿಸಿದೆ.

'ಕೇಂದ್ರ ಸರ್ಕಾರದ ಕಚೇರಿಗಳು, ರಕ್ಷಣಾ ಇಲಾಖೆಗಳ ನಾಮಫಲಕಗಳಲ್ಲಿಯೂ ಇಂಗ್ಲಿಷ್ ಪ್ರಧಾನವಾಗಿದೆ. ನಂತರ ಹಿಂದಿಗೆ ಸ್ಥಾನ ಒದಗಿಸಲಾಗಿದ್ದು, ನೆಪಮಾತ್ರಕ್ಕೆ ಸಣ್ಣದಾಗಿ ಕನ್ನಡವನ್ನು ಮೊದಲ ಸಾಲಿನಲ್ಲಿ ಬರೆಯಲಾಗಿದೆ. ಮಿಲ್ಲರ್ ರಸ್ತೆಯಲ್ಲಿರುವ ರಾಜ್ಯ ಸರ್ಕಾರದ ಸಂಸ್ಥೆಗೆ 'ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್' ಎಂದು ಇಂಗ್ಲಿಷ್ ಹೆಸರನ್ನು ಕನ್ನಡದಲ್ಲೇ ಬರೆಯಲಾಗಿದೆ. ಅದು ಕನ್ನಡದಲ್ಲಿ 'ಕರ್ನಾಟಕ ರಾಜ್ಯ ಮಾರುಕಟ್ಟೆ ಚಟುವಟಿಕೆ ಸಂವಹನ ಮತ್ತು ಜಾಹೀರಾತು ನಿಯಮಿತ' ಎಂದಾಗಬೇಕಿತ್ತು. ರಾಜ್ಯ ಸರ್ಕಾರದ ಹಲವು ಸಂಸ್ಥೆಗಳ ನಾಮಫಲಕಗಳಲ್ಲೂ ಕನ್ನಡ ಸರಿಯಾಗಿ ಬಳಕೆಯಾಗಿಲ್ಲ' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

'ಬೆಂಗಳೂರಿನ ಸೂಚನಾ ಫಲಕಗಳಲ್ಲಿ ಬಹಳಷ್ಟು ವ್ಯಾಕರಣ ದೋಷಗಳಿವೆ. ಈ ದೋಷವನ್ನು ತಪ್ಪಿಸಲು ಕನ್ನಡ ಬಲ್ಲ ಅಧಿಕಾರಿ ಮತ್ತು ಬರೆಯುವವರನ್ನು ನೇಮಕ ಮಾಡಬೇಕು. ರಸ್ತೆ, ಬಡಾವಣೆಗಳ ಹೆಸರನ್ನು ಕನ್ನಡ ಬಾರದವರ ಅನುಕೂಲಕ್ಕೆ ಇಂಗ್ಲಿಷ್‌ನಲ್ಲಿ ಬರೆಯಲಿ. ಆದರೆ, ಮೂಲ ಸ್ವರೂಪವನ್ನು ಇಂಗ್ಲಿಷ್‌ಗೆ ಅನುವಾದ ಮಾಡಬಾರದು. ಅಂದರೆ, 'ದೊಡ್ಡ ಬಸವಣ್ಣ ರಸ್ತೆ'ಯು ಇಂಗ್ಲಿಷ್‌ನಲ್ಲಿ 'ಬುಲ್ ಟೆಂಪಲ್ ರಸ್ತೆ' ಆಗಬಾರದು. ಹೆಸರುಗಳನ್ನು ಯಾವ ಭಾಷೆಯಲ್ಲೇ ಬರೆದರೂ ಮೂಲ ಹೆಸರನ್ನೇ ಉಳಿಸಿಕೊಳ್ಳಬೇಕು. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದೆ.

ಕನ್ನಡ ನಾಮಫಲಕ ಕಡ್ಡಾಯ: ಅಭಿಯಾನ

ಕನ್ನಡ ನಾಮಫಲಕ ಕಡ್ಡಾಯಗೊಳಿಸುವ 'ಜಾಗೃತಿ ಅಭಿಯಾನ'ಕ್ಕೆ ನಗರದಲ್ಲಿ ಬುಧವಾರ ಚಾಲನೆ ನೀಡಲಾಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಂಘಟನೆಗಳ ಕನ್ನಡ ಒಕ್ಕೂಟ, ಕರ್ನಾಟಕ ಸಂಘಟನೆಗಳ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಕನ್ನಡ ನಾಮಫಲಕ ಕಡ್ಡಾಯಗೊಳಿಸುವ 'ಜಾಗೃತಿ ಅಭಿಯಾನ'ಕ್ಕೆ ನಗರ ದೇವತೆ ಅಣ್ಣಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಬುಧವಾರ ಚಾಲನೆ ನೀಡಲಾಯಿತು.

ಎಲ್ಲ ಮಳಿಗೆ, ಅಂಗಡಿ ಮತ್ತು ಮಾಲ್‌ಗಳ ನಾಮಫಲಕ ಕಡ್ಡಾಯವಾಗಿ ಶೇ 60ರಷ್ಟು ಕನ್ನಡ ಬಳಸಬೇಕು. ನಂತರ ಅನ್ಯ ಭಾಷೆ ಅವಕಾಶ ಎಂಬ ಕಾಯ್ದೆ ಜಾರಿಗೆ ತರಲಾಗಿದೆ. ಆದರೂ ಕನ್ನಡ ಅನುಷ್ಠಾನ ಆಗುತ್ತಿಲ್ಲ ಎಂದು ಆಪಾದಿಸಿದರು.

ಕನ್ನಡ ನಾಮಫಲಕ ಹಾಕದಿರುವ ಅಂಗಡಿಗಳಿಗೆ ಬಿಬಿಎಂಪಿ ಅಧಿಕಾರಿಗಳು ಬೀಗ ಹಾಕಬೇಕು. ಅಂತಹ ಮಳಿಗೆಗಳ ಪರವಾನಗಿ ರದ್ದು ಪಡಿಸಬೇಕು. ನಾಮಫಲಕ ಅಳವಡಿಸಿದ ಮೇಲೆ ವ್ಯಾಪಾರ ವಹಿವಾಟು ಮಾಡಲು ಅವಕಾಶ ನೀಡಬೇಕು ಎಂದು ಸಮಿತಿ ಪದಾಧಿಕಾರಿಗಳು ಆಗ್ರಹಿಸಿದರು.

ಕನ್ನಡ ನಾಮಫಲಕ ಕಡ್ಡಾಯ ಜಾರಿಗೊಳಿಸಲು ವಾಣಿಜ್ಯ ಮಳಿಗೆಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಕನ್ನಡ ಸಂಘಟನೆಗಳ ಒಕ್ಕೂಟದ ರಾಜ್ಯ ಅಧ್ಯಕ್ಷರಾದ ನಟರಾಜ್ ಬೊಮ್ಮಸಂದ್ರ, ಕನ್ನಡಪರ ಹೋರಾಟಗಾರರಾದ ಫಾಲನೇತ್ರ, ವೈಭವ ಕರ್ನಾಟಕ ಸಂಘಟನೆ ಅಧ್ಯಕ್ಷ ಟಿ.ವೆಂಕಟೇಶ್‌ಗೌಡ, ಅಂಬೇಡ್ಕರ್ ಮಾನವ ಹಕ್ಕುಗಳ ವೇದಿಕೆ ರಾಜ್ಯ ಅಧ್ಯಕ್ಷ ಕ್ರಾಂತಿ ರಾಜು, ಸಮಿತಿ ಅಧ್ಯಕ್ಷ ಮೇಲುಕೋಟೆ ಬೆಟ್ಟಸ್ವಾಮಿಗೌಡ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ರೈತನಿಗೆ ಮೆಟ್ರೊ ಪ್ರವೇಶ ನಿರ್ಬಂಧ: ರಾಜ್ಯಕ್ಕೆ ನೋಟಿಸ್

ನವದೆಹಲಿ: 'ಬಟ್ಟೆ ಗಲೀಜಾಗಿವೆ' ಎಂಬ ಕಾರಣಕ್ಕೆ ರೈತರೊಬ್ಬರನ್ನು ಬೆಂಗಳೂರಿನ ಮೆಟ್ರೊ ನಿಲ್ದಾಣದೊಳಗೆ ಬಿಡದೇ ಭದ್ರತಾ ಸಿಬ್ಬಂದಿ ಅಮಾನವೀಯವಾಗಿ ವರ್ತಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ಬುಧವಾರ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್ ಜಾರಿ ಮಾಡಿರುವ ಆಯೋಗವು ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿದೆ. ಈ ಘಟನೆಗೆ ಸಂಬಂಧಿಸಿದ ಕೈಗೊಂಡ ಕ್ರಮಗಳು ಹಾಗೂ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಕೈಗೊಂಡ ಉಪಕ್ರಮಗಳ ವಿವರ ವರದಿಯಲ್ಲಿರಬೇಕು ಎಂದೂ ಆಯೋಗ ತಿಳಿಸಿದೆ.

ರಾಜಾಜಿನಗರ ಮೆಟ್ರೊ ನಿಲ್ದಾಣದಲ್ಲಿ ಫೆ.18ರಂದು ನಡೆದಿರುವ ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿರುವ ಕಾರ್ತಿಕ್ ಐರಾನಿ ಎಂಬುವವರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು.

ಮಾಧ್ಯಮ ವರದಿ ನಿಜವಾಗಿದ್ದರೆ, ಅದು ಮಾನವ ಹಕ್ಕುಗಳ ಉಲ್ಲಂಘನೆ. ಯಾವುದೇ ವ್ಯಕ್ತಿಯು ಧರಿಸಿರುವ ಬಟ್ಟೆಯ ಸ್ವರೂಪದ ಆಧಾರದ ಮೇಲೆ ಸಾರ್ವಜನಿಕ ಸಾರಿಗೆಗೆ ಪ್ರವೇಶ ನಿರಾಕರಿಸುವಂತಿಲ್ಲ. ಯಾರಾದರೂ ಯಾವುದೇ ಆಕ್ಷೇಪಾರ್ಹ ವಸ್ತುಗಳನ್ನು ಹೊಂದಿದ್ದರೆ ಮಾತ್ರ ತಡೆಯಬಹುದು ಎಂದು ಆಯೋಗ ಸ್ಪಷ್ಟಪಡಿಸಿದೆ.

'ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಲಿ'

ಬೆಂಗಳೂರು: 'ವಿದ್ಯಾರ್ಥಿಗಳು ಸಂವಿಧಾನದ ಮೂಲಭೂತ ಕರ್ತವ್ಯಗಳಲ್ಲಿ ಒಂದಾದ ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡು ದೇಶದ ಪ್ರಗತಿಗೆ ಕೊಡುಗೆ ನೀಡಬೇಕು' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬುಧವಾರ ನಡೆದ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಸರ್ ಸಿ.ವಿ. ರಾಮನ್ ಅವರು ಸೆಂಟ್ರಲ್ ಕಾಲೇಜಿನ ಇದೇ ಸಭಾಂಗಣದಲ್ಲಿ ನೊಬೆಲ್ ಪ್ರಶಸ್ತಿಗೆ ಗೌರವಕ್ಕೆ ಪಾತ್ರವಾದ 'ರಾಮನ್ ಎಫೆಕ್ಟ್' ಸಂಶೋಧನೆಯನ್ನು ಬಹಿರಂಗಪಡಿಸಿದ್ದು ನಮಗೆಲ್ಲ ಹೆಮ್ಮೆಯ ಸಂಗತಿಯಾಗಿದೆ. ವಿಕಸಿತ ಭಾರತದ ಪ್ರಗತಿಗೆ ದೇಶೀಯ ತಂತ್ರಜ್ಞಾನದ ಅಭಿವೃದ್ಧಿ ವಿಶೇಷ ಮಹತ್ವ ಪಡೆದುಕೊಂಡಿದೆ' ಎಂದು ತಿಳಿಸಿದರು.

ಕುಲಸಚಿವ ಟಿ. ಜವರೇಗೌಡ, 'ಕುವೆಂಪು ಅವರ ಸಂದೇಶದಂತೆ ಸಮಾಜದಲ್ಲಿ ಮೂಢನಂಬಿಕೆಗಳ ಪ್ರಭಾವವನ್ನು ಕಿತ್ತೊಗೆಯಲು ವಿದ್ಯಾರ್ಥಿಗಳು ಮುಂದಾಗಬೇಕು. ವಿಜ್ಞಾನ ಮನುಕುಲದ ಪ್ರಗತಿಯ ಸಾಧನವಾಗಿದೆ' ಎಂದು ತಿಳಿಸಿದರು.

ಎನ್‌ಎಂಆರ್ ಸಂಶೋಧನಾ ಕೇಂದ್ರದ ಅಧ್ಯಕ್ಷ ಎನ್. ಸೂರ್ಯಪ್ರಕಾಶ್, ಬಿಸಿಯು ಪ್ರಾಧ್ಯಾಪಕರಾದ ಪಾಂಡುರಂಗಪ್ಪ ಮತ್ತು ದೇವರಾಜ್ ಉಪನ್ಯಾಸಗಳನ್ನು ನೀಡಿದರು. ಬಿಸಿಯು ವಿಜ್ಞಾನ ವಿಭಾಗದ ಡೀನ್ ಹರಿಪ್ರಸಾದ್ ವಿಜ್ಞಾನ ದಿನಾಚರಣೆಯ ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದರು. ಕುಲಸಚಿವ (ಮೌಲ್ಯಮಾಪನ) ಸಿ.ಎಸ್. ಆನಂದ ಕುಮಾರ್ ಭಾಗವಹಿಸಿದ್ದರು.

ವಿಶ್ವಕರ್ಮ ನಿಗಮದ ಸಾಲಮನ್ನಾಕ್ಕೆ ಆಗ್ರಹ; ಮಾ. 4ರಂದ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವಕರ್ಮ ಅಭಿವೃದ್ಧಿ ನಿಗಮದಲ್ಲಿ ಬಾಕಿ ಇರುವ ಸಾಲ ಮನ್ನಾ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಮಾ. 4ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು' ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಮಳವಳ್ಳಿ ಶ್ರೀನಿವಾಸ್, 'ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ₹100 ಕೋಟಿ ಅನುದಾನ ನೀಡಬೇಕು. ವಿಧಾನಸೌಧದ ಆವರಣದಲ್ಲಿ ಅಮರಶಿಲ್ಪಿ ಜಕಣಾಚಾರಿ ಅವರ ಪ್ರತಿಮೆ ಸ್ಥಾಪಿಸಬೇಕು. ಅಭಿವೃದ್ಧಿ ನಿಗಮದ ಮೂಲಕ ಸಮಾಜದ ವಿದ್ಯಾರ್ಥಿಗಳಿಗೆ ಯುಪಿಎಸ್‌ಸಿ, ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಬೇಕು. ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದಲ್ಲಿ ತಲಾ ಒಂದರಂತೆ ವಿಶ್ವಕರ್ಮ ವಸತಿಶಾಲೆಗಳನ್ನು ಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

'ಬಜೆಟ್‌ನಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಮನವಿ ಸಲ್ಲಿಸಲಾಗಿತ್ತು. ಆದರೆ, ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಿಲ್ಲ. ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ನಿರ್ದಿಷ್ಟಾವಧಿ ಧರಣಿ ಪ್ರತಿಭಟನೆ ಹಮ್ಮಿಕೊಳ್ಳುತ್ತಿದ್ದೇವೆ' ಎಂದರು. ಆದಿಲಕ್ಷ್ಮೀ ವಿಶ್ವಕರ್ಮ ಮಠದ ನೀಲಕಂಠಾಚಾರ್ಯ ಸ್ವಾಮೀಜಿ, ಸಮಾಜದ ಉಪಾಧ್ಯಕ್ಷ ಟಿ.ಕೆ. ಪುರುಷೋತ್ತಮ, ಕಾರ್ಯಾಧ್ಯಕ್ಷ ಗುರು ವಿಶ್ವಕರ್ಮ, ಆಶಾ ರಮೇಶ್ ಪಾಲ್ಗೊಂಡಿದ್ದರು.

ಕನಿಷ್ಠ ಪಿಂಚಣಿಗೆ ಆಗ್ರಹ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಸಂಘರ್ಷ ಸಮಿತಿ ಹಾಗೂ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸದಸ್ಯರು ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರು: 'ಕನಿಷ್ಠ ₹7500 ಪಿಂಚಣಿ, ಡಿಎ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿ ರಾಷ್ಟ್ರೀಯ ಸಂಘರ್ಷ ಸಮಿತಿ ಹಾಗೂ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸದಸ್ಯರು ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

'ಕಳೆದ ಒಂದು ವರ್ಷದಿಂದ, ಪ್ರತಿ ತಿಂಗಳು 27ರಂದು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದೇವೆ. ಮನವಿಯನ್ನೂ ಸಲ್ಲಿಸುತ್ತೇವೆ. ಆದರೆ ಇಲ್ಲಿವರೆಗೂ ಸ್ಪಂದನ ಸಿಕ್ಕಿಲ್ಲ. ಬೇಡಿಕೆಗಳೂ ಈಡೇರಿಲ್ಲ' ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

'ಇದುವರೆಗೂ ಇಪಿಎಫ್‌ಒ ಕಚೇರಿಯಿಂದ ಹೊರಡಿಸಿರುವ ಎಲ್ಲಾ ಸುತ್ತೋಲೆಗಳು ಸುಪ್ರೀಂ ಕೋರ್ಟ್ ತೀರ್ಪುಗಳಿಗೆ ವ್ಯತಿರಿಕ್ತವಾಗಿದ್ದು, ಈ ಸುತ್ತೋಲೆಗಳಿಗೆ ಯಾವುದೇ ಮನ್ನಣೆ ಇಲ್ಲ. ಆರ್‌ಸಿ ಗುಪ್ತ ಪ್ರಕರಣದ ತೀರ್ಪನ್ನು ಘನ ನ್ಯಾಯಾಲಯವು ಈವರೆವಿಗೂ ತಳ್ಳಿ ಹಾಕಿಲ್ಲ. ರಾಜ್ಯ ಹೈಕೋರ್ಟ್ ಇದೇ ರೀತಿಯ ಒಟ್ಟು 1600 ರಿಟ್ ಅರ್ಜಿಗಳನ್ನು ಇತ್ಯರ್ಥಪಡಿಸಿದ್ದು, ಅವೆಲ್ಲವನ್ನು ಕೂಡಲೇ ಮಾನ್ಯ ಮಾಡಿ, ಕನಿಷ್ಠ ಪಿಂಚಣಿ ನೀಡಬೇಕು' ಎಂದು ಸಂಘದ ಅಧ್ಯಕ್ಷ ಶಂಕರ್ ಕುಮಾರ್, ಕಾರ್ಯಾಧ್ಯಕ್ಷ ನಂಜುಂಡೇಗೌಡ, ಉಪಾಧ್ಯಕ್ಷ ಸುಬ್ಬಣ್ಣ ಆಗ್ರಹಿಸಿದರು.

ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮೇಲೆ ಹಲ್ಲೆ- ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ಬೈಕ್ ಸವಾರನನ್ನು ಆರ್‌ಎಂಸಿ ಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ಗೊರಗುಂಟೆಪಾಳ್ಯದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಚಾಲಕ ವೆಂಕಟರೆಡ್ಡಿ ಎಂಬುವರ ಮೇಲೆ ಹಲ್ಲೆ ನಡೆಸಿದ್ದ ಆರೋಪದ ಮೇರೆಗೆ ಅರುಣ್ ಕುಮಾರ್ (30) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ತುಮಕೂರಿನಿಂದ ಬಸ್ ನಗರಕ್ಕೆ ಬರುತ್ತಿತ್ತು. ಇದೇ ಮಾರ್ಗದಲ್ಲಿ ಆರೋಪಿ ಅರುಣ್ ಕೂಡ ಬೈಕ್‌ನಲ್ಲಿ ಬರುತ್ತಿದ್ದ. ಆಗ ರಸ್ತೆಯಲ್ಲಿ ಜಾಗ ಬಿಡುವ ವಿಚಾರಕ್ಕೆ ಗಲಾಟೆ ನಡೆದಿದೆ. ಗಲಾಟೆ ವಿಕೋಪಕ್ಕೆ ಹೋದಾಗ ಚಾಲಕನ ಮೇಲೆ ಅರುಣ್ ಕುಮಾರ್ ಹಲ್ಲೆ ನಡೆಸಿದ್ದಾನೆ. ಬಳಿಕ, ವೆಂಕಟರೆಡ್ಡಿ ಸ್ಥಳೀಯರ ನೆರವಿನಿಂದ ಆರೋಪಿಯನ್ನು ಹಿಡಿದು ಒಪ್ಪಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದರು. ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಿರ್ದೋಷಿ ಹೆಸರು ತೆಗೆದುಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಕೊಡಮಾಡಿರುವ ಮೂಲಭೂತ ಹಕ್ಕುಗಳು ಖಾಸಗಿತನದ ಹಕ್ಕುಗಳೂ ಆಗಿದ್ದು, ವ್ಯಕ್ತಿಯೊಬ್ಬ ಗೌರವಯುತವಾಗಿ ಬದುಕುವುದನ್ನು ಎತ್ತಿಹಿಡಿದಿದೆ. ಇದನ್ನು ಯಾರೂ ಮರೆಯಬಾರದು' ಎಂದು ಹೈಕೋರ್ಟ್ ಹೇಳಿದೆ.

'ಕ್ರಿಮಿನಲ್ ಆರೋಪದ ಪ್ರಕರಣದಲ್ಲಿ ನಿರ್ದೋಷಿಯಾಗಿರುವ ನನ್ನ ಹೆಸರನ್ನು ಹೈಕೋರ್ಟ್‌ನ ಡಿಜಿಟಲ್ ದಾಖಲೆಗಳಿಂದ ತೆಗೆದುಹಾಕಲು ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಬೇಕು' ಎಂದು ಕೋರಿ 28 ವರ್ಷದ ಯುವಕ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಸಿ.ಎಚ್.ಹನುಮಂತರಾಯ ಅವರು, 'ಅರ್ಜಿದಾರನ ವಿರುದ್ಧ ಪೊಲೀಸರು ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದು ಅದು ಪುರಸ್ಕೃತವಾಗಿದೆ. ಆದರೂ, ಅವರು ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ವಿವರಗಳು ಕೋರ್ಟ್‌ನ ವೆಬ್‌ಸೈಟ್ ಮತ್ತು ಇತರೆ ಕಾನೂನು ಜಾಲತಾಣಗಳಲ್ಲಿ ಇನ್ನೂ ಗೋಚರವಾಗುತ್ತಿವೆ' ಎಂದು ಆಕ್ಷೇಪಿಸಿದರು.

'ಅರ್ಜಿದಾರರ ಬಗೆಗಿನ ಮಾಹಿತಿಯು ಅಧಿಕೃತ ವೆಬ್‌ಸೈಟ್ ಮುಖಾಂತರ ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುತ್ತಿದ್ದು ಇದರಿಂದ ಅವರ ಜೀವನೋಪಾಯವೇ ಕಷ್ಟ ಆಗಿದೆ. ಎಲ್ಲಿಯೂ ನೌಕರಿ ಸಿಗದೆ, ಇಡೀ ಕುಟುಂಬ ಸಂಕಷ್ಟಕ್ಕೆ ಸಿಲುಕಿದೆ. ಸಮಾಜದಲ್ಲಿ ಗೌರವದಿಂದ ಬಾಳ್ವೆ ನಡೆಸಲು ತೊಂದರೆಯಾಗುತ್ತಿದೆ. ಆದ್ದರಿಂದ, ಅವರ ಹೆಸರನ್ನು ಹೈಕೋರ್ಟ್‌ನ ಡಿಜಿಟಲ್ ದಾಖಲೆಗಳು ಹಾಗೂ ಸಾಮಾಜಿಕ ಜಾಲತಾಣಗಳಿಂದ ತೆಗೆದುಹಾಕಲು ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ಪೀಠ, 'ನ್ಯಾಯಾಲಯ ನಿರ್ದೋಷಿ ಎಂದು ಘೋಷಿಸಿದ ನಂತರವೂ ಆರೋಪಿಯಾಗಿದ್ದವರ ಹೆಸರನ್ನು, ಜಾಲತಾಣಗಳಲ್ಲಿ ಇರಗೊಟ್ಟರೆ ಅದು, ಗೌರವಯುತವಾಗಿ ಬದುಕುವ ವ್ಯಕ್ತಿಯೊಬ್ಬನ ಹಕ್ಕಿಗೂ ಖಂಡಿತಾ ಧಕ್ಕೆ ಉಂಟು ಮಾಡುವ ಅಂಶ' ಎಂಬ ಅಭಿಪ್ರಾಯದೊಂದಿಗೆ, ಹೈಕೋರ್ಟ್ ವೆಬ್‌ಸೈಟ್‌ನಲ್ಲಿರುವ ಪ್ರಕರಣದ ವಿವರಗಳಲ್ಲಿ ಅರ್ಜಿದಾರರ ಹೆಸರನ್ನು ಮರೆಮಾಚುವಂತೆ ಹೈಕೋರ್ಟ್ ರಿಜಿಸ್ಟ್ರಿಗೆ ಆದೇಶಿಸಿದೆ.

'ರೇರಾ ಅಧ್ಯಕ್ಷ ಹುದ್ದೆ ಶೀಘ್ರ ಭರ್ತಿ'

ಬೆಂಗಳೂರು: 'ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಮೇಲ್ಮನವಿ ನ್ಯಾಯಮಂಡಳಿಗೆ ಮುಂದಿನ ಮೂರು ವಾರಗಳಲ್ಲಿ ಅಧ್ಯಕ್ಷ ಮತ್ತು ಸದಸ್ಯರನ್ನು ಭರ್ತಿ ಮಾಡಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ರೇರಾ ಮೇಲ್ಮನವಿ ನ್ಯಾಯ ಮಂಡಳಿಗೆ ಮುಖ್ಯಸ್ಥರನ್ನು ನೇಮಿಸಲು ನಿರ್ದೇಶಿಸಬೇಕು' ಎಂದು ಕೋರಿ ಮ್ಯಾಥ್ಯೂ ಥಾಮಸ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ರೇರಾದ ಒಬ್ಬ ಸದಸ್ಯ 2024ರ ಏಪ್ರಿಲ್‌ನಲ್ಲಿ ನಿವೃತ್ತರಾಗಲಿದ್ದಾರೆ. ಈ ಸಂದರ್ಭದಲ್ಲಿ ಎಲ್ಲ ಸದಸ್ಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು' ಎಂದರು.

ಈ ಅಂಶ ದಾಖಲಿಸಿಕೊಂಡ ಪೀಠ, 'ರೇರಾದ ಅಧ್ಯಕ್ಷ, ಸದಸ್ಯರ ನೇಮಕಾತಿಯಲ್ಲಿ ವಿಳಂಬ ಮಾಡಬಾರದು. ಸದಸ್ಯರ ನಿವೃತ್ತಿ ನಂತರ ತಕ್ಷಣವೇ ಅಧಿಕಾರ ವಹಿಸಿಕೊಳ್ಳುವಂತಿರಬೇಕು' ಎಂದು ಸೂಚಿಸಿ ವಿಚಾರಣೆ ಮುಂದೂಡಿತು.

ಬಿಬಿಎಂಪಿ ಬಜೆಟ್ ನೇರ ಪ್ರಸಾರ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2024–25ನೇ ಸಾಲಿನ ಬಜೆಟ್ ಅನ್ನು ಫೆಬ್ರುವರಿ 29ರ ಗುರುವಾರ ಮಂಡಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬೆಳಿಗ್ಗೆ 10.30ರಿಂದ ಬಜೆಟ್ ನೇರ ಪ್ರಸಾರವಾಗಲಿದೆ.

ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆಡಳಿತಗಾರ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರ ಉಪಸ್ಥಿತಿಯಲ್ಲಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಕಲಕೇರಿ ಅವರು ಬಜೆಟ್ ಪ್ರಸ್ತುತಪಡಿಸಲಿದ್ದಾರೆ.

ನೇರ ಪ್ರಸಾರವಾಗುವ ತಾಣಗಳು:
https://www.youtube.com/live/i2balgL32_Q?si=8HOaGixOeuAidH_x
https://www.facebook.com/BBMP.Admn?mibextid=ZbWKwL
https://www.facebook.com/BBMPCC?mibextid=ZbWKwL
https://www.facebook.com/?mibextid=ZbWKwL



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

IN THE COURT OF THE PRINCIPAL DISTRICT JUDGE, ARIYALUR.
O.S. No. 49/2023
Boominathan, S/o Ramanathan, Mela Agraharam, Ariyalur
PLAINTIFF......
VERSUS/
J.V.VS. Swami. Proprietor, M/S Lakshmi Enterprises, 45, 1st C-Main Road. Gokula 1st Stage, 3rd Phase, LCR English School, Yashwanthpur, Bangalore
DEFENDANT
NOTICE GIVEN BY PLAINTIFF:
Please take notice that the suit filed by plaintiff for recovery of **Rs. 32.28,264.00** in the above court is posted to 12.3.2024 for appearance. If you the defendant, fail to appear in court on that day by 10.30 A.M, you will be set exparte.
S.SHANKAR, B.Sc. B.L., Advocate
Ariyalur-621 704,Tamil Nadu.

BUSINESS

Business to Business

Business

WANTED BUSINESS Partners Saree Business Contact: 8892501007/ 9606701007

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted&, Agriculture Lands Call:7204995189

CONNECT ಕ್ಲಾಸಿಫೈಡ್ಸ್

Grand Flea Market Presents
ಇಂಡಿಯನ್ ಆರ್ಟಿಸನ್ ಬಜಾರ್
Indian Artisan Bazaar
Arts, Crafts, Handlooms & Lifestyle Exhibition
Date: 23rd February 2024 to 3rd March 2024
10 Days Exhibition
Timings: 11 am to 7 pm
Karnataka Chitrakala Parishath
Kumara Krupa Road, Bengaluru

Djembe Live Performance | 2nd March 2024 5.30 PM - 7.00 PM
Puppet Show Live Performance | 3rd March 2024 5.00 PM - 6.30 PM
Grand Flea Market
10 DAYS EXHIBITION | 100+ STALLS | Live PERFORMANCE | Entry FREE
For Details Contact: 6364685716 / 9036658774

JOB OPPORTUNITIES

General

WANTED: COASTAL Cook, Supplier, Helper (North/ South), Cleaners. Good Salary. Call: SANTHOSH SEA FOOD- 9845027084

Part-Time Jobs

ARPITA FOUNDATION A Mental Health Helpline requires volunteers for 2 hours. Kindly call 8105247523

Wanted

WANTED MARKETING executives, To Promote JEE/NEET/KCET Books in PU colleges,send resume gsnedutech@gmail.com Ph: 9618418601

REAL ESTATE SELLING

Commerical

Sarjapur Road

COMMERCIAL20000 SFT,SUITABLE For Complex Near Wipro Kodathi RS 10500/-sft Buyers Contact; 8884501767

ನಾದಸ್ವರ & ಡೋಲ್ ಪ್ರದರ್ಶನ

ಹೈದರಾಬಾದ್ ನಲ್ಲಿ ನಡೆದ ದಿನಾಂಕ: 24.2.2024 ರಂದು ಮದುವೆ ಕಾರ್ಯಕ್ರಮದಲ್ಲಿ ಒಂದೇ ವೇದಿಕೆಯಲ್ಲಿ ಪ್ರಪ್ರಥಮ ಭಾರಿಗೆ ಆಂಧ್ರ ಪ್ರದೇಶದಲ್ಲಿ ನಮ್ಮ ರಾಜ್ಯದಿಂದ ಡೋಲ್ ವಿದ್ವಾನ್ ಶ್ರೀ.ಆರ್. ರಾಮು ಅವರ ತಂಡದಿಂದ 108 ಜನ ಕಲಾವಿದರು ಭಾಗವಹಿಸಿ ನಾದಸ್ವರ ಮತ್ತು ಡೋಲ್ ಸಂಗೀತ ಪ್ರದರ್ಶನ ಯಶ್ವಸಿಯಾಗಿ ನೀಡಿದ್ದಾರೆ.
ಫೋನ್ : +91 8050524296

ವಿದ್ವಾನ್ ಶ್ರೀ. ಆರ್. ರಾಮು

PERSONAL

Change of Name

I, VINOD JAYARAM, Son of D. Jayaram residing at Prakash Nagar, Bangalore-21 solemnly declare that I have changed my name from VINODH JAYARAM to VINOD JAYARAM vide Affidavit dated 28th Feb 2024 sworn in before Notary CK Anupama.

I, SONIA VIKRAM BAFNA R/a Flat No.201, 2nd floor, Arihant Apartments, Subramanya Swamy Temple Road, V.V.Puram, Bangalore-560004 Have Changed My Name to SONIYA BAFNA Vide Affidavit Dated 23/02/2024 before Notary L. SHANKARANARAYANA Bangalore.

CHANGE OF NAME
I, **LAKSHMI** Residing at #A-308, Garuda Royal Homes, Sy. No.45, Vinayaka Layout, KR Puram, Bengaluru-560049 have changed my name to **LAKSHMI KULKARNI** vide affidavit dated 28.02.2024 before Notary Srinatha. D.R, Bangalore. Henceforth I shall be known as **LAKSHMI KULKARNI** only.

I, VIKRAM RAMESH BAFNA R/a Flat No.201, 2nd floor, Arihant Apartments, Subramanya Swamy Temple Road, V.V.Puram, Bangalore-560004 Have Changed My Name to VIKRAM RAMESH JAIN Vide Affidavit Dated 23/02/2024 before Notary L. SHANKARANARAYANA Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9845114560 | +91 9900428036 | +91 9731810277

POWERED BY
NPCI
भारतीय राष्ट्रीय भुगतान निगम
NATIONAL PAYMENTS CORPORATION OF INDIA

"ನನಗನಿಸುತ್ತದೆ BHIM
ಸುರಕ್ಷಿತವಾಗಿದೆ

ನನಗನಿಸುತ್ತದೆ BHIM
ಸರಳವಾಗಿದೆ

ನನಗನಿಸುತ್ತದೆ BHIM
ತಡೆರಹಿತವಾಗಿದೆ

ವಿಶ್ವಾಸಾರ್ಹ ಡಿಜಿಟಲ್
ಪಾವತಿ ಆಪ್
ಆಗಿ BHIM ಮುಂದುವರೆಯುತ್ತದೆ
ಎನ್ನುವುದು ನನ್ನ ನಂಬಿಕೆ"

ಡೌನ್‌ಲೋಡ್ ಮಾಡಿ

BHIM
BHARAT INTERFACE FOR MONEY

GET IT ON Google Play
Available on the App Store

BHIM
BHARAT INTERFACE FOR MONEY

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಕೆಪಿಎಸ್‌ಸಿ: 384 ಹುದ್ದೆಗಳಿಗೆ ನೇಮಕಾತಿ

2023–24 ನೇ ಸಾಲಿನ 384 'ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್' ಗ್ರೂಪ್-ಎ, ಗ್ರೂಪ್-ಬಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ.

ಮಂಜುನಾಥ್ ಭದ್ರಶೆಟ್ಟಿ

2023–24ನೇ ಸಾಲಿನ 384 'ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್' ಗ್ರೂಪ್-ಎ, ಗ್ರೂಪ್-ಬಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ.

ಕೆಪಿಎಸ್‌ಸಿಯ ಈ ನಿರ್ಧಾರ, ಕೆಎಎಸ್ ಅಧಿಕಾರಿ ಆಗಬೇಕು ಎಂದು ಅನೇಕ ವರ್ಷಗಳಿಂದ ತಯಾರಿ ನಡೆಸುತ್ತಿದ್ದ ಅಭ್ಯರ್ಥಿಗಳಿಗೆ ಸುವರ್ಣಾವಕಾಶವನ್ನು ತಂದಿದೆ.

ಇದೇ ಮಾರ್ಚ್ 4ರಿಂದ ಪೂರ್ವಭಾವಿ ಪರೀಕ್ಷೆಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭವಾಗಲಿದ್ದು, ಏಪ್ರಿಲ್ 3 ಅರ್ಜಿ ಸಲ್ಲಿಸಲು ಕಡೆಯ ದಿನ. ಆಯೋಗದ ಅಧಿಕೃತ ವೆಬ್‌ಸೈಟ್ kpsconline.karnataka.gov.in ನಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ.

ಅರ್ಜಿ ಸಲ್ಲಿಸುವ ಶುಲ್ಕ ಸಾಮಾನ್ಯ ವರ್ಗದವರಿಗೆ ₹600, ಪ್ರವರ್ಗ 2ಎ, 2ಬಿ, 3ಎ, 3ಬಿಗಳಿಗೆ ₹300, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹50 ಹಾಗೂ ಎಸ್‌ಸಿ, ಎಸ್‌ಟಿ, ಪ್ರವರ್ಗ-1, ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ.

ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳೂ (ಹೈ-ಕ) ಸೇರಿದಂತೆ ಒಟ್ಟಾರೆ 384 ಹುದ್ದೆಗಳಲ್ಲಿ 'ಗ್ರೂಪ್ -ಎ' 159, 'ಗ್ರೂಪ್ -ಬಿ' 225 ಹುದ್ದೆಗಳಿವೆ. ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಒಟ್ಟು 77.

ಪದವಿ, ಸ್ನಾತಕೋತ್ತರ ಪದವಿ ಅಥವಾ ತತ್ಸಮಾನವಾದ ವಿದ್ಯಾರ್ಹತೆಯನ್ನು ಹೊಂದಿದವರು ಅರ್ಜಿ ಸಲ್ಲಿಸಲು ಅರ್ಹ. ಕನಿಷ್ಠ 21 ವರ್ಷ ವಯಸ್ಸು ಮೀರಿದವರು ಅರ್ಜಿ ಸಲ್ಲಿಸಲು ಅರ್ಹ. ಸಾಮಾನ್ಯ ವರ್ಗದವರಿಗೆ ಗರಿಷ್ಠ ವಯೋಮಿತಿ 38, ಪ್ರವರ್ಗ 2ಎ, 2ಬಿ, 3ಎ, 3ಬಿಗಳಿಗೆ 41 ವರ್ಷ, ಎಸ್‌ಸಿ, ಎಸ್‌ಟಿ, ಪ್ರವರ್ಗ-1 ಅಭ್ಯರ್ಥಿಗಳಿಗೆ 43 ವರ್ಷ. ಮಾಜಿ ಸೈನಿಕರಿಗೂ ವಯೋಮಿತಿ ಸಡಿಲಿಕೆ ಇದೆ.

ಪೂರ್ವಭಾವಿ ಪರೀಕ್ಷೆ (ಬಹುಆಯ್ಕೆ ಮಾದರಿಯ ಪ್ರಶ್ನೆಗಳು), ಮುಖ್ಯ ಪರೀಕ್ಷೆ (ವಿವರಣಾತ್ಮಕ) ಮತ್ತು ವ್ಯಕ್ತಿತ್ವ ಪರೀಕ್ಷೆ ಎಂಬ ಮೂರು ಹಂತಗಳಲ್ಲಿ ಈ ನೇಮಕಾತಿ ನಡೆಯಲಿದೆ. ವಿವರವಾದ ಅಧಿಸೂಚನೆಗೆ, ಪಠ್ಯಕ್ರಮ, ಇತರೆ ಹೆಚ್ಚಿನ ಮಾಹಿತಿಗೆ kpsc.kar.nic.in ಭೇಟಿ ನೀಡಬಹುದು.

ಅರ್ಜಿ ಸಲ್ಲಿಸುವ ಸಮಯದಲ್ಲಿ ಏನಾದರು ಸಹಾಯ ಬೇಕಾದರೆ ಈ ಸಹಾಯವಾಣಿಗಳನ್ನು ಸಂಪರ್ಕಿಸಬಹುದು
080-30574957/ 080-30574901

ಸಂದರ್ಶನಕ್ಕೆ 25 ಅಂಕಗಳು

ಈ ಸಾರಿ ಸಂದರ್ಶನಕ್ಕೆ 25 ಅಂಕಗಳನ್ನು ಮಾತ್ರ ನಿಗದಿಪಡಿಸಲಾಗಿದೆ. 2019ರಲ್ಲಿ 50 ಅಂಕಗಳನ್ನು ಹಾಗೂ ಅದಕ್ಕೂ ಮುನ್ನ ನಡೆದ ಪರೀಕ್ಷೆಗಳಲ್ಲಿ 200 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುತ್ತಿತ್ತು. ಸಂದರ್ಶನಕ್ಕೆ ಅತ್ಯಂತ ಕಡಿಮೆ ಅಂಕಗಳನ್ನು ಇಟ್ಟಿರುವುದನ್ನು ಅನೇಕ ಅಭ್ಯರ್ಥಿಗಳು ಸ್ವಾಗತಿಸಿದ್ದಾರೆ.

ವಯೋಮಿತಿ ಸಡಿಲಿಕೆ ಅವಕಾಶ: ಅನೇಕ ವರ್ಷಗಳಿಂದ ಕೆಎಎಸ್ ನೇಮಕಾತಿ ನನೆಗುದಿಗೆ ಬಿದ್ದಿದ್ದರಿಂದ ಈ ಹುದ್ದೆಗಳ ಅನೇಕ ಉದ್ಯೋಗಾಂಕ್ಷಿಗಳು ಬೇಸರಪಟ್ಟುಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಇಂತವರಿಗೆ ಈ ಒಂದು ಭಾರಿ ಅನ್ವಯ ಆಗುವಂತೆ ವಯೋಮಿತಿಯಲ್ಲಿ ಮೂರು ವರ್ಷ ಸಡಿಲಿಕೆ ನೀಡಲಾಗಿದೆ.

ಒಂದೇ ವರ್ಷ ಡೆಡ್‌ಲೈನ್

ಈ ನೇಮಕಾತಿ ಪ್ರಕ್ರಿಯೆಯನ್ನು ಅಧಿಸೂಚನೆ ಪ್ರಕಟವಾದಾಗಿನಿಂದ ಹಿಡಿದು ಒಂದು ವರ್ಷದೊಳಗೆ ಮುಗಿಸುವ ಗಡುವನ್ನು ಆಯೋಗ ಹಾಕಿಕೊಂಡಿದೆ. ಇಷ್ಟು ವರ್ಷ ವಿವಿಧ ಕಾರಣಗಳಿಂದ ನೇಮಕಾತಿ ಭಾರಿ ವಿಳಂಬವಾಗುತ್ತಿದ್ದವು.

ಸರಿಯಾಗಿ ಅರ್ಜಿ ಸಲ್ಲಿಸಲು ಕಟ್ಟುನಿಟ್ಟಿನ ಸೂಚನೆ

ಕೆಪಿಎಸ್‌ಸಿ ವಿವಿಧ ನೇಮಕಾತಿಗಳಿಗೆ ಅರ್ಜಿ ಸಲ್ಲಿಸುವ ಅನೇಕರು ಅರ್ಜಿಯಲ್ಲಿ ದೋಷಗಳಿವೆ ಎಂದು ಸರಿಪಡಿಸಲು ಮನವಿ ಮಾಡುತ್ತಿದ್ದಾರೆ. ಆದರೆ, ಒಂದು ಭಾರಿ ಅರ್ಜಿ ಸಲ್ಲಿಸಿದರೆ ಸರಿಪಡಿಸಲು ಅವಕಾಶ ಇಲ್ಲ. ಹಾಗಾಗಿ ಈ ಪರೀಕ್ಷೆಗೂ ಕೂಡ ನಿಗದಿತ ದಿನಾಂಕದೊಳಗೆ ಅರ್ಜಿಯನ್ನು ಸರಿಯಾಗಿ ಭರ್ತಿ ಮಾಡಿ ಸಲ್ಲಿಸಬೇಕು ಎಂದು ಕೆಪಿಎಸ್‌ಸಿ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಮೇ 5 ರಂದು ಪೂರ್ವಭಾವಿ ಪರೀಕ್ಷೆ

ಬರುವ ಮೇ 5ರಂದು ಪೂರ್ವಭಾವಿ ಪರೀಕ್ಷೆ ನಡೆಸಲು ಆಯೋಗ ತಾತ್ಕಾಲಿಕವಾಗಿ ನಿರ್ಧರಿಸಿದೆ. ಅಂದರೆ ಅರ್ಜಿ ಸಲ್ಲಿಸುವ ಅವಧಿ ಮುಗಿದ ಒಂದೇ ತಿಂಗಳಲ್ಲಿ ಪರೀಕ್ಷೆ ಎದುರಾಗಲಿದೆ. ಈ ನೇಮಕಾತಿ ಪ್ರಕ್ರಿಯೆ ಯಾವಾಗ ಆರಂಭ ಆಗುತ್ತದೆ ಎಂಬ ಗೊಂದಲದಲ್ಲಿ ಇದ್ದ ಅನೇಕರಿಗೆ ಇದೀಗ ಪರೀಕ್ಷೆ ಬೇಗ ಎದುರಾಗಿರುವುದರಿಂದ ಸಿದ್ಧತೆಯನ್ನೂ ಬೇಗ ಮಾಡಿಕೊಳ್ಳಬೇಕಿದೆ. ಪೂರ್ವಭಾವಿ ಪರೀಕ್ಷೆಯ ಪ್ರತಿ ನಾಲ್ಕು ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ.

40 ಎ.ಸಿ ಹುದ್ದೆಗಳು!

ಕೆಪಿಎಸ್‌ಸಿ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಹಾಯಕ ಆಯುಕ್ತರು (ಅಸಿಸ್ಟಂಟ್ ಕಮಿಷನರ್) ಹುದ್ದೆಗಳನ್ನು ಅತಿಹೆಚ್ಚು ಕರೆಯಲಾಗಿದೆ. ಒಟ್ಟು 40 ಎ.ಸಿ ಹುದ್ದೆಗಳು (ಗ್ರೂಪ್-ಎ) ಇವೆ. ಆರ್‌ಡಿಪಿಆರ್‌ನಲ್ಲಿ ಸಹಾಯಕ ಕಾರ್ಯನಿರ್ವಾಹ ಅಧಿಕಾರಿ 40 ಹುದ್ದೆಗಳು, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸಹಾಯಕ ಆಯುಕ್ತರು 41 ಹುದ್ದೆಗಳು ಅತಿಹೆಚ್ಚು ಗ್ರೂಪ್-ಎ ಹುದ್ದೆಗಳಾಗಿವೆ.

ಪೂರ್ವಭಾವಿ ಪರೀಕ್ಷೆ

ಪತ್ರಿಕೆ	ಪ್ರಶ್ನೆಗಳು	ಅಂಕಗಳು
ಪತ್ರಿಕೆ 1	100	200
ಪತ್ರಿಕೆ 2	100	200

ಚಿತ್ರದುರ್ಗ ಜಿಲ್ಲೆಯ ಮಠದ ಕುರುಬರಹಟ್ಟಿಯಲ್ಲಿ ಜನಿಸಿ, ಬಡತನದ ನಡುವೆ ಛಲ ಬಿಡದೆ ಓದಿ ಸಿವಿಲ್ ನ್ಯಾಯಾಧೀಶರ ನೇಮಕಾತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಸುಮಾ ಟಿ. ಅವರ ಸ್ಫೂರ್ತಿದಾಯಕ ಕಥನ ಇಲ್ಲಿದೆ.

ಛಲದಲ್ಲಿ ಅರಳಿದ ನ್ಯಾಯದ ಕುಸುಮ

ರೂಪಾ ಕೆ.ಎಂ.

ಸುಮಾ ಟಿ.

- **ಶಾಲಾ ದಿನಗಳಲ್ಲಿಯೇ ನ್ಯಾಯಾಧೀಶೆ ಆಗಬೇಕು ಅನ್ನುವ ಕನಸಿತ್ತೇ?**

ಖಂಡಿತಾ ಇಲ್ಲ. ಎಸ್ಸೆಸ್ಸೆಲ್ಸಿಯನ್ನು ಎರಡನೇ ದರ್ಜೆಯಲ್ಲಿ ಪಾಸಾದ ಸಾಮಾನ್ಯ ಹುಡುಗಿ ನಾನು. ಅಲ್ಲಿಯವರೆಗೆ ಓದುವುದರ ಬಗ್ಗೆ, ಓದಿದರೆ ಆಗುವ ಅನುಕೂಲಗಳ ಬಗ್ಗೆ ಏನೊಂದೂ ತಿಳಿಯದ ಮುಗ್ಧೆ. ಎಸ್ಸೆಸ್ಸೆಲ್ಸಿಯಲ್ಲಿ ಅನುತ್ತೀರ್ಣಳಾದ ಅಕ್ಕನಿಗೆ ಮದುವೆ ಮಾಡಿದ್ದರು. ಅನುತ್ತೀರ್ಣಳಾದರೆ ಮದುವೆ ಮಾಡುತ್ತಾರೆ ಎನ್ನುವ ಭಯಕ್ಕೆ ಓದುತ್ತಾ ಹೋದೆ. ಅದು ಇಂದು ನನ್ನನ್ನು ಇಲ್ಲಿಗೆ ತಂದು ನಿಲ್ಲಿಸಿದೆ.

- **ದೊಡ್ಡ ಹುದ್ದೆ ಪಡೆಯಬೇಕು ಎನ್ನುವುದಕ್ಕೆ ಪ್ರೇರಣೆ ಏನು?**

ಬಡತನವೇ. ರಸ್ತೆ ನಿರ್ಮಾಣ ಕಾರ್ಯಕ್ಕಾಗಿ ಕುರುಬರಹಟ್ಟಿಯಲ್ಲಿದ್ದ ಸ್ವಂತ ಮನೆ ಬಿಟ್ಟು ಕೊಡಬೇಕಾಯಿತು. ನಂತರ ಕೋಡೇನಹಟ್ಟಿಯ ಬಾಡಿಗೆ ಮನೆಗೆ ಬಂದೆವು. ಅಪ್ಪಾಜಿ ಆಟೋ ಡ್ರೈವರ್. ಅಣ್ಣ, ಅಕ್ಕ, ತಮ್ಮ ಇರುವ ತುಂಬು ಕುಟುಂಬ. ಹಳ್ಳಿಯಲ್ಲಿ ಬೆಳೆದ ನನಗೆ ಬಡತನ ಒಡ್ಡುವ ಸವಾಲು, ಮಿತಿಗಳ ಅರಿವು ಚೆನ್ನಾಗಿದೆ. ಬಡತನ ಅಷ್ಟೆ ಮಾಡಲಿಲ್ಲ. ನನ್ನೊಳಗೆ ಓದಿ ಏನಾದರೂ ಸಾಧಿಸಲೇಬೇಕೆಂಬ ಛಲವನ್ನೂ ಹುಟ್ಟು ಹಾಕಿತು. ಬಡತನ ಕೊಟ್ಟ ಛಲದ ನೆರಳಿನಲ್ಲಿ ಬದುಕು ಕಂಡುಕೊಳ್ಳಲು ಪ್ರಯತ್ನಿಸುತ್ತಾ ಹೋದೆ. ಸವಾಲುಗಳೆಲ್ಲ ಅವಕಾಶಗಳಂತೆ ಕಂಡವು.

- **ಓದುವ ಹಂಬಲ ಯಾವಾಗ ಬಂತು?**

ನಾನು ಈಗಾಗಲೇ ಹೇಳಿದ ಹಾಗೆ ಕಾನೂನು ಪದವಿ ಪಡೆಯುವುದು, ಈ ಪರೀಕ್ಷೆಗೆ ಕುಳಿತುಕೊಳ್ಳುವುದೆಲ್ಲ ಯೋಜಿತ ನಿರ್ಧಾರವಲ್ಲ. ಓದದೆ ಉಳಿದರೆ ಮದುವೆ ಆಗಿಬಿಡಬೇಕು ಎನ್ನುವ ಕಾರಣಕ್ಕೆ ಪಿಯು ಕಲಿತೆ. ಅಲ್ಲಿಯವರೆಗೆ ಕನ್ನಡ ಮಾಧ್ಯಮದಲ್ಲಿಯೇ ಕಲಿತೆ. ಆಮೇಲೆ ಪದವಿ ಪೂರೈಸಿದೆ. ನಂತರ ಬಿ.ಇಡಿ ಮಾಡಿದೆ. ಆಮೇಲೆ ಇಂಗ್ಲಿಷ್‌ನಲ್ಲಿ ಎಂ.ಎ. ಮಾಡಿದೆ. ಅದು ಮುಗಿದ ಕೂಡಲೇ ಎಲ್‌.ಎಲ್‌.ಬಿ ಪೂರೈಸಿದೆ. ಹೀಗೆ ತಡೆರಹಿತವಾಗಿ ಒಂದಾದರ ಮೇಲೆ ಒಂದು ಪದವಿ ಪಡೆಯುವುದಕ್ಕೆ ಶುರು ಮಾಡಿದೆ.

- **ಕಾನೂನು ಕ್ಷೇತ್ರದತ್ತ ಸೆಳೆತ ಹೇಗೆ?**

8ನೇ ತರಗತಿಯಲ್ಲಿ ವಕೀಲರು ಆಗಿದ್ದ ಮನೆಪಾಠದ ಮೇಷ್ಟ್ರು ಎಂ.ಸಿ.ಪಾಪಣ್ಣ ಅವರ ಸಂಪರ್ಕ ಸಿಕ್ಕಿತ್ತು. ಎಂ.ಎ. ಮುಗಿಸಿ ಕಾಲೇಜು ಉಪನ್ಯಾಸಕಿ ಆಗಬೇಕು ಅಂದುಕೊಂಡಿದ್ದೆ. ಜತೆಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕು ಎಂದುಕೊಂಡಿದ್ದೆ. ಎಲ್‌.ಎಲ್‌.ಬಿ ಮುಗಿಸಿದರೆ ಸ್ಟೈಫಂಡ್ ಸಿಗುತ್ತೆ. ಅದರಲ್ಲಿ ಮತ್ತೇನಾದರೂ ಓದಬಹುದು ಎನ್ನುವ ಆಸೆಯಿತ್ತು. ಪಾಪಣ್ಣ ಅವರು ಹುರಿದುಂಬಿಸಿದ್ದರಿಂದ ಎಲ್‌.ಎಲ್‌.ಬಿಗೆ 2017ರಲ್ಲಿ ಪ್ರವೇಶ ಪಡೆದು, 2021ರಲ್ಲಿ ಮುಗಿಸಿದೆ. ಅದೇ ವರ್ಷ ಸಿವಿಲ್ ನ್ಯಾಯಾಧೀಶರ ನೇಮಕಾತಿ ಪರೀಕ್ಷೆಯ ಪ್ರಿಲಿಮ್‌ನರಿ ಹಂತದಲ್ಲಿ ಪಾಸಾದೆ. ವೈವಾದಲ್ಲಿ ಫೇಲಾದೆ. ಎರಡನೇ ಪ್ರಯತ್ನ ಮಾಡುವಾಗಲೇ ಬೆನ್ನುಹುರಿಯಲ್ಲಿ ಸಮಸ್ಯೆಯಾಯಿತು. ಆದರೂ ಪ್ರಿಲಿಮ್‌ನರಿ ಬರೆದೆ. ಓದುವಾಗ ಕುಳಿತ ಭಂಗಿ ಸರಿ ಇಲ್ಲದ ಕಾರಣದಿಂದ ಹೀಗಾಗುತ್ತದೆ ಎಂದು ವೈದ್ಯಕೀಯ ವರದಿ ಬಂತು. ಶಸ್ತ್ರಚಿಕಿತ್ಸೆಯೂ ನಡೆಯಿತು. ಇಡೀ ವರ್ಷ ಹಾಸಿಗೆಯಲ್ಲಿಯೇ ಇರಬೇಕಾಯಿತು. ಆರೋಗ್ಯ ಚೇತರಿಸಿಕೊಂಡ ಮೇಲೆ ಮೂರನೇ ಪ್ರಯತ್ನ ಮಾಡಿದೆ. ಅದರಲ್ಲಿ ಯಶಸ್ವಿಯಾಗಿರುವುದಕ್ಕೆ ಖುಷಿ ಇದೆ. ಇಡೀ ಕುಟುಂಬದಲ್ಲಿ ನಾನೇ ಇಷ್ಟು ಓದಿದ್ದು. ಈ ಬಗ್ಗೆ ಮನೆಯವರಿಗೆಲ್ಲ ಹೆಮ್ಮೆ ಇದೆ.

- **ಪರೀಕ್ಷೆ ತಯಾರಿ ಹೇಗಿತ್ತು?**

ಮೊದಲ ಬಾರಿಗೆ ಪರೀಕ್ಷೆ ಬರೆಯುವಾಗ ತುಮಕೂರಿನಲ್ಲಿ ಹದಿನೈದು ದಿನಗಳ ಕಾಲ ಕೋಚಿಂಗ್ ತೆಗೆದುಕೊಂಡಿದ್ದೆ ಅಷ್ಟೆ. ಆದಾದ ಮೇಲೆ ಪ್ರತಿ ವಿಷಯಗಳ ಮೇಲೆ ನಾನೇ ಸ್ವಯಂ ವೇಳಾಪಟ್ಟಿ ಹಾಕಿಕೊಂಡು ಅದರ ಅನ್ವಯ ಬೆಳಿಗ್ಗೆ 8ರ ನಂತರ ರಾತ್ರಿ 11ರವರೆಗೆ ಮಧ್ಯೆ ವಿರಾಮ ತೆಗೆದುಕೊಂಡು ಓದುತ್ತಿದ್ದೆ. ಲಾಯರ್ಸ್ ಯೂನಿಯನ್ 'ಎಐಎಲ್‌ಯು' ಸಂಯೋಜಿಸುತ್ತಿದ್ದ ಬೋಧನಾ ತರಗತಿಗಳ ಆಡಿಯೊಗಳನ್ನು ಹೆಚ್ಚು ಕೇಳುತ್ತಿದ್ದೆ. ಅದರ ಟಿಪ್ಪಣಿ ಮಾಡಿಕೊಳ್ಳಲು ಶುರು ಮಾಡಿದೆ. ಅದರಲ್ಲಿಯೂ ನ್ಯಾಯಾಧೀಶರಾದ ಎಚ್‌.ಆರ್‌. ರವಿಕುಮಾರ್ ಅವರ ಬೋಧನಾ ಆಡಿಯೊಗಳು ಪರೀಕ್ಷೆಯಲ್ಲಿ ಯಶಸ್ಸು ಪಡೆಯಲು ಸಹಾಯ ಮಾಡಿದವು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

38. Given below is a profile, write a paragraph using the clues given below:

Sudhakar
Age: 40 years
Date of Birth: 25th October
Qualification: MBA
Place of Birth: Bellary
Name of the spouse: Smt. Radhika-homemaker
Daughter: Latha - studying in 7th Standard
Work experience : Working as Manager at Ranbaxy India Ltd, Chennai.

Ans:
Mr. Sudhakar is a middle aged man about fourty years old living in Chennai. He was born on 25th of October in Bellary District. He has completed his Masters in Business Administration i.e., MBA . His spouse is Radhika, who is a home-maker. He has a daughter Latha who is studying in 7th grade. He is working as Manager at Ranbaxy India Ltd, Chennai.

39. Develop the story using the clues given below:
In a village - a clever elephant – there a river nearby - go for bath daily - passing by a tailor shop - The tailor - bananas daily - one day bananas were not given- pricked needle - elephant angry - came with muddy water in its trunk - sprayed - tailor's shop dirty - he repented.
Ans:-
Once a clever elephant was living in a village.There was a river nearby the village in which the elephant would go for a bath daily. On its way, the elephant would take a quick detour passing by a tailor shop. The tailor was fond of elephants, so he gave bananas to it daily, this became a habit for both. On one such day the tailor was not in a pleasant mood and so he forgot to give banana to the elephant. The elephant decided to throw a tantrum which in turn irritated the tailor leading him to prick the elephant with a needle. The elephant became angry and brought some muddy water in its trunk and sprayed on the tailor's shop. The shop became very dirty, and the tailor repented for his action.
Moral: Think before you act.

40.Write a letter to your friend, inviting her and her family to attend on your brother's first birthday on 1st of January.
Ans :

Sangeetha
24, 3rd cross,
Bender Extension.
Gadag
03/11/ 2023

Dear Janaki,

We all are Well and wish the same with all of there. Its long time since we met.

It is my baby brother Ramesh's birth day on 1st January. We have a pooja ceremony at 10.30 am. I take this opportunity to invite you and your parents to attend his first birthday and bless him. We all can have a good time here. Please reply soon about your date of arrival. Please convey my respects to ant and uncle.

Awaiting for your arrival

Your lovingly.
Sangeetha

(OR)

Write a informal letter to your father, telling him about performance in formative assessments and summative assessment of 9th standard. And tell him about your preparation for 10th standard exams.
Ans :
My dear father.

I am safe and in good health. How are you? I hope it's good on your side as well. I received your letter and noted the contents.

I'm very glad to write to you that I performed extremely well in my formative and summative assessments, scoring 92% or A+ grade in my 9th std. For the coming grade, since I am planning to join a reputed college I have decided to raise my bar and get better scores, therefore I am determined to prepare working very hard. Everyday I study for about 5-6 hours and practice the same before going to bed . I'm sure that I'll be able to score really well in my Board exams.

Please convey my due respects to grandparents and Mother. I hope to receive you reply at the earliest.

Your son,
Manjunath

To
Mr. Shiv Narayan Gowda
At and Post:- Kadime
TQ :- KUMTA
Dt:- Utter Kannada

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

REVISION : MODEL QUESTIONS

27. Find the two positive number x and y such that $x + y = 60$ and xy^3 is maximum.

Ans:- $x + y = 60 \Rightarrow y = 60 - 2$

$f(x) = x(60-x)^3$

$f^1(x) = -x.\,3(60-x)^2 + (60-x)^3$

$= (60-x)^2(-3x + 60 - x) = (60-x)^2(60-4x)$

$f^{11}(x) = -4(60-x)^2 - 2(60-4x)(60-x)$

$f^1(x) = 0 \Rightarrow 60 - 4x = 0 \Rightarrow x = 15$

$f^{11}(15) < 0;$

f(x) is maximum at $x = 15$

$y = 60 - 15 = 15;$

∴ Two numbers are 15 & 45

28. Evaluate $\int \sin 3x \,.\, \cos 4x \, dx$.

Ans :– $I = \int \frac{1}{2}\left[\sin(3x+4x) + \sin(3x-4x)\right]dx$

$= \frac{1}{2}\int \sin 7x - \frac{1}{2}\int \sin x$

$= \frac{1}{2}\left(\frac{-1}{4}\cos 7x\right) - \frac{1}{2}(-\cos x) + c$

$= \frac{-1}{-14}\cos 7x + \frac{1}{2}\cos x + c = \frac{1}{2}\left[\frac{-1}{7}\cos 7x + \cos x\right] + c$

29. Determine the area of the region bounded by $y^2 = x$ and the line $x = 1$, $x = 4$ and x – axis in 1st quadrant.



Ans :– Required area $A = \int_1^4 \sqrt{x}\,dx = \frac{2}{3}x^{2.3}\Big]_1^4 = \frac{14}{3}$ Sq units

30. Form the differential equation of the family of circles touching the X axis at origin.



Ans:- $x^2 + y^2 + k^2 - 2ky = k^2$

$x^2 + y^2 - 2yk = 0$ ....(1)

$2x + 2y\,y^1 - 2y^1k = 0 \Rightarrow x + yy^1 - y^1k = 0$

$\Rightarrow y^1k = x + yy^1 \Rightarrow k = \frac{x + yy^1}{y^1}$

Substituting the value of k in eq (1) We get

$(x^2 - y^2)\,y^1 - 2xy = 0$

31. If two vectors $\vec{a}$ and $\vec{b}$ such that $|\vec{a}| = 2$ $|\vec{b}| = 3$ and $\vec{a} \cdot \vec{b} = 4$. Find $|\vec{a} - \vec{b}|$.

Ans :– Consider $|\vec{a}-\vec{b}|^2 = |\vec{a}|^2 + |\vec{b}|^2 - 2\vec{a}.\vec{b} = 4 + 9 - 8 = 5$

$|\vec{a}-\vec{b}| = \sqrt{5}$

32. Find a unit vector perpendicular to each $\vec{a}+\vec{b}$ and $\vec{a}-\vec{b}$ of where $\vec{a} = \hat{i} + \hat{j} + \hat{k}$ and $\vec{b} = \hat{i} + 2\hat{j} + 3\hat{k}$

Ans :– $\hat{n} = \frac{(\vec{a}+\vec{b}) \times (\vec{a}-\vec{b})}{|(\vec{a}+\vec{b}) \times (\vec{a}-\vec{b})|}$

is the unit vector perpendicular to $\vec{a}+\vec{b}$ and $\vec{a}-\vec{b}$

$\vec{a}+\vec{b} = 2\hat{i} + 3\hat{j} + 4\hat{k}$; $\vec{a}-\vec{b} = -\hat{j} - 2\hat{k}$

$(\vec{a}+\vec{b}) \times (\vec{a}-\vec{b}) = \begin{vmatrix} \hat{i} & \hat{j} & \hat{k} \\ 2 & 3 & 4 \\ 0 & -1 & -2 \end{vmatrix} = -2\hat{i} + 4\hat{j} - 2\hat{k}$

$(\vec{a}+\vec{b}) \times (\vec{a}-\vec{b}) = \sqrt{4+16+4} = \sqrt{24}$

∴ Unit vector is $\hat{n} = \frac{-2\hat{i} + 4\hat{j} - 2\hat{k}}{\sqrt{24}}$

33. Find the shortest distance between the line l_1 and l_2 whose vector equations are

$\vec{r} = \hat{i} + \hat{j} + \lambda(2\hat{i} - \hat{j} + \hat{k})$

$\vec{r} = 2\hat{i} + \hat{j} - \hat{k} + r(3\hat{i} - 5\hat{j} + 2\hat{k})$

Ans:- $\vec{a_1} = \hat{i} + \hat{j}$; $\vec{b_1} = 2\hat{i} - \hat{j} + \hat{k}$;

$\vec{a_2} = 2\hat{i} + \hat{j} - \hat{k}$; $\vec{b_2} = 3\hat{i} - 5\hat{j} + 2\hat{k}$

$\vec{a_2} - \vec{a_2} = (2\hat{i} + \hat{j} - \hat{k}) - (\hat{i} + \hat{j}) = \hat{i} - \hat{k}$

$\vec{b_1} \times \vec{b_2} = \begin{vmatrix} \hat{i} & \hat{j} & \hat{k} \\ 2 & -1 & 1 \\ 3 & -5 & 2 \end{vmatrix} = 3\hat{i} - \hat{j} - 7\hat{k}$

∴ $|\vec{b_1} \times \vec{b_2}| = 59$

Shortest distance, $d = \left|\frac{(\vec{b_1} \times \vec{b_2}).(\vec{a_2} - \vec{a_1})}{|\vec{b_1} \times \vec{b_2}|}\right|$

$= \left|\frac{3 - 0 + 7}{\sqrt{59}}\right| = \frac{10}{\sqrt{59}}$

ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ: ಎಸ್‌ಮುಖಿ(1)ಸಿ-42/2023-24 ದಿನಾಂಕ: 27.02.2024

ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿ.ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಸರ್ಜಿಕಲ್/ಡಿಸ್ಪೋಸಬಲ್/ ಕೆಮಿಕಲ್‌ಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿ.ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 13.03.2024 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.inನ್ನು ಸಂಪರ್ಕಿಸಲು ಕೋರಿದೆ.

ಸಹಿ/- ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR / MNG / 1451/ MPL / 23-24

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ತಿದ್ದುಪಡಿ ಟೆಂಡರ್ ಪ್ರಕಟಣೆ

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕ್ ವ್ಯಾಪ್ತಿಯ 16 ಸಂಖ್ಯೆಯ ರಸ್ತೆ ಕಾಮಗಾರಿಗಳಿಗೆ ಕರೆಯಲಾಗಿದ್ದ ಟೆಂಡರ್ ಅನ್ನು ತಾಂತ್ರಿಕ ಕಾರಣಗಳಿಂದಾಗಿ ಮುಂದೂಡಲಾಗಿದ್ದು, ಅದರಂತೆ ಸದರಿ ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ದಿ: 29.02.2024 ರಿಂದ ದಿ:07.03.2024 ರವರೆಗೆ ವೀಕ್ಷಿಸಬಹುದಾಗಿದೆ. ಉಳಿದಂತೆ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು. ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ- eeypd2tmk@gmail.com

---

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಬೆಂಗಳೂರು ರಸ್ತೆ, ಚಳ್ಳಕೆರೆ.
ದೂ.ಸಂ: 08195-200307 E.Mail I.D.: ubpee06@gmail.com

ಸಂಖ್ಯೆ:ಕಾಇಂ/ವಿಜನಿನಿ/ಭಮೇಯೋ/ವಿಭಾಗ-06/ಚಳ್ಳಕೆರೆ/ಟೆಂಡರ್ ಪ್ರಕಟಣೆ/2023-24/1290, ದಿನಾಂಕ:27.02.2024

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನಂ.148, ಎಂಬೆಸಿ ಸ್ಕ್ವೇರ್, ಇನ್‌ಫ್ಯಾಂಟ್ರಿ ರೋಡ್, ಬೆಂಗಳೂರು-560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಚಳ್ಳಕೆರೆ ಕಛೇರಿ ವ್ಯಾಪ್ತಿಯಲ್ಲಿ ಬರುವ 2023-24ನೇ ಸಾಲಿನಲ್ಲಿ ವಿಭಾಗ ಹಾಗೂ ಉಪವಿಭಾಗ ಕಛೇರಿಗಳಿಗೆ ಮಾನವ ಸಂಪನ್ಮೂಲ ಸೇವೆಯ ಮೂಲಕ ನೌಕರರನ್ನು (Supply of man power agency) ಒದಗಿಸುವ ಇಂಡೆಂಟ್ ಸಂಖ್ಯೆ:VJNL/2023-24/SE0034, ಟೆಂಡರ್‌ಗಿಟ್ಟ ಮೊತ್ತ ರೂ.7.22 ಲಕ್ಷಗಳಿಗಾಗಿ, ಈ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಖಾಲಿ ಟೆಂಡರ್ ದಾಖಲೆಗಳನ್ನು ದಿನಾಂಕ:27.02.2024 ರಿಂದ 05.03.2024ರ ಸಾಯಂಕಾಲ 5.00 ಗಂಟೆಯವರೆಗೆ ಕೆಪಿಪಿ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. https://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ನಿಗದಿ ಪಡಿಸಿದ ಇ-ಎಂಡಿ /ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.inನ ಮೂಲಕ ಮಾಹಿತಿ ಪಡೆಯಬಹುದು. ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ: 06.03.2024ರ ಸಾಯಂಕಾಲ 5.00 ಗಂಟೆಯ ನಂತರ ಕಾರ್ಯಪಾಲಕ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ವಿಭಾಗ ಕಛೇರಿಯಲ್ಲಿ ತೆರೆಯಲಾಗುವುದು ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

DIPR/CTA/MCA/634/2022-23

ಸಹಿ/ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭ.ಮೇ.ಯೋ. ವಿಭಾಗ ನಂ.06, ಚಳ್ಳಕೆರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಕೆರೆಗಳು-ಯಲಹಂಕ)
3ನೇ ಮಹಡಿ, ಅನೆಕ್ಸ್ ಕಟ್ಟಡ-3, ನರಸಿಂಹರಾಜ ಚೌಕ, ಬೆಂಗಳೂರು – 560 002.

ಸಂಖ್ಯೆ: ಕಾಪಾಅ(ಕೆರೆಗಳು-ಯಲ)/ಟೆಂಡರ್-06/2023-24 ದಿನಾಂಕ: 28.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ದತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ /ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿ-ಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಯಲಹಂಕ ಕ್ಷೇತ್ರದಲ್ಲಿ ಕೆರೆಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ ₹.200.00 ಲಕ್ಷಗಳು ಇಎಂಡಿ ಮೊತ್ತ: ₹.3,00,000.00**
2	ಯಲಹಂಕ ಕೆರೆಯಲ್ಲಿ ಸುಧಾರಣೆಗಳನ್ನು ಮಾಡುವುದು, ಕೋಗಿಲು ಕೆರೆ ಮತ್ತು ಕಟ್ಟಿಗೇನಹಳ್ಳಿ ಕೆರೆಗಳಲ್ಲಿ ಕೊಳಚೆ ನೀರು ಮಾರ್ಗ ಬದಲಾವಣೆ ಚರಂಡಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. ನರಸೀಪುರ ಕೆರೆ [ಸ.ನಂ. 20], ನರಸೀಪುರ ಕೆರೆ [ಸ.ನಂ.26] ಮತ್ತು ವೀರಸಾಗರ ಕೆರೆಗಳಲ್ಲಿ ಪುನಶ್ಚೇತನ ಕಾಮಗಾರಿಗಳು ಮತ್ತು ಕೊಳಚೆ ನೀರು ಮಾರ್ಗ ಬದಲಾವಣೆ ಚರಂಡಿ ನಿರ್ಮಾಣ ಮಾಡುವುದು. [ಪ್ಯಾಕೇಜ್ ಅಡಿಯಲ್ಲಿ] **ಕಾಮಗಾರಿಯ ಅಂದಾಜು ಮೊತ್ತ : ₹ 1,200.00 ಲಕ್ಷಗಳು ಇಎಂಡಿ: ₹ 12,00,000.00 [₹ 1.00 ಲಕ್ಷ ಆನ್‌ಲೈನ್ ಮೂಲಕ ಮತ್ತು ಉಳಿಕೆ ಮೊತ್ತ ₹ 11.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮೂಲಕ]**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ದಿನಾಂಕ: **29.02.2024**ರ ಸಂಜೆ **4:00** ಗಂಟೆಯ ನಂತರ ಲಭ್ಯವಿರುತ್ತದೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **07.03.2024**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **14.03.2024**ರ ಸಂಜೆ **4:00** ಗಂಟೆಯವರೆಗೆ (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **15.03.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರಯುವುದನ್ನು: (ತಾಂತ್ರಿಕ ಬಿಡ್‌ಗೆ ಅನುಮೋದನೆ) ದೊರೆತ ನಂತರ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ಕೆರೆಗಳು-ಯಲಹಂಕ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, MPED-C,
ಅನೆಕ್ಸ್-2 ಕಟ್ಟಡ, ನೆಲ ಮಹಡಿ, ಬೃಬೆಂಮಪಾ
ಪ್ರಧಾನ ಕಚೇರಿ ಆವರಣ, ಎನ್.ಆರ್. ಚೌಕ, ಬೆಂಗಳೂರು-560 002.

ಸಂಖ್ಯೆ:ಕಾಪಾಅ/MPED-C/ಟೆಂಡರ್/07/2023-24 ದಿನಾಂಕ: 28-02-2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, MPED-C, ಬೃಬೆಂಮಪಾ, ಬೆಂಗಳೂರು ರವರು ಅರ್ಹ ಟೆಂಡರ್‌ದಾರರಿಂದ ಕೆಳ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1)	**ಬೆಂಗಳೂರಿನ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಅನೆಕ್ಸ್-3 ಕಟ್ಟಡದಲ್ಲಿ ಅಗ್ನಿಶಾಮಕ ಕಾರ್ಯಗಳೊಂದಿಗೆ ಫೈರ್ ಎಸ್ಕೇಪ್ ಮೆಟ್ಟಿಲುಗಳ ನಿರ್ಮಾಣ. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ).: 688.30.ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ): 10.33.**

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಿಂದ **ದಿನಾಂಕ: 29-02-2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)** ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ **ಕೊನೆಯ ದಿನಾಂಕ: 14-03-2024 ರ ಸಂಜೆ 5:30 ಗಂಟೆಯೊಳಗೆ. 3)** ಪೂರ್ವ ಬಿಡ್ ಸಭೆಯನ್ನು **ಮುಖ್ಯ ಅಭಿಯಂತರವರ ಕಛೇರಿ (ಯೋಜನಾ ಕೇಂದ್ರ) 4ನೇ ಮಹಡಿ ಅನೆಕ್ಸ್-3 ಕಟ್ಟಡ,** ಬೃಬೆಂಮಪಾ **ಪ್ರಧಾನ ಕಚೇರಿ ಆವರಣ ಎನ್.ಆರ್. ಚೌಕ, ಬೆಂಗಳೂರು-560002** ಇಲ್ಲಿ **ದಿನಾಂಕ: 01-03-2024 ರಂದು ಸಂಜೆ 4:00 ಗಂಟೆಗೆ** ನಡೆಸಲಾಗುವುದು. **4)** ಟೆಂಡರ್ ವಿಚಾರಣೆಗಳಿಗೆ **ಕೊನೆಯ ದಿನಾಂಕ: 06-03-2024 ರ ಸಂಜೆ 5:30 ಗಂಟೆಯವರೆಗೆ. 5)** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 15-03-2024ರ ಸಂಜೆ 5:30 ಗಂಟೆಗೆ. 6)** ಈ ಟೆಂಡರ್ ಸೂಚನೆಯನ್ನು ಬೃಬೆಂಮಪಾಲಿಕೆಯ ವೆಬ್‌ಸೈಟ್: **www.bbmp.gov.in** ನಲ್ಲಿಯೂ ನೋಡಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, MPED-C, ಬೃಬೆಂಮಪಾ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು-560 023
ದೂರವಾಣಿ: 080-2955 7021, ಇ-ಮೇಲ್: pdksaps@gmail.com

ಸಂಖ್ಯೆ : ಕೆಎಸ್‌ಎಪಿಎಸ್/ಪಿಆರ್‌ಸಿ/21/2023-24 ದಿನಾಂಕ :26.02.2024

ಇ-ಸಂಗ್ರಹಣ ವೇದಿಕೆ ಮೂಲಕ ಟೆಂಡರ್ ಮರು ಆಹ್ವಾನ ಪ್ರಕಟಣೆ

ಲ್ಯಾಪ್‌ಟಾಪ್‌ಗಳು, ಪ್ರೊಜೆಕ್ಟರ್ಸ್ ಮತ್ತು ಸ್ಕ್ರೀನ್ಸ್ ಗಳನ್ನು ಸರಬರಾಜು ಮಾಡುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ್ (ದ್ವಿಲಕೋಟೆಯಲ್ಲಿ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **11.03.2024 ರ ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ **https://kppp.karnataka.gov.in**

ಸಹಿ/- ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ

ವಾಸಾಸಂಇ/ವಾಪ್ರ/ಜಿಎ/3921/2023-24

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಚೇರಿ, ಪಿಡಬ್ಲ್ಯೂಡಿ ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560001

ಸಂಖ್ಯೆ: 26/ 2023-24 ದಿನಾಂಕ: 23.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಇವರು ಮುಂದೆ ವಿವರಿಸಿರುವಂತೆ ಸಲಹಾ ಸೇವೆಗಳಿಗಾಗಿ ಅರ್ಹ ಟೆಂಡರುದಾರರುಗಳಿಂದ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿಯ ಹೆಸರು: **ಎಲೆಕ್ಟ್ರಾನಿಕ್ ಸಿಟಿ ಹಂತ-1, ಬೆಂಗಳೂರು ಇಲ್ಲಿ ಫಾರಂ/ಅಗ್ರಿ ಇನ್ನೋವೇಷನ್ ಸೆಂಟರ್‌ನ ಉದ್ದೇಶಿತ ನಿರ್ಮಾಣಕ್ಕಾಗಿ ಸಲಹಾ ಸೇವೆಗಳು. ಪಿಡಬ್ಲ್ಯೂಡಿ/2023-24/ಎಸ್‌ಇ0111/ಕರೆ-3. ಟೆಂಡರ್ ಮೊತ್ತ ರೂ.100.00 ಲಕ್ಷ. ಅವಧಿ: ಬಿಡ್ ದಸ್ತಾವೇಜಿನ ಅನುಸಾರ.** ಟೆಂಡರ್ ಕಾಮಗಾರಿಯ ವಿವರಗಳನ್ನು ಕೆಲಸದ ಎಲ್ಲಾ ದಿನಗಳಂದು ಮೇಲಿನ ಕಚೇರಿಯಿಂದ ಕೆಲಸದ ಸಮಯದಲ್ಲಿ ಪಡೆದುಕೊಳ್ಳಬಹುದು. ಇಎಂಡಿ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿದೆ. ಸದರಿ ಕಾಮಗಾರಿಗೆ ಟೆಂಡರ್ ಸಲ್ಲಿಸಲು ಆಸಕ್ತಿ ಹೊಂದಿರುವ ಅರ್ಹ ಗುತ್ತಿಗೆದಾರರು ಟೆಂಡರ್‌ಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಬಹುದು. (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್: **https://kppp.karnataka.gov.in** ಇಲ್ಲಿಂದ **ದಿನಾಂಕ: 22.02.2024ರ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಕಡೆಯ **ದಿನಾಂಕ: 02.03.2024 ರಂದು ಸಂಜೆ 5.30 ಗಂಟೆಯ ವರೆಗೆ.** (2) ಬಿಡ್ ಪೂರ್ವ ಸಭೆ **ದಿನಾಂಕ: 29.02.2024 ರಂದು ಮಧ್ಯಾಹ್ನ 2.00 ಗಂಟೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04.03.2024 ರಂದು ಸಂಜೆ 4.30 ಗಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 05.03.2024 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಸದರಿ ಕಚೇರಿಯನ್ನು ಸಂಪರ್ಕಿಸಿ.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ-ಸಿ.ಪಿ/3927/ಕೆಎಸ್‌ಎಂಸಿಎ/2023-24

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಧಾರವಾಡ ವಿಭಾಗ,
ಟೋಲ್‌ನಾಕಾ, ಧಾರವಾಡ. ದೂರವಾಣಿ: 0836-2747842
ಇ-ಮೇಲ್: ksdb.dhardiv@gmail.com

ಸಂ.:ಕಕೊಅಮ/ಕಾಪಾಅ/ಧಾ.ವಿ/ತಾಂ.ಶಾ/ಟೆಂ.ಪ್ರ-1/2023-24/1049 ದಿನಾಂಕ: 26-02-2024

ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ದ್ವಿ-ಲಕೋಟೆ) KW-4

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ವಿಭಾಗಕ್ಕೆ ಸಂಬಂಧಿಸಿದಂತೆ, ಧಾರವಾಡ ಹಾಗೂ ಗದಗ ಉಪ-ವಿಭಾಗದ ವ್ಯಾಪ್ತಿಯಲ್ಲಿ ಬರುವ 11 ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ / ವಿಚಾರಣೆ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 27-02-2024 ರಿಂದ ಡೌನಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **05-03-2024 ರಂದು ಸಾಯಂಕಾಲ 5.00 ಗಂಟೆಯವರೆಗೆ.** ಸ್ವೀಕೃತವಾದ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **06-03-2024 ರಂದು ಸಾಯಂಕಾಲ 5.00 ಗಂಟೆಯ ನಂತರ ತೆರೆಯಲಾಗುವುದು.**

ಕಾಮಗಾರಿಗಳ ಕನಿಷ್ಠ ಟೆಂಡರ್ ಮೊತ್ತ **ರೂ. 129.90 ಲಕ್ಷಗಳು** ಹಾಗೂ ಗರಿಷ್ಠ ಮೊತ್ತ **ರೂ. 204.63 ಲಕ್ಷಗಳು** ಇದ್ದು, ಟೆಂಡರ್‌ನ ಇ.ಎಮ್.ಡಿ. ಗುತ್ತಿಗೆದಾರರ ಅರ್ಹತೆ / ಟೆಂಡರ್‌ನ ನಿಯಮ / ಟೆಂಡರ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,
ಧಾರವಾಡ ವಿಭಾಗ, ಧಾರವಾಡ.

ವಾಸಾಸಂಇ/ಧಾರವಾಡ/857/ಅಡ್ವರ್ಟೋಕ್/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಶಿವಾಜಿನಗರ
ಕ್ವೀನ್ಸ್ ರಸ್ತೆ, ಬೆಂಗಳೂರು – 560 052.

ಸಂಖ್ಯೆ: ಕಾಪಾಅ/ಶಿವಿ/ಟೆಂಡರ್/15/2023-24 ದಿನಾಂಕ: 28.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಶಿವಾಜಿನಗರ ವಿಭಾಗ), ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಬೃ.ಬೆಂ.ಮ.ಪಾಲಿಕೆ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ವಾರ್ಡ್ ಸಂಖ್ಯೆ-130, ಭಾರತಿನಗರದ ಚಿಕ್ಕ ಬಜ಼ಾರ್ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. [2ನೇ ಕರೆ] (ಸಾಮಾನ್ಯ ವರ್ಗ) **ಕಾಮಗಾರಿಯ ಅಂದಾಜು ಮೊತ್ತ ₹.50.00 ಲಕ್ಷಗಳು ಇಎಂಡಿ ಮೊತ್ತ: ₹.1,00,000.00**
2.	ವಾರ್ಡ್ ಸಂಖ್ಯೆ-117ರ ಬೆಂಗಳೂರು, ಪ್ಯಾಲೇಸ್ ರಸ್ತೆಯ ಮತ್ತು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ರಾಜ್ಯ ಪ್ರಧಾನ ಕಚೇರಿ ಮೈದಾನದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.(ಸಾಮಾನ್ಯ ವರ್ಗ) **ಕಾಮಗಾರಿಯ ಅಂದಾಜು ಮೊತ್ತ ₹.85.00 ಲಕ್ಷಗಳು ಇಎಂಡಿ ಮೊತ್ತ: ₹.1,70,000.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **29.02.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **07.03.2024**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **05.03.2024**ರ ಮಧ್ಯಾಹ್ನ **12.00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **11.03.2024**ರ ಸಂಜೆ **4:30** ಗಂಟೆಗೆ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸ ದಿನದಂದು ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಶಿವಾಜಿನಗರ ವಿಭಾಗ

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಅರಣ್ಯ ಭವನದ ಪಕ್ಕದ ಕಟ್ಟಡ, 18ನೇ ಅಡ್ಡರಸ್ತೆ. ಮಲ್ಲೇಶ್ವರಂ, ಬೆಂಗಳೂರು-560 003
ಇ-ಮೇಲ್ : dcfurban82@yahoo.co.in

ಸಂಖ್ಯೆ:ಎ2/ಬಿಯುಡಿ/ಕಾಮಗಾರಿ/ಸಿಆರ್-139/2023-24 ದಿನಾಂಕ: 23.02.2024

ಇ-ಟೆಂಡರ್ ಪ್ರಕಟಣೆ

2024-25ನೇ ಸಾಲಿನಲ್ಲಿ ಬೆಂಗಳೂರು ನಗರ ಅರಣ್ಯ ವಿಭಾಗದ ವಿವಿಧ ವಲಯಗಳಲ್ಲಿ ವಿವಿಧ ಯೋಜನೆಗಳಡಿ ಮುಂದುವರಿದ ಕಾಮಗಾರಿಗಳಾದ ಸಸಿಗಳ ನಿರ್ವಹಣೆ, ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಇ-ಟೆಂಡರ್ ಪ್ರಕಟಣೆ

* * * *

2024-2ನೇ ಸಾಲಿನಲ್ಲಿ ಬೆಂಗಳೂರು ನಗರ ಅರಣ್ಯ ವಿಭಾಗದ ವಿವಿಧ ವಲಯಗಳಲ್ಲಿ ವಿವಿಧ ಯೋಜನೆಗಳಡಿ ಮುಂದುವರಿದ ಕಾಮಗಾರಿಗಳಾದ ಸಸಿಗಳ ನಿರ್ವಹಣೆ, ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದರರಾಗಿ ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರು ಮಾತ್ರ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್ **(https://kppp.karnataka.gov.in)** ಮೂಲಕ ಆಹ್ವಾನಿಸಲಾಗಿದೆ. ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು **ದಿನಾಂಕ: 15.03.2024ರು ಅಪರಾಹ್ನ 5.00 ಗಂಟೆಗೆ.** ತಾಂತ್ರಿಕ ಬಿಡ್‌ಗಳನ್ನು **ತೆರೆಯುವ ದಿನಾಂಕ: 16.03.2024ರ ಅಪರಾಹ್ನ 5.00 ಗಂಟೆಗೆ** ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ **ದಿನಾಂಕ: 18.03.2024ರ ಅಪರಾಹ್ನ 5.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದು ವೇಳೆ ದಿನಾಂಕ 15.03.2024 ರಂದು ನಡೆಯುವ ಟೆಂಡರುಗಳಲ್ಲಿ ಗುತ್ತಿಗೆದಾರರು ಭಾಗವಹಿಸದೇ ಇದ್ದಲ್ಲಿ ಇದನ್ನೇ ಮರುಟೆಂಡರ್ ಪ್ರಕಟಣೆ ಎಂದು ತಿಳಿದು ದಿನಾಂಕ **22.03.204ರಂದು 5.00 ಗಂಟೆಯವರೆಗೆ** ಇ-ಟೆಂಡರುಗಳನ್ನು ಸ್ವೀಕರಿಸಲಾಗುವುದು. ದಿನಾಂಕ **25.03.2024ರ ಅಪರಾಹ್ನ 5.00 ಗಂಟೆಗೆ** ತಾಂತ್ರಿಕ ಬಿಡ್ಡುಗಳನ್ನು ತೆರೆದು ಅದರ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ **26.03.2024 ರ ಅಪರಾಹ್ನ 5.00 ಗಂಟೆಗೆ** ಆರ್ಥಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **(https://kppp.karnataka.gov.in)** ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/3940/2023-24

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಛೇರಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು-09. ದೂ.ಸಂ: 0821- 2545894, ಇ-ಮೇಲ್: kwbcemys2014@gmail.com

ಟೆಂಡರ್ ಅಧಿಸೂಚನೆ

ಅಮೃತ್-2.0 ಯೋಜನೆಯಡಿ ಶೃಂಗೇರಿ ಪಟ್ಟಣಕ್ಕೆ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ, DBOT ಇಂಡೆಂಟ್ ನಂ: KUWSDB/2023-24/WS/WORK_INDENT94/CALL-2 ರಲ್ಲಿ **ರೂ.17.74 ಕೋಟಿಗಳಿಗೆ** ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳಿಗೆ – https://kppp.karnataka.gov.in

ಸಹಿ/- ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು

DIPR/DDMYS/KSMCA/1185/2023-24

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ನಂ. 55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560020.
ದೂರವಾಣಿ: 23460085 / 8949 / 2436, ಫ್ಯಾಕ್ಸ್: 080-23567060
ಇಮೇಲ್: ksdb.ho@gmail.com, kscb_blr@rediffmail.com
ವೆಬ್‌ಸೈಟ್ : https://ksdb.karnataka.gov.in

ಸಂ: KSDB/EE/No. 1 Div/STT/PB/IFT-10/2023-24/1072 ದಿನಾಂಕ: 27.02.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, 1ನೇ ವಿಭಾಗ, ಬೆಂಗಳೂರು ರವರು **ಒಟ್ಟು 13 ಕಾಮಗಾರಿಗಳಿಗೆ** ಕೆಡಬ್ಲ್ಯೂ-4 ನಂತೆ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. 13 ಕಾಮಗಾರಿಗಳ ಅಂದಾಜು ಮೊತ್ತ **ರೂ. 140.00 ಲಕ್ಷದಿಂದ 250.00 ಲಕ್ಷಗಳು.** ಟೆಂಡರ್‌ಗಿಟ್ಟ ಮೊತ್ತ **ರೂ. 106.75 ಲಕ್ಷಗಳಿಂದ ರೂ. 211.02 ಲಕ್ಷಗಳು** (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ: **ರೂ. 1,60,200/- ರಿಂದ ರೂ. 3,16,600/-ಗಳು.** ಟೆಂಡರ್‌ಗೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆ: **05.03.2024 ಸಂಜೆ 4.00 ಗಂಟೆಗೆ.** ಟೆಂಡರ್‌ನ ಬಗ್ಗೆ ವಿಚಾರಣೆ ದಿನಾಂಕ: **07.03.2024ರ ಸಂಜೆ 3.00 ಗಂಟೆವರೆಗೆ.** ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **07.03.2024ರ ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12.03.2024ರ ಸಂಜೆ 4.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.03.2024ರ ಸಂಜೆ 5.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು, ನಂ. 1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ಅಥವಾ **www.kppp.karnataka.gov.in**ನಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ನಂ. 1ನೇ ವಿಭಾಗ, ಕಕೊಅಮ, ಬೆಂಗಳೂರು

DIPR/CP/YC/3924/2023-24

ಗುಲಬರ್ಗಾ ವಿಶ್ವವಿದ್ಯಾಲಯ
"ಜ್ಞಾನ ಗಂಗಾ" ಕಲಬುರಗಿ-585 106, ಕರ್ನಾಟಕ
ದೂರವಾಣಿ ಸಂ.: 08472-263202 ಫ್ಯಾಕ್ಸ್: 08472-263206
ಇ-ಮೇಲ್: root@guluni.kar.nic.in

ಕ್ರ.ಸಂ. ಗುವಿಕ/ಆಡಳಿತ-ಉಗ್ರಾಣ/2023-24/ ದಿನಾಂಕ: 28/02/2024

:: ಟೆಂಡರ್ ಅಧಿಸೂಚನೆ ::
ಇ-ಪ್ರೊಕ್ಯೂರಮೆಂಟ್ ಪೋರ್ಟ್‌ಲ್ ಮೂಲಕ ಮಾತ್ರ

ಈ ಕೆಳಗೆ ನಮೂದಿಸಿದ ಕೆಲಸಗಳಿಗಾಗಿ ಗುಲಬರ್ಗಾ ವಿಶ್ವವಿದ್ಯಾಲಯವು ಅರ್ಹ ಟೆಂಡರ್‌ದಾರರಿಂದ ಟೆಂಡರಗಳನ್ನು ಆಹ್ವಾನಿಸಿದೆ.

1) Name of work: Providing Manpower Services through Outsource Agency GU/2023-24/SE0011, 2) Amount put to tender: **Rs. 7,00,00,000/-**, 3) EMD : Rs. 10,50,000/-, 4) Tender type : Two bid system, 5) Ammended Financial Condition : Minimum Service Charge 3.85%, 6) Updated Last date for receipt of tender in e-portal: **05/03/2024**

ಟೆಂಡರ್ ಅಧಿಸೂಚನೆ ಕುರಿತಂತೆ ವಿವರವಾದ ಮಾಹಿತಿಗಾಗಿ ವೀಕ್ಷಿಸಬಹುದಾದ ವೆಬ್‌ಸೈಟ್ https://kppp.karnataka.gov.in ಇರುತ್ತದೆ. ಅಲ್ಲದೆ, ಆಡಳಿತ ವಿಭಾಗದಿಂದ ಕೂಡಾ ಕಛೇರಿ ಸಮಯದಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/906/ಕೆ.ಎಸ್.ಎಂ.ಸಿ.&ಎ/2023-24

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ಇಲಾಖೆ, ಹುಬ್ಬಳ್ಳಿ
ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:1015:2023-24
ದಿನಾಂಕ : 28-02-2024

ಅಲ್ಪಾವಧಿ ಟೆಂಡರ ಪ್ರಕಟಣೆ

KPPP Portal ಪದ್ದತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ದ್ವಿ-ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿಗಳಿಗೆ KPPP Portal ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ KPPP Portal ನಲ್ಲಿ ದಿನಾಂಕ : **29.02.2024** ರಂದು ಬಿಡುಗಡೆಯಾಗುವಂತೆ ಅರ್ಹ ದರ್ಜೆ 1 ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://kppp.karnataka.gov.in ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಯಾವುದೇ ತಿದ್ದುಪಡಿ/ ದಿನಾಂಕಗಳಲ್ಲಿನ ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಈ ಕುರಿತು ಪತ್ಯೇಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: **07.03.2024** ಸಮಯ 16.00 ಘಂಟೆ ಕಾಮಗಾರಿಯ ಹೆಸರು : ಶಿರಸಿಯಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಇಲಾಖೆಯ ನಿವೇಶನದಲ್ಲಿ ಸ್ವಯಂಚಾಲಿತ ವಾಹನಾ ಚಾಲನಾ ಪಥಗಳನ್ನು ನಿರ್ಮಿಸುವುದು. ಟೆಂಡರ್ ಪ್ರಕಟಣೆ ಸಂಖ್ಯೆ : 15/2023-24 (2ನೇ ಕರೆ), ಟೆಂಡರಿಗೆ ಇಟ್ಟ ಅಂದಾಜು ಮೊತ್ತ ರೂ. **6,30,47,000/-**, ಮುಂಗಡ ಠೇವಣಿ ಹಣ ರೂ. **9,45,705/-**

ಹೆಚ್ಚಿನ ವಿವರಗಳಿಗೆ ಸಹಾಯವಾಣಿ (help desk) 91-8046010000, 91-8068948777, 0836-2332383 ಗೆ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ ಹುಬ್ಬಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ,
ಕೃಭಾಜನಿನಿ, ಅರಣ್ಯ ವಿಭಾಗ, ಆಲಮಟ್ಟಿ.ದೂರವಾಣಿ: 08426-281410.

ಸಂ:ಕೃಭಾಜನಿನಿ/ಅರಣ್ಯ/ಡಿಟಿಪಿ/ಎಲ್.ಎಸ್/ಇ-ಟೆಂಡರ್/2023-24/1380
ದಿನಾಂಕ:27.02.2024

2ನೇ ಕರೆ ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ: ಕಛೇರಿ ಟೆಂಡರ ಪ್ರಕಟಣೆ ಪತ್ರ ಸಂ:ಕೃಭಾಜನಿನಿ/ಅರಣ್ಯ/ಡಿಟಿಪಿ/ಎಲ್.ಎಸ್/ಇ-ಟೆಂಡರ್/2023-24/1232 ದಿನಾಂಕ:29.01.2024

ಈ ಕೆಳಗೆ ನಮೂದಿಸಿದ ಲ್ಯಾಂಟಸ್ಕೇಪ್ ಯೋಜನೆಯ 1 ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಡಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in (KBJNL Division Forest Division Almatti-Location) ಪೋರ್ಟಲ್‌ನಲ್ಲಿ ನಮೂದಿಸಿದಂತೆ ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು. ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮುಖಾಂತರ ಪಾವತಿಸತಕ್ಕದ್ದು.

ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಈ ಕೆಳಗಿನಂತಿವೆ.

ಕ್ರ ಸಂ	ವಿವರ	2ನೇ ಕರೆ ಟೆಂಡರ್ ದಿನಾಂಕ
1.	ಟೆಂಡರ್ ಪ್ರಕಟಿಸುವ ದಿನಾಂಕ (ಅ0ದಾಜು)	28.02.2024 ಸಂಜೆ 5.00 ಘಂಟೆವರೆಗೆ
2.	ಪ್ರಿ ಬಿಡ್ ಮೀಟಿಂಗ್	05.03.2024 ಬೆಳಿಗ್ಗೆ 11.00 ಘಂಟೆಗೆ
3.	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	06.03.2024 ಸಂಜೆ 5.00 ಘಂಟೆವರೆಗೆ
4.	ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	08.03.2024 ಬೆಳಿಗ್ಗೆ 11.00 ಘಂಟೆಗೆ
5.	ಆರ್ಥಿಕ ಬಿಡ್ ತೆರೆಯುವ ದಿನಾಂಕ	10.03.2024 ಬೆಳಿಗ್ಗೆ 11.00 ಘಂಟೆಗೆ

ಷರಾ: 1) ದಿನಾಂಕ 05.03.2024 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಿ ಬಿಡ್ ಮೀಟಿಂಗ್‌ನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೃಭಾಜನಿನಿ ಅರಣ್ಯ ವಿಭಾಗ, ಆಲಮಟ್ಟಿ ರವರ ಕಚೇರಿಯಲ್ಲಿ ನಿಗದಿಪಡಿಸಲಾಗಿದೆ. ಸದರಿ ಟೆಂಡರಿಗೆ ಸಂಭಂಧಿಸಿದಂತೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತ ರೂಪದಲ್ಲಿ ದಿನಾಂಕ 04.03.2024 ರಂದು ಸಾಯಂಕಾಲ 5.00 ಘಂಟೆಯವರೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಸಲ್ಲಿಸಬೇಕು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೃಭಾಜನಿನಿ,ಅರಣ್ಯ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/516/ಕೆಎಸ್‌ಎಂಸಿಎ/2023-24

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಟೆಂಡರ್ ಆಹ್ವಾನ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ :28/2023-24, Dtd : 23.02.2024

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ **ಮೂಡಿಗೆರೆ ತಾಲ್ಲೂಕಿನ** ಕಾಮಗಾರಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **ರೂ. 60.51 ಲಕ್ಷದ** ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **23.02.2024 ರಿಂದ 5.03.2024** ರವರೆಗೆ **ಸಂಜೆ 5.00** ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ **6.03.2024** ರಂದು **ಸಂಜೆ 05:30ಕ್ಕೆ** ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು https://kppp.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಯೋಜನೆ-ಪೂರ್ವ),
ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ (ಪಿಯುಬಿ),
21ನೇ ಮಹಡಿ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001.

ಸಂಖ್ಯೆ: ಕಾಅ/ಯೋ-ಪೂ/ಟೆಂಡರ್/05/2023-24 ದಿನಾಂಕ: 28-02-2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ ವಿಭಾಗ), ಪೂರ್ವ ವಲಯ, ಬಿಬಿಎಂಪಿ ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್** – ಕೆಡಬ್ಲ್ಯೂ4)

ಕ್ರ. ಸಂ.	ಕಾಮಗಾರಿಯ ಹೆಸರು
1	ಕಿದ್ವಾಯಿ ಸಂಸ್ಥೆಯಲ್ಲಿ ನಿರ್ಮಾಣವಾಗುತ್ತಿರುವ ಮಲ್ಟಿಲೆವೆಲ್ ಕಾರ್ ಪಾರ್ಕಿಂಗ್ (ಎಂಎಲ್‌ಸಿಪಿ) ಇದರ ಮೇಲೆ ಹೆಚ್ಚುವರಿ 4 ಮಹಡಿಗಳ ನಿರ್ಮಾಣ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 950.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 9,50,000/- (ರೂ. 1,00,000/- ಇ-ಪೋರ್ಟಲ್ ಮೂಲಕ ಹಾಗೂ ಉಳಿದ ಬಾಕಿ ಮೊತ್ತ ಬ್ಯಾಂಕ್ ಗ್ಯಾರಂಟಿ ಮೂಲಕ)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **01-03-2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **07-03-2024 ರಂದು ಬೆಳಿಗ್ಗೆ 11.30 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, 18ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬಿಬಿಎಂಪಿ ಇಲ್ಲಿ ನಡೆಯುವುದು. 3)** ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **13-03-2024 ರಂದು ಸಂಜೆ 4.00 ಗಂಟೆವರೆಗೆ. 4)** ತಾಂತ್ರಿಕ ಬಿಡ್ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **14-03-2024 ರಂದು ಸಂಜೆ 4.30 ಗಂಟೆಗೆ (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ ವಿಭಾಗ), ಬಿಬಿಎಂಪಿ.

ಕರ್ನಾಟಕ ಅರಣ್ಯ ಇಲಾಖೆ
Karnataka Forest Department
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ,
ಸಾಮಾಜಿಕ ಅರಣ್ಯ ಉಪ ವಿಭಾಗ, ಜಮಖಂಡಿ.

ಸಂಖ್ಯೆ : ಸ.ಅ.ಸಂ./ಸಾ.ಅ.ಜ./ಇ-ಪೋರ್ಟಲ್/ಸಿಆರ್-/2023-24
ದಿನಾಂಕ : 27-02-2024

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2024-25 ನೇ ಸಾಲಿನಲ್ಲಿ **ಬಾಗಲಕೋಟೆ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೀಳಗಿ, ಮುಧೋಳ ಹಾಗೂ ಜಮಖಂಡಿ (ಸಾ.ಅ.) ವಲಯಗಳಲ್ಲಿ ವಿವಿಧ ಯೋಜನೆಗಳಡಿ ಹೊಸ ಹಾಗೂ ಮುಂದುವರೆದ ಅರಣ್ಯೀಕರಣ ಕಾಮಗಾರಿಗಳಿಗೆ ನೆಡುತೋಪು ಬೆಳೆಸುವುದು, ಸಸಿ ಬೆಳೆಸುವುದು ಹಾಗೂ ಇತರೆ ಚಟುವಟಿಕೆಗಳಿಗಾಗಿ** ಅರಣ್ಯ ಗುತ್ತಿಗೆದಾರರೆಂದು ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರಿಗೆ ಮಾತ್ರ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://eproc.karnataka.gov.in)** ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

1) ಟೆಂಡರ್ ಷರತ್ತು ಸಂಬಂಧ ವಿವರ / ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ : 04-03-2024 ರ ಅಪರಾಹ್ನ 17.30 ಘಂಟೆಗೆ, 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 05-03-2024 ರ ಅಪರಾಹ್ನ 15.00 ಘಂಟೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06-03-2024 ರ ಅಪರಾಹ್ನ 17.00 ಘಂಟೆಗೆ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 07-03-2024 ರ ಅಪರಾಹ್ನ 17.30 ಘಂಟೆಗೆ, 5) ಇ.ಎಂ.ಡಿ. ಮೊತ್ತ : 5%.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ,
ಜಮಖಂಡಿ.

ಡಿಐಪಿಆರ್/ಬಾಗಲಕೋಟೆ/410/ಮಣಿಪಾಲ್/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304,
ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2023-24/3650 ದಿನಾಂಕ: 26.02.2024

ಅಲ್ಪಾವಧಿ ಟೆಂಡರ ಅಧಿಸೂವನೆ
(ಇ-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಸಿ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, A Valid Copy of the Registration of the firm/Company with the Register of companies ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kppp.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ ರೂ. 86.60 ಲಕ್ಷ

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:29.02.2024ರ 10.30 ಬೆಳಿಗ್ಗೆ ರಿಂದ 07.03.2024ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:06.02.2024 ರ ಸಾಯಂಕಾಲ 4.00 ವರೆಗೆ, 3:ಫ್ರಿ ಬಿಡ್ ಮಿಟಿಂಗ್ ದಿನಾಂಕ: (ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 06.03.2024 ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:29.02.2024ರ 10.30 ಬೆಳಿಗ್ಗೆ ರಿಂದ 07.03.2024 ರ ಸಾಯಂಕಾಲ 4.00 ಗಂಟೆ ವರಗೆ,5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ(ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):11.03.2024 ರ ಬೆಳಿಗ್ಗೆ 11.00 ಗಂಟೆಗೆ, 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 13.03.2024 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ),7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎದ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:12.03.2024 ಬೆಳ್ಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp.karnataka.gov.in/kpp-protal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಎಸ್.ಜಿ. ಶ್ರೀನಾಥ್, ಕಾರ್ಯನಿರ್ವಾಹಕ ಇಂಜಿನೀಯರರು,
ಎಚ್.ಬಿ.ಸಿ ವಿಭಾಗ, ಅಥಣಿ

DIPR/BGM/RO-NO-1262/KSMCA/2023-24

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ಕೈ’ ಸದಸ್ಯರ ಕಡೆ ನುಗ್ಗಿದ ರವಿಕುಮಾರ್

ಏಕವಚನದಲ್ಲಿ ಮಾತು: ಮೇಲ್ಮನೆಯಲ್ಲಿ ರೊಚ್ಚಿಗೆದ್ದ ಬಿಜೆಪಿ ಸದಸ್ಯರು • ‘ಪ್ರಜ್ಞಾವಂತ’ರ ಸದನದಲ್ಲಿ ಅಹಿತಕರ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಕವಚನ ಬಳಸಿದ್ದಾರೆ ಎಂದು ಸಿಟ್ಟಿಗೆದ್ದ ವಿರೋಧ ಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್ ಹಾಗೂ ಬಿಜೆಪಿಯ ತುಳಸಿ ಮುನಿರಾಜುಗೌಡ ಅವರು ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್ ವಿರುದ್ಧ ಅಬ್ಬರಿಸುತ್ತಾ ಅವರ ಕಡೆಗೆ ಏರಿಹೋದ ಘಟನೆಗೆ ಪ್ರಜ್ಞಾವಂತರ ಸದನದಲ್ಲಿ ಗುರುತಿಸಲ್ಪಡುವ ವಿಧಾನಪರಿಷತ್ ಬುಧವಾರ ಸಾಕ್ಷಿಯಾಯಿತು.

‘ಪಾಕಿಸ್ತಾನ್ ಜಿಂದಾಬಾದ್’ ಎಂದು ಘೋಷಣೆ ಕೂಗಲಾಗಿದೆ ಎಂಬ ಆರೋಪದ ಕುರಿತು ಚರ್ಚೆ ನಡೆಯುತ್ತಿತ್ತು. ಕಾಂಗ್ರೆಸ್ ಸರ್ಕಾರ ದೇಶದ್ರೋಹಿ, ಭಯೋತ್ಪಾದಕರ ಪರವಾಗಿದೆ ಎಂದು ರವಿಕುಮಾರ್ ದೂರಿದರು. ಇದನ್ನು ಕಾಂಗ್ರೆಸ್ ಸದಸ್ಯರು ಬಲವಾಗಿ ಆಕ್ಷೇಪಿಸಿದರು. ಈ ವಿಷಯದಲ್ಲಿ ಏರಿದ ಧ್ವನಿಯಲ್ಲಿ ವಾಗ್ವಾದ ನಡೆಯಿತು. ಸಭಾಪತಿ ಸೂಚನೆ ಬಳಿಕ, ಗದ್ದಲ ಕಡಿಮೆಯಾದಾಗ ರವಿಕುಮಾರ್ ಮಾತು ಆರಂಭಿಸಿದರು.

ಆಗ ಮಧ್ಯಪ್ರವೇಶಿಸಿದ ಅಬ್ದುಲ್ ಜಬ್ಬಾರ್, ‘ಅವನಿಗೆ ಮಾತನಾಡಲು ಬಿಟ್ಟರೆ ನಿಲ್ಲಿಸುವುದೇ ಇಲ್ಲ. ಮಾತನಾಡಲು ಬಿಡಬೇಡಿ ಸಭಾಪತಿಗಳೇ’ ಎಂದು ಹೇಳಿದರು.

ವಿಧಾನ ಪರಿಷತ್ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯರ ಕಡೆಗೆ ಏರಿಹೋದ ವಿರೋಧ ಪಕ್ಷದ ಮುಖ್ಯಸಚೇತಕ ಎನ್ ರವಿಕುಮಾರ್(ಕೇಸರಿ ಶಾಲು ಹೊದ್ದವರು) ಮತ್ತು ತುಳಸಿ ಮುನಿರಾಜುಗೌಡ. ಕಾಂಗ್ರೆಸ್ ಸದಸ್ಯರಿಗೆ ಸೂಚನೆ ನೀಡುತ್ತಿರುವ ಸಭಾಪತಿ ಬಸವರಾಜ ಹೊರಟ್ಟಿ —ಪ್ರಜಾವಾಣಿ ಚಿತ್ರ

ಇದನ್ನು ಕೇಳುತ್ತಿದ್ದಂತೆಯೇ, ‘ಏಕವಚನ ಬಳಸಬೇಡಿ. ಗೌರವಯುತವಾಗಿ ಮಾತನಾಡಿ’ ಎಂದು ರವಿಕುಮಾರ್ ಕೋರಿದರು. ‘ಮಾತನಾಡುತ್ತಲೇ ಇದ್ದೀರಲ್ಲ; ಇನ್ನೂ ಹೇಗೆ ಹೇಳಬೇಕು’ ಎಂದು ಜಬ್ಬಾರ್ ಪ್ರಶ್ನಿಸಿದರು. ಇದರಿಂದ ಕೆರಳಿದ ರವಿಕುಮಾರ್, ‘ನೀವು ಮಾತನಾಡುತ್ತಿರುವುದು ಸರಿಯಲ್ಲ’ ಎಂದರು.

ಮಾತಿಗೆ ಮಾತು ಬೆಳೆದು ಏನೂ ಕೇಳಿಸದಷ್ಟು ಸದ್ದು ಜೋರಾಯಿತು. ‘ಏನು ನೀವು ಹೇಳುವುದು? ಏನು ಮಾಡುತ್ತೀರಿ ನೋಡುತ್ತೇನೆ’ ಎಂದು ತಮ್ಮ ಆಸನದ ಬಳಿಯಿಂದ ಕಾಂಗ್ರೆಸ್ ಸದಸ್ಯರ ಕಡೆಗೆ ನುಗ್ಗಿದರು. ಬಿಜೆಪಿಯ ತುಳಸಿ ಮುನಿರಾಜುಗೌಡ ಅವರಿಗೆ ಜತೆಯಾದರು. ಇಬ್ಬರೂ ಅಬ್ಬರಿಸುತ್ತ ಸಭಾಪತಿ ಪೀಠದ ಎದುರಿಗೆ ಬುಸುಗುಡುತ್ತಾ ನಡೆದರು. ಸಭಾಪತಿ ಪೀಠದ ಎದುರು ಕುಳಿತಿದ್ದ ಸಚಿವಾಲಯದ ಸಿಬ್ಬಂದಿ ಗಾಬರಿಯಿಂದ ಎದ್ದು ನಿಂತರು. ಕಾಂಗ್ರೆಸ್ ಸದಸ್ಯರು ಅಬ್ಬರಿಸುತ್ತಾ ಮುಂದಿನ ಸಾಲಿನ ಕಡೆಗೆ ಬರತೊಡಗಿದರು.

ಅಷ್ಟರಲ್ಲೇ ಎಚ್ಚರಗೊಂಡ ಪರಿಷತ್ತಿನ ಭದ್ರತಾ ಮುಖ್ಯಸ್ಥರು ಹೊರಗಿದ್ದ ತಮ್ಮ ಸಹೋದ್ಯೋಗಿಗಳನ್ನು ಕರೆಯಿಸಿ ಯಾರೊಬ್ಬರೂ ಅತ್ತಿತ್ತ ಹೋಗದಂತೆ ಸಭಾಪತಿ ಪೀಠದ ಎದುರು ಭದ್ರಕೋಟೆ ರಚಿಸಿದರು. ಎರಡೂ ಪಕ್ಷಗಳವರು ಪರಸ್ಪರರನ್ನು ದೂಷಿಸುತ್ತಾ ಕೂಗುತ್ತಲೇ ಇದ್ದರು. ಮುನ್ನುಗ್ಗುತ್ತಿದ್ದ ರವಿಕುಮಾರ್ ಅವರನ್ನು ಭದ್ರತಾ ಮುಖ್ಯಸ್ಥರು ಹಿಡಿದು ನಿಂತರು. ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿದ ಸಭಾಪತಿ ಬಸವರಾಜ ಹೊರಟ್ಟಿ ಕಲಾಪವನ್ನು ಮುಂದೂಡಿದರು.

ಜಬ್ಬಾರ್ ಕ್ಷಮೆ- ಕ್ಷಮೆಯಾಚಿಸದ ರವಿಕುಮಾರ್: ಮತ್ತೆ ಕಲಾಪ ಆರಂಭವಾಗುತ್ತಿದ್ದಂತೆ ರವಿಕುಮಾರ್ ಮಾತನಾಡಲು ಮುಂದಾದರು. ಮಧ್ಯಪ್ರವೇಶಿಸಿದ ಸಭಾಪತಿ ಹೊರಟ್ಟಿ, ಹೀಗೆ ಏಕವಚನ ಬಳಸುವುದು, ಬೇಕಾಬಿಟ್ಟಿ ಮಾತನಾಡಿದರೆ ಸದನ ನಡೆಸಲು ಆಗುವುದಿಲ್ಲ. ಎಲ್ಲರೂ ಸೌಜನ್ಯದಿಂದ ವರ್ತಿಸಬೇಕು. ಸಭಾಪತಿ ಎದ್ದು ನಿಂತರೂ ಮಾತು ನಿಲ್ಲಿಸದೇ ಇದ್ದರೆ ಹೇಗೆ ಎಂದು ಅಸಮಾಧಾನ ಹೊರಹಾಕಿದರು.

ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, ಭಾವಾವೇಶದಿಂದಾಗಿ ಕೆಲವೊಮ್ಮೆ ಸದನದ ಮರ್ಯಾದೆ ರೇಖೆಯ ದಾಟಿ ಏನೇನೋ ನಡೆದುಹೋಗುತ್ತದೆ. ಇಂದು ನಡೆದ ಘಟನೆ ಎಲ್ಲರನ್ನೂ ನೋಯಿಸಿದೆ. ಈ ಭಾಗದ ಸದಸ್ಯರು ಶಾಸಕರಿಗೆ ಗೌರವಕ್ಕೆ ಮೀರಿದ ಪದ ಬಳಸಿದ್ದು ಕೇಳಿಸಿಕೊಂಡಿದ್ದೇವೆ. ಅವರು ವಾಪಸ್ ಪಡೆದು ತಮ್ಮ ಭಾವನೆ ಹೇಳಬೇಕು. ಸರ್ಕಾರವನ್ನು ದೇಶದ್ರೋಹಿ ಎಂದು ಹೇಳಿರುವುದು ಸರಿಯಲ್ಲ. ‘ಇಬ್ಬರೂ ಆತ್ಮಾವಲೋಕನ ಮಾಡಿಕೊಂಡು ಹೇಳಿಕೆ ವಾಪಸ್ ಪಡೆದು ವಿಷಾದ ವ್ಯಕ್ತಪಡಿಸಿದರೆ ಈ ಸದನದ ಗೌರವ, ಘನತೆ ಉಳಿಯುತ್ತದೆ ಎಂದರು.

‘ದೇಶದ ವಿಷಯ ಬಂದಾಗ ನನ್ನ ನಿಲುವಿನಲ್ಲಿ ಬದಲಾವಣೆ ಇಲ್ಲ. ದೇಶದ್ರೋಹಿಗಳಿಗೆ, ಪಾಕಿಸ್ತಾನದ ಪರ ಇರುವವರಿಗೆ ಬೆಂಬಲ ಕೊಡುವವರಿಗೆ ರಾಷ್ಟ್ರದ್ರೋಹಿ ಎನ್ನದೇ, ದೇಶಭಕ್ತರು ಎನ್ನಲು ಸಾಧ್ಯವೇ? ಕ್ಷಮೆ ಕೇಳುವುದಿಲ್ಲ’ ಎಂದು ರವಿಕುಮಾರ್ ಹೇಳಿದರು.

‘ಕ್ಷಮೆ ಅಥವಾ ವಿಷಾದ ವ್ಯಕ್ತಪಡಿಸಿದರೆ ನಿಮ್ಮ ಘನತೆಗೇನೂ ಕುಂದು ಬರುವುದಿಲ್ಲ. ಕೇಳಿಬಿಡಿ. ಮುಂದುವರಿಸಿಕೊಂಡು ಹೋಗುವುದು ಬೇಡ. ಪ್ರತಿಷ್ಠೆ ಬೇಡ’ ಎಂದು ಸಭಾಪತಿ ಸಲಹೆ ನೀಡಿದರು. ಸಚಿವ ಪಾಟೀಲ ಧ್ವನಿಗೂಡಿಸಿದರು. ಆದರೂ ಅವರು ಒಪ್ಪಲಿಲ್ಲ. ಬಳಿಕ ಮಾತನಾಡಿದ ಅಬ್ದುಲ್ ಜಬ್ಬಾರ್, ‘ತಮ್ಮ ಮಾತಿನಿಂದ ನೋವಾಗಿದ್ದರೆ ವಿಷಾದಿಸುತ್ತೇನೆ. ಆ ಮಾತು ಬಳಸಿದ್ದಕ್ಕೆ ಕ್ಷಮೆಯಾಚಿಸುತ್ತೇನೆ’ ಎಂದರು.

ಸುದ್ದಿ 2 ನಿಮಿಷ

ಅನಾರೋಗ್ಯದ ಕಾರಣಕ್ಕೆ ಮತದಾನ ಮಾಡಿಲ್ಲ: ಹೆಬ್ಬಾರ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ‘ಅನಾರೋಗ್ಯದ ಕಾರಣಕ್ಕೆ ರಾಜ್ಯಸಭೆ ಚುನಾವಣೆಯ ಮತದಾನದಲ್ಲಿ ಪಾಲ್ಗೊಳ್ಳಲು ಆಗಿಲ್ಲ’ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

‘ಮತದಾನ ಮಾಡಲಾಗದ್ದಕ್ಕೆ ಬೇಸರವಿದೆ. ಮಂಗಳವಾರ ಆರೋಗ್ಯದಲ್ಲಿ ಏರುಪೇರಾಗಿತ್ತು. ವೈದ್ಯರ ಸಲಹೆ ಮೇರೆಗೆ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಮಧ್ಯಾಹ್ನದ ಒಳಗೆ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಆದರೆ ಆರೋಗ್ಯ ಸ್ಥಿತಿ ಸ್ಥಿರವಾಗಲು ತಡವಾಯಿತು’ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಸ್ಪಷ್ಟಪಡಿಸಿದರು.

‘ಬಿಜೆಪಿಯಿಂದ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಬಿಜೆಪಿಯಲ್ಲಿಯೇ ಕೆಲಸ ಮಾಡುತ್ತೇನೆ. ಪಕ್ಷ ಬಿಡುವ ಬಗ್ಗೆ ಯಾವುದೇ ತೀರ್ಮಾನವನ್ನೂ ಸದ್ಯಕ್ಕೆ ತೆಗೆದುಕೊಳ್ಳುವ ಯೋಚನೆ ಮಾಡಿಲ್ಲ’.

‘ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ವಿರೋಧಿ ಕೆಲಸ ಮಾಡಿದವರ ಮೇಲೆ ಶಿಸ್ತು ಕ್ರಮ ಜರುಗಿಸದ ಕಾರಣಕ್ಕೆ ಪಕ್ಷದ ಕೆಲ ಮುಖಂಡರ ಮೇಲೆ ಬೇಸರವಿದೆ. ಈಚೆಗೆ ಜಿಲ್ಲೆ, ತಾಲ್ಲೂಕು ಘಟಕಗಳಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ವಿಷಯದಲ್ಲಿಯೂ ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ನನ್ನ ಬೇಸರವಿರುವುದು ಬಿಜೆಪಿಯ ಜಿಲ್ಲಾ ಮಟ್ಟದ ಕೆಲವು ಮುಖಂಡರ ಮೇಲೆಯೇ ಹೊರತು ರಾಜ್ಯ, ರಾಷ್ಟ್ರ ಮಟ್ಟದ ನಾಯಕರ ಮೇಲಲ್ಲ’ ಎಂದರು.



ಜಾತಿವಾರು ಜನಗಣತಿ: ವರದಿ ಸಲ್ಲಿಕೆ ಇಂದು

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ನಡೆಸಿದ್ದ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ (ಜಾತಿವಾರು ಜನಗಣತಿ) ವರದಿಯು ರಾಜ್ಯ ಸರ್ಕಾರಕ್ಕೆ ಗುರುವಾರ ಅಧಿಕೃತವಾಗಿ ಸಲ್ಲಿಕೆಯಾಗಲಿದೆ.

ರಾಜ್ಯದ ಎಲ್ಲ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಅರಿಯಲು ₹158.47 ಕೋಟಿ ವೆಚ್ಚದಲ್ಲಿ ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ಸಮೀಕ್ಷೆ ನಡೆಸಿತ್ತು. ಆದರೆ, ಆಯೋಗದ ಅವಧಿ ಮುಕ್ತಾಯವಾಗುವ ಸಂದರ್ಭದಲ್ಲಿ ವರದಿಯನ್ನು ಅಧಿಕೃತವಾಗಿ ಸರ್ಕಾರಕ್ಕೆ ಸಲ್ಲಿಸಿರಲಿಲ್ಲ.

ಕೆ. ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಈಗಿನ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ವಿವಿಧ ವಿಷಯಕ್ಕೆ ಸಂಬಂಧಿಸಿದ ಟಿಪ್ಪಣಿ ಗಳೊಂದಿಗೆ 2015ರ ಸಮೀಕ್ಷಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಲ್ಲಿಸಲಿದೆ. ‘ಗುರುವಾರ ಮುಖ್ಯಮಂತ್ರಿ ಯವರನ್ನು ಭೇಟಿಮಾಡಿ ವರದಿ ಹಾಗೂ ಸಮೀಕ್ಷೆಯ ದತ್ತಾಂಶ ಗಳನ್ನು ಒಳಗೊಂಡ ಬೃಹತ್ ಪೆಟ್ಟಿಗೆಯೊಂದನ್ನು ಸರ್ಕಾರಕ್ಕೆ ಹಸ್ತಾಂತರಿಸಲಾಗುವುದು’ ಎಂದು ಹೆಗ್ಡೆ ತಿಳಿಸಿದರು.

‘ಪಾಕಿಸ್ತಾನ್ ಜಿಂದಾಬಾದ್’ ಘೋಷಣೆ ಆರೋಪ • ವಿಧಾನಸಭೆಯಲ್ಲಿ ಬಿಜೆಪಿ– ಕಾಂಗ್ರೆಸ್ ಜಟಾಪಟಿ

ಕರ್ನಾಟಕದ ಆತ್ಮಕ್ಕೆ ಪೆಟ್ಟು: ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಇತಿಹಾಸದಲ್ಲಿ ಇದೇ ಮೊದಲ ಬಾರಿ ವಿಧಾನಸೌಧದಲ್ಲಿ ‘ಪಾಕಿಸ್ತಾನ್ ಜಿಂದಾಬಾದ್’ ಎಂಬ ಘೋಷಣೆ ಕೂಗಲಾಗಿದೆ. ಇದು ಏಳು ಕೋಟಿ ಕನ್ನಡಿಗರ ಆತ್ಮವಿರುವ ಜಾಗ. ಅದಕ್ಕೆ ಪೆಟ್ಟು ಬಿದ್ದಿದೆ. ಇದರಿಂದ ರಾಜ್ಯದ ಜನರಲ್ಲಿ ಭೀತಿಯ ವಾತಾವರಣ ಮೂಡಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸರ್ಕಾರದ ವಿರುದ್ಧ ಹರಿಹಾಯ್ದರು.

ವಿಧಾನಸೌಧದಲ್ಲಿ ಕಿಡಿಗೇಡಿಯೊಬ್ಬ ‘ಪಾಕಿಸ್ತಾನ್ ಜಿಂದಾಬಾದ್’ ಎಂದು ಘೋಷಣೆ ಕೂಗಿದ್ದಾನೆ ಎಂದು ಆರೋಪಿಸಿ ಮಾತನಾಡಿದ ಅವರು, ಈ ಘಟನೆಯ ಬಳಿಕ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡದೇ ಸುಮ್ಮನಿರುವುದನ್ನು ನೋಡಿದರೆ ಸರ್ಕಾರದ ಮೇಲೆಯೇ ಸಂಶಯ ಬರುವಂತಾಗಿದೆ. ಸರ್ಕಾರದಲ್ಲಿರುವವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

‘ನಮ್ಮ ಸೈನಿಕರು ಹಗಲು ರಾತ್ರಿ ಎನ್ನದೇ ತಮ್ಮ ಪ್ರಾಣ ಪಣವಿಟ್ಟು ದೇಶವನ್ನು ರಕ್ಷಿಸುತ್ತಿದ್ದಾರೆ. ಆದರೆ, ಯಾರೋ ಕೆಲವರು ವಿಧಾನಸೌಧದ-ಕ್ಕೆ ಬಂದು ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗುತ್ತಾರೆ. ಇವರಿಗೆ ಎಷ್ಟು ಧೈರ್ಯ. ನಾವು ಯಾವ ಮುಖ ಇಟ್ಟುಕೊಂಡು ಸೈನಿಕರನ್ನು ನೋಡಬೇಕು’ ಎಂದು ಅವರು ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದರು.

‘ಆ ರೀತಿ ಕೂಗಿದವರು ಯಾರೋ ಪಾಕಿಸ್ತಾನಿಯೇ ಇರಬೇಕು. ಈ ದೇಶದ ಅನ್ನ ತಿಂದವರು, ನೀರು ಕುಡಿದವರು ಇಂತಹ ಕೆಲಸ ಮಾಡಲು ಸಾಧ್ಯವಿಲ್ಲ. ಇನ್ನೆಷ್ಟು ಭಯೋತ್ಪಾದಕರು ಬಂದಿರಬಹುದು. ಈ ರೀತಿ ಕೂಗಿದವರ ವಿರುದ್ಧ ಸರ್ಕಾರ ಒಂದು ಸಣ್ಣ ಕ್ರಮವನ್ನೂ ಕೈಗೊಳ್ಳದೇ ಮೌನವಹಿಸಿರುವುದು ಅಚ್ಚರಿ ಮೂಡಿಸುತ್ತದೆ. ಇವರನ್ನು ಕೆಂಪು ರತ್ನಗಂಬಳಿ ಹಾಸಿ ಒಳಗೆ ಬಿಟ್ಟವರು ಯಾರು? ನಾಸಿರ್ ಹುಸೇನ್‌ಗೆ ಹೇಗೆ ಟಿಕೆಟ್ ನೀಡಿದಿರಿ’ ಎಂದು ಪ್ರಶ್ನಿಸಿದಾಗ ಸಚಿವ ದಿನೇಶ್ ಗುಂಡೂರಾವ್ ಆಕ್ಷೇಪ ವ್ಯಕ್ತಪಡಿಸಿದರು.

‘ನಾಸಿರ್ ಹುಸೇನ್ ಅವರನ್ನು ಪ್ರಶ್ನಿಸಲು ಹೋದ ಮಾಧ್ಯಮ ಪ್ರತಿನಿಧಿಗಳಿಗೇ ಬೆದರಿಕೆ ಹಾಕಿ ಗೆಟ್‌ಔಟ್ ಎಂದಿದ್ದಾರೆ. ಮಾಧ್ಯಮಗಳು ತಪ್ಪು ಮಾಡಿದ್ದರೆ ಅವರನ್ನು ಬಂಧಿಸಿ, ಆರೋಪ ಮಾಡಿರುವ ನನ್ನನ್ನೂ ಬಂಧಿಸಿ. ಓಟಿನ ಆಸೆಗೆ ಪಿಎಫ್‌ಐ, ಕೆಎಫ್‌ಡಿಯಂತಹ ಸಂಘಟನೆಗಳ ಮೇಲೆ ವ್ಯಾಮೋಹ ಬೆಳೆಸಿಕೊಳ್ಳಬೇಡಿ’ ಎಂದು ಅಶೋಕ ಹೇಳಿದರು.

ಕಾಂಗ್ರೆಸ್‌ನ ಪಿ.ಎಂ. ನರೇಂದ್ರ ಸ್ವಾಮಿ ಮಾತನಾಡಿ, ‘ಈ ಘಟನೆಗೆ ಸಂಬಂಧಿಸಿದಂತೆ ಮಾಧ್ಯಮದವರನ್ನೂ ತನಿಖೆಗೆ ಒಳಪಡಿಸಬೇಕು. ತಿರುಚಿದ ವಿಡಿಯೊವನ್ನೂ ಪರಿಶೀಲನೆಗೆ ಒಳಪಡಿಸಬೇಕು. ಇವೆಲ್ಲ ಗೋದಿ ಮೀಡಿಯಾದ ಕೆಲಸ’ ಎಂದು ಹೇಳಿದರು.

‘ದೇಶ ಭಕ್ತಿಯನ್ನು ನಾವು ಬಿಜೆಪಿಯವರಿಂದ ಕಲಿಯಬೇಕಾಗಿಲ್ಲ. ಇಂದಿರಾಗಾಂಧಿ ಯುದ್ಧದಲ್ಲಿ ಪಾಕಿಸ್ತಾನವನ್ನು ಸೋಲಿಸಿದವರು’ ಎಂದು ನರೇಂದ್ರಸ್ವಾಮಿ ಎದೆ ತಟ್ಟಿಕೊಂಡು ಏರಿದ ಧ್ವನಿಯಲ್ಲಿ ಹೇಳಿದರು.

ವರದಿ ಬಂದ ತಕ್ಷಣ ಕ್ರಮ: ಪರಮೇಶ್ವರ

‘ಈ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಎಫ್‌ಐಆರ್ ದಾಖಲಾಗಿದೆ. ತನಿಖೆಯನ್ನೂ ಆರಂಭಿಸಲಾಗಿದೆ. ವಿಡಿಯೊಗಳನ್ನು ಎಫ್‌ಎಸ್‌ಎಲ್ ಪರಿಶೀಲನೆಗೆ ಕಳುಹಿಸಲಾಗಿದೆ. ವರದಿ ಬಂದ ತಕ್ಷಣ ಒಂದು ನಿಮಿಷ ತಡ ಮಾಡದೇ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಬಿಜೆಪಿಯ ಆಕ್ಷೇಪಗಳಿಗೆ ಸದನದಲ್ಲಿ ಉತ್ತರ ನೀಡಿದ ಅವರು, ‘ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ದೇಶದ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಪಾಕಿಸ್ತಾನ್ ಜಿಂದಾಬಾದ್ ಎಂದು ಯಾರೇ ಘೋಷಣೆ ಹಾಕಿದ್ದರೂ ಕಠಿಣ ಶಿಕ್ಷೆಗೆ ಗುರಿಪಡಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ರಾಜ್ಯಸಭಾ ಚುನಾವಣೆಯಲ್ಲಿ ಗೆದ್ದಿರುವ ನಾಸಿರ್ ಹುಸೇನ್ 25 ಜನರ ಪ್ರವೇಶಕ್ಕಾಗಿ ಅನುಮತಿ ಪಡೆದಿದ್ದರು. ಇವರು ನಾಸಿರ್ ಬಳಿಗೆ ಬಂದಾಗ ನಾಸಿರ್ ಪರ ಘೋಷಣೆ ಕೂಗಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಎರಡು ರೀತಿಯ ವರದಿಗಳು ಬಂದಿವೆ. ಕೆಲ ಮಾಧ್ಯಮಗಳ ಪ್ರಕಾರ ಪಾಕ್ ಪರ ಘೋಷಣೆ ಕೂಗಿದ್ದಾರೆ ಎಂದೂ ಇನ್ನು ಕೆಲವು ಮಾಧ್ಯಮಗಳು ಕೂಗಿಲ್ಲ ಎಂದೂ ಹೇಳುತ್ತಿವೆ. ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಹಾಕಿರುವುದಾಗಿ ಹರಿದಾಡಿರುವ ವಿಡಿಯೊಗಳನ್ನು ವೈಜ್ಞಾನಿಕವಾಗಿ ಪರಿಶೀಲನೆಗೆ ಒಳಪಡಿಸಿ ವರದಿ ಪಡೆಯಲಾಗುವುದು ಎಂದರು.

‘ದೇಶ ಪ್ರೇಮದ ಬಗ್ಗೆ ಕಾಂಗ್ರೆಸ್‌ಗೆ ಯಾರೂ ಹೇಳಿ ಕೊಡಬೇಕಾಗಿಲ್ಲ. ದೇಶಕ್ಕಾಗಿ ಕಾಂಗ್ರೆಸ್‌ನಷ್ಟು ಯಾರೂ ತ್ಯಾಗ ಮಾಡಿಲ್ಲ. ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ ಮತ್ತು ಈಗಿನ ಕಾಂಗ್ರೆಸ್ ಬೇರೆ ಎಂಬುದನ್ನು ಒಪ್ಪುತ್ತೇನೆ. ಆದರೆ, ಧ್ಯೇಯ ಬದ್ಧತೆ ಬದಲಾಗಿಲ್ಲ. ದೇಶ ಪ್ರೇಮ ರಕ್ತಗತವಾಗಿದೆ. ಬಿಜೆಪಿಯವರಿಗೆ ದೇಶ ಪ್ರೇಮ ಇಲ್ಲ ಎಂಬುದಾಗಿ ನಾನು ಹೇಳುವುದಿಲ್ಲ’ ಎಂದು ಹೇಳಿದರು.

‘ಎನ್‌ಐಎ ತನಿಖೆಗೆ ಒಪ್ಪಿಸಿ’

‘ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ಒಪ್ಪಿಸಬೇಕು ಮತ್ತು ಮುಖ್ಯಮಂತ್ರಿಯವರು ಘಟನೆಯ ನೈತಿಕ ಹೊಣೆ ಹೊರಬೇಕು’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಆಗ್ರಹಿಸಿದರು.

‘ಸರ್ಕಾರ ಈ ಘಟನೆಯನ್ನು ಲಘುವಾಗಿ ತೆಗೆದುಕೊಂಡಿದೆ. ದೇಶ ವಿರೋಧಿ ಪ್ರಕರಣಗಳು ರಾಜ್ಯದ ಹಲವೆಡೆ ನಡೆದಿವೆ. ಜಿನ್ನಾ ಮಾನಸಿಕತೆಯ ಜನ ಇದನ್ನು ಮಾಡುತ್ತಿದ್ದಾರೆ. ಆದರೆ, ಪ್ರಕರಣದ ತನಿಖೆ ನಡೆಯುವುದಕ್ಕೂ ಮೊದಲೇ ಸಚಿವ ಪ್ರಿಯಾಂಕ್ ಖರ್ಗೆ ಅವರು ಎಕ್ಸ್ ಮೂಲಕ ಏನೂ ಆಗಿಯೇ ಇಲ್ಲ ಎಂದು ಕ್ಲೀನ್‌ಚಿಟ್ ನೀಡಲು ಮುಂದಾಗಿದ್ದಾರೆ’ ಎಂದು ಹರಿಹಾಯ್ದರು.

‘ಇಂತಹ ಘಟನೆಗಳು ನಡೆದಾಗ ರಾಜಕೀಯದಿಂದ ಹೊರಗಿದ್ದು ಎಲ್ಲ ಪಕ್ಷಗಳು ಒಗ್ಗಟ್ಟಿನಿಂದ ಖಂಡಿಸಬೇಕು. ಇತ್ತೀಚೆಗೆ ಸಂವಿಧಾನ ಕುರಿತ ವಿಚಾರಗೋಷ್ಠಿಗೆ ಭಾರತ ವಿರೋಧಿ ಮಾನಸಿಕತೆ ಹೊಂದಿರುವ ನಿತಾಶ ಕೌಲ್ ಅವರನ್ನು ಕಾಂಗ್ರೆಸ್ ಸರ್ಕಾರ ಕರೆಸಿದ್ದು ಸರಿಯೇ’ ಎಂದರು.

‘ನನ್ನ ತಂಟೆಗೆ ಬಂದರೆ ಸುಮ್ಮನಿರಲ್ಲ’

ಬೆಂಗಳೂರು: ‘ನನ್ನ ಹೆದರಿಸೊ ಮಗ ಇನ್ನೂ ಹುಟ್ಟಿ ಬಂದಿಲ್ಲ. ಬಿಜೆಪಿಯವರು ಏನು ಮಾಡುತ್ತಾರೋ ಮಾಡಿಕೊಳ್ಳಲಿ. ನಾನು ಯಾವುದಕ್ಕೂ ಹೆದರುವುದಿಲ್ಲ’ ಎಂದು ಬಿಜೆಪಿ ಶಾಸಕ ಎಸ್. ಟಿ.ಸೋಮಶೇಖರ್ ಹೇಳಿದ್ದಾರೆ.

‘ಬಿಜೆಪಿ ನಾಯಕರು ಏನೇನು ಮಾಡಿದ್ದಾರೆ ಎನ್ನುವ ಎಲ್ಲ ವಿಚಾರಗಳೂ ನನಗೆ ಗೊತ್ತು. ನನ್ನ ತಂಟೆಗೆ ಬಂದರೆ ಎಲ್ಲವನ್ನು ಬಿಚ್ಚಿಡಬೇಕಾಗುತ್ತದೆ’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ಎಚ್ಚರಿಕೆ ನೀಡಿದರು. ‘ರಾಜ್ಯಸಭಾ ಚುನಾವಣೆಯಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿಯೇ ಮತ ಹಾಕಿದ್ದೇನೆ. ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ನವರು ಬಿಜೆಪಿಗೆ ಮತ ಹಾಕಿಲ್ಲವೇ? ಬಿಜೆಪಿ ನನ್ನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಅನರ್ಹತೆಯನ್ನಾದರೂ ಮಾಡಲಿ, ಉಚ್ಚಾಟನೆಯನ್ನಾದರೂ ಮಾಡಲಿ’ ಎಂದರು.

ಸೋಲು-ಗೆಲುವಿನ ಲೆಕ್ಕಾಚಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಬುಧವಾರ ನಡೆದ ಬಜೆಟ್ ಮೇಲಿನ ಚರ್ಚೆ ರಾಜಕೀಯ ಪಕ್ಷಗಳ ಸೋಲು-ಗೆಲುವು ಕುರಿತು ಪರಸ್ಪರ ಆರೋಪ-ಪ್ರತ್ಯಾರೋಪಗಳಿಗೆ ವೇದಿಕೆಯಾಯಿತು.

ಜೆಡಿಎಸ್‌ನ ಟಿ.ಎ.ಶರವಣ ಮಾತನಾಡಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಗ್ಯಾರಂಟಿ ಯೋಜನೆಯ ವಿಷಯಗಳನ್ನು ಬಿಟ್ಟು, ಬೇರೆ ವಿಷಯಗಳೇ ಇಲ್ಲ. ಅದೂ ಜಾಹೀರಾತಿಗಷ್ಟೇ ಸೀಮಿತವಾಗಿದೆ ಎಂದು ಹೇಳಿದ್ದು, ಕಾಂಗ್ರೆಸ್‌ನ ಎಸ್. ರವಿ ಅವರನ್ನು ಕೆರಳಿಸಿತು. ‘ಸುಮ್ಮನೆ ಶರವಣ ಅವರಿಗೆ ಕೇಸರಿ ಶಾಲು ಹಾಕಿ ಬಿಡಿ. ಕಳೆದ ಚುನಾವಣೆಗೂ ಮೊದಲು ಹಿಜಾಬ್, ಹಲಾಲ್, ಪಾಕಿಸ್ತಾನ, ಮುಸ್ಲಿಂ ವಿಷಯಗಳನ್ನೇ ಕೆದಕಿ ಬಿಜೆಪಿ 66 ಸ್ಥಾನಗಳಿಗೆ ಕುಸಿದಿದೆ. ಈಗ ಜೆಡಿಎಸ್ ಅದೇ ಹಾದಿ ಹಿಡಿದಿದೆ. ಹೀಗೆ ಆದರೆ ಮುಂದಿನ ಚುನಾವಣೆಯಲ್ಲಿ ಮಿತ್ರ ಪಕ್ಷಗಳಿಗೆ 35 ಸ್ಥಾನಗಳೂ ಬರುವುದಿಲ್ಲ’ ಎಂದು ಟೀಕಿಸಿದರು.

ರುದ್ರೇಗೌಡ ಏಕಾಂಗಿ ಧರಣಿ

ಬಜೆಟ್‌ನಲ್ಲಿ ಕೈಗಾರಿಕೆಗಳಿಗೆ ಆದ್ಯತೆ ಸಿಕ್ಕಿಲ್ಲ. ಅಭಿವೃದ್ಧಿಪರವಾದ ಯಾವ ಯೋಜನೆಗಳನ್ನೂ ಪ್ರಕಟಿಸಿಲ್ಲ ಎಂದು ಆರೋಪಿಸಿ ಬಿಜೆಪಿಯ ಎಸ್. ರುದ್ರೇಗೌಡ ಅವರು ಸಭಾಪತಿ ಪೀಠದ ಮುಂದೆ ಬಂದು ಏಕಾಂಗಿ ಧರಣಿ ನಡೆಸಿದರು.

ನಿಮ್ಮ ಸಮಸ್ಯೆ ಏನು ಎಂದು ಹೇಳಿ. ಸಂಬಂಧಿಸಿದವರಿಂದ ಸೂಕ್ತ ಉತ್ತರ ಕೊಡಿಸಲಾಗುವುದು. ಈಗ ನೀವು ಹೋಗಿ ಆಸನದಲ್ಲಿ ಕುಳಿತುಕೊಳ್ಳಿ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಸಭಾಪತಿ ಮಾತಿಗೆ ಗೌಡರು ಸಮ್ಮತಿಸಿದರು.

‘ಮೊದಲು ದೇಶದಲ್ಲಿ ಕಾಂಗ್ರೆಸ್ ಸ್ಥಿತಿ ಏನಾಗಿದೆ ನೋಡಿ. ಸಂಸತ್‌ನಲ್ಲಿ ವಿರೋಧ ಪಕ್ಷದ ಸ್ಥಾನವೂ ಸಿಕ್ಕಿಲ್ಲ’ ಎಂದು ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಮಾತನಾಡಿ, ‘ಕುಮಾರಸ್ವಾಮಿ ಮುಖ್ಯ-ಮಂತ್ರಿಯಾಗಿದ್ದರೂ ಮಂಡ್ಯದಲ್ಲಿ ತಮ್ಮ ಮಗನನ್ನು ಗೆಲ್ಲಿಸಿಕೊಳ್ಳಲು ಆಗಲಿಲ್ಲ. ಈ ಬಾರಿ ಯಾರನ್ನು ಗೆಲ್ಲಿಸಿಕೊಳ್ಳುತ್ತಾರೆ’ ಎಂದು ಪ್ರಶ್ನಿಸಿದರು.

‘ಮಗ ಕ್ಷೇತ್ರ ಬಿಟ್ಟು ಕೊಡದೇ ಇದ್ದಿದ್ದರೆ ನಿಮ್ಮ ಸಿದ್ದರಾಮಯ್ಯ ಮುಖ್ಯಮಂತ್ರಿಯೇ ಆಗುತ್ತಿರಲಿಲ್ಲ’ ಬಿಡಿ ಎಂದು ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಚರ್ಚೆಯ ಮಧ್ಯೆ ಎನ್. ರವಿಕುಮಾರ್ ಮತ್ತೆ ಪಾಕಿಸ್ತಾನ ವಿಷಯ ಪ್ರಸ್ತಾಪಿಸಿದ್ದು, ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಕೆರಳಿಸಿತು. ‘ನಿಮ್ಮ ಪ್ರಧಾನಿ ಪಾಕಿಸ್ತಾನಕ್ಕೆ ಹೋಗಿ ಕೇಕ್ ತಿಂದರಾ? ಬಿರಿಯಾನಿ ತಿಂದರಾ’ ಎಂದು ಪ್ರಶ್ನಿಸಿದರು.

ಪರಿಷತ್ತಿನಲ್ಲೂ ಗದ್ದಲ: ಕಲಾಪಕ್ಕೆ ವಿಘ್ನ

ಬೆಂಗಳೂರು: ‘ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದ ವ್ಯಕ್ತಿಯನ್ನು ಕೂಡಲೇ ಬಂಧಿಸಬೇಕು, ಇದರ ನೈತಿಕ ಹೊಣೆಹೊತ್ತು ಮುಖ್ಯಮಂತ್ರಿ ಮತ್ತು ಗೃಹ ಸಚಿವರು ರಾಜೀನಾಮೆ ನೀಡಬೇಕು’ ಎಂದು ಬಿಜೆಪಿ ಸದಸ್ಯರು ಗದ್ದಲ ಎಬ್ಬಿಸಿದ್ದರಿಂದಾಗಿ ವಿಧಾನ-ಪರಿಷತ್ತಿನ ಬುಧವಾರದ ಕಲಾಪಕ್ಕೆ ಅಡ್ಡಿಯುಂಟಾಯಿತು.

‘ಈ ಕುರಿತ ಲಭ್ಯ ವಿಡಿಯೊವನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ಅಲ್ಲಿಂದ ವರದಿ ಬಂದ ಬಳಿಕ ಕ್ರಮ ಜರು-ಗಿಸಲಾಗುವುದು. ಇದು ನಡೆದಿದೆಯೇ ಎಂಬುದು ಖಚಿತವಾಗಿಲ್ಲ. ಹೀಗಿರುವಾಗ ಆರೋಪ ಮಾಡುವುದು ಸರಿಯಲ್ಲ’ ಸಚಿವರು ಹಾಗೂ ಕಾಂಗ್ರೆಸ್ ಸದಸ್ಯರು ಬಲವಾಗಿ ಆಕ್ಷೇಪ ವ್ಯಕ್ತಪಡಿಸಿದರು. ಪರಸ್ಪರ ಆರೋಪ–ಪ್ರತ್ಯಾರೋಪಗಳಿಗೆ ಕಲಾಪ ದಾರಿ ಮಾಡಿಕೊಟ್ಟಿತು. ಮೂರು ಬಾರಿ ಕಲಾಪ ಮುಂದೂಡಿದರೂ ಬಿಜೆಪಿಯವರು ಹಿಡಿದ ಪಟ್ಟು ಸಡಿಸಲಿಲ್ಲ.

ಬೆಳಿಗ್ಗೆ ಕಲಾಪ ಆರಂಭವಾದಾಗ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಆಡಳಿತ ಶಕ್ತಿಕೇಂದ್ರದಲ್ಲೇ ರಾಷ್ಟ್ರವಿರೋಧಿ ಕೃತ್ಯ ನಡೆದಿದೆ. ಆಡಳಿತ ವೈಫಲ್ಯಕ್ಕೆ ಇದಕ್ಕಿಂತ ಸಾಕ್ಷ್ಯ ಬೇಕಾ? ಮುಖ್ಯಮಂತ್ರಿ ಮತ್ತು ಗೃಹ ಸಚಿವರು ರಾಜೀನಾಮೆ ಕೊಡಬೇಕು ಎಂದರು.

ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್, ಈ ರೀತಿ ಘೋಷಣೆ ಕೂಗಿದವರನ್ನು ಗಲ್ಲಿಗೆ ಏರಿಸಬೇಕು. ಇಂತಹ ದುಷ್ಕರ್ಮಿಗಳ ಪರವಾಗಿ ಕಾಂಗ್ರೆಸ್ ನಿಂತಿದೆ. ಸಚಿವ ಪ್ರಿಯಾಂಕ್ ಖರ್ಗೆಯವರು ಈ ರೀತಿಯ ಘಟನೆಯೇ ನಡೆದಿಲ್ಲ ಎಂದಿದ್ದಾರೆ. ಕಾಂಗ್ರೆಸ್ ಸರ್ಕಾರವೇ ದೇಶದ್ರೋಹಿ ಎಂದು ಅಬ್ಬರಿಸಿದರು.

‘ಕ್ರಿಯಾಲೋಪ ಎತ್ತಿದ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಸರ್ಕಾರವನ್ನೇ ದೇಶದ್ರೋಹಿ ಎಂಬುದು ಸರಿಯಲ್ಲ ಎಂದರು. ಆಗ ಮಧ್ಯಪ್ರವೇಶಿಸಿದ ಸಭಾಪತಿ ಹೊರಟ್ಟಿ, ‘ದೇಶದ್ರೋಹಿ ಪದವನ್ನು ಕಡತದಿಂದ ತೆಗೆಸಿಹಾಕಿದ್ದೇನೆ’ ಎಂದರು.

‘ದೇಶದ್ರೋಹಿ ಸರ್ಕಾರ’ ಎಂಬ ಪದವನ್ನು ಕಡತದಿಂದ ತೆಗೆದುಹಾಕಿದರೂ ಅದೇ ಪದದ ಸುತ್ತ ಸುದೀರ್ಘ ಚರ್ಚೆ ನಡೆಯಿತು.

ನಾಸಿರ್ ಹುಸೇನ್ ಕಚೇರಿಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ವಿಧಾನಸೌಧದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದ ಘಟನೆ ಖಂಡಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಬುಧವಾರ ಕಪ್ಪು ಪಟ್ಟಿ ಧರಿಸಿ ರಾಜ್ಯಸಭಾ ಸದಸ್ಯ ಸೈಯದ್ ನಾಸಿರ್ ಹುಸೇನ್ ಅವರ ಕಚೇರಿಗೆ ಮುತ್ತಿಗೆ ಹಾಕಲು ಮತ್ತು ನಾಮಫಲಕಕ್ಕೆ ಮಸಿ ಬಳಿಯಲು ಯತ್ನಿಸಿದರು.

ಪೊಲೀಸರು ಅಡ್ಡಗಟ್ಟಿ ತಡೆದ ಸಂದರ್ಭದಲ್ಲಿ ನೂಕಾಟವಾಯಿತು. ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿಯೂ ನಡೆಯಿತು.

‘ದೇಶದ್ರೋಹಿಗಳಿಗಲ್ಲ, ನಮಗೆ ರಕ್ಷಣೆ ಕೊಡಿ’ ಎಂದು ಕಾರ್ಯಕರ್ತರು ಆಗ್ರಹಿಸಿದರು. ಇದೆಲ್ಲದರ ಮಧ್ಯೆ ಪೊಲೀಸರ ಸಮವಸ್ತ್ರದ ಮೇಲೆಯೂ ಮಸಿ ಚೆಲ್ಲಿತು.

‘ನಾಸಿರ್ ಹುಸೇನ್ ಅವರನ್ನು ಕಾಂಗ್ರೆಸ್ ಅಮಾನತು ಗೊಳಿಸಬೇಕು ಮತ್ತು ಘೋಷಣೆ ಕೂಗಿದ ಅವರ ಬೆಂಬಲಿಗರನ್ನು ಬಂಧಿಸಬೇಕು. ವಿಧಾನಸೌಧದಲ್ಲಿಯೇ ಪಾಕಿಸ್ತಾನ ಪರ ಘೋಷಣೆಗಳನ್ನು ಕೂಗಿದರೂ ನಾಸಿರ್ ಹುಸೇನ್ ಅವರು ಖಂಡಿಸಲಿಲ್ಲ. ಮಾಧ್ಯಮಗಳ ಪ್ರತಿನಿಧಿಗಳ ಮೇಲೆ ಏಕವಚನದಲ್ಲಿ ಹರಿಹಾಯ್ದಿದ್ದಾರೆ. ಇದು ಖಂಡನೀಯ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಪ್ರತಿಭಟನ-ಕಾರರು ಒತ್ತಾಯಿಸಿದರು.

ಬಳ್ಳಾರಿಯಲ್ಲಿ ರಾಜ್ಯಸಭಾ ಸದಸ್ಯ ಸೈಯದ್ ನಾಸಿರ್ ಹುಸೇನ್ ಅವರ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ತಡೆದರು ಪ್ರಜಾವಾಣಿ ಚಿತ್ರ

ಬ್ಯಾಡಗಿ ವರ್ತಕ ವಿರುದ್ಧ ಕ್ರಮಕ್ಕೆ ಆಗ್ರಹ

ಬ್ಯಾಡಗಿ (ಹಾವೇರಿ ಜಿಲ್ಲೆ): ‘ವಿಧಾನಸೌಧದಲ್ಲಿ ಮಂಗಳವಾರ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದಾರೆ ಎನ್ನಲಾದ ಬ್ಯಾಡಗಿ ಪಟ್ಟಣದ ಮೆಣಸಿನಕಾಯಿ ವರ್ತಕ ಮಹ್ಮದ್ ಶಫಿ ನಾಶಿಪುಡಿ ವಿರುದ್ಧ ದೇಶದ್ರೋಹ ಪ್ರಕರಣದಡಿ ದೂರು ದಾಖಲಿಸಿ ತನಿಖೆ ನಡೆಸಬೇಕು’ ಎಂದು ಬಿಜೆಪಿ ಕಾರ್ಯಕರ್ತರು ಪೊಲೀಸರಿಗೆ ಬುಧವಾರ ದೂರು ಸಲ್ಲಿಸಿದರು.

ಹರಿದಾಡಿದ ಬಿಜೆಪಿ ಹಳೆ ವಿಡಿಯೊ

ಮಂಡ್ಯ: 2022ರ ಡಿಸೆಂಬರ್ 17 ರಂದು ಮಂಡ್ಯ ನಗರದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆ ಸಂದರ್ಭದಲ್ಲಿ ‘ಪಾಕಿಸ್ತಾನ ಮುರ್ದಾಬಾದ್’ ಎನ್ನುವ ಬದಲು ‘ಜಿಂದಾಬಾದ್’ ಎಂದು ಪಕ್ಷದ ಕಾರ್ಯಕರ್ತರೊಬ್ಬರು ಕೂಗಿದ ವಿಡಿಯೊ ಬುಧವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ

‘19 ಲಕ್ಷ ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ ವಿತರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲೆಗಳಲ್ಲಿ ಓದುತ್ತಿರುವ 19 ಲಕ್ಷ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲಾಗುವುದು. ಈ ಮೂಲಕ ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವ ಹಾಗೂ ಮುಟ್ಟಿನ ವೈಜ್ಞಾನಿಕ ನಿರ್ವಹಣೆಯ ಬಗ್ಗೆ ಅರಿವು ಮೂಡಿಸ-ಲಾಗುತ್ತದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆ ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯ-ಕ್ರಮದಲ್ಲಿ ‘ಶುಚಿ-ಮುಟ್ಟಿನ ನೈರ್ಮಲ್ಯ ಯೋಜನೆ’ಗೆ ಮರುಚಾಲನೆ ನೀಡಿ, ಶಾಲಾ ಮಕ್ಕಳಿಗೆ ಸಾಂಕೇತಿಕವಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಿದರು.

ಬಳಿಕ ಮಾತನಾಡಿದ ಅವರು, ‘2013ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಗಿತ್ತು. ಬಳಿಕ ಕೋವಿಡ್ ಹಾಗೂ ವಿವಿಧ ಕಾರಣಗಳಿಂದ ಯೋಜನೆ ಸ್ಥಗಿತಗೊಂಡಿತ್ತು. ಈಗ ಯೋಜನೆಗೆ ಮರು ಚಾಲನೆ ನೀಡಿ, ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ಬಗ್ಗೆ ಅರಿವು ಮೂಡಿಸಲು ಮುಂದಾಗಿದ್ದೇವೆ. ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಶಾಲೆ ಹಾಗೂ ಕಾಲೇಜುಗಳ, 10ರಿಂದ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ತಲಾ ಒಂದು ‘ಶುಚಿ’ ಕಿಟ್ ವಿತರಿಸಲಾಗುತ್ತದೆ. ಒಂದು ಕಿಟ್‌ನಲ್ಲಿ 8 ತಿಂಗಳಿಗೆ ಸಾಕಾಗುವಷ್ಟು ಸ್ಯಾನಿಟರಿ ಪ್ಯಾಡ್‌ಗಳು ಇರುತ್ತವೆ. ಈ ಬಾರಿ ಸ್ಯಾನಿಟರಿ ಪ್ಯಾಡ್‌ಗಳನ್ನು ನೇರವಾಗಿ ಶಾಲಾ-ಕಾಲೇಜುಗಳಿಗೆ ಮತ್ತು ವಸತಿ ನಿಲಯಗಳಿಗೆ ಸರಬರಾಜು ಮಾಡಲಾಗುತ್ತಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಧು ಬಂಗಾರಪ್ಪ, ದಿನೇಶ್ ಗುಂಡೂರಾವ್ ಮತ್ತು ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ ಅವರು ವಿದ್ಯಾರ್ಥಿಗಳಿಗೆ ‘ಶುಚಿ’ ಕಿಟ್‌ಗಳನ್ನು ವಿತರಿಸಿದರು. ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

‘ಮುಜುಗರದ ಕಾರಣ ಹೆಣ್ಣು ಮಕ್ಕಳು ಮುಟ್ಟಿನ ಸಂದರ್ಭದಲ್ಲಿ ಆಗುವ ಸಮಸ್ಯೆಗಳ ಬಗ್ಗೆ ಬಹಿರಂಗವಾಗಿ ಮಾತನಾಡುತ್ತಿಲ್ಲ. ಋತುಸ್ರಾವದ ಬಗ್ಗೆ ಈಗಲೂ ಕೆಲವರಲ್ಲಿ ಅವೈಜ್ಞಾನಿಕ ಅಭಿಪ್ರಾಯಗಳಿವೆ. ಅಡುಗೆ ಮನೆಗೆ ಹೋಗಬಾರದು, ದೇವರ ಮನೆಗೆ ಹೋಗಬಾರದೆಂಬ ಮೂಢ ನಂಬಿಕೆಗಳಿವೆ. ಋತುಸ್ರಾವದ ವೇಳೆ ಆಗುವ ಸಮಸ್ಯೆಗಳ ನಿವಾರಣೆಗೆ ನೆರವಾಗಬೇಕಿದೆ’ ಎಂದು ತಿಳಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್.ಮಧು ಬಂಗಾರಪ್ಪ, ‘ಕೋವಿಡ್ ಕಾಣಿಸಿಕೊಂಡ ಬಳಿಕ ಆರೋಗ್ಯದ ಬಗ್ಗೆ ಜಾಗೃತಿ ಹೆಚ್ಚಿದೆ. ಆರೋಗ್ಯವೇ ನಮ್ಮ ಆಸ್ತಿ. ಆದ್ದರಿಂದ ಆರೋಗ್ಯವನ್ನು ಹಗುರವಾಗಿ ತೆಗೆದು-ಕೊಳ್ಳಬಾರದು. ಸರ್ಕಾರಿ, ಅನುದಾನಿತ ಶಾಲೆಗಳ ಮಕ್ಕಳಲ್ಲಿನ ಅಪೌಷ್ಟಿಕತೆ ಹೋಗಲಾಡಿಸಲು ಮೊಟ್ಟೆ, ಚಿಕ್ಕಿ ಹಾಗೂ ರಾಗಿ ಮಾಲ್ಟ್‌ಗಳನ್ನು ನೀಡಲಾಗುತ್ತಿದೆ. ನಮ್ಮ ಖಜಾನೆ ಖಾಲಿಯಾಗಿಲ್ಲ’ ಎಂದು ಹೇಳಿದರು.

‘ಮುಟ್ಟಿನ ಕಪ್‌ಗೆ ಉತ್ತಮ ಸ್ಪಂದನೆ’

‘ಐದು ತಿಂಗಳ ಹಿಂದೆ ಮಂಗಳೂರಿನಲ್ಲಿ ಚಾಲನೆ ನೀಡಲಾದ ‘ಶುಚಿ- ನನ್ನ ಮೈತ್ರಿ ಮುಟ್ಟಿನ ಕಪ್’ ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ದಕ್ಷಿಣ ಕನ್ನಡ ಹಾಗೂ ಚಾಮರಾಜನಗರ ಜಿಲ್ಲೆಯ 15 ಸಾವಿರ ವಿದ್ಯಾರ್ಥಿನಿಯರಿಗೆ ಈ ಕಪ್‌ಗಳನ್ನು ವಿತರಿಸಲಾಗಿದೆ. ಇದರ ಬಳಕೆ ಬಗ್ಗೆ ಅನುಮಾನವಿತ್ತು. ಆದ್ದರಿಂದ ವರದಿ ತರಿಸಿಕೊಳ್ಳಲಾಗಿದ್ದು, ಏಳು ಸಾವಿರ ವಿದ್ಯಾರ್ಥಿನಿಯರು ಬಳಸುತ್ತಿದ್ದಾರೆ. ಮುಟ್ಟಿನ ಕಪ್‌ಗಳು ಪರಿಸರ ಸ್ನೇಹಿಯಾಗಿವೆ’ ಎಂದು ದಿನೇಶ್ ಗುಂಡೂರಾವ್ ಹೇಳಿದರು.

‘ಸ್ಯಾನಿಟರಿ ಪ್ಯಾಡ್‌ಗಳ ವಿಲೇವಾರಿ ಕೂಡ ಮುಖ್ಯವಾಗುತ್ತದೆ. ಈ ಪ್ಯಾಡ್‌ಗಳ ವೈಜ್ಞಾನಿಕ ವಿಲೇವಾರಿ ಬಗ್ಗೆ ಶಿಕ್ಷಕರು ಜಾಗೃತಿ ಮೂಡಿಸಬೇಕು. ಮುಂದಿನ ದಿನಗಳಲ್ಲಿ ಪರಿಸರ ಸ್ನೇಹಿ ಪ್ಯಾಡ್‌ಗಳನ್ನು ಪರಿಚಯಿಸುವ ಬಗ್ಗೆಯೂ ಕ್ರಮವಹಿಸಲಾಗುವುದು’ ಎಂದು ತಿಳಿಸಿದರು.

ದೇಶದ್ರೋಹಿಗಳಿಗೆ ಕಾಂಗ್ರೆಸ್ ಕುಮ್ಮಕ್ಕು: ಬೊಮ್ಮಾಯಿ

ಹುಬ್ಬಳ್ಳಿ: ‘ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ದೇಶ-ದ್ರೋಹಿಗಳಿಗೆ ಹೆಚ್ಚು ಧೈರ್ಯ ಬಂದಿದೆ. ವಿಧಾನಸೌಧಕ್ಕೆ ಬಂದು ದೇಶದ್ರೋಹದ ಘೋಷಣೆ ಕೂಗಲು ಈ ಸರ್ಕಾರ ನೀಡಿರುವ ಪ್ರೋತ್ಸಾಹವೇ ಕಾರಣ. ಇಂಥ ಶಕ್ತಿಗಳನ್ನು ನಮ್ಮ ಸರ್ಕಾರ ಸದೆಬಡಿದಿತ್ತು’ ಎಂದು ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದ ಆವರಣದಲ್ಲಿ ಕಿಡಿಗೇಡಿಯೊಬ್ಬ ‘ಪಾಕಿಸ್ತಾನ್ ಜಿಂದಾಬಾದ್’ ಘೋಷಣೆ ಕೂಗಿದ ಪ್ರಕರಣದ ಕುರಿತು ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು,‘ಕೇವಲ ಮತಕ್ಕಾಗಿ ದೇಶದ ಭದ್ರತೆಯನ್ನು ಅಡ ಇಡುವ ಕೆಲಸ ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಮುಖ್ಯಮಂತ್ರಿ ಅವರು ಮತ ಬ್ಯಾಂಕ್ ಓಲೈಕೆ ರಾಜಕಾರಣದ ಮುಸುಕು ಹಾಕಿಕೊಂಡಿದ್ದಾರೆ. ಅದಕ್ಕೆ ಅವರಿಗೆ ಬೇರೆ ಏನೂ ಕಾಣುತ್ತಿಲ್ಲ’ ಎಂದರು.

‘ಕಾಂಗ್ರೆಸ್‌ನವರು ಒಂದೆಡೆ ದೇಶ ಒಡೆಯುವುದು ಮಾತನಾಡಿದರೆ, ಇನ್ನೊಂದೆಡೆ ದೇಶದ್ರೋಹಿ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಾರೆ. ಅವರಿಂದ ಈ ದೇಶ, ನಾಡನ್ನು ಸುರಕ್ಷಿತವಾಗಿ-ಡಲು ಆಗಲ್ಲ. ಅವರು ನೈತಿಕತೆ ಕಳೆದುಕೊಂಡಿದ್ದಾರೆ. ಜನ ಎಚ್ಚೆತ್ತುಕೊಂಡು ಎಷ್ಟು ಬೇಗ ಈ ಸರ್ಕಾರವನ್ನು ಕಿತ್ತೊಗೆಯುತ್ತಾರೋ, ಅಷ್ಟು ಬೇಗ ಈ ನಾಡು ಮತ್ತು ದೇಶಕ್ಕೆ ಒಳ್ಳೆಯದಾಗುತ್ತದೆ’ ಎಂದು ಅವರು ಹೇಳಿದರು.

ವಿದ್ಯುತ್ ದರ ಇಳಿಕೆ

ಒಂದನೇ ಪುಟದಿಂದ...

- ಖಾಸಗಿ ಏತ ನೀರಾವರಿ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ ₹2 ಇಳಿಕೆ ಮಾಡಿದೆ. ಎಚ್.ಟಿ. ವಿದ್ಯುತ್ ಬಳಕೆಯ ಕೈಗಾರಿಕೆಗಳಿಗೆ ಪ್ರತಿ ಯೂನಿಟ್‌ಗೆ ₹1 ಹಾಗೂ ಎಲ್.ಟಿ. ವಾಣಿಜ್ಯೋದ್ಯಮ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ 50 ಪೈಸೆ ಇಳಿಕೆ ಮಾಡಿದೆ.

ಎಸ್ಕಾಂಗಳು ವಾರ್ಷಿಕ ಕಂದಾಯ ಅಗತ್ಯತೆಗಾಗಿ ದರ ಪರಿಷ್ಕರಣೆಯ ಅರ್ಜಿಯಲ್ಲಿ ₹69,474.75 ಕೋಟಿಗಳಿಗೆ ಅನುಮೋದನೆ ನೀಡುವಂತೆ (ಶೇ7.53ರಷ್ಟು ದರ ಹೆಚ್ಚಳಕ್ಕೆ) ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದವು. ಆಯೋಗವು ಅರ್ಜಿಗಳ ಪರಿಶೀಲನೆ ನಂತರ, ₹64,944.54 ಕೋಟಿಗೆ ಅನುಮೋದನೆ ನೀಡಿದೆ.

ಎಲ್ಲ ಎಸ್ಕಾಂಗಳೂ ₹4863.85 ಕೋಟಿ ಕೊರತೆ ತುಂಬಲು ಪ್ರತಿ ಯೂನಿಟ್‌ಗೆ ₹ 49 ರಿಂದ ₹163 ಪೈಸೆ ವರೆಗೆ ದರ ಏರಿಕೆಗಾಗಿ ಮನವಿ ಸಲ್ಲಿಸಿದ್ದವು. ಕಂಪನಿಗಳ ಮನವಿಯನ್ನು ಆಯೋಗ ಮಾನ್ಯ ಮಾಡಿಲ್ಲ. ಆಯೋಗದ ಆದೇಶದಂತೆ 2024-25 ರಲ್ಲಿ ₹565.39 ಕೋಟಿ ಹೆಚ್ಚುವರಿ ಆದಾಯ ಸಂಗ್ರಹವಾಗಲಿದೆ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ

50 ನೇ ವರ್ಷದ ಸುವರ್ಣ ಸಂಭ್ರಮ

ರಾಜ್ಯ ಸರ್ಕಾರಿ ಪಡಿತರ ವಿತರಕರ ಸಮಾವೇಶ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅನ್ನಭಾಗ್ಯ
ಹಸಿವು ಮುಕ್ತ ಕರ್ನಾಟಕ

ದಶಮಾನೋತ್ಸವ

ದಿನಾಂಕ: 29 ಫೆಬ್ರವರಿ 2024, ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಕೃಷ್ಣ ವಿಹಾರ, ಅರಮನೆ ಮೈದಾನ, ಬೆಂಗಳೂರು

ಅನ್ನಭಾಗ್ಯ ಯೋಜನೆಯ ದಶಮಾನೋತ್ಸವ ಸಂಭ್ರಮ

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ **ಅನ್ನಭಾಗ್ಯ** ಯೋಜನೆಯನ್ನು ಜುಲೈ 2013 ರಿಂದ ಜಾರಿಗೊಳಿಸಲಾಗಿರುತ್ತದೆ.

ಹಸಿವು ಮುಕ್ತ ಕರ್ನಾಟಕದ ಧ್ಯೇಯದೊಂದಿಗೆ ಈ ಯೋಜನೆಯ ಮುನ್ನುಡಿ ಹಾಕಲಾಯಿತು. ಪ್ರತಿಯೊಂದು ಕುಟುಂಬಕ್ಕೂ ಆಹಾರ ಭದ್ರತೆ ಜೊತೆಗೆ ಪೌಷ್ಠಿಕಯುಕ್ತ ಆಹಾರ ನೀಡುವುದರ ಮೂಲಕ ಈ ಯೋಜನೆಯ ಅನುಷ್ಠಾನ.

ಮೊದಲಿಗೆ ಒಬ್ಬ ಫಲಾನುಭವಿಗೆ 10 ಕೆ.ಜಿ., ಇಬ್ಬರಿಗೆ 20 ಕೆಜಿ ಹಾಗೂ ಮೂರು ಮತ್ತು ಮೇಲ್ಪಟ್ಟ ಸದಸ್ಯರಿಗೆ 30 ಕೆಜಿ ಯಂತೆ ವಿತರಣೆ ಮಾಡಲಾಯಿತು. **ಪ್ರತಿ ಕೆ.ಜಿ. ಆಹಾರ ಧಾನ್ಯಕ್ಕೆ ಒಂದು ರೂ.ನಂತೆ ವಿತರಣೆ.**

ಉಚಿತ ಆಹಾರ ಧಾನ್ಯ ವಿತರಣೆಯನ್ನು **ಮೇ 2015 ರಿಂದ ಪ್ರಾರಂಭಿಸಲಾಯಿತು.**

ಪ್ರಸ್ತುತ ಪ್ರತಿ ಫಲಾನುಭವಿಗೆ 5 ಕೆ.ಜಿ. ಆಹಾರ ಧಾನ್ಯವನ್ನು ಉಚಿತವಾಗಿ ವಿತರಿಸಲಾಗುತ್ತಿರುವುದರ ಜೊತೆಗೆ **5 ಕೆ.ಜಿ. ಹೆಚ್ಚುವರಿ ಆಹಾರ ಧಾನ್ಯಕ್ಕೆ ಪ್ರತಿಯಾಗಿ ಪ್ರತಿ ತಿಂಗಳು ರೂ. 170ರ ಮೊತ್ತವನ್ನು ಡಿಬಿಟಿ ಮೂಲಕ ಫಲಾನುಭವಿಗಳಿಗೆ ನೇರ ಹಣ ಜಮೆ**

1.28 ಕೋಟಿ ಕುಟುಂಬಗಳ 4.40 ಕೋಟಿ ಅರ್ಹ ಫಲಾನುಭವಿಗಳಿಗೆ ಸುಮಾರು ರೂ.4,595 ಕೋಟಿ ಮೊತ್ತವನ್ನು ಡಿಬಿಟಿ ಮೂಲಕ ವರ್ಗಾವಣೆ

ಶ್ರೀ ಕೆ.ಹೆಚ್. ಮುನಿಯಪ್ಪ,
ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು
ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ನೂತನ ಅಧ್ಯಕ್ಷರು ಹಾಗೂ
ಹೊಸದುರ್ಗ ವಿಧಾನಸಭಾ ಕ್ಷೇತ್ರದ ಶಾಸಕರಾದ
ಶ್ರೀ ಬಿ.ಜಿ. ಗೋವಿಂದಪ್ಪ ರವರನ್ನು ಅಭಿನಂದಿಸುತ್ತಿರುವುದು.

ನುಡಿದಂತೆ ನಡೆದಿದ್ದೇವೆ...

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹ ಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg (5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170)

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

ಅನ್ನಭಾಗ್ಯ ದಶಮಾನೋತ್ಸವ ಕಾರ್ಯಕ್ರಮದ ಸ್ಥಳ

ಹಿಮಾಚಲ ಪ್ರದೇಶ: ಕಾಂಗ್ರೆಸ್ ರಾಜ್ಯ ನಾಯಕರೊಂದಿಗೆ ವೀಕ್ಷಕರ ಸಮಾಲೋಚನೆ

ಸರ್ಕಾರ ಉಳಿಸಿಕೊಳ್ಳಲು 'ಕೈ' ಹರಸಾಹಸ

ಪ್ರಜಾವಾಣಿ ವಾರ್ತೆ

ಶಿಮ್ಲಾದಲ್ಲಿ ಬುಧವಾರ ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಜತೆ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾಲೋಚನೆ ನಡೆಸಿದರು —ಪಿಟಿಐ ಚಿತ್ರ

ನವದೆಹಲಿ: ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಅಭಿಷೇಕ್ ಮನು ಸಿಂಘ್ವಿ ಸೋತು ಮುಖಭಂಗ ಅನುಭವಿಸಿದ ಬಳಿಕ ಹಿಮಾಚಲ ಪ್ರದೇಶದಲ್ಲಿ ತನ್ನ ಸರ್ಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಹರಸಾಹಸ ಪಡುತ್ತಿದೆ.

ವಿಧಾನಸಭೆಯಿಂದ ವಿರೋಧ ಪಕ್ಷದ ನಾಯಕ ಜೈರಾಮ್ ಠಾಕೂರ್ ಸೇರಿದಂತೆ ಬಿಜೆಪಿಯ 15 ಸದಸ್ಯರನ್ನು ಅಮಾನತುಗೊಳಿಸಲಾಗಿದೆ. ಅದರ ಬೆನ್ನಲ್ಲೇ, ಬಜೆಟ್‌ಗೆ ಅಂಗೀಕಾರ ಪಡೆಯಲಾಗಿದೆ. ಅಡ್ಡ ಮತದಾನ ಮಾಡಿದ ಕಾಂಗ್ರೆಸ್‌ನ ಆರು ಶಾಸಕರನ್ನು ಅನರ್ಹಗೊಳಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ವಿಧಾನಸಭಾಧ್ಯಕ್ಷರ ಮುಂದೆ ಹಾಜರಾದ ಬಂಡಾಯ ಶಾಸಕರ ಪರ ವಕೀಲರು, 'ಪಕ್ಷಾಂತರ ನಿಷೇಧ ಕಾನೂನು ರಾಜ್ಯಸಭಾ ಚುನಾವಣೆಗೆ ಅನ್ವಯಿಸುವುದಿಲ್ಲ' ಎಂದು ಪ್ರತಿಪಾದಿಸಿದರು. ಷೋಕಾಸ್ ನೋಟಿಸ್‌ಗೆ ಉತ್ತರ ನೀಡಲು ಏಳು ದಿನಗಳ ಕಾಲಾವಕಾಶ ಕೋರಲಾಗಿದೆ ಎಂದರು.

ಪಕ್ಷದ ನಾಯಕರೊಂದಿಗೆ ಮಾತುಕತೆ ನಡೆಸಲು ಹಾಗೂ ಅತೃಪ್ತ ಶಾಸಕರ ಮನವೊಲಿಸಲು ವೀಕ್ಷಕರಾದ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಭೂಪೇಶ್ ಬಘೇಲ್, ಭೂಪಿಂದರ್ ಸಿಂಗ್ ಹೂಡಾ ಅವರು ಶಿಮ್ಲಾಕ್ಕೆ ದೌಡಾಯಿಸಿದ್ದಾರೆ. ರಾಜ್ಯ ನಾಯಕರೊಂದಿಗೆ ವೀಕ್ಷಕರು ಸಮಾಲೋಚನೆ ನಡೆಸಿದ್ದಾರೆ.

ಹಿಮಾಚಲ ಪ್ರದೇಶದ ಬೆಳವಣಿಗೆಗಳ ಕುರಿತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಮಾಜಿ ಮುಖ್ಯಸ್ಥ ರಾಹುಲ್ ಗಾಂಧಿ ಮತ್ತು ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಕಾರ್ಯಶೈಲಿಯ ಬಗ್ಗೆ ಪ್ರಭಾವಿ ಸಚಿವ ವಿಕ್ರಮಾದಿತ್ಯ ಸಿಂಗ್ ಸೇರಿದಂತೆ ಹಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಬದಲಾವಣೆಗೆ ಹೈಕಮಾಂಡ್ ಮೇಲೆ ಒತ್ತಡ ಹೇರಿದ್ದಾರೆ. ಈ ನಡುವೆ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಸುಖು ಸ್ಪಷ್ಟಪಡಿಸಿದ್ದಾರೆ. ಉತ್ತರ ಭಾರತದಲ್ಲಿ ಆಡಳಿತದಲ್ಲಿರುವ ಏಕೈಕ ಸರ್ಕಾರವನ್ನು ಉಳಿಸಿಕೊಳ್ಳಲು ಪಕ್ಷವು ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳಲು ಸಿದ್ಧವಾಗಿದೆ ಎಂಬ ಸಂದೇಶವನ್ನು ಹೈಕಮಾಂಡ್ ರವಾನಿಸಿದೆ. ಪಕ್ಷದ ವೀಕ್ಷಕರು ಎಲ್ಲ ಶಾಸಕರ ಅಭಿಪ್ರಾಯ ಸಂಗ್ರಹಿಸಿ ಗುರುವಾರ ಸಂಜೆಯೊಳಗೆ ಹೈಕಮಾಂಡ್‌ಗೆ ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಜೆಪಿ ಶಾಸಕರು ರಾಜ್ಯಪಾಲರನ್ನು ಭೇಟಿ ಮಾಡಿ ಬಹುಮತ ಸಾಬೀತುಪಡಿಸಲು ಮುಖ್ಯಮಂತ್ರಿಗೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು. ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಗದ್ದಲ ಎಬ್ಬಿಸಿದ ಆರೋಪದಲ್ಲಿ 15 ಶಾಸಕರನ್ನು ವಿಧಾನ ಸಭಾಧ್ಯಕ್ಷರು ಅಮಾನತು ಮಾಡಿದರು. ವಿರೋಧ ಪಕ್ಷದ ಉಳಿದ ಶಾಸಕರು ಸಭಾತ್ಯಾಗ ಮಾಡಿದರು. ಆ ಬಳಿಕ ಬಜೆಟ್‌ಗೆ ಅಂಗೀಕಾರ ಪಡೆಯಲಾಯಿತು. ಈ ಮೂಲಕ, ಬುಧವಾರದ ಮಟ್ಟಿಗೆ ಸರ್ಕಾರವನ್ನು ಉಳಿಸಿಕೊಳ್ಳುವಲ್ಲಿ ಕಾಂಗ್ರೆಸ್ ಯಶಸ್ವಿಯಾಯಿತು.

'ಹಿಮಾಚಲ ಪ್ರದೇಶದಲ್ಲಿ ಸರ್ಕಾರ ಉಳಿಸಿಕೊಳ್ಳಲು ಕೆಲವು ಕಠಿಣ ಕ್ರಮ ಕೈಗೊಳ್ಳಲು ಪಕ್ಷ ಹಿಂಜರಿಯುವುದಿಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತಿಳಿಸಿದರು. 68 ಸದಸ್ಯ ಬಲದ ವಿಧಾನ ಸಭೆಯಲ್ಲಿ ಕಾಂಗ್ರೆಸ್ 40 ಸದಸ್ಯರನ್ನು ಹೊಂದಿದೆ. ಮೂವರು ಪಕ್ಷೇತರ ಶಾಸಕರು ಸರ್ಕಾರವನ್ನು ಬೆಂಬಲಿಸಿದ್ದರು. ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ಆರು ಶಾಸಕರು ಅಡ್ಡ ಮತದಾನ ಮಾಡಿದ್ದರು.

> ನಾನು ಹೋರಾಟಗಾರ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಿಲ್ಲ. ಆರು ಶಾಸಕರ ವಿರುದ್ಧ ಅನರ್ಹತೆ ಅರ್ಜಿ ಸಲ್ಲಿಸಲಾಗಿದೆ. ಕಾಂಗ್ರೆಸ್ ಸರ್ಕಾರವು ಸುಭದ್ರವಾಗಿರಲಿದೆ
> **ಸುಖ್ವಿಂದರ್ ಸಿಂಗ್ ಸುಖು,** ಹಿಮಾಚಲ ಪ್ರದೇಶ ಮುಖ್ಯಮಂತ್ರಿ

ಸಚಿವ ವಿಕ್ರಮಾದಿತ್ಯ ನಿಲುವು ಮೃದು

ಲೋಕೋಪಯೋಗಿ ಸಚಿವ ವಿಕ್ರಮಾದಿತ್ಯ ಸಿಂಗ್ ಅವರು ಸಚಿವ ಸ್ಥಾನಕ್ಕೆ ಬುಧವಾರ ರಾಜೀನಾಮೆ ಸಲ್ಲಿಸಿದ್ದಾರೆ. ತಮ್ಮನ್ನು ಅವಮಾನಿಸಲಾಗಿದ್ದು, ಸುಖು ಸಂಪುಟದಲ್ಲಿ ಒಂದು ಗಂಟೆ ಮುಂದುವರಿಯುವುದೂ ಕಷ್ಟ ಎಂದೂ ಅವರು ಹೇಳಿದ್ದಾರೆ. ಪಕ್ಷದ ಮುಖಂಡರು ತಮ್ಮನ್ನು ಭೇಟಿಯಾಗಿ ಚರ್ಚಿಸಿದ ಬೆನ್ನಲ್ಲೇ ತಮ್ಮ ನಿಲುವನ್ನು ಮೃದುಗೊಳಿಸಿರುವ ವಿಕ್ರಮಾದಿತ್ಯ ಸರ್ಕಾರದಲ್ಲಿ ಯಾವುದೇ ಬಿಕ್ಕಟ್ಟು ಇಲ್ಲ ಎಂದಿದ್ದಾರೆ.

ಅವರು ಮಾಜಿ ಮುಖ್ಯಮಂತ್ರಿ ದಿವಂಗತ ವೀರಭದ್ರ ಸಿಂಗ್ ಹಾಗೂ ಹಿಮಾಚಲ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥೆ ಪ್ರತಿಭಾ ಸಿಂಗ್ ಅವರ ಪುತ್ರ. 'ಕೆಲವು ಕಡೆಗಳಿಂದ ನನ್ನನ್ನು ಅವಮಾನಿಸುವ ಹಾಗೂ ದುರ್ಬಲಗೊಳಿಸುವ ಪ್ರಯತ್ನಗಳು ನಡೆದಿವೆ. ಇಷ್ಟರ ನಡುವೆಯೂ, ಸರ್ಕಾರವನ್ನು ಬೆಂಬಲಿಸಿದ್ದೇನೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. 'ರಾಜ್ಯದ ಬೆಳವಣಿಗೆಗಳ ಕುರಿತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಮಾಹಿತಿ ನೀಡಿದ್ದೇನೆ. ಚೆಂಡು ಈಗ ಹೈಕಮಾಂಡ್ ಅಂಗಳದಲ್ಲಿದೆ. ಏನು ತಪ್ಪಾಗಿದೆ ಎಂಬುದರ ಕುರಿತು ಕಾಂಗ್ರೆಸ್ ನಾಯಕರು ಯೋಚಿಸುವ ಅಗತ್ಯ ಇದೆ' ಎಂದು ಅವರು ಹೇಳಿದರು.

'ವಿಕ್ರಮಾದಿತ್ಯ ಅವರ ರಾಜೀನಾಮೆ ಅಂಗೀಕರಿಸಿಲ್ಲ. ಅವರು ಕಿರಿಯ ಸಹೋದರ ಇದ್ದಂತೆ. ಅವರು ಕೆಲವು ಬೇಡಿಕೆಗಳನ್ನು ಮುಂದಿಟ್ಟಿದ್ದು, ಅವುಗಳನ್ನು ಬಗೆಹರಿಸಲಾಗುವುದು' ಎಂದು ಸುಖು ತಿಳಿಸಿದರು.

ಬುಧವಾರದ ಬೆಳವಣಿಗೆ

- ರಾಜ್ಯಪಾಲರ ಭೇಟಿಯಾದ ಬಿಜೆಪಿ ನಿಯೋಗ
- ಸದನದಿಂದ ಬಿಜೆಪಿಯ 15 ಶಾಸಕರ ಅಮಾನತು
- ಬಜೆಟ್‌ಗೆ ಅಂಗೀಕಾರ
- **ಅನರ್ಹತೆ ನೋಟಿಸ್:** ಕಾಲಾವಕಾಶ ಕೇಳಿದ ಬಂಡಾಯ ಶಾಸಕರು

ಸುದ್ದಿ 2 ನಿಮಿಷ

ಅಕ್ರಮ ಗಣಿಗಾರಿಕೆ ಪ್ರಕರಣ: ಅಖಿಲೇಶ್‌ಗೆ ಸಿಬಿಐ ಸಮನ್ಸ್

ನವದೆಹಲಿ: ಐದು ವರ್ಷಗಳ ಹಿಂದೆ ದಾಖಲಾಗಿದ್ದ ಅಕ್ರಮ ಗಣಿಗಾರಿಕೆ ಪ್ರಕರಣದ ವಿಚಾರಣೆ ಸಂಬಂಧ ಸಮಾಜವಾದಿ ಪಕ್ಷದ ಅಧ್ಯಕ್ಷ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರಿಗೆ ಸಿಬಿಐ ಸಮನ್ಸ್ ನೀಡಿದೆ.

2019ರಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಆರ್‌ಪಿಸಿ ಸೆಕ್ಷನ್ 160ರ ಅಡಿಯಲ್ಲಿ ಪ್ರಕರಣದ ವಿಚಾರಣೆಗೆ ಫೆ. 29ರಂದು ಹಾಜರಾಗುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಹಾಗೂ ಕಾಂಗ್ರೆಸ್ ಸೀಟು ಹಂಚಿಕೆಯನ್ನು ಘೋಷಿಸಿದ ಬಳಿಕ ಈ ಬೆಳವಣಿಗೆ ನಡೆದಿದೆ.

ಇ-ಟೆಂಡರ್ ಪ್ರಕ್ರಿಯೆಯನ್ನು ಉಲ್ಲಂಘಿಸಿ ಗಣಿಗಾರಿಕೆಯ ಗುತ್ತಿಗೆಗಳನ್ನು ನೀಡಿರುವ ಕುರಿತ ಪ್ರಕರಣ ಇದಾಗಿದ್ದು, ಅಲಹಾಬಾದ್ ಹೈಕೋರ್ಟ್ ಆದೇಶದ ಮೇರೆಗೆ ತನಿಖೆ ನಡೆಯುತ್ತಿದೆ.

'ಬಿಜೆಪಿಗೆ ಅತಿಹೆಚ್ಚು ವರಮಾನ'

ನವದೆಹಲಿ (ಪಿಟಿಐ): 2022–23ನೇಯ ಹಣಕಾಸು ವರ್ಷದಲ್ಲಿ ಆರು ರಾಷ್ಟ್ರೀಯ ಪಕ್ಷಗಳು ಒಟ್ಟು ₹3,077 ಕೋಟಿ ವರಮಾನ ಪಡೆದಿರುವುದಾಗಿ ಘೋಷಿಸಿಕೊಂಡಿವೆ. ಈ ಪೈಕಿ ಬಿಜೆಪಿಯ ವರಮಾನವು ಒಟ್ಟು ₹2,361 ಕೋಟಿ. ಅಂದರೆ ಆರು ರಾಷ್ಟ್ರೀಯ ಪಕ್ಷಗಳ ಒಟ್ಟು ವರಮಾನದ ಶೇಕಡ 76.73ರಷ್ಟು.

ಎರಡನೆಯ ಅತಿಹೆಚ್ಚಿನ ವರಮಾನ ಇರುವುದು ಕಾಂಗ್ರೆಸ್ಸಿಗೆ. ಈ ಪಕ್ಷವು 2022–23ನೆಯ ಹಣಕಾಸು ವರ್ಷದಲ್ಲಿ ₹452.37 ಕೋಟಿ ವರಮಾನ ಗಳಿಸಿದೆ, ಇದು ಆರು ರಾಷ್ಟ್ರೀಯ ಪಕ್ಷಗಳ ಒಟ್ಟು ಆದಾಯದ ಶೇ 14.70ರಷ್ಟು ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ತಿಳಿಸಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ಮಾತ್ರವೇ ಅಲ್ಲದೆ, ಬಿಎಸ್‌ಪಿ, ಎಎಪಿ, ಎನ್‌ಪಿಪಿ ಹಾಗೂ ಸಿಪಿಎಂ ಪಕ್ಷಗಳು ತಮ್ಮ ವರಮಾನ ಘೋಷಿಸಿವೆ.

2021-22ನೆಯ ಹಣಕಾಸು ವರ್ಷದಿಂದ 2022–23ನೆಯ ಹಣಕಾಸು ವರ್ಷದ ನಡುವಿನ ಅವಧಿಯಲ್ಲಿ ಬಿಜೆಪಿಯ ವರಮಾನವು ಶೇ 23.15ರಷ್ಟು (ಮೊತ್ತದ ಲೆಕ್ಕದಲ್ಲಿ ₹443.72 ಕೋಟಿಯಷ್ಟು) ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಕಾಂಗ್ರೆಸ್ಸಿನ ವರಮಾನವು ಶೇ 16.42ರಷ್ಟು (ಮೊತ್ತದ ಲೆಕ್ಕದಲ್ಲಿ ₹88.90 ಕೋಟಿ) ಹೆಚ್ಚಾಗಿದೆ.

ಕೇರಳ: 16 ಕಡೆ ಕಾಂಗ್ರೆಸ್ ಸ್ಪರ್ಧೆ

ತಿರುವನಂತಪುರ: ಮುಂಬರುವ ಲೋಕಸಭಾ ಚುನಾವಣೆಗೆ ಕೇರಳದಲ್ಲಿ ಪಕ್ಷವು 16 ಸ್ಥಾನಗಳಲ್ಲಿ ಸ್ಪರ್ಧಿಸಲಿದೆ. ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್‌ನಲ್ಲಿ (ಯುಡಿಎಫ್) ಸೀಟು ಹಂಚಿಕೆ ಅಂತಿಮವಾಗಿದೆ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

ಅಭ್ಯರ್ಥಿಗಳ ಪಟ್ಟಿಯು ಅಂತಿಮಗೊಂಡಿದ್ದು, ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಅದು ಹೇಳಿದೆ.

ಕೇರಳದ 20 ಲೋಕಸಭಾ ಸ್ಥಾನಗಳ ಪೈಕಿ ಕಾಂಗ್ರೆಸ್ 16 ಸ್ಥಾನಗಳಲ್ಲಿ ಸ್ಪರ್ಧಿಸಲಿದೆ. ಈ ಹಿಂದಿನಂತೆ, ಐಯುಎಂಎಲ್ ಪಕ್ಷವು ಈ ಬಾರಿಯೂ ಮಲಪ್ಪುರಂ ಮತ್ತು ಪೊನ್ನಾನಿ ಈ ಎರಡು ಕ್ಷೇತ್ರಗಳಲ್ಲಿ, ಕೊಲ್ಲಂನಲ್ಲಿ ಆರ್‌ಎಸ್‌ಪಿ ಮತ್ತು ಕೊಟ್ಟಾಯಂನಲ್ಲಿ ಕೇರಳ ಕಾಂಗ್ರೆಸ್ (ಜೋಸೆಫ್) ಸ್ಪರ್ಧಿಸಲಿವೆ.

ತನ್ನ 2ನೇ ಅತಿದೊಡ್ಡ ಸಮ್ಮಿಶ್ರ ಪಾಲುದಾರ ಪಕ್ಷ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೆ ಈ ಬಾರಿ ಮತ್ತೊಂದು ಹೆಚ್ಚುವರಿ ಲೋಕಸಭಾ ಸ್ಥಾನ ನೀಡುವುದಾಗಿ ಮನವರಿಕೆ ಮಾಡಿಕೊಡಲಾಗಿದೆ ಎಂದು ಕಾಂಗ್ರೆಸ್ ಸ್ಪಷ್ಟಪಡಿಸಿದೆ.

ಸಾರ್ವಜನಿಕ ಪ್ರಕಟಣೆ

FANUC ಇಂಡಿಯಾ ಹೊರಡಿಸಿರುವ ವಂಚನೆ ಕುರಿತ ಎಚ್ಚರಿಕೆ ಸೂಚನೆ

ಭಾರತದಾದ್ಯಂತ ವಿವಿಧ ಸ್ಥಳಗಳಲ್ಲಿ 22 ಕಚೇರಿಗಳನ್ನು ಹೊಂದಿರುವ FANUC ಇಂಡಿಯಾ ಪ್ರೈ. ಲಿ. ಕಂಪನಿಯು ನಂ. 41–ಎ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು – 560 100 ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ ಮತ್ತು ಈ ಕಂಪನಿಯು ಫ್ಯಾಕ್ಟರಿ ಆಟೊಮೇಶನ್ ಉತ್ಪನ್ನಗಳ ಮಾರಾಟ ಮತ್ತು ಜೊತೆಗೆ ಒಟ್ಟು 22 ಪ್ರದೇಶಗಳಲ್ಲಿ ತನ್ನ ಕಚೇರಿಗಳನ್ನು ಹೊಂದಿದ್ದು ನಂತರದ ಸೇವೆಗಳನ್ನು ("FANUC ಪ್ರಾಡಕ್ಟ್") ಒದಗಿಸುವ ವ್ಯವಹಾರ ಮಾಡುತ್ತದೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, FANUC ಬ್ರಾಂಡ್ ಹೆಸರಿನ ಅಡಿಯಲ್ಲಿ www.fanuccc.com; www.fanuctop.com ಎನ್ನುವಂತಹ ದುರುದ್ದೇಶವುಳ್ಳ ಸೈಟ್‌ಗಳು ಮತ್ತು ಗುಂಪುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಈ ಕುರಿತಂತೆ, ಕಂಪನಿಯು ಈಗಾಗಲೇ ಸಿ.ಇ.ಎನ್. ಪೊಲೀಸ್ ಠಾಣೆ, ಆಗ್ನೇಯ ವಿಭಾಗ, (ಹೆಚ್‌ಎಸ್‌ಆರ್ ಬಡಾವಣೆ), ಬೆಂಗಳೂರು ಇವರಲ್ಲಿ ದೂರು ಸಲ್ಲಿಸಿರುತ್ತದೆ, ಅದಾಗ್ಯೂ ದುರುದ್ದೇಶವುಳ್ಳ ಆ ಗುಂಪುಗಳು ಸಾಮಾಜಿಕ ಜಾಲತಾಣಗಳಲ್ಲಿ ಇನ್ನೂವರೆಗೆ ಸಕ್ರಿಯವಾಗಿವೆ.

ವಂಚಕರು ಇಂತಹ ಸೈಟ್‌ಗಳಲ್ಲಿ ಮತ್ತು ಗುಂಪುಗಳಲ್ಲಿ, ತಮಗೆ ಶುಲ್ಕ ಪಾವತಿಸಿದರೆ FANUC ಕಂಪನಿಯಲ್ಲಿ ಉದ್ಯೋಗ ಕೊಡಿಸುವುದಾಗಿ ಆಮಿಷವೊಡ್ಡುತ್ತಾರೆ, FANUC ಕಂಪನಿಯಲ್ಲಿ ಮತ್ತು ಅದರ ಉತ್ಪನ್ನಗಳಲ್ಲಿ ಹೂಡಿಕೆ ಮಾಡಲು ಆಹ್ವಾನಿಸುತ್ತಾರೆ, FANUC ಏಜೆಂಟ್ ಆಗಿ ಉತ್ತಮ ಕಮಿಷನ್, ಬೋನಸ್ ಇತ್ಯಾದಿಗಳನ್ನು ಸಂಪಾದಿಸಿರಿ ಎಂದು ಪುಸಲಾಯಿಸುತ್ತಾರೆ, ಆದರೆ ಫನುಕ್ ಇಂಡಿಯಾ ಕಂಪನಿಯು ಇಂತಹ ಯಾವುದೇ ಸ್ಕೀಮ್‌ಗಳನ್ನು ಸಾರ್ವಜನಿಕರಿಗೆ ನೀಡುತ್ತಿಲ್ಲ ಮತ್ತು ಸಾರ್ವಜನಿಕರಿಂದ ಯಾವುದೇ ಶುಲ್ಕ ಪಾವತಿ ಅಥವಾ ಹೂಡಿಕೆಯನ್ನು ಬಯಸುತ್ತಿಲ್ಲ. ಕೆಲವು ವಂಚಕರು ನಮ್ಮ ಬ್ರಾಂಡ್‌ನ ಲೋಗೊವನ್ನು, ಕಂಪನಿ ಕಟ್ಟಡದ ಫೋಟೊಗಳನ್ನು, ಉತ್ಪನ್ನಗಳ ಚಿತ್ರಗಳನ್ನು, ವಿಡಿಯೋಗಳನ್ನು ನಕಲು ಮಾಡಿ, ಸಾರ್ವಜನಿಕರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ.

ಇಂತಹ ಮೋಸಗಾರರಿಗೆ ಸಾರ್ವಜನಿಕರು ಯಾವುದೇ ಮೊತ್ತವನ್ನು ಪಾವತಿಸಿದರೆ ಅಥವಾ ಅವರಲ್ಲಿ ಹೂಡಿಕೆ ಮಾಡಿದಲ್ಲಿ, ಅಂತಹುದಕ್ಕೆ FANUC ಇಂಡಿಯಾ ಹೊಣೆಯಾಗಿರುವುದಿಲ್ಲ. ಒಂದು ವೇಳೆ ನೀವು ಇಂತಹ ಮೋಸಗಾರರ ವಂಚನೆಯ ಜಾಲಕ್ಕೆ ಒಳಗಾಗಿದ್ದರೆ, ದಯವಿಟ್ಟು ತಕ್ಷಣವೇ ನಿಮ್ಮ ಸಮೀಪದ ಪೊಲೀಸ್ ಠಾಣೆಗೆ ಅಥವಾ ಸಿ.ಇ.ಎನ್. ಪೊಲೀಸ್ ಠಾಣೆ, ಆಗ್ನೇಯ ವಿಭಾಗ, (ಹೆಚ್‌ಎಸ್‌ಆರ್ ಬಡಾವಣೆ), ಬೆಂಗಳೂರು ಇವರಿಗೆ ಭೇಟಿ ಕೊಡಿ.

ಸಾರ್ವಜನಿಕರು ದಯವಿಟ್ಟು www.fanucindia.com ಎಂಬ ನಮ್ಮ ಅಧಿಕೃತ ವೆಬ್‌ಸೈಟ್ ಮತ್ತು ಡೊಮೇನ್ ಹೆಸರನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ವಿನಂತಿಸುತ್ತಿದ್ದೇವೆ.

ಜಾಹೀರಾತು ವಿವಾದ • ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮೋದಿ ಟೀಕೆ

'ವಿಜ್ಞಾನಿಗಳಿಗೆ ಡಿಎಂಕೆ ಅವಮಾನ'

ಪ್ರಜಾವಾಣಿ ವಾರ್ತೆ/ಪಿಟಿಐ

ತಮಿಳುನಾಡಿನ ತೂತ್ತುಕುಡಿಯಲ್ಲಿ ಬುಧವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮೊದಲ ಜಲಜನಕ ಚಾಲಿತ ದೋಣಿಯ ಪ್ರತಿಕೃತಿ ವೀಕ್ಷಿಸಿದರು —ಪಿಟಿಐ ಚಿತ್ರ

ತೂತ್ತುಕುಡಿ(ತಮಿಳುನಾಡು): ಜಿಲ್ಲೆಯ ಕುಲಶೇಖರಪಟ್ಟಿಣಂನಲ್ಲಿ ಇಸ್ರೊದ ರಾಕೆಟ್ ಉಡ್ಡಯನ ನೆಲೆ ಶಂಕುಸ್ಥಾಪನೆ ಕಾರ್ಯಕ್ರಮ ಕುರಿತು ಬುಧವಾರ ಪ್ರಕಟವಾಗಿರುವ ಜಾಹೀರಾತುಗಳು ಭಾರಿ ವಿವಾದಕ್ಕೆ ಕಾರಣವಾಗಿವೆ.

ಈ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿಯ ರಾಜ್ಯ ಘಟಕ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಆಡಳಿತಾರೂಢ ಡಿಎಂಕೆ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಇದು ದೇಶದ ವಿಜ್ಞಾನಿಗಳಿಗೆ ಹಾಗೂ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಮಾಡಿದ ಅವಮಾನ' ಎಂದು ಮೋದಿ ಟೀಕಿಸಿದ್ದಾರೆ.

ಶಂಕುಸ್ಥಾಪನೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ತಮಿಳುನಾಡು ಮೀನುಗಾರಿಕೆ ಸಚಿವೆ ಅನಿತಾ ರಾಧಾಕೃಷ್ಣನ್ ನೀಡಿರುವ ಜಾಹೀರಾತುಗಳು ತಮಿಳು ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಭಾವಚಿತ್ರಗಳ ಜೊತೆಗೆ ರಾಕೆಟ್‌ವೊಂದರ ಚಿತ್ರವೂ ಜಾಹೀರಾತಿನಲ್ಲಿದೆ. ಆದರೆ, ರಾಕೆಟ್‌ನ ತುದಿಯಲ್ಲಿ ಚೀನಾ ಬಾವುಟ ಹಾಗೂ ಚೀನಿ ಅಕ್ಷರಗಳಿರುವುದು ವಿವಾದದ ಮೂಲ.

ಈ ಜಾಹೀರಾತಿನ ಚಿತ್ರವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದು, 'ಇದು, ಡಿಎಂಕೆ ಪಕ್ಷವು ಚೀನಾ ಕುರಿತು ತಾನು ಹೊಂದಿರುವ ನಿಷ್ಠೆ ಹಾಗೂ ಭಾರತದ ಸಾರ್ವಭೌಮತೆಗೆ ತೋರುತ್ತಿರುವ ಅಗೌರವವನ್ನು ತೋರಿಸುತ್ತದೆ' ಎಂದು ಆರೋಪಿಸಿದ್ದಾರೆ.

> **ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ತಮಿಳುನಾಡು ಬದಲು ಆಂಧ್ರಪ್ರದೇಶದಲ್ಲಿ ಸ್ಥಾಪನೆಯಾಗಲು ಡಿಎಂಕೆ ಕಾರಣ. ಡಿಎಂಕೆ ಧೋರಣೆ ಈಗಲೂ ಬದಲಾವಣೆಯಾಗಿಲ್ಲ**
> **ಕೆ.ಅಣ್ಣಾಮಲೈ**
> ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ

₹17,300 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ತೂತ್ತುಕುಡಿಯಲ್ಲಿ ಶಂಕುಸ್ಥಾಪನೆ ನೆರವೇರಿಸಿ, ಮೋದಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಡಿಎಂಕೆ ಲೋಕಸಭಾ ಸಂಸದೆ ಕನಿಮೊಳಿ ಹಾಗೂ ತಮಿಳುನಾಡು ಲೋಕೋಪಯೋಗಿ ಸಚಿವ ಇ.ವಿ.ವೇಲು ಪಾಲ್ಗೊಂಡಿದ್ದರು.

ನಂತರ, ತಿರುನೆಲ್ವೇಲಿಯಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಮಾತನಾಡಿದ ಮೋದಿ, ಜಾಹೀರಾತು ವಿಷಯವನ್ನು ಪ್ರಸ್ತಾಪಿಸಿ ಡಿಎಂಕೆ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

'ಕೇಂದ್ರ ಜಾರಿಗೊಳಿಸುವ ಯೋಜನೆಗಳ ಶ್ರೇಯಸ್ಸನ್ನು ಪಡೆದುಕೊಳ್ಳುವ ಭರದಲ್ಲಿ, ಡಿಎಂಕೆ ನಾಯಕರೊಬ್ಬರು ತಾವು ನೀಡಿದ ಜಾಹೀರಾತಿನಲ್ಲಿ ಚೀನಾ ಬಾವುಟ ಬಳಸಿದ್ದಾರೆ. ಡಿಎಂಕೆ ನಾಯಕರಿಗೆ ಭಾರತದ ಸಾಧನೆ ಕಣ್ಣಿಗೆ ಕಾಣುವುದಿಲ್ಲ. ಭಾರತದ ಚಿತ್ರಗಳನ್ನೂ ಅವರು ಬಳಸುವುದಿಲ್ಲ' ಎಂದು ಮೋದಿ ಟೀಕಿಸಿದರು.

'ಡಿಎಂಕೆ ನಾಯಕರು ಈಗ ಮಿತಿಗಳನ್ನು ಮೀರಿದ್ದಾರೆ. ಅವರ ಈ ನಡೆ, ದೇಶಕ್ಕೆ ಹಾಗೂ ಬಾಹ್ಯಾಕಾಶ ವಿಜ್ಞಾನಿಗಳಿಗೆ ಮಾಡಿರುವ ಅವಮಾನ. ಇಂತಹ ಹಲವಾರು ಅನ್ಯಾಯದ ಕೆಲಸಗಳಿಗಾಗಿ ಡಿಎಂಕೆ ನಾಯಕರಿಗೆ ತಕ್ಕ ಪಾಠ ಕಲಿಸಲು ಇದು ಸರಿಯಾದ ಸಮಯ' ಎಂದು ವಾಗ್ದಾಳಿ ನಡೆಸಿದ್ದಾರೆ.

ರಾಮ ಮಂದಿರ ಪ್ರಸ್ತಾಪ: ರಾಮ ಮಂದಿರ ವಿಷಯ ಪ್ರಸ್ತಾಪಿಸಿದ ಮೋದಿ, 'ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕುರಿತು ಸಂಸತ್‌ನಲ್ಲಿ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಡಿಎಂಕೆ ಸಂಸದರು ಸಭಾತ್ಯಾಗ ಮಾಡಿದರು. ಡಿಎಂಕೆ ನಾಯಕರು ಜನರ ನಂಬಿಕೆಯನ್ನು ದ್ವೇಷ ಮಾಡುತ್ತಾರೆ ಎಂಬುದು ಮತ್ತೊಮ್ಮೆ ಸಾಬೀತಾದಂತಾಗಿತ್ತು' ಎಂದು ಟೀಕಿಸಿದ್ದಾರೆ. 'ತಮಿಳುನಾಡು ಮತ್ತು ಶ್ರೀರಾಮನಿಗೂ ಇರುವ ನಂಟು ಎಲ್ಲರಿಗೂ ಗೊತ್ತಿದೆ. ಜ.22ರಂದು ಬಾಲರಾಮ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೂ ಮುನ್ನ ತಮಿಳುನಾಡಿನ ಧನುಷ್ಕೋಟಿ ಸೇರಿದಂತೆ ದೇಶದ ವಿವಿಧ ದೇವಸ್ಥಾನಗಳಿಗೆ ನಾನು ಭೇಟಿ ನೀಡಿದ್ದೆ. ಭವ್ಯ ರಾಮ ಮಂದಿರ ತಲೆ ಎತ್ತುತ್ತಿರುವುದಕ್ಕೆ ಇಡೀ ದೇಶವೇ ಸಂತಸಪಡುತ್ತಿದ್ದರೆ, ಡಿಎಂಕೆ ಸಂಸದರು ಮಾತ್ರ ಈ ವಿಷಯ ಕುರಿತ ಚರ್ಚೆಯಿಂದ ಪಲಾಯನ ಮಾಡಿದರು' ಎಂದಿದ್ದಾರೆ.

ಜಲಜನಕ ಚಾಲಿತ ದೋಣಿಗೆ ನಿಶಾನೆ

ದೇಶೀಯವಾಗಿಯೇ ತಯಾರಿಸಲಾದ, ದೇಶದ ಮೊದಲ ಜಲಜನಕ ಚಾಲಿತ ದೋಣಿ ಸಂಚಾರಕ್ಕೆ ಪ್ರಧಾನಿ ಮೋದಿ ಹಸಿರು ನಿಶಾನೆ ತೋರಿದರು.

'ದೇಶದ ಮೊದಲ ಜಲಜನಕ ಚಾಲಿತ ದೋಣಿ ಸಂಚಾರಕ್ಕೆ ಇಂದು ಚಾಲನೆ ನೀಡಲಾಗಿದೆ. ಶೀಘ್ರವೇ ಇಂತಹ ದೋಣಿ ಸಂಚಾರ ಕಾಶಿ ಗಂಗಾ ನದಿಯಲ್ಲಿಯೂ ಆರಂಭವಾಗಲಿದೆ. ಇದು ತಮಿಳುನಾಡು ಜನರು ಕಾಶಿ ಜನತೆಗೆ ನೀಡಲಿರುವ ದೊಡ್ಡ ಉಡುಗೊರೆಯಾಗಲಿದೆ' ಎಂದು ಮೋದಿ ಹೇಳಿದರು.

ವೀಣಾವಾದಕ ಆರ್.ವಿಶ್ವೇಶ್ವರನ್‌ಗೆ 'ಸಂಗೀತ ನಾಟಕ ಅಕಾಡೆಮಿ ರತ್ನ'

ಪ್ರಜಾವಾಣಿ ವಾರ್ತೆ

ಬೇಲೂರು ರಘುನಂದನ್

ಪ್ರೊ.ಆರ್. ವಿಶ್ವೇಶ್ವರನ್

ಜಯಂತಿ ಕುಮರೇಶ್

ಎಚ್.ಕೆ. ವೆಂಕಟರಾಮ್

ನವದೆಹಲಿ: ಕೇಂದ್ರ ಸಂಗೀತ ನಾಟಕ ಅಕಾಡೆಮಿಯ 'ಅಕಾಡೆಮಿ ರತ್ನ (ಫೆಲೋಶಿಪ್)' ಪ್ರಶಸ್ತಿಗೆ ಮೈಸೂರಿನ ಹಿರಿಯ ವೀಣಾವಾದಕ ಆರ್. ವಿಶ್ವೇಶ್ವರನ್ ಅವರನ್ನು ಆಯ್ಕೆ ಮಾಡಲಾಗಿದೆ.

ಅಕಾಡೆಮಿ ರತ್ನ, 2022 ಮತ್ತು 2023ನೇ ಸಾಲಿನ ಅಕಾಡೆಮಿ ಪುರಸ್ಕಾರ ಹಾಗೂ 2022 ಮತ್ತು 2023ನೇ ಸಾಲಿನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಗಳ ವಿಜೇತರ ಹೆಸರನ್ನು ಮಂಗಳವಾರ ಪ್ರಕಟಿಸಲಾಗಿದೆ. ಅಕಾಡೆಮಿ ರತ್ನ ಪ್ರಶಸ್ತಿಯು ₹3 ಲಕ್ಷ ನಗದು, ಅಕಾಡೆಮಿ ಪುರಸ್ಕಾರವು ₹1 ಲಕ್ಷ ನಗದು ಹಾಗೂ ಯುವ ಪುರಸ್ಕಾರವು ₹25 ಸಾವಿರ ನಗದನ್ನು ಒಳಗೊಂಡಿದೆ. ಯುವ ಪುರಸ್ಕಾರವನ್ನು ಅಕಾಡೆಮಿಯ ಅಧ್ಯಕ್ಷರು ಶೀಘ್ರ ಪ್ರದಾನ ಮಾಡಲಿದ್ದಾರೆ. ಅಕಾಡೆಮಿ ರತ್ನ ಹಾಗೂ ಅಕಾಡೆಮಿ ಪುರಸ್ಕಾರವನ್ನು ರಾಷ್ಟ್ರಪತಿ ಅವರು ಪ್ರದಾನ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

2022ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಬೆಂಗಳೂರಿನ ವೀಣಾವಾದಕಿ ಜಯಂತಿ ಕುಮರೇಶ್, ಬೆಂಗಳೂರಿನ ಕರ್ನಾಟಕ ಸಂಗೀತ ಗಾಯಕಿ ಪುಸ್ತಕಂ ರಮಾ, 2023ನೇ ಸಾಲಿನ ಪ್ರಶಸ್ತಿಗೆ ಬೆಂಗಳೂರಿನ ವಯೊಲಿನ್ ವಾದಕ ಎಚ್.ಕೆ.ವೆಂಕಟರಾಮ್, ಕುಮಾರ ಗಂಧರ್ವ ಅವರ ಪುತ್ರಿಯಾದ ಪ್ರಸಿದ್ಧ ಗಾಯಕಿ ಕಲಾಪಿನಿ ಕೊಂಕಾಲಿ (ಸದ್ಯ ಮುಂಬೈಯಲ್ಲಿ ನೆಲೆಸಿದ್ದಾರೆ), ಭರತನಾಟ್ಯ ಹಾಗೂ ಕಥಕ್ ನೃತ್ಯಪಟುಗಳಾದ ನಿರುಪಮಾ ಮತ್ತು ರಾಜೇಂದ್ರ ಆಯ್ಕೆಯಾಗಿದ್ದಾರೆ.

2022ನೇ ಸಾಲಿನ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ ಲೇಖಕ ಬೇಲೂರು ರಘುನಂದನ್, ವೀಣಾವಾದಕಿ ಸಹನಾ ಎಸ್.ವಿ ಹಾಗೂ 2023ನೇ ಸಾಲಿನ ಪುರಸ್ಕಾರಕ್ಕೆ ಗಾಯಕ ಎಸ್.ಆರ್. ವಿನಯ್ ಶರ್ವಾ ಅವರನ್ನು ಆಯ್ಕೆ ಮಾಡಲಾಗಿದೆ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು – 560001
ದೂರವಾಣಿ ಸಂಖ್ಯೆ: 080–29565353, 29566556, 29604556 ಇ–ಮೇಲ್: splocaima21@gmail.com

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ / ಸೂಚನೆ

Pursuant to attachment of Immovable Properties by the Government under the provisions of the Karnataka Protection of Interest of Depositors in Financial Establishments Act, 2004 (KPIDFE Act) and pursuant to the absolute attachment order by the Hon'ble Special Court the Special Officer & Competent Authority (under KPIDFE - IMA and other Scam), is issuing notice for e-Auction of the immovable property through e-Auction on **'as is where is and whatever there is basis'.**

The intending bidders will be required to furnish Earnest Money Deposit (EMD) (as mentioned against each auction in the e-Portal provided by the Service Provider / Karnataka Public Procurement Portal only).

SHORT DESCRIPTION OF THE IMMOVABLE PROPERTY

Sl. No.	DETAILS OF THE SCHEDULE PROPERTY (Clear Title by Court in Order No. MISC No. 1371/2022)	RESERVE PRICE (Rs.)	EMD (Rs.)	Bid Increase Value (Rs.)	Title
1	Present Sy.No.8, (old Sy.No. 09 and 8/1) PID No. 91-61-08, Good will residence, Cokborn Road, Bengaluru BBMP ward No. 91, measuring 766 sq.ft. East : Property No.7/1, Cokborn Road West : No.9 Cokborn Road North : Road South : Private Property	49,79,000/-	5,00,000/-	50,000/-	Clear Title by Special Court in order No. MISC No. 1371/2022 and as per Khata issued by BBMP
	Google Map: https://maps.app.goo.gl/N5PUnABG15my2eYV8 Latitude and Longitude : 12°59'36.2"N 77°36'20.6"E				

ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ ಹಾಗೂ ಸ್ಥಳ	ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಇ.ಎಂ.ಡಿ ಸಲ್ಲಿಸುವಿಕೆ	ಇ–ಹರಾಜಿನ ದಿನಾಂಕ ಮತ್ತು ಸಮಯ
22ನೇ ಮಾರ್ಚ್ 2024, ಮಧ್ಯಾಹ್ನ 3.00 ರಿಂದ 4.00 ಗಂಟೆವರೆಗೆ ಸ್ಥಳ: ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು – 560001	26ನೇ ಮಾರ್ಚ್ 2024 ರ ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆವರೆಗೆ	27ನೇ ಮಾರ್ಚ್ 2024 ರ ಸಂಜೆ 5.00 ಗಂಟೆಯೊಳಗೆ	28ನೇ ಮಾರ್ಚ್ 2024 ರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆವರೆಗೆ

For Registration & Online Auction, you can login to: **https://kppp.karnataka.gov.in (Helpdesk No: 080 - 46010000, 080 - 68948777).** The interested bidders who require auction related information can contact **Joint Secretary, Office of the Special Officer & Competent Authority,** 3rd Floor, Podium Block, Visveswariah Towers, Dr. Ambedkar Veedhi, Bengaluru - 560001, e-mail ID: **splocaeauction@gmail.com** or Contact Mobile No: **8217203930.**

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 23–02–2024 ವಾಸಾಸಂಇ/ವಾ.ಪ್ರ/3933/2023–24

ಕಾರ್ಯಾಚರಣೆಗೆ 'ಸಾಗರಮಂಥನ–1' ಸಂಕೇತನಾಮ

3,300 ಕೆ.ಜಿ ಮಾದಕವಸ್ತು ವಶ; ಬಂಧನ

ಅರಬ್ಬಿ ಸಮುದ್ರದಲ್ಲಿ ಕಳ್ಳಸಾಗಣೆ ಮಾಡುತ್ತಿದ್ದ ಸುಮಾರು 3,300 ಕೆ.ಜಿಯಷ್ಟು ಮಾದಕ ವಸ್ತುವನ್ನು ಭಾರತೀಯ ನೌಕಾಪಡೆ, ಎನ್‌ಸಿಬಿ ಜಂಟಿಯಾಗಿ ಕಾರ್ಯಾಚರಣೆ ನಡೆಸಿ ವಶಪಡಿಸಿಕೊಂಡಿವೆ —ಪಿಟಿಐ ಚಿತ್ರ

ಪೋರಬಂದರ್/ನವದೆಹಲಿ (ಪಿಟಿಐ): ಗುಜರಾತ್ ಕರಾವಳಿ ವ್ಯಾಪ್ತಿಯ ಅರಬ್ಬಿ ಸಮುದ್ರದಲ್ಲಿ ಕಳ್ಳಸಾಗಣೆ ಮಾಡುತ್ತಿದ್ದ ಸುಮಾರು 3,300 ಕೆ.ಜಿಯಷ್ಟು ಮಾದಕ ವಸ್ತುಗಳನ್ನು ಭದ್ರತಾ ಸಿಬ್ಬಂದಿ ಮತ್ತು ಮಾದಕ ವಸ್ತು ತಡೆ ಸಂಸ್ಥೆಗಳು ಬುಧವಾರ ವಶಪಡಿಸಿಕೊಂಡಿದ್ದು, ಐವರು ವಿದೇಶಿಗರನ್ನು ಬಂಧಿಸುವೆ.

ವಶಪಡಿಸಿಕೊಂಡಿರುವ ಮಾದಕ ವಸ್ತುಗಳ ಮೌಲ್ಯವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹ 1,300 ಕೋಟಿಯಿಂದ ₹ 2,000 ಕೋಟಿಯಷ್ಟು ಇರಬಹುದು ಎಂದು ಮಾದಕವಸ್ತು ನಿಯಂತ್ರಣ ದಳದ (ಎನ್‌ಸಿಬಿ) ಪ್ರಧಾನ ನಿರ್ದೇಶಕ ಎಸ್.ಎನ್. ಪ್ರಧಾನ್ ಮಾಹಿತಿ ನೀಡಿದ್ದಾರೆ.

'ನೌಕಾಪಡೆ, ಎನ್‌ಸಿಬಿ ಮತ್ತು ಗುಜರಾತ್ ಪೊಲೀಸರು ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಿದ್ದು, ಐತಿಹಾಸಿಕ ಯಶಸ್ಸಾಗಿದೆ. ದೇಶವನ್ನು ಮಾದಕ ವಸ್ತು ಮುಕ್ತವಾಗಿಸುವ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಬದ್ಧತೆಗೆ ಇದು ಸಾಕ್ಷಿಯಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಸಾಗರಮಂಥನ' ಕಾರ್ಯಾಚರಣೆ: ಖಚಿತ ಮಾಹಿತಿಯ ಮೇರೆಗೆ, ಅರಬ್ಬಿ ಸಮುದ್ರದ ಅಂತರರಾಷ್ಟ್ರೀಯ ಜಲಗಡಿ ಉದ್ದಕ್ಕೂ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ನೌಕಾಪಡೆಯ ಪಿ8ಐ ಹೆಲಿಕಾಪ್ಟರ್ ನಿಗಾವಹಿಸಿತ್ತು. ಯುದ್ಧನೌಕೆ ಮತ್ತು ಹೆಲಿಕಾಪ್ಟರ್ ಜಂಟಿ ಕಾರ್ಯಾಚರಣೆ ನಡೆಸಿ ಸುಮಾರು 3,300 ಕೆ.ಜಿ (3,110 ಕೆ.ಜಿ ಚರಸ್, 158.3 ಕೆ.ಜಿ ಮೆಥಾಂಫೆಟಮಿನ್ ಮತ್ತು 24.6 ಕೆ.ಜಿ ಮಾರ್ಫಿನ್) ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದ ಹಡಗನ್ನು ನಿಯಂತ್ರಣಕ್ಕೆ ತೆಗೆದುಕೊಂಡು, ಮಾದಕ ವಸ್ತುವನ್ನು ವಶಕ್ಕೆ ಪಡೆಯಲಾಯಿತು' ಎಂದು ನೌಕಾಪಡೆಯು 'ಎಕ್ಸ್' ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.

ನೌಕಾಪಡೆ ಮತ್ತು ಎನ್‌ಸಿಬಿ ನಡುವಿನ ಸಹಕಾರ, ಸಮನ್ವಯ ಮತ್ತು ಸಂಯೋಜಿತ ಕಾರ್ಯದಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತುಗಳನ್ನು ವಶಕ್ಕೆ ಪಡೆಯಲು ಸಾಧ್ಯವಾಯಿತು ಎಂದು ನೌಕಾಪಡೆ ಹೇಳಿದೆ. ಈ ಕಾರ್ಯಾಚರಣೆಗೆ 'ಸಾಗರಮಂಥನ್–1' ಎಂಬ ಸಂಕೇತನಾಮ ನೀಡಲಾಗಿತ್ತು. ಕೆಲವು ವಾರಗಳಿಂದ ಸಮುದ್ರ ಮಾರ್ಗದ ಉದ್ದಕ್ಕೂ ನಿಗಾವಹಿಸಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಎನ್‌ಸಿಬಿ ಹೇಳಿದೆ.

ನಿಷೇಧಿತ ಈ ಪದಾರ್ಥಗಳನ್ನು 'ರಾಸ್ ಅವದ್ ಗೂಡ್ಸ್ ಕಂಪನಿ, ಪಾಕಿಸ್ತಾನ' ಎಂಬ ಮುದ್ರೆ ಹೊಂದಿರುವ ಪ್ಯಾಕೆಟ್‌ಗಳಲ್ಲಿ ಸಂಗ್ರಹಿಸಲಾಗಿತ್ತು ಎಂದು ಎನ್‌ಸಿಬಿ ತಿಳಿಸಿದೆ.

ಮಾದಕ ವಸ್ತುಗಳ ಮೌಲ್ಯವನ್ನು ಲೆಕ್ಕ ಹಾಕಲು ಯಾವುದೇ ಮಾನದಂಡಗಳಿಲ್ಲ. ಆದಾಗ್ಯೂ ಅಂದಾಜಿನ ಪ್ರಕಾರ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೆ.ಜಿ ಚರಸ್‌ಗೆ 5 ಲಕ್ಷದಿಂದ 10 ಲಕ್ಷ ಮತ್ತು ಮೆಥಾಂಫೆಟಮಿನ್ ಮತ್ತು ಹೆರಾಯಿನ್‌ಗೆ ಪ್ರತಿ ಕೆ.ಜಿಗೆ ₹ 2 ಕೋಟಿಯಿಂದ 5 ಕೋಟಿ ಆಗಬಹುದು ಎಂದು ಎನ್‌ಸಿಬಿ ಮೂಲಗಳು ತಿಳಿಸಿವೆ.

'ಇಲ್ಲಿಯವರೆಗೂ ದೇಶದಲ್ಲಿ ನಡೆದಿರುವ ಅತಿದೊಡ್ಡ ಕಡಲಾಚೆಯ ಮಾದಕವಸ್ತು ವಶ ಪ್ರಕರಣ ಇದಾಗಿದೆ. ಕೆಲ ವರ್ಷಗಳಲ್ಲಿ ಸಮುದ್ರ ಮಾರ್ಗದ ಮೂಲಕ ಮಾದಕವಸ್ತುಗಳ ಕಳ್ಳಸಾಗಣೆ ಹೆಚ್ಚಾಗಿರುವುದನ್ನು ನಾವು ಗಮನಿಸಿದ್ದೇವೆ. ಆದ್ದರಿಂದಲೇ ನೌಕಾಪಡೆ, ಕರಾವಳಿ ಪಡೆ, ಕಸ್ಟಮ್ಸ್ ಅಧಿಕಾರಿಗಳೊಂದಿಗೆ ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿದ್ದೇವೆ' ಎಂದು ಪ್ರಧಾನ್ ವಿವರಿಸಿದರು.

ಐವರು ವಿದೇಶಿಗರ ಬಂಧನ: ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದ ಮೀನುಗಾರಿಕಾ ದೋಣಿಯನ್ನು ಪೋರಬಂದರ್‌ಗೆ ತರಲಾಗಿದ್ದು, ಅದರಲ್ಲಿದ್ದ ಐವರು ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ ಎಂದು ಎನ್‌ಸಿಬಿ ಉಪ ಮಹಾನಿರ್ದೇಶಕ (ಕಾರ್ಯಾಚರಣೆ) ಜ್ಞಾನೇಶ್ವರ್ ಸಿಂಗ್ ತಿಳಿಸಿದ್ದಾರೆ. 'ಬಂಧಿತರು ಪಾಕಿಸ್ತಾನ ಅಥವಾ ಇರಾನ್ ಪ್ರಜೆಗಳಾಗಿರಬಹುದು. ಅವರ ಬಳಿ ಯಾವುದೇ ಗುರುತಿನ ಚೀಟಿ ಪತ್ತೆಯಾಗಿಲ್ಲ. ಬಂಧಿತರ ಬಳಿಯಿದ್ದ ಉಪಗ್ರಹ ಫೋನ್ ಮತ್ತು ನಾಲ್ಕು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಸಿಂಗ್ ಹೇಳಿದರು.

'ಮಾದಕ ವಸ್ತುಗಳ ಪ್ಯಾಕೆಟ್‌ಗಳ ಮೇಲೆ ಪಾಕಿಸ್ತಾನಿ ಆಹಾರ ಕಂಪನಿಯ ಹೆಸರು ನಮೂದಾಗಿದೆ. ಈ ನಿಟ್ಟಿನಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಅವರು ತಿಳಿಸಿದರು.

ಕೇರಳದ ಕರಾವಳಿಯಲ್ಲಿ ಎನ್‌ಸಿಬಿ ಮತ್ತು ನೌಕಾಪಡೆ ಜಂಟಿಯಾಗಿ 2023ರಲ್ಲಿ 2,500 ಕೆ.ಜಿಯಷ್ಟು ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದವು.

ನಾಪತ್ತೆಯಾಗಿದ್ದ ವಿದ್ಯಾರ್ಥಿಗಳು ಮಂಗಳೂರಿನ ಕರಿತೋಟದ ಬಳಿ ನಂದಿನಿ ನದಿಯಲ್ಲಿ ಶವವಾಗಿ ಪತ್ತೆ

ನಾಲ್ವರು ವಿದ್ಯಾರ್ಥಿಗಳು ನೀರುಪಾಲು

ಪ್ರಜಾವಾಣಿ ವಾರ್ತೆ

ನಿರೂಪ್

ರಾಘವೇಂದ್ರ

ಅನ್ವಿತ್

ಯಶ್ವಿತ್

ಮೂಲ್ಕಿ/ಮಂಗಳೂರು: ಸುರತ್ಕಲ್ ವಿದ್ಯಾದಾಯಿನಿ ಅನುದಾನಿತ ಪ್ರೌಢಶಾಲೆಯ ನಾಲ್ವರು ವಿದ್ಯಾರ್ಥಿಗಳ ಶವ ಹಳೆಯಂಗಡಿ ಬಳಿಯ ನಂದಿನಿ ನದಿಯಲ್ಲಿ ಕರಿತೋಟದ ರೈಲ್ವೆ ಸೇತುವೆ ಕೆಳಗೆ ಪತ್ತೆಯಾಗಿವೆ.

ಅಗರಮೇಲು ಗ್ರಾಮದ ಚಂದ್ರಕಾಂತ್ ಅವರ ಮಗ ಯಶ್ವಿತ್ (15), ಹಳೆಯಂಗಡಿ ತೋಕೂರು ನಿವಾಸಿ ವಸಂತ್ ಅವರ ಮಗ ರಾಘವೇಂದ್ರ (15), ಸುರತ್ಕಲ್ ಗುಡ್ಡೆಕೊಪ್ಪದ ವಿಶ್ವನಾಥ್ ಅವರ ಮಗ ನಿರೂಪ್ (15), ಚಿತ್ರಾಪುರದ ದೇವದಾಸ್ ಅವರ ಮಗ ಅನ್ವಿತ್ (15) ಮೃತ ವಿದ್ಯಾರ್ಥಿಗಳು. ಮಕ್ಕಳು ನಾಪತ್ತೆಯಾದ ಬಗ್ಗೆ ಸುರತ್ಕಲ್ ಠಾಣೆಯಲ್ಲಿ ಹಾಗೂ ಅವರ ಸಂಶಯಾಸ್ಪದ ಸಾವಿನ ಬಗ್ಗೆ ಮೂಲ್ಕಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಎಸ್ಸೆಸ್ಸೆಲ್ಸಿಯ ಇಂಗ್ಲಿಷ್ ವಿಷಯದ ಪೂರ್ವಸಿದ್ಧತಾ ಪರೀಕ್ಷೆಗೆ ಮಂಗಳವಾರ ಹಾಜರಾಗಿದ್ದ ವಿದ್ಯಾರ್ಥಿಗಳು ಬಳಿಕ ಮನೆಗೆ ಹೋಗಿರಲಿಲ್ಲ. ನಾಲ್ವರಿಗೂ ಈಜು ಬರುತ್ತಿರಲಿಲ್ಲ’ ಎಂದು ಅವರು ಹೇಳಿದ್ದಾರೆ.

‘ಕರಿತೋಟದ ಬಳಿ ನಂದಿನಿ ನದಿಗೆ ಅಡ್ಡಲಾಗಿರುವ ರೈಲ್ವೆ ಸೇತುವೆಯ ಪಿಲ್ಲರ್‌ಗಳ ತಳದ ಕಟ್ಟೆಯಿಂದ ನದಿಗೆ ಹಾರಿ ಕೆಲವರು ನೀರಾಟದಲ್ಲಿ ತೊಡಗುತ್ತಾರೆ. ಕೆಲ ತಿಂಗಳ ಹಿಂದೆ ಈ ಪ್ರದೇಶದಲ್ಲಿ ನದಿಯಲ್ಲಿ ಅಕ್ರಮ ಮರಳುಗಾರಿಕೆ ನಡೆದಿತ್ತು. ನಿರಂತರವಾಗಿ ಮರಳು ತೆಗೆದ ಕಾರಣ ಪಿಲ್ಲರ್‌ಗಳ ಬಳಿ ಅಪಾಯದ ಗುಂಡಿಗಳು ನಿರ್ಮಾಣವಾಗಿವೆ. ಅಪಾಯವನ್ನು ಗ್ರಹಿಸದೇ ನೀರಿಗಿಳಿದ ವಿದ್ಯಾರ್ಥಿಗಳು ಮೃತಪಟ್ಟಿರಬಹುದು’ ಎಂದು ಸ್ಥಳೀಯರು ತಿಳಿಸಿದ್ದಾರೆ.

‘ಪರೀಕ್ಷೆ ಮುಗಿದ ಬಳಿಕ ಆರು ವಿದ್ಯಾರ್ಥಿಗಳು ಒಟ್ಟಿಗೆ ಮಧ್ಯಾಹ್ನ 1.30ರ ಸುಮಾರಿಗೆ ನಂದಿನಿ ನದಿಯತ್ತ ತೆರಳಿದ್ದರು. ಮಕ್ಕಳು ಮನೆಗೆ ಬಾರದ ಕಾರಣ ಆತಂಕಕ್ಕೆ ಒಳಗಾದ ಪೋಷಕರು ಶಾಲೆಯ ಶಿಕ್ಷಕರನ್ನು ವಿಚಾರಿಸಿದ್ದರು. ಶಾಲೆ ಹಾಗೂ ಸುರತ್ಕಲ್ ಪ್ರದೇಶದ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದ್ದ ದೃಶ್ಯಗಳನ್ನು ಪರಿಶೀಲಿಸಿದಾಗ ವಿದ್ಯಾರ್ಥಿಗಳು ಬಸ್ ಹತ್ತಿ ಹೋಗಿರುವುದು ಗೊತ್ತಾಗಿತ್ತು. ಆ ಬಸ್‌ನ ಸಿಬ್ಬಂದಿಯನ್ನು ವಿಚಾರಿಸಿದಾಗ ವಿದ್ಯಾರ್ಥಿಗಳು ಸುರತ್ಕಲ್‌ನಿಂದ ಸುಮಾರು 8 ಕಿ.ಮೀ ದೂರದ ಹಳೆಯಂಗಡಿಯಲ್ಲಿ ಬಸ್‌ನಿಂದ ಇಳಿದಿರುವುದು ಗೊತ್ತಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ನಾಪತ್ತೆಯಾದ ವಿದ್ಯಾರ್ಥಿಗಳ ಜೊತೆ ತೆರಳಿದ್ದ ಇನ್ನಿಬ್ಬರು ವಿದ್ಯಾರ್ಥಿಗಳು ಮನೆಗೆ ಮರಳಿದ್ದಾಗ ಅವರನ್ನು ಪ್ರಶ್ನಿಸಲಾಯಿತು. ಉಳಿದ ನಾಲ್ವರು ನದಿಯಲ್ಲಿ ಮುಳುಗಿರುವ ಮಾಹಿತಿ ಸಿಕ್ಕಿತು. ಹಳೆಯಂಗಡಿ ಬಳಿ ಕರಿತೋಟದ ಬಳಿ ನದಿಪಕ್ಕದಲ್ಲಿ ವಿದ್ಯಾರ್ಥಿಗಳು ಕಳಚಿಟ್ಟ ಚೀಲಗಳು ಹಾಗೂ ಚಪ್ಪಲಿಗಳು ಪತ್ತೆಯಾದವು. ಈಜುಗಾರರು ನಾಲ್ವರು ವಿದ್ಯಾರ್ಥಿಗಳ ಮೃತದೇಹಗಳನ್ನು ಬುಧವಾರ ಮುಂಜಾನೆ ಹೊರತೆಗೆದರು. ವಿದ್ಯಾರ್ಥಿಗಳು ಪರೀಕ್ಷೆ ಮುಗಿಸಿ ಮನೆಗೆ ಮರಳುವ ಬದಲು ನದಿಯತ್ತ ತೆರಳಲು ನಿಖರ ಕಾರಣ ಏನೆಂಬುದು ಗೊತ್ತಾಗಿಲ್ಲ’ ಎಂದು ಪೊಲೀಸರು ಹೇಳಿದ್ದಾರೆ.

ಮೃತಪಟ್ಟ ನಾಲ್ವರೂ ವಿದ್ಯಾರ್ಥಿಗಳದು ಬಡ ಕುಟುಂಬ. ವಿದ್ಯಾದಾಯಿನಿ ಅನುದಾನಿತ ಪ್ರೌಢಶಾಲಾ ಆಡಳಿತ ಮಂಡಳಿಯು ಪ್ರತಿ ಸಂತ್ರಸ್ತ ಕುಟುಂಬಕ್ಕೂ ತಲಾ ₹10 ಸಾವಿರ ನೀಡಲು ನಿರ್ಧರಿಸಿದೆ.

ಯಶ್ವಿತ್ ತಾಯಿ ಉಷಾ ಅವರು ಅಂಗನವಾಡಿಯಲ್ಲಿ ಸಹಾಯಕಿ. ಚಂದ್ರಕಾಂತ್–ಉಷಾ ದಂಪತಿಯ ಇಬ್ಬರು ಮಕ್ಕಳಲ್ಲಿ ಈತ ಹಿರಿಯವ. ನಿರೂಪ್ ತಂದೆ ವಿಶ್ವನಾಥ್ ಪೆಟ್ರೋಕೆಮಿಕಲ್ ಕಂಪನಿಯೊಂದರಲ್ಲಿ ಅಗ್ನಿ ಸುರಕ್ಷಾ ವಿಭಾಗದಲ್ಲಿ ಕೆಲಸ ಮಾಡುತ್ತಾರೆ. ಅವರ ತಾಯಿ ಲೋಟಾಕ್ಷಿ ಬೀಡಿ ಕಟ್ಟುತ್ತಾರೆ. ನಿರೂಪ್ ಈ ದಂಪತಿಯ ಏಕೈಕ ಪುತ್ರ. ಅನ್ವಿತ್ ಅವರ ತಂದೆ ದೇವದಾಸ್ ಬ್ಯಾಂಕ್ ಒಂದರಲ್ಲಿ ಉದ್ಯೋಗಿಯಾಗಿದ್ದು, ತಾಯಿ ಶೋಭಾ ಗೃಹಿಣಿ. ಈ ದಂಪತಿಗೆ ಅನ್ವಿತ್ ಒಬ್ಬನೇ ಮಗ. ರಾಘವೇಂದ್ರನ ತಂದೆ ವಸಂತ ಅವರು ಕಳೆದ ವರ್ಷ ಪಾರ್ಶ್ವವಾಯುವಿಗೆ ಒಳಗಾಗಿದ್ದರು. ಅವರ ತಾಯಿ ಕಲಾವತಿ ಗೃಹಿಣಿ.

ಪ್ರತಿಭಾನ್ವಿತ ವಿದ್ಯಾರ್ಥಿಗಳು

‘ಮೃತ ವಿದ್ಯಾರ್ಥಿಗಳಲ್ಲಿ ಯಶ್ವಿತ್ ಕಲಿಕೆಯಲ್ಲಿ ಮುಂದಿದ್ದ. ತರಗತಿಯಲ್ಲಿ 4ನೆಯವನಾಗಿದ್ದ. ವಿದ್ಯಾರ್ಥಿಗಳು ನದಿ ಬಳಿ ಏಕೆ ಹೋದರು ಎಂದು ಅರ್ಥವಾಗುತ್ತಿಲ್ಲ’ ಎಂದು ಶಿಕ್ಷಕ ದಿವಾಕರ ಭಟ್ ತಿಳಿಸಿದರು.

‘ಅನ್ವಿತ್ ಕಲಿಯುವುದರಲ್ಲಿ ಮುಂದಿದ್ದ. ಚಿತ್ರಕಲೆ ಹಾಗೂ ಇತರ ಪಠ್ಯೇತರ ಚಟುವಟಿಕೆಯಲ್ಲೂ ತನ್ನನ್ನು ತೊಡಗಿಸಿಕೊಂಡಿರುತ್ತಿದ್ದ. ಮನೆಯ ಸಮೀಪವೇ ಅರಬ್ಬಿ ಸಮುದ್ರವಿದ್ದರೂ ಆತ ನೀರಿಗೆ ಇಳಿಯುತ್ತಿರಲಿಲ್ಲ’ ಎಂದು ಅನ್ವಿತ್‌ನ ಚಿಕ್ಕಪ್ಪ ರೂಪೇಶ್ ದೇವಾಡಿಗ ತಿಳಿಸಿದರು.

‘ವಸಂತ ಹಾಗೂ ನಾನು ಒಟ್ಟಿಗೆ ಜಾತ್ರೆಗಳಲ್ಲಿ ಮಳಿಗೆಗಳನ್ನು ಹಾಕಿ ಜೀವಿಸುತ್ತಿದ್ದೆವು. ಪಾರ್ಶ್ವವಾಯುವಿಗೆ ಒಳಗಾದ ಬಳಿಕ ವಸಂತ ಹಾಸಿಗೆ ಹಿಡಿದಿದ್ದಾರೆ. ಅವರು ಚಿಕ್ಕಂದಿನಲ್ಲೇ ಮಗನನ್ನು ಕಳೆದುಕೊಳ್ಳಬೇಕಾಗಿದೆ’ ಎಂದು ರಾಘವೇಂದ್ರನ ಮಾವ ಶಶಿಕುಮಾರ್ ಕಣ್ಣೀರಿಟ್ಟರು.

ಜೋಡೆತ್ತು ಚಕ್ಕಡಿ ಓಡಿಸುವ ಸ್ಪರ್ಧೆ: ₹51 ಲಕ್ಷ ಬಹುಮಾನ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ–2 ಪ್ರಕಾಶ ಹುಕ್ಕೇರಿ ಹಾಗೂ ಶಾಸಕ ಗಣೇಶ ಹುಕ್ಕೇರಿ ಅಭಿಮಾನಿಗಳ ಬಳಗವು ತಾಲ್ಲೂಕಿನ ಮಲಿಕವಾಡದಲ್ಲಿ ಮಾರ್ಚ್ 5ರಂದು ಜೋಡೆತ್ತಿನ ಚಕ್ಕಡಿ ಓಡಿಸುವ ಸ್ಪರ್ಧೆ ಆಯೋಜಿಸಿದೆ.

ಎರಡು ವಿಭಾಗಗಳಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ₹51 ಲಕ್ಷ ಮೊತ್ತದ ವಿವಿಧ ಬಹುಮಾನ ಇರಲಿವೆ.

'ಅ' ವರ್ಗದ ಸ್ಪರ್ಧೆಯಲ್ಲಿ ಕರ್ನಾಟಕವೂ ಸೇರಿ ಎಲ್ಲ ರಾಜ್ಯಗಳ ರೈತರು ಪಾಲ್ಗೊಳ್ಳಬಹುದು. 'ಬ' ವಿಭಾಗದಲ್ಲಿ ಕರ್ನಾಟಕದವರು ಮಾತ್ರ ಸ್ಪರ್ಧಿಸಬಹುದು.

'ಅ' ವಿಭಾಗದಲ್ಲಿ ಪ್ರಥಮ ಬಹುಮಾನ ₹17 ಲಕ್ಷ, ದ್ವಿತೀಯ ₹9 ಲಕ್ಷ, ತೃತೀಯ ₹5 ಲಕ್ಷ, ಚತುರ್ಥ ₹2 ಲಕ್ಷ. 'ಬ' ವರ್ಗದಲ್ಲಿ ಪ್ರಥಮ ಬಹುಮಾನ ₹9 ಲಕ್ಷ, ದ್ವಿತೀಯ ₹5 ಲಕ್ಷ, ತೃತೀಯ ₹3 ಲಕ್ಷ, ಚತುರ್ಥ ₹1 ಲಕ್ಷ ಬಹುಮಾನ, ಶೀಲ್ಡ್ ಮತ್ತು ನಿಶಾನಿ ಕೊಡಲಾಗುವುದು. 'ಬಡಿಗೆ, ಬಾರಕೋಲಿನಿಂದ ಹೊಡೆದು ಎತ್ತು–ಚಕ್ಕಡಿ ಓಡಿಸುವಂತಿಲ್ಲ. ಒಂದು ಬಾರಿ ಮಾತ್ರ ಓಡಿಸಬಹುದು ಎಂಬುದು ನಿಯಮ' ಎಂದು ಸ್ಪರ್ಧಾ ಸಮಿತಿ ಸದಸ್ಯರಾದ ಸುನೀಲ ಸಪ್ತಸಾಗರ, ಉಮೇಶ ಸಾತ್ತಾರ ತಿಳಿಸಿದ್ದಾರೆ.

'ಸ್ಪರ್ಧೆ ವೀಕ್ಷಿಸಲು ಕರ್ನಾಟಕ, ಮಹಾರಾಷ್ಟ್ರ ಸೇರಿ ವಿವಿಧೆಡೆಯಿಂದ 5 ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ. ಜನರಿಗೆ ಊಟ ಮತ್ತು ಕುಡಿಯುವ ನೀರಿಗಾಗಿ 10 ಕಡೆ ವ್ಯವಸ್ಥೆ ಇರುತ್ತದೆ' ಎಂದು ಅವರು ತಿಳಿಸಿದ್ದಾರೆ.

ಚಿಕ್ಕೋಡಿ ಲಿಬರಲ್ ಸಹಕಾರ ಸಂಸ್ಥೆ ಕಟ್ಟಡದಲ್ಲಿರುವ ಸ್ಪರ್ಧಾ ಸಮಿತಿಯ ಕಚೇರಿಯಲ್ಲಿ ಆಸಕ್ತರು ಹೆಸರು ನೋಂದಾಯಿಸಬಹುದು. ಸಂಪರ್ಕಕ್ಕೆ ದೂರವಾಣಿ ಸಂಖ್ಯೆ: 9740877028 ಅಥವಾ 8310383047.

‘ಸಾಲುಮರದ ತಿಮ್ಮಕ್ಕ ರಾಷ್ಟ್ರೀಯ ಹಸಿರು ಪ್ರಶಸ್ತಿ’ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲುಮರದ ತಿಮ್ಮಕ್ಕ ಅಂತರರಾಷ್ಟ್ರೀಯ ಫೌಂಡೇಷನ್ ವತಿಯಿಂದ ನೀಡುವ 2021, 2022, 2023 ಹಾಗೂ 2024ರ ಸಾಲಿನ 'ಸಾಲುಮರದ ತಿಮ್ಮಕ್ಕ ರಾಷ್ಟ್ರೀಯ ಹಸಿರು ಪ್ರಶಸ್ತಿ’ಗೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿಯು ನಗದು ಬಹುಮಾನ, ಬೆಳ್ಳಿ ಪದಕ, ಪ್ರಶಸ್ತಿ ಫಲಕ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಪರಿಸರ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ, ಪರಿಸರ ಜಾಗೃತಿ, ನೀರಿನ ಸಂರಕ್ಷಣೆ, ಅರಣ್ಯ ಅಭಿವೃದ್ಧಿ ಮತ್ತು ಕೃಷಿ ಹಾಗೂ ಸಮಾಜ ಸೇವೆ, ಕಲೆ, ಸಾಹಿತ್ಯ, ಸಾಂಸ್ಕೃತಿಕ, ಕ್ರೀಡಾ ಹಾಗೂ ಮಾಧ್ಯಮ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರ ಅಗತ್ಯ ದಾಖಲೆಗಳೊಂದಿಗೆ ಮಾ. 8ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಫೌಂಡೇಷನ್ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಸಲ್ಲಿಸುವ ವಿಳಾಸ: ಅಧ್ಯಕ್ಷರು, ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಷನ್, ನಂ. 16, 1ನೇ ಅಡ್ಡರಸ್ತೆ, ಸೋಪ್ ಫ್ಯಾಕ್ಟರಿ ಬಡಾವಣೆ, ವಿನಾಯಕ ದೇವಸ್ಥಾನದ ಪಕ್ಕ, ಮಂಜುನಾಥನಗರ, ಬಾಗಲಗುಂಟೆ ಪೋಸ್ಟ್, ತುಮಕೂರು ರಸ್ತೆ, ಬೆಂಗಳೂರು–73 ಮಾಹಿತಿಗೆ ಸಂಪರ್ಕಿಸಿ: 98458 47962

ಉದ್ಯೋಗ ಮೇಳದಲ್ಲಿ 44,527 ಅಭ್ಯರ್ಥಿಗಳು ಭಾಗಿ: ಶರಣಪ್ರಕಾಶ ಪಾಟೀಲ

ಯುವ ಸಮೃದ್ಧಿ: 9,651 ಮಂದಿಗೆ ನೇರ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಕೌಶಲ್ಯಾಭಿವೃದ್ಧಿ ಇಲಾಖೆಯು ಇಲ್ಲಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ಯುವ ಸಮೃದ್ಧಿ ಸಮ್ಮೇಳನದಲ್ಲಿ (ಉದ್ಯೋಗ ಮೇಳ) 9,651 ಉದ್ಯೋಗಾಕಾಂಕ್ಷಿಗಳಿಗೆ ಸ್ಥಳದಲ್ಲೇ ಉದ್ಯೋಗ ನೀಡಲಾಗಿದೆ’ ಎಂದು ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಸಚಿವ ಶರಣಪ್ರಕಾಶ ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘53,913 ಪುರುಷರು, 32,494 ಮಹಿಳೆಯರು, ಇತರೆ 42 ಸೇರಿ ಒಟ್ಟು ಆನ್‌ಲೈನ್ ಮೂಲಕ 86,451 ಅಭ್ಯರ್ಥಿಗಳು ಹೆಸರನ್ನು ನೋಂದಾಯಿಸಿದ್ದರು. ಸಮ್ಮೇಳನದಲ್ಲಿ 44,527 ಅಭ್ಯರ್ಥಿಗಳು ಹಾಜರಾಗಿದ್ದರು. ಇದರಲ್ಲಿ ಶೈಕ್ಷಣಿಕ ಅರ್ಹತೆಗನುಗುಣವಾಗಿ ಒಟ್ಟು 9,651 ಆಕಾಂಕ್ಷಿಗಳಿಗೆ ಉದ್ಯೋಗ ನೀಡಲಾಗಿದೆ’ ಎಂದು ಮಾಹಿತಿ ನೀಡಿದರು.

16,865 ಅರ್ಜಿಗಳು ಪರಿಶೀಲನೆ ಹಂತದಲ್ಲಿವೆ. 2,457 ಅರ್ಜಿಗಳನ್ನು ತಾಂತ್ರಿಕ ಕಾರಣಗಳಿಂದ ತಿರಸ್ಕರಿಸಲಾಗಿದೆ. 15,461 ಅಭ್ಯರ್ಥಿಗಳು ಸಂದರ್ಶನಕ್ಕೊಳಗಾಗಿದ್ದರು. ಅಭ್ಯರ್ಥಿಗಳ ಪೂರ್ಣ ವಿವರಗಳನ್ನು ಪರಿಶೀಲಿಸಲಾಗುತ್ತಿದೆ. ಇವರಿಗೆ ಕೂಡ ಉದ್ಯೋಗ ನೀಡಲಾಗುವುದು ಎಂದು ತಿಳಿಸಿದರು.

ವೈಮಾನಿಕ ಮತ್ತು ನಾಗರಿಕ ವಲಯದಿಂದ 26, ಕೃಷಿ 6, ಸಿದ್ಧ ಉಡುಪು ವಲಯ 6, ಆಟೊಮೊಟಿವ್ 74, ಸೌಂದರ್ಯ ವಲಯ 3, ಆರೋಗ್ಯ ಕ್ಷೇತ್ರ 27, ಎಲೆಕ್ಟ್ರಾನಿಕ್ ವಲಯ 29, ಜವಳಿ 1, ಟೆಲಿಕಾಂ 19, ಸೇವಾ ವಲಯ 36, ಮೂಲ ಸೌಕರ್ಯ ಉಪಕರಣಗಳ ವಲಯ 1 ಸೇರಿದಂತೆ ವಿವಿಧ ವಲಯಗಳಲ್ಲಿ ಉದ್ಯೋಗ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಮುಂದಿನ ದಿನಗಳಲ್ಲಿ ರಾಜ್ಯದ ಮೂರು ಪ್ರಮುಖ ವಿಭಾಗಗಳಲ್ಲಿ ಯುವ ಸಮೃದ್ಧಿ ಸಮ್ಮೇಳನ ನಡೆಸಲಾಗುವುದು. ಕಲಬುರಗಿ, ಬೆಳಗಾವಿ ಮತ್ತು ಮೈಸೂರಿನಲ್ಲಿ ಉದ್ಯೋಗ ಮೇಳವನ್ನು ನಡೆಸಲಾಗುವುದು. ಕೊಪ್ಪಳ ಹಾಗೂ ಮೈಸೂರಿನಲ್ಲಿ ತರಬೇತಿ ಕೇಂದ್ರ ಪ್ರಾರಂಭಿಸುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ಶರಣಪ್ರಕಾಶ ಪಾಟೀಲ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎಂ.ಕನಗವಲ್ಲಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಸಿ.ಆರ್. ಕೃಷ್ಣಕುಮಾರ್ ಉಪಸ್ಥಿತರಿದ್ದರು.

ಯುವ ಸಮೃದ್ಧಿ ಸಮ್ಮೇಳನದಲ್ಲಿ ಸ್ಥಳದಲ್ಲಿಯೇ ಉದ್ಯೋಗ ಪಡೆದ ಉದ್ಯೋಗಾಕಾಂಕ್ಷಿಗಳಿಗೆ ಕೌಶಲ್ಯಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ಪ್ರಮಾಣಪತ್ರ ವಿತರಿಸಿದರು. ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎಂ.ಕನಗವಲ್ಲಿ, ವ್ಯವಸ್ಥಾಪಕ ನಿರ್ದೇಶಕ ಸಿ.ಆರ್. ಕೃಷ್ಣ ಕುಮಾರ್ ಭಾಗವಹಿಸಿದ್ದರು.

ಸಾಗರೋತ್ತರ ಕಂಪನಿ ಪ್ರಾರಂಭ

ವಿದೇಶಿ ಕಂಪನಿಗಳಿಗೆ ಬೇಕಾದ ಮಾನವ ಸಂಪನ್ಮೂಲ ಒದಗಿಸಿಕೊಡಲು ಅನುಕೂಲವಾಗುವಂತೆ ರಾಜ್ಯ ಸರ್ಕಾರವು ಕೇರಳ ಮಾದರಿಯಲ್ಲಿ ಸಾಗರೋತ್ತರ ಕಂಪನಿ ಪ್ರಾರಂಭಿಸಲಿದೆ ಎಂದು ಶರಣಪ್ರಕಾಶ ಪಾಟೀಲ ಪ್ರಕಟಿಸಿದರು.

ಎಂಜಿನಿಯರಿಂಗ್, ಡಿಪ್ಲೊಮಾ, ಐಟಿಐ ಸೇರಿದಂತೆ ವೃತ್ತಿಪರ ಕೋರ್ಸ್‌ಗಳನ್ನು ಮುಗಿಸಿದ ಉದ್ಯೋಗ ಆಕಾಂಕ್ಷಿಗಳಿಗೆ ಸಾಗರೋತ್ತರ ಕಂಪನಿಗಳ ಮೂಲಕ ಮಾಹಿತಿ ನೀಡಲಾಗುವುದು. ಈಗಾಗಲೇ 49 ಕಂಪನಿಗಳು ಮುಂದೆ ಬಂದಿವೆ ಎಂದು ತಿಳಿಸಿದರು.

ನನಗೂ–ಬಿಜೆಪಿಗೂ ಸಂಬಂಧವಿಲ್ಲ: ಗೀತಾ

ಮೈಸೂರು: ‘ನನಗೂ–ಬಿಜೆಪಿಗೂ ಸಂಬಂಧವಿಲ್ಲ; ನಾನು ಆ ಪಕ್ಷದ ಕಾರ್ಯಕರ್ತೆಯೂ ಅಲ್ಲ’ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಗೀತಾ ಜೆ. ತಿಳಿಸಿದ್ದಾರೆ.

ಸರ್ಕಾರವು ತಮ್ಮನ್ನು ಕೆಎಸ್‌ಡಿಎಲ್ ವ್ಯವಸ್ಥಾಪನಾ ಮಂಡಳಿ ಸದಸ್ಯರಾಗಿ ನಾಮನಿರ್ದೇಶನ ಮಾಡಿ 24 ಗಂಟೆಗಳಲ್ಲೇ ಆದೇಶ ರದ್ದುಪಡಿಸಿರುವ ಕುರಿತು ಅವರು ಪ್ರತಿಕ್ರಿಯಿಸಿದ್ದಾರೆ.

‘ನಾನು ಈ ಹಿಂದೆ ದಾವಣಗೆರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆಯಾಗಿ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿದ್ದೆ. ಈಗಿನ ಸರ್ಕಾರವು ಕ್ರೀಡಾ ಮತ್ತು ಶೈಕ್ಷಣಿಕ ಕ್ಷೇತ್ರದ ಸಾಧನೆ ಆಧರಿಸಿ ಕೆಎಸ್‌ಡಿಎಲ್ ವ್ಯವಸ್ಥಾಪನಾ ಮಂಡಳಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿತ್ತು. ಸಾಮಾಜಿಕ ಜಾಲತಾಣದಲ್ಲಿ ಹರಡುತ್ತಿರುವಂತೆ ನಾನು ಬಿಜೆಪಿಯವಳಲ್ಲ. ನನ್ನ ತೇಜೋವಧೆ ನಿಲ್ಲಿಸಬೇಕು. ಇಲ್ಲವಾದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದಿದ್ದಾರೆ.

‘ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ’

ಮೈಸೂರು: ‘ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ; ಟಿಕೆಟ್ ಆಕಾಂಕ್ಷಿಯೂ ಅಲ್ಲ’ ಎಂದು ಜೆಡಿಎಸ್ ಮುಖಂಡ ಸಾ.ರಾ.ಮಹೇಶ್ ಹೇಳಿದರು.

ಬಿಜೆಪಿಯವರು ಟಿಕೆಟ್ ಆಫರ್ ಮಾಡಿರುವ ಬಗ್ಗೆ ಇಲ್ಲಿ ಬುಧವಾರ ಪ್ರತಿಕ್ರಿಯಿಸಿದ ಅವರು, ‘ಸದ್ಯದ ಪರಿಸ್ಥಿತಿಯಲ್ಲಿ ಮಾನಸಿಕ, ದೈಹಿಕ ಹಾಗೂ ಆರ್ಥಿಕವಾಗಿ ಸ್ವಲ್ಪ ಸಮಸ್ಯೆಯಲ್ಲಿದ್ದೇನೆ. ಆದ್ದರಿಂದ ಸ್ಪರ್ಧೆಗೆ ಮನಸ್ಸಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಬಿಜೆಪಿ ಮುಖಂಡರೊಂದಿಗೆ 38 ವರ್ಷಗಳಿಂದಲೂ ಒಡನಾಟವಿದೆ. ಅವರ ಭೇಟಿಗೆ ಯಾವುದೇ ವಿಶೇಷ ಅರ್ಥವಿಲ್ಲ ಎಂದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 **NOTICE FOR PRIVATE SALE OF GOLD** 26/02/2024

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-03-2024 as shown below:

Br. Channapatna: Anugraha Towers, 8th Cross, B M Road, Kuvempunagar, Channapatna, Ramanagara- 562 160, Ph. 080-27251885 :- 16486400167303,16486400169655,16486400168004,16486400167857,16486400114768,16486400167089,16486400140532,16486400161769,16486400169408,16486400161611,16486400168640,16486400129071,16486400167469,16486400167477,16486400168889,16486400168277,16486400167105,16486400164821,16486400078187,16486400169200,16486400149475,16486400167360,16486400165208,16486400144138,16486400169234,16486400165216,16486400167378,16486400121698,16486400168400,16486400166933,16486400169978,16486400167642,16486400165380,16486400166321,16486400169895,16486400168095,16486400143528,16486400162221,16486400166297,16486400124858,16486400169044,16486400143791,16486400167014,16486400169150,16486400124841,16486400170182,16486400166552,16486400169929,16486400165125,16486400089010,16486400168574,16486400169317,16486400162940,16486400169242,16486400162171,16486400164524,16486400166339,16486400168129,16486400168061,16486400169499,16486400169598,16486400166594,16486400168111,16486400169663,16486400167246,16486400169549,16486400168053,16486400166867,16486400167030,16486400167873,16486400168251,16486400166990,16486400169275,16486400131523,16486400168376,16486400170554,16486400168327,16486400166008,16486400162759,16486400168368,16486400166743,16486400167097,16486400149574,16486400166271,16486400170364,16486400111889,16486400170398,16486400168715,16486400170000,16486400130988,16486400110097,16486400167188,16486400121888,16486400165158,16486400170059,16486400111566,16486400166511,16486400165778,16486400141233,16486400165224,16486400165828,16486400167741,16486400169671,16486400126994,16486600001229,16486400162726,16486400167352,16486400168020,16486400149038,16486600001245. **Br. Chambanahalli: Sy no 82, Next to ISME College, Sarjapura Road Chambenahlli, Taluk Anekal, Dommasandra Post, Bangalore-562 125, Ph no.080 22712227:-** 21646400040635,21646400041039.

Br. Handpost: Sy. No. 34/1A, Yerahalli Taluk, HD Kote, Mysore- 571 114 Ph No. 08228-255225 :- 21726400137803,21726400180142,21726400181744,21726400188905,21726400166984,21726400189168,21726400177163,21726400167594,21726400142456,21726400164914,21726400180654,21726400157249,21726400167966,21726400175688,21726400180084,21726400167933,21726400181884,21726400175076,21726400162728,21726400176447,21726400163049,21726400167040,21726400177098,21726400165242,21726400164203,21726400140963,21726400164294,21726400166794,21726400169392,21726400168089,21726400165655,21726400180308,21726400170929.

Br.Hunsur: BM Road, Opp. Vijaya Bank, Hunsur, Mysore Dist., Karnataka- 571 105 Ph No.08222252968 :- 19896300005410,19896300005444,19896300005477,19896300005543,19896300005584,19896300005642,19896300005832,19896300005857,19896300005865,19896300005972,19896300005980,19896400049177,19896400049888,19896400050142,19896300003787,19896300005527,19896400043964,19896100205681,19896300005758,19896300005485,19896300005964,19896300005683,19896400050357,19896300005881.

Br.Kengeri: Building No 737, Kommaghatta main road, Kengeri satellite town, Bangalore Urban- 560060:- 19646400144639,19646400130141,19646400145503,19646400145537,19646400146196,19646400146386,19646400146428,19646400128467,19646400146501,19646400146576,19646400152806,19646400153259,19646400125364,19646400147442,19646400147681,19646400147756,19646400147764,19646400148283,19646400148291,19646400131339,19646400140751,19646400146824,19646400154299,19646400141189,19646400141650,19646400145180,19646400151071,19646400129317,19646400122163,19646400122882,19646400144316,19646400144324,19646400148796,19646400096011,19646400123955.

Br.Kodathi Gate : St. Patrick Academy Campus, Sarjapur Road, Carmelaram P O, Bangalore - 560035 Ph No. 08028441020:- 21716100028865,21716100028881,21716100029103,21716400048159,21716400060634,21716400070708,21716400083230,21716400084543,21716400085508,21716400086399,21716400088015,21716400088783,21716400090227,21716400090300,21716400090839,21716400091324,21716400091761,21716400091829,21716400092017,21716400092025,21716400092108,21716400095051,21716400095093,21716400095739,21716400096919,21716400097024,21716400097776,21716400098196,21716400098378,21716400098402,21716400098816,21716400099764,21716400099772,21716400099863,21716400100273,21716400100315,21716400100323,21716400100356,21716400100380,21716400100422,21716400100463,21716400100489,21716400100505,21716400100778,21716400100828,21716400100943,21716400101032,21716400101578,21716400102485,21716400102592,21716400104028,21716400104903,21716400104929,21716400105371,21716400105959,21716400107856,21716400108078,21716400108094,21716400108102,21716400108490,21716400108599,21716400108714,21716400109464

Br.Mandya: Kambali Building, Ashoka Nagar, M C Road, Mandya, Karnataka, Mandya, Karnataka, 571401,Ph No. 08232-229339 :- 21446400078853,21446400080347,21446400082111,21446400082814,21446400090072,21446400090080,21446400097945,21446400098141,21446400098356,21446400098539,21446400099677,21446400099768,21446400099867,21446400103503,21446400104105,21446400104642.

Br.Mysore: The Variety Mansion, Bangalore Nilgiri Road, Lashkar Mohalia, Lashkar Mohalla, Mysore - 570 001.Ph no. 08212520055 :- 12816400050295,12816400051848,12816400049156,12816400051855,12816400043605,12816400051863,12816400052135,12816400045097,12816400047788,12816400050907,12816400048760,12816400052143,12816400046681. **Br.Ramanagaram: Opp.Rotary Bgs Global Hospitals, Bangalore-Mysore Road, Ramanagaram - 562 159,Ph NO. 080-27276699 :-** 16696400082233,16696400085939,16696400085921.

Br.Thirupalya: Near Electronic City, Hebgodi Post, Tirupalya, Bangalore Urban, Karnataka - 560099, Ph no. 080-27833335 :- 21126400047526,21126400047500,21126400046577,21126400045249,21126400046734,21126400047427,21126400046726,21126400030555,21126400047799,21126400047138,21126400047229,21126400033476,21126400047252,21126400047021,21126400047443,21126400046478,21126400049357,21126400049480,21126400048664,21126400049712.

Br.Mysore/Jayalakshmipuram: No.D3, Leo Madhurya, Adi Pampa Road, Vanivilas Mohalla Post, Mysore - 570 002,Ph No.0821-2500275 :- 16896400038561,16896400050517,16896400051390,16896400051564,16896400051655,16896400051861,16896400051978,16896400052166.

Br.Thirumalasettyhalli: SY No.84, Thirumalasettyhalli Village, Samethanahalli P.O, Bangalore Rural - 560067, Ph No. 080 28549041:- 22626400052268,22626800000784,22626400047599,22626400050262,22626400052219,22626400051708,22626400047607,22626400051591,22626400042228,22626400052565,22626400051427,22626400040487,22626400052821,22626400039349,22626400050254,22626400040495,22626100012349,22626400035727,22626400055501,22626400036493,22626400051872,22626400035081,22626400051021,22626400036501,22626400042251,22626400050296,22626400052557,22626400041824,22626400035719,22626400054934,22626400035735,22626400051039,22626400053712,22626400055865,22626400048423,22626400042111,22626400054249,22626400051476,22626400051450,22626400042673,22626400052185,22626400042806.

Br.Taverekere: No.104/1, Ground Floor, Chocolate Factory Road, Ist Main, Taverekere, Bangalore Urban, Karnataka - 560 029 :- 16596400068937,16596400068929,16596400073069,16596400074299,16596400078506,16596400065537,16596400082714,16596400069794,16596400066550,16596400070230,16596400066808,16596400062237,16596400057195,16596400062229,16596400067913,16596400063243,16596400063235,16596400070479,16596400080122,16596400069091,16596400069109,16596400070586,16596400063565,16596400070602,16596400055595,16596400071527,16596400071592,16596400075015,16596400071568,16596400071550,16596400071584,16596400071576,16596400071535,16596400062427,16596400075197,16596400071493,16596400081146,16596400076856,16596400081138,16596400083548,16596400081153,16596400080759,16596400042734,16596400071766,16596100277671,16596400074745,16596400057567,16596400076427,16596400077805,16596400065743,16596400079678,16596400057419,16596400056882,16596400055389,16596400072624,16596400072707,16596400083191,16596400067426,16596400080064,16596400081963,16596400073002,16596400072996,16596700003790,16596100276293,16596400061379,16596400070438,16596400056239,16596400056908.16596400066550,16596400070230,16596400066808,16596400062237,16596400057195,16596400062229,16596400067913,16596400063243,16596400063235,16596400070479,16596400080122,16596400069091,16596400069109,16596400070586,16596400063565,16596400070602,16596400055595,16596400071527,16596400071592,16596400075015,16596400071568,16596400071550,16596400071584,16596400071576,16596400071535,16596400062427,16596400075197,16596400071493,16596400081146,16596400076856,16596400081138,16596400083548,16596400081153,16596400080759,16596400042734,16596400071766,16596100277671,16596400074745,16596400057567,16596400076427,16596400077805,16596400065743,16596400079678,16596400057419,16596400056882,16596400055389,16596400072624,16596400072707,16596400083191,16596400067426,16596400080064,16596400081963,16596400073002,16596400072996,16596700003790,16596100276293,16596400061379,16596400070438,16596400056239,16596400056908. **Br. Visweswaraya Layout: Site No. 2, 4th Block, Visweswaraya Layout, Manganahalli, Ullal Upanagara P O, Bangalore- 560 110 :-** 21676400031888,21676400040590,21676400037893,21676400023513,21676400034734,21676400041218,21676400027936,21676400030484,21676400014587,21676400047579,21676400015576,21676400039279,21676400041408,21676400041655,21676400040798,21676400043586,21676400040392,21676400040160,21676400040103,21676400040079,21676400040137,21676400040111,21676400040061,21676400041630,21676400041432,21676400041093,21676400040095,21676400040087,21676400040053,21676400040046.

Br. Surya Nagar: K H No 165/1 & 166/1, First Floor, Banajappa Building, B.Nanjappa Layout, Suryanagar 1st Phase, Banahall, Chandapura, Bangalore- 560 081 Ph: 09986031773 :- 21686400021953,21686400037777,21686400038148,21686400033966,21686400038452,21686400040482.

Br. Bangalore / Thalaghattapura : No. 7, Arya Heights, Opp to Police Station, Kanakapura Main Road, Thalaghattapura, Bangalore- 560 109, Ph. No. 9955818481 :- 23826400001153,23826400003761,23826400000874,23826400001369, 23826400002094,23826400001575,23826400003712,23826400003399, 23826400002326,23826400001328,23826400002599,23826400002714,23826400001476.

Br. Bangalore / Varthur : No.1/1, Christhesu Nagar, EL Bethel Church, Varthur, Bangalore-560087 :- 23836400000055,23836400000659.

Bangalore 26-02-2024 Vice President & Zonal Head

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/23–24/58468–72 ದಿನಾಂಕ:28.02.2024

:: ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ) ::

ಪಿಸಿ–1339: ಗುವಿಸಕಂನಿಯ, ವ್ಯಾಪ್ತಿಯಲ್ಲಿ ಅಧಿಕಾರಿಗಳ ಕಛೇರಿ ಹಾಗೂ ಕ್ಷೇತ್ರ ನಿರ್ವಹಣಾ ಕೆಲಸಗಳಿಗಾಗಿ ವಾಣಿಜ್ಯ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವುದು **(ಟೆಂಡರ್ ಮೊತ್ತ: ರೂ. 1286.04 ಲಕ್ಷಗಳು)**
ದಿನಾಂಕ: ಕೆಪಿಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ : **29–02–2024** ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **30.03.2024 @ 17:30 ಗಂಟೆಗೆ,** ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ: **02.04.2024 / 04.04.2024 @ 11:00 ಗಂಟೆಗೆ.**
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/910/ಕೆ.ಎಸ್.ಎಂ.ಸಿ.&ಎ/2023–24

ಪುರಸಭೆ ಕಾರ್ಯಾಲಯ, ಕಾರ್ಕಳ–574104, ಉಡುಪಿ ಜಿಲ್ಲೆ
ಕಛೇರಿ ಇ–ಮೇಲ್: ka.karkal.tmc@gmail.com ವೆಬ್‌ಸೈಟ್: www.karkaltown.mrc.gov.in
ಕಛೇರಿ ದೂರವಾಣಿ: 08258–235664, 08258–230292

ಕ್ರ. ಸಂ. ಕಾ.ಪು.ಸ.ಟ್ರಾ.ವಿ.ಟ್ರೈ.ಮೆ.ಸಿ.ಆರ್: 5 : 2023–24 ದಿನಾಂಕ: 28–02–2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಕಾರ್ಕಳ ಪುರಸಭೆಗೆ ಅವಶ್ಯವಿರುವ ಕಾಮಗಾರಿಯನ್ನು ಕೈಗೊಳ್ಳಲು, ಈ ಕೆಳಗಡೆ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಅರ್ಹಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಪಡೆಯಬಹುದು.

ಕ್ರ. ಸಂ.	ಕಾಮಗಾರಿ ವಿವರ	ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ (ರೂ. ಗಳಲ್ಲಿ)	ಇಂಡೆಂಟ್ ಸಂಖ್ಯೆ
SBM Found					
1.	Supplying of Tractor with trailer	4280000	107000	Refer e-procuremental portal	DMA/2023-24/ IND1576
2023-24th - 15th Finance					
1.	Supplying of 4-wheeler Auto Tipper	2379000	59475	Refer e-procuremental portal	DMA/2023-24/ IND1627
2.	Supplying and Installation of Rotary Screening Machine	595588	14890	Refer e-procuremental portal	DMA/2023-24/ IND1577

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 07.03.2024, ಸಂಜೆ 5.30 ಗಂಟೆ. 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11.03.2024, ಬೆಳಿಗ್ಗೆ 11.30 ಗಂಟೆ 3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 13.03.2024, ಬೆಳಿಗ್ಗೆ 11.30 ಗಂಟೆ.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕಾರ್ಕಳ ಸಹಿ/– ಆಡಳಿತಾಧಿಕಾರಿ, ಪುರಸಭೆ, ಕಾರ್ಕಳ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಬೀದರ
ದೂರವಾಣಿ: 08482–233126/27 ಫ್ಯಾಕ್ಸ್ :08482–233127 ಇ–ಮೇಲ್: dhobidar@gmail.com

ಸಂಖ್ಯೆ: ಸರಬರಾಜು/ಕೆಕೆಆರ್‌ಡಿಬಿ/ಸಿಆರ್–01/2023–24. ದಿನಾಂಕ:27.02.2024.

–: ಟೆಂಡರು ಪ್ರಕಟಣೆ :–

2023–24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮ್ಯಾಕ್ರೋ ಕ್ರಿಯಾ ಯೋಜನೆ ಅಡಿಯಲ್ಲಿ ಒಟ್ಟು 01 ಕಾಮಗಾರಿಗಳಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೀದರ, ಅಧೀನದಲ್ಲಿ ಈ ಕೆಳಕಂಡ ಕಾಮಗಾರಿಗಳಲ್ಲಿ ಉಪಕರಣಗಳು ಹಾಗೂ ಅಂಬ್ಯುಲೇನ್ಸ ವಾಹನಗಳ ಖರೀದಿಗಾಗಿ ಟೆಂಡರ ದ್ವಿಲಕೋಟೆ ಪದ್ದತಿ ಅಡಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ವೇದಿಕೆಯ ಮೂಲಕ ಟೆಂಡರ ಅಹ್ವಾನಿಸಲಾಗಿದೆ. ಇಚ್ಛೆ ಉಳ್ಳುವ ಗುತ್ತಿಗೆದಾರರು ದಿನಾಂಕ:27.02.2024 ರಿಂದ 15.03.2024 ಸಾಯಂಕಾಲ 5:00 ಗಂಟೆಯವರಗೆ ಟೆಂಡರ ಭರಿಸಲು ಅವಕಾಶ ನೀಡಲಾಗಿರುತ್ತದೆ, ದಿನಾಂಕ:16.03.2024 ಸಾಯಂಕಾಲ 5:30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೀದರ ತಾಂತ್ರಿಕ ಲಕೋಟೆಯನ್ನು ತೆರೆಯಲಾಗುತ್ತದೆ, ಪ್ರತಿ ಟೆಂಡರಿನ ಅನುಗೂಣವಾಗಿ ಇ.ಎಂ.ಡಿ. ಮೊತ್ತ 2.5%. ಟೆಂಡರಿನ ಸಂಪೂರ್ಣ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟಿನ ವಿಳಾಸ: KPPP Portal (karnataka.gov.in) ನಲ್ಲಿ ದಿನಾಂಕ:27.02.2024. ರಿಂದ ಪಡೆಯಬಹುದು.

ಕ್ರ. ಸಂ.	ಸಂಸ್ಥೆಯ ಹೆಸರು	ಕಡತ ಸಂಖ್ಯೆ	ಮೊತ್ತ (ಲಕ್ಷಗಳಲ್ಲಿ)	ಷರಾ
1	Providing ALS Ambulance, CB Net-2 model 10 Colour machines, Ultrasound scaning machine to Govt. Hospital of Bhalki Town in Bhalki Taluka	DHO/KKRDB/SUP/ 08/2023-24	100.00	

ಟೆಂಡರ್ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಅಧಿಕಾರಿಗಳು ಬೀದರ ಅವರಿಗೆ ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು
ಕುಟುಂಬ ಕಲ್ಯಾಣಾಧಿಕಾರಿಗಳು, ಬೀದರ

ವಾ.ಸಾ.ಸಂ.ಇ/ಬೀದರ/314/ಕೆಎಸ್‌ಎಂಸಿ&ಎ/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಹತ್ತು ಜನ ಸ್ನೇಹಿತರೊಂದಿಗೆ ಕುಳಿತುಕೊಂಡು ಒಬ್ಬರ ಬಗ್ಗೆ ಕೆಟ್ಟದ್ದನ್ನು ಮಾತನಾಡುವುದಕ್ಕಿಂತ, ಒಂಟಿಯಾಗಿ ಕುಳಿತು ಒಂದು ಪುಸ್ತಕವನ್ನು ಓದುವುದು ಉತ್ತಮವಾದ ಕೆಲಸ.

-ಬಿ.ಆರ್.ಅಂಬೇಡ್ಕರ್

ರಾಜ್ಯಸಭೆ ಚುನಾವಣೆ: ಅಡ್ಡಮತದಾನ ರಾಜಕಾರಣದ ಅಧಃಪತನದ ಲಕ್ಷಣ

ಪ್ರಜಾಪ್ರಭುತ್ವದಲ್ಲಿ ಜನರು ನೀಡುವ ತೀರ್ಪು ಅಂತಿಮ ಮತ್ತು ಅದು ಪವಿತ್ರ. ಆದರೆ, ಈಗಿನ ಜನಪ್ರತಿನಿಧಿಗಳು ಜನಾದೇಶಕ್ಕೆ ಯಾವುದೇ ಬೆಲೆ ಕೊಡುತ್ತಿಲ್ಲ. ಹಾಗಾಗಿಯೇ ಪಕ್ಷಾಂತರಗಳು ಈಗಿನ ರಾಜಕಾರಣದ ತಿರುಳು ಎಂಬಂತಾಗಿದೆ. ರಾಜಕಾರಣದ ಗುಣಮಟ್ಟವು ದಿನದಿಂದ ದಿನಕ್ಕೆ ಪ್ರಪಾತಕ್ಕೆ ಬೀಳುತ್ತಿದೆ. ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ರಾಜಕಾರಣಿಗಳ ಬಣ್ಣ ಮತ್ತೊಮ್ಮೆ ಬಯಲಾಗಿದೆ. ಹಿಮಾಚಲ ಪ್ರದೇಶ ಮತ್ತು ಉತ್ತರಪ್ರದೇಶದಲ್ಲಿ ಕೆಲವು ಶಾಸಕರು ಅಡ್ಡಮತದಾನ ಮಾಡಿದ್ದಾರೆ. ಈ ಬೆಳವಣಿಗೆಯು ಹಿಮಾಚಲ ಪ್ರದೇಶದಲ್ಲಿ ಅಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನೇ ಪತನದ ಅಂಚಿಗೆ ತಂದು ನಿಲ್ಲಿಸಿದೆ. ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷಕ್ಕೆ (ಎಸ್‌ಪಿ) ಭಾರಿ ಮುಜುಗರ ಉಂಟಾಗಿದೆ. ಎರಡೂ ರಾಜ್ಯಗಳಲ್ಲಿ ಸದಸ್ಯ ಬಲ ಇಲ್ಲದೇ ಇದ್ದರೂ ತಲಾ ಒಂದು ಸ್ಥಾನವನ್ನು ಬಿಜೆಪಿ ಗೆದ್ದುಕೊಂಡಿದೆ. ಈಗ, ಶಾಸಕರು ಪಕ್ಷಾಂತರ ಮಾಡಿ ಅಥವಾ ಮಾತೃಪಕ್ಷವನ್ನು ಒಡೆದು ಬಣ ಕಟ್ಟಿಕೊಂಡು ರಾಜ್ಯ ಸರ್ಕಾರವನ್ನು ಉರುಳಿಸುವುದು ಭಾರತದ ಸಹಜ ರಾಜಕಾರಣವೇ ಆಗಿದೆ. ಮಹಾರಾಷ್ಟ್ರದಲ್ಲಿ 2022ರಲ್ಲಿ ಮಹಾ ವಿಕಾಸ ಆಘಾಡಿ ನೇತೃತ್ವದ ಸರ್ಕಾರವನ್ನು ಉರುಳಿಸಲಾಯಿತು. ಮಹಾಘಟಬಂಧನ ಎಂಬ ಹೆಸರಿನಲ್ಲಿ ಬಿಹಾರದಲ್ಲಿ ಅಧಿಕಾರದಲ್ಲಿದ್ದ ಮೈತ್ರಿ ಸರ್ಕಾರವು ಇತ್ತೀಚೆಗೆ ಉರುಳಿತು. ಜೆಡಿಯು-ಆರ್‌ಜೆಡಿ-ಕಾಂಗ್ರೆಸ್ ನೇತೃತ್ವದ ಈ ಮೈತ್ರಿಕೂಟ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ನಿತೀಶ್ ಕುಮಾರ್ ಅವರು ಎನ್‌ಡಿಎ ಸೇರಿಕೊಂಡರು. ಹಳೆಯ ಸರ್ಕಾರ ಉರುಳಿತು, ಹೊಸ ಸರ್ಕಾರ ಬಂತು ಮತ್ತು ನಿತೀಶ್ ಅವರೇ ಮತ್ತೆ ಮುಖ್ಯಮಂತ್ರಿಯಾದರು. ಈಗ ಹಿಮಾಚಲ ಪ್ರದೇಶದ ಕಾಂಗ್ರೆಸ್ ನೇತೃತ್ವದ ಸರ್ಕಾರವು ಉರುಳುವ ಅಂಚಿಗೆ ಬಂದಿದೆ. ರಾಜ್ಯಸಭೆಯ ಮತದಾನವು ಸರ್ಕಾರವೊಂದನ್ನು ಪತನದ ಅಂಚಿಗೆ ತಂದಿದ್ದು ಇದೇ ಮೊದಲು. ಹಿಮಾಚಲ ಪ್ರದೇಶ ಮತ್ತು ಉತ್ತರಪ್ರದೇಶದಲ್ಲಿ ಅಡ್ಡ ಮತದಾನದಿಂದ ಬಿಜೆಪಿಗೆ ಲಾಭವಾಗಿದೆ. ಆದರೆ, ಕರ್ನಾಟಕದಲ್ಲಿ ಬಿಜೆಪಿಯ ಇಬ್ಬರು ಶಾಸಕರು ಆ ಪಕ್ಷಕ್ಕೆ ಮುಜುಗರ ಉಂಟು ಮಾಡಿದರು. ಒಬ್ಬರು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದರೆ, ಇನ್ನೊಬ್ಬರು ಮತ ಚಲಾಯಿಸಲು ಬರಲೇ ಇಲ್ಲ.

> ರಾಜಕಾರಣದ ಗುಣಮಟ್ಟವು ದಿನದಿಂದ ದಿನಕ್ಕೆ ಪ್ರಪಾತಕ್ಕೆ ಬೀಳುತ್ತಿದೆ. ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ರಾಜಕಾರಣಿಗಳ ಬಣ್ಣ ಮತ್ತೊಮ್ಮೆ ಬಯಲಾಗಿದೆ

ಉತ್ತರಪ್ರದೇಶದ 10 ಸ್ಥಾನಗಳ ಪೈಕಿ ಎಂಟನ್ನು ಬಿಜೆಪಿ ಗೆದ್ದುಕೊಂಡಿದೆ. ಏಳು ಸ್ಥಾನಗಳನ್ನು ಗೆಲ್ಲುವ ಶಾಸಕ ಬಲ ಬಿಜೆಪಿಗೆ ಇತ್ತು. ಆದರೆ, ಎಸ್‌ಪಿಯ ಏಳು ಶಾಸಕರು ಬಿಜೆಪಿ ಅಭ್ಯರ್ಥಿಗೆ ಮತ ಹಾಕಿದ ಪರಿಣಾಮ ಆ ಪಕ್ಷಕ್ಕೆ ಒಂದು ಕ್ಷೇತ್ರ ಹೆಚ್ಚುವರಿಯಾಗಿ ಸಿಕ್ಕಿತು. ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ನಿಂದ ಗೆದ್ದಿರುವ 40 ಶಾಸಕರಿದ್ದಾರೆ. ಮೂವರು ಪಕ್ಷೇತರರ ಬೆಂಬಲವೂ ಕಾಂಗ್ರೆಸ್ ಪಕ್ಷಕ್ಕೆ ಇತ್ತು. ಬಿಜೆಪಿ ಶಾಸಕರ ಸಂಖ್ಯೆ 25 ಮಾತ್ರ ಆಗಿತ್ತು. ಹಾಗಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಅಭಿಷೇಕ್ ಮನು ಸಿಂಘ್ವಿ ಅವರು ಸೋತರು. ಕಾಂಗ್ರೆಸ್‌ನ ಆರು ಶಾಸಕರು ಮತ್ತು ಮೂವರು ಪಕ್ಷೇತರರು ಬಿಜೆಪಿ ಅಭ್ಯರ್ಥಿಗೆ ಮತ ಹಾಕಿದ ಕಾರಣ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳಿಗೆ ತಲಾ 34 ಮತಗಳು ಸಿಕ್ಕವು. ಕೊನೆಗೆ, ಲಾಟರಿ ಮೂಲಕ ಫಲಿತಾಂಶ ನಿರ್ಧರಿಸಿದಾಗ ಗೆಲುವು ಬಿಜೆಪಿಗೆ ಒಲಿಯಿತು. ಕಾಂಗ್ರೆಸ್ ಅಭ್ಯರ್ಥಿಯ ಸೋಲನ್ನು ಬಿಜೆಪಿ ಅಸ್ತ್ರವಾಗಿ ಬಳಸುತ್ತಿದೆ. ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಪರಿಣಾಮವಾಗಿ, ರಾಜ್ಯದಲ್ಲಿ ರಾಜಕೀಯ ಬಿಕ್ಕಟ್ಟು ತಲೆದೋರಿದೆ. ಉತ್ತರ ಭಾರತದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇರುವ ರಾಜ್ಯ ಹಿಮಾಚಲ ಪ್ರದೇಶ ಮಾತ್ರ. ಈಗ ಈ ರಾಜ್ಯವನ್ನೂ ಆ ಪಕ್ಷವು ಕಳೆದುಕೊಳ್ಳುವ ಲಕ್ಷಣಗಳು ಕಾಣಿಸುತ್ತಿವೆ. ಕಾಂಗ್ರೆಸ್ ಮತ್ತು ಎಸ್‌ಪಿ ಶಾಸಕರು ಅಡ್ಡಮತದಾನ ಮಾಡುವುದಕ್ಕೆ ಕಾರಣ ಬಿಜೆಪಿ. ಚುನಾವಣಾ ಲಾಭಕ್ಕಾಗಿ ಯಾವುದೇ ತಂತ್ರ-ಕುತಂತ್ರಗಳನ್ನು ಮಾಡಲು ಹಿಂಜರಿಯುವುದಿಲ್ಲ ಎಂಬುದನ್ನು ಬಿಜೆಪಿ ಮತ್ತೆ ಮತ್ತೆ ಸಾಬೀತು ಮಾಡುತ್ತಲೇ ಬಂದಿದೆ. ಚಂಡೀಗಢ ಮೇಯರ್ ಚುನಾವಣೆಯು ಇತ್ತೀಚೆಗೆ ನಡೆದಾಗಲೂ ಬಿಜೆಪಿ ಪರವಾಗಿ ಕುತಂತ್ರ ನಡೆದು ಎಂಟು ಸದಸ್ಯರ ಮತಗಳನ್ನು ಅಸಿಂಧು ಮಾಡಲಾಗಿತ್ತು. ಹಿಮಾಚಲ ಪ್ರದೇಶದಲ್ಲಿಯೂ ಬಿಜೆಪಿ ಏನಾದರೂ ಆಟ ಆಡಬಹುದು ಎಂಬ ಎಚ್ಚರದಲ್ಲಿ ಕಾಂಗ್ರೆಸ್ ಪಕ್ಷವು ಇರಬೇಕಾಗಿತ್ತು.

ಈಗಿನ ರಾಜಕಾರಣಕ್ಕೆ ತಾವು ಹೊಂದುವುದಿಲ್ಲ ಎಂಬುದನ್ನು ಎಸ್‌ಪಿ ಮತ್ತು ಕಾಂಗ್ರೆಸ್ ಸಾಬೀತು ಮಾಡಿವೆ. ಶಾಸಕ ಬಲ ಇದ್ದರೂ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವಲ್ಲಿ ಎರಡೂ ಪಕ್ಷಗಳು ವಿಫಲವಾಗಿ ಮುಜುಗರ, ಅವಮಾನ ಅನುಭವಿಸಿವೆ. ಈ ರೀತಿಯ ಮುಜುಗರದ ಸ್ಥಿತಿಗೆ ಒಳಗಾಗುವುದು ಈ ಪಕ್ಷಗಳಿಗೆ ಹೊಸದೇನೂ ಅಲ್ಲ. ಹಾಗಿದ್ದರೂ ಅಂತಹ ಸ್ಥಿತಿಯನ್ನು ತಪ್ಪಿಸಿಕೊಳ್ಳಲು ಗಂಭೀರ ಪ್ರಯತ್ನಗಳನ್ನು ಕಾಂಗ್ರೆಸ್ ಪಕ್ಷವು ಮಾಡಿಲ್ಲ. ಪಕ್ಷದಲ್ಲಿ ಇರುವ ಆಂತರಿಕ ಬಿಕ್ಕಟ್ಟುಗಳನ್ನು ಚುನಾವಣೆಗೆ ಮುನ್ನವೇ ಪರಿಹರಿಸಿಕೊಳ್ಳುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿಲ್ಲ. ರಾಜ್ಯದ ಹೊರಗಿನ ವ್ಯಕ್ತಿ ಸಿಂಘ್ವಿ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದ್ದೇ ಪಕ್ಷದಲ್ಲಿ ಅತೃಪ್ತಿಗೆ ಕಾರಣವಾಗಿತ್ತು. ಸುಖು ಅವರ ನಾಯಕತ್ವದ ಬಗ್ಗೆಯೂ ಶಾಸಕರಿಗೆ ಸಂತೃಪ್ತಿ ಇರಲಿಲ್ಲ. ಈ ಪರಿಸ್ಥಿತಿಯ ಲಾಭವನ್ನು ಬಿಜೆಪಿ ಪಡೆದುಕೊಂಡಿತು. ಕಾಂಗ್ರೆಸ್‌ನ ಕೆಲ ಶಾಸಕರು ಈಗ ಬಿಜೆಪಿ ಸುಪರ್ದಿಯಲ್ಲಿ ಇದ್ದಾರೆ. ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ವಾಹನದಲ್ಲಿ ಅವರನ್ನು ಕರೆದೊಯ್ಯಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಹಿಮಾಚಲ ಪ್ರದೇಶದಲ್ಲಿ ರಾಜಕೀಯ ಆಟವು ಇನ್ನೂ ಕೆಲ ದಿನ ಮುಂದುವರಿಯುವುದು ಖಚಿತ.

ರಾಜ್ಯಸಭೆಗೆ ಅಭ್ಯರ್ಥಿಗಳ ಆಯ್ಕೆಯ ಮಾನದಂಡ ಕುಸಿತವೂ ಭಾರಿ ಕಳವಳ ಮೂಡಿಸುವಂತಿದೆ. ಚರಿತ್ರೆ, ವಿಜ್ಞಾನ, ಸಮಾಜಸೇವೆ ಮುಂತಾದ ಕ್ಷೇತ್ರಗಳಲ್ಲಿ ಬಹುದೊಡ್ಡ ಕೆಲಸ ಮಾಡಿದವರನ್ನು ರಾಜ್ಯಸಭೆಯ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡುವ ಪರಿಪಾಟ ಇತ್ತು. ಈ ಕಾರಣಕ್ಕಾಗಿಯೇ ರಾಜ್ಯಸಭೆಯನ್ನು ಹಿರಿಯರ ಮನೆ ಎಂದು ಕರೆಯಲಾಗುತ್ತದೆ. ಈ ಮನೆಯಲ್ಲಿ ಅರ್ಥಪೂರ್ಣವಾದ, ದೇಶಕ್ಕೆ ದೊಡ್ಡ ಕೊಡುಗೆ ಕೊಡುವಂತಹ ಚರ್ಚೆಗಳು ಹಿಂದೆ ಆಗುತ್ತಿದ್ದವು. ಆದರೆ, ಈಗ ರಾಜ್ಯಸಭೆಯ ಅಭ್ಯರ್ಥಿಗಳ ಆಯ್ಕೆ ಮತ್ತು ನಾಮನಿರ್ದೇಶನ ಎರಡಕ್ಕೂ ಪ್ರಸ್ತುತ ರಾಜಕಾರಣದ ಲೆಕ್ಕಾಚಾರಗಳೇ ಆಧಾರ. ನೇರ ಚುನಾವಣೆಯ ಮೂಲಕ ಲೋಕಸಭೆ ಅಥವಾ ವಿಧಾನಸಭೆ ಪ್ರವೇಶಿಸಲು ಆಗದವರಿಗೆ ರಾಜಕೀಯ ಪುನರ್ವಸತಿ ಕಲ್ಪಿಸಲು ರಾಜ್ಯಸಭೆಯು ಬಳಕೆ ಆಗುತ್ತಿದೆ. ಈ ಎಲ್ಲವೂ ಭಾರತದ ರಾಜಕಾರಣ ಅಧಃಪತನಗೊಂಡಿದೆ ಮತ್ತು ಕಾಯಕಲ್ಪ ತಕ್ಷಣವೇ ಆಗಬೇಕಿದೆ ಎಂಬುದನ್ನು ಸೂಚಿಸುತ್ತಿವೆ.

ದಿನದ ಟ್ವೀಟ್

ರಾಜ್ಯಭಾಷೆಗೆ ಆದ್ಯತೆ ಇರಲಿ

ಜನರಿಗೆ ಅವರ ಭಾಷೆಯಲ್ಲೇ ಸೇವೆ ಒದಗಿಸಬೇಕು. ಎಲ್ಲ ರಾಜ್ಯಗಳ ಹೈಕೋರ್ಟ್‌ಗಳಲ್ಲೂ ರಾಜ್ಯಭಾಷೆಗೆ ಬೆಂಬಲ ಸಿಗುವಂತೆ ಆಗಬೇಕು.

(ನ್ಯಾಯಮೂರ್ತಿಗಳಿಗೆ ಹಿಂದಿ ಅರ್ಥವಾಗದಿರುವ ಕಾರಣಕ್ಕೆ ಪಟ್ನಾ ಹೈಕೋರ್ಟ್ ವಕೀಲರೊಬ್ಬರು, ಅನುವಾದಕರ ಸೇವೆ ಒದಗಿಸುವಂತೆ ಆಗ್ರಹಿಸಿದ ಸುದ್ದಿಗೆ ಪ್ರತಿಕ್ರಿಯೆ)

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ಪಟ್ಟಭದ್ರ ಹಿತಾಸಕ್ತಿ ಹೊಂದಿದ ಕೆಲವರು ಉದ್ದೇಶಪೂರ್ವಕವಾಗಿ ಇಂತಹ ಸಮಯದಲ್ಲಿ ಧಾರ್ಮಿಕ ದ್ವೇಷವನ್ನು ಹರಡುತ್ತಾರೆ, ಅಪಪ್ರಚಾರ ಮಾಡುವುದು, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿ ಹಬ್ಬಿಸಿ, ಕೋಮುದ್ವೇಷ ಉಂಟುಮಾಡಿ, ಸೌಹಾರ್ದಕ್ಕೆ ಧಕ್ಕೆಯುಂಟು ಮಾಡುವ ಮೂಲಕ ಸಮಾಜದಲ್ಲಿ ಒಡಕು ಉಂಟುಮಾಡುವುದು, ನಂಬಿಕೆದ್ರೋಹ, ನಯವಂಚನೆ, ಧರ್ಮದ ಹೆಸರಿನಲ್ಲಿ ಜನರನ್ನು ಮೂರ್ಖರನ್ನಾಗಿಸುವುದು ಮಾಡುತ್ತಾರೆ. ಅಂತಹವರ ಮೇಲೆ ಸರ್ಕಾರವು ಕಟುವಾದ ಕಾನೂನಿನ ಕ್ರಮ ಕೈಗೊಳ್ಳಬೇಕು, ಸಾಮಾಜಿಕ ಸೌಹಾರ್ದವನ್ನು ಕಾಪಾಡಬೇಕು.

ವಿ.ಶಿವಾನಂದ ಕುಮಾರ್, ವಕೀಲ



ಜಾರಿಗೆ ಬರಲಿದೆ 'ಲ್ಯಾಂಡ್ ಟು ಲ್ಯಾಬ್' ಎಂಬ ಹೊಸ ಕ್ರಮ

ಬಿಕ್ಕಟ್ಟಿನ ಹಾದಿಯಲ್ಲಿ ವೈಜ್ಞಾನಿಕ ಸಂಶೋಧನೆ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಹಳೆ ಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿಹೋಗಲಿ, ಬರಲಿ ವಿಜ್ಞಾನ ಬುದ್ಧಿ...
...ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯಬನ್ನಿ!

- ಕುವೆಂಪು

ನಮ್ಮ ದೇಶದ ವಿಜ್ಞಾನಿಯೊಬ್ಬರಿಗೆ ನೊಬೆಲ್ ಪುರಸ್ಕಾರ ಬಂದು ಹತ್ತತ್ತಿರ ನೂರು ವರ್ಷಗಳಾಗುತ್ತಿವೆ. ನಮ್ಮ ಇನ್ನೊಬ್ಬ ವಿಜ್ಞಾನಿಗೆ ಯಾಕೆ ಅದನ್ನು ಪಡೆಯಲು ಸಾಧ್ಯವಾಗಿಲ್ಲ ಎಂಬ ಪ್ರಶ್ನೆ ನಮ್ಮ ವಿದ್ಯಾರ್ಥಿಗಳಿಂದ ಪದೇಪದೇ ಎದುರಾಗುತ್ತದೆ. ವಿಜ್ಞಾನದ ಪಾಠ ಮಾಡುವ ಮೇಷ್ಟ್ರುಗಳಿಗೆ ಈ ಪ್ರಶ್ನೆಗೆ ಸರಾಗವಾಗಿ ಉತ್ತರಿಸಲು ಆಗುವುದಿಲ್ಲ. ಆದರೆ 'ನಾವು ಮಾಡುವ ವೈಜ್ಞಾನಿಕ ಸಂಶೋಧನೆಗಳಿಗೆ ಆರ್ಥಿಕ ಅನುದಾನ ಸಾಲದು', 'ಉಪಕರಣಗಳ ಗುಣಮಟ್ಟ ಸಾಲದು' ಎಂಬ ಸಿದ್ಧ ಉತ್ತರಗಳು ವಿಜ್ಞಾನಿಗಳ ಬಳಿ ಇವೆ. ಹಿಂದಿನ ಎರಡು ದಶಕಗಳಿಂದಲೂ ವಿಜ್ಞಾನ ಕ್ಷೇತ್ರಕ್ಕೆ ನೀಡುತ್ತಿರುವ ಹಣಕಾಸಿನ ನೆರವು ಕಡಿಮೆ ಎಂಬ ಮಾತು ನಿಜ.

ಹಣವಿದ್ದರಷ್ಟೇ ಸಂಶೋಧನೆ ಎಂದು ವಿಜ್ಞಾನಿಗಳು ಇಲ್ಲಿ ಪ್ರತಿಪಾದಿಸುತ್ತಿಲ್ಲ. ಆದರೆ ವೈಜ್ಞಾನಿಕ ಸಂಶೋಧನೆಗಳಿಗೆ ನಾವು ಮೀಸಲಿಡುವ ಹಣ ಇತರ ಸುಧಾರಿತ ದೇಶಗಳಿಗೆ ಹೋಲಿಸಿದರೆ ತುಂಬಾ ಕಡಿಮೆ. ಹಿಂದಿನ ಹಲವಾರು ವರ್ಷಗಳಿಂದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇ 0.6ರಿಂದ 0.8ರಷ್ಟನ್ನು ಮಾತ್ರ ಸಂಶೋಧನೆಗೆ ಬಳಸಲಾಗುತ್ತಿದೆ. ಇಸ್ರೇಲ್‌ನವರು ಜಿಡಿಪಿಯ ಶೇ 4.9ರಷ್ಟು ಬಳಸುತ್ತಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳೆರಡಕ್ಕೂ ಸೇರಿ ನಾವು ಖರ್ಚು ಮಾಡುವ ಹಣ ಬರೀ ₹ 1.2 ಲಕ್ಷ ಕೋಟಿಯಾದರೆ, ಅಮೆರಿಕ ನಮ್ಮ ಮೊತ್ತದ 120 ಪಟ್ಟು ಖರ್ಚು ಮಾಡುತ್ತದೆ.

ನಮ್ಮಲ್ಲಿ ಪ್ರತಿ ಹತ್ತು ಲಕ್ಷ ಜನಸಂಖ್ಯೆಗೆ ಬರೀ 262 ಜನ ಸಂಶೋಧಕರಿದ್ದರೆ, ಕೊರಿಯಾ 8,714, ಇಸ್ರೇಲ್ 8,342, ಸ್ವೀಡನ್ 7,930, ಡೆನ್ಮಾರ್ಕ್ 7,692, ಸಿಂಗಪುರದಲ್ಲಿ 7,887 ಮಂದಿ ಸಂಶೋಧಕರಿದ್ದಾರೆ. ಸಂಶೋಧನೆಗಳಲ್ಲಿ ನಾವೀನ್ಯ ರೂಢಿಸಿಕೊಂಡಿರುವ ವಿಶ್ವದ ಮೊದಲ ಐವತ್ತು ದೇಶಗಳ ಪಟ್ಟಿಯಲ್ಲಿ ನಾವು (46ನೇ) ಕಳಪೆ ಸ್ಥಾನದಲ್ಲಿದ್ದೇವೆ. ಹಿಂದಿನ ಒಂದು ದಶಕದಲ್ಲಿ ಮುನ್ನೂರು ಹೊಸ ವಿಶ್ವವಿದ್ಯಾಲಯಗಳು ತಲೆ ಎತ್ತಿವೆ. ವಿಜ್ಞಾನಕ್ಕೆ ಸಂಬಂಧಿಸಿದ ಸಂಸ್ಥೆಗಳ ಸಂಖ್ಯೆಯಲ್ಲಿ ವೃದ್ಧಿಯಾಗಿದೆ. ಆದರೆ ಸಂಶೋಧನೆಗೆ ನೀಡುವ ಹಣ ಹೆಚ್ಚಾಗಿಲ್ಲ.

ನ್ಯಾಷನಲ್ ರಿಸರ್ಚ್ ಫೌಂಡೇಷನ್ ಬಿಲ್– 2023ರ ಪ್ರಕಾರ, ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ ನಡೆಯುವ ಉನ್ನತ ಸಂಶೋಧನೆಗಳಿಗೆ ಒತ್ತು ನೀಡಲು ₹ 50,000 ಕೋಟಿ ಮೀಸಲಿಡುವುದಾಗಿ ಘೋಷಿಸಲಾಗಿದೆ. ಖರ್ಚು ಮಾಡಲಾಗುವ ಹಣದಲ್ಲಿ ₹ 36,000 ಕೋಟಿ ಖಾಸಗಿ ವಲಯಗಳಿಂದ ಬರಬೇಕಿದೆ. ಅಮೆರಿಕ, ಇಸ್ರೇಲ್, ಚೀನಾದಲ್ಲಿ ಸಂಶೋಧನೆಗೆ ಖರ್ಚು ಮಾಡುವ ಒಟ್ಟು ಹಣದ ಶೇ 70ರಷ್ಟನ್ನು ಖಾಸಗಿ ಕ್ಷೇತ್ರವೇ ಭರಿಸುತ್ತದೆ. ನಮ್ಮಲ್ಲಿ ಅದರ ಪ್ರಮಾಣ ಬರೀ ಶೇ 36ರಷ್ಟಿದೆ. ಸದ್ಯದ ಪರಿಸ್ಥಿತಿಯಲ್ಲಿ ಸಂಶೋಧನೆಗೆ ಹಣ ಪಡೆಯುವುದು ಅಷ್ಟು ಸುಲಭವಲ್ಲ ಎನ್ನುವ ವಿಜ್ಞಾನಿಗಳು, ಉಪಕರಣ, ಸಲಕರಣೆ ಕೊಳ್ಳಲು ಬೇಕಾಗುವ ಹಣ ನಮಗೆ ಬರುವುದು ಅರ್ಧವರ್ಷ ಕಳೆದ ನಂತರವೇ ಎಂದು ದೂರುತ್ತಾರೆ.

ಮೇಲಾಗಿ, ಬೇಕಾದ ಉಪಕರಣಗಳನ್ನು ಸರ್ಕಾರಿ ಸ್ವಾಮ್ಯದ ಇ-ಮಾರ್ಕೆಟ್ ತಾಣದಿಂದಲೇ ಪಡೆಯಬೇಕೆಂಬ ನಿಯಮವಿದೆ. 20 ದಿನಗಳೊಳಗಾಗಿ ಅಲ್ಲಿಂದ ಪ್ರತಿಕ್ರಿಯೆ ಬಂದರೆ ಅದರ ಗುಣಮಟ್ಟ ಹೇಗಾದರೂ ಇರಲಿ ಅಲ್ಲಿಂದಲೇ ಕೊಳ್ಳಬೇಕು ಎಂಬ ನಿಯಮ ನಮ್ಮ ಸಂಶೋಧನೆಗಳಿಗೆ ದೊಡ್ಡ ಅಡ್ಡಿಯುಂಟು ಮಾಡಲಿದೆ ಎಂಬುದು ವಿಜ್ಞಾನಿಗಳ ಅಭಿಮತ. ನಮ್ಮ ಉಪಕರಣಗಳ ಗುಣಮಟ್ಟ ಕಡಿಮೆ ಮತ್ತು ಅವು ಬರುವುದು ವಿಳಂಬವಾದಷ್ಟೂ ಸಂಶೋಧನೆ ಕುಂಟುತ್ತದೆ. ಅಲ್ಲದೆ 100ಕ್ಕೆ ಏಳು ಸಂಶೋಧನೆಗಳಿಗೆ ಮಾತ್ರ ಅನುದಾನ ಸಿಗುತ್ತಿದೆ. ಕೃಷಿ ಸಂಶೋಧನೆ, ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿ (ಸಿಎಸ್‌ಐಆರ್), ಡಿಪಾರ್ಟ್‌ಮೆಂಟ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಬಯೊಟೆಕ್ನಾಲಜಿ, ಮೈನಿಂಗ್, ವೈದ್ಯಕೀಯಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ವರ್ಷದಿಂದ ವರ್ಷಕ್ಕೆ ಸಿಗುವ ಅನುದಾನ ಕಡಿಮೆಯಾಗುತ್ತಿದೆ.

ಇದರ ಜೊತೆಗೆ ವಿಜ್ಞಾನಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ತಮ್ಮ ಸಂಶೋಧನೆಯ ಗುರಿಗಳೇನು ಎಂಬುದನ್ನು ಅನುದಾನ ನೀಡುವ ಸಂಸ್ಥೆಗೆ ತಿಳಿಸುತ್ತಿರಬೇಕು. ವಿಜ್ಞಾನವನ್ನು ಜನರ ಹತ್ತಿರ ತೆಗೆದುಕೊಂಡು ಹೋಗಲು ಕೇಂದ್ರ ಸರ್ಕಾರವು ವೈಜ್ಞಾನಿಕ ಸಾಮಾಜಿಕ ಜವಾಬ್ದಾರಿ (ಸೈಂಟಿಫಿಕ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ -ಎಸ್‌ಎಸ್‌ಆರ್) ಹೆಸರಿನಲ್ಲಿ ಮಾರ್ಗಸೂಚಿಗಳನ್ನು 2022ರಲ್ಲಿ ಬಿಡುಗಡೆ ಮಾಡಿದೆ. ವಿಜ್ಞಾನಿಗಳು ಇನ್ನು ಮುಂದೆ ತಮ್ಮ ವೈಜ್ಞಾನಿಕ ಅಧ್ಯಯನ, ಸಂಶೋಧನೆಗಳ ಜೊತೆ ಜನಪ್ರಿಯ ವಿಜ್ಞಾನ ಲೇಖನಗಳನ್ನು ಬರೆಯಬೇಕಿದೆ. ಶಾಲೆ– ಕಾಲೇಜುಗಳಲ್ಲಿ ವೈಜ್ಞಾನಿಕ ವಿಷಯಗಳ ಕುರಿತು ಭಾಷಣ ಮಾಡಬೇಕಿದೆ. ವಿಜ್ಞಾನವನ್ನು ಜನಪ್ರಿಯಗೊಳಿಸಲು ವರ್ಷದಲ್ಲಿ ಹತ್ತು ದಿನ ಜನರ ಮಧ್ಯೆ ಇದ್ದು ಅವರ ಬೇಡಿಕೆ, ಪ್ರಶ್ನೆ, ಕಷ್ಟಗಳೇನು ಎಂಬುದನ್ನು ಅರಿಯಬೇಕು ಎಂದು ಎಸ್‌ಎಸ್‌ಆರ್ ಹೇಳಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾಜಿಕ ಅಭಿವೃದ್ಧಿಯ ಜೊತೆಗೆ ಸಮಾಜ ಮತ್ತು ವೈಜ್ಞಾನಿಕ ರಂಗದ ನಡುವೆ ಗಟ್ಟಿಯಾದ ಸಂಬಂಧ ಏರ್ಪಡುವಂತೆ ಮಾಡುವ ಉದ್ದೇಶದಿಂದ ಎಸ್‌ಎಸ್‌ಆರ್ ಅನ್ನು ಜಾರಿಗೊಳಿಸಲಾಗಿದೆ. ಸಂಶೋಧನೆಗಳ ಫಲವನ್ನು ಸಾಮಾಜಿಕ ಏಳಿಗೆಗೆ ಬಳಸಬೇಕೆನ್ನುವ ನಮ್ಮ ಆಡಳಿತ ನೀತಿಯು ಸಮಾಜದ ನಿರೀಕ್ಷೆಯಂತೆ ಕೆಲಸ ನಡೆಯುತ್ತಿಲ್ಲ ಎಂಬುದನ್ನು ಮನಗಂಡು ಈ ನೀತಿ ರೂಪಿಸಿದೆ. ಜನರ ತೆರಿಗೆ ಹಣದಿಂದ ಸಂಬಳ, ಸಂಶೋಧನೆಗೆ ಬೇಕಾದ ಸವಲತ್ತು ಪಡೆಯುವ ವಿಜ್ಞಾನಿಗಳಲ್ಲಿ ಉತ್ತರದಾಯಿತ್ವ ಇರಬೇಕು ಎಂಬ ಆಶಯವೇ ಈ ನೀತಿಯ ಹಿಂದಿನ ಚಿಂತನೆಯಾಗಿದೆ.

ಇದು ಸ್ವಯಂಪ್ರೇರಿತವಾಗಿ ನಡೆಯಬೇಕೆನ್ನುವುದು ಇಷ್ಟು ದಿನಗಳ ಆಶಯವಾಗಿತ್ತು. ಯಾವಾಗ ವಿಜ್ಞಾನಿಗಳು ತಮ್ಮ ಸಂಶೋಧನೆ, ಅಧ್ಯಯನಗಳನ್ನೇ ಮಾಡಿಕೊಂಡು ಸಾಮಾಜಿಕ ಮುಖ್ಯವಾಹಿನಿಯಿಂದ ದೂರ ಉಳಿದರೋ ಆಗ ಸಮಸ್ಯೆ ಶುರುವಾಯಿತು. ಈ ನೀತಿಯ ಮೂಲ ಉದ್ದೇಶ ಸಾಮಾಜಿಕ ರಂಗ– ವಿಜ್ಞಾನ ಮತ್ತು ವಿಜ್ಞಾನದ ಇತರ ವಿಭಾಗಗಳ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸಿ ಪರಸ್ಪರರ ನಡುವಿನ ನಂಬಿಕೆ, ಪಾಲುದಾರಿಕೆ ಮತ್ತು ಜವಾಬ್ದಾರಿಗಳ ಅನುಷ್ಠಾನದ ವೇಗ ಹೆಚ್ಚಿಸಿ ಸಾಮಾಜಿಕ ಗುರಿಗಳನ್ನು ಸಾಧಿಸುವುದಾಗಿದೆ. ಈಗಿನ ಸರ್ಕಾರದ ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸ್ವಚ್ಛ ಭಾರತ್ ಮಿಷನ್ ಮತ್ತು ವಿಶೇಷಾಭಿವೃದ್ಧಿ ಸಾಧಿಸಬಯಸುವ ಜಿಲ್ಲೆಗಳ ಯೋಜನೆಗಳಿಗೆ ಶಕ್ತಿ ನೀಡಲು ಈ ನೀತಿ ನೆರವಾಗಬೇಕಿದೆ.

ಇಂದಿನ ದಿನಗಳ ಬಹುಪಾಲು ಸಂಶೋಧನೆಗಳು ಅಕಡೆಮಿಕ್ ಸ್ವರೂಪ ಪಡೆದಿದ್ದು, ಸಮಾಜದ ಉಪಯೋಗಕ್ಕೆ ಬರುತ್ತಿಲ್ಲ. ವಿಶ್ವವಿದ್ಯಾಲಯ ಮತ್ತು ಖಾಸಗಿ ಸಂಶೋಧನಾ ಲ್ಯಾಬ್‌ಗಳಲ್ಲಿ ಆಯಾ ವಿದ್ಯಾರ್ಥಿ-ಅಧ್ಯಾಪಕರ ಅವಶ್ಯಕತೆ ಮತ್ತು ಆಸಕ್ತಿಗನುಗುಣವಾಗಿ ಸಂಶೋಧನೆಗಳು ನಡೆಯುತ್ತಿವೆ. ಇದುವರೆಗೂ ಚಾಲ್ತಿಯಲ್ಲಿದ್ದ 'ಲ್ಯಾಬ್ ಟು ಲ್ಯಾಂಡ್' (ಪ್ರಯೋಗಾಲಯದಿಂದ ಜನರಿಗೆ) ವಿಧಾನದ ಬದಲು 'ಲ್ಯಾಂಡ್ ಟು ಲ್ಯಾಬ್' (ಜನರಿಂದ ಪ್ರಯೋಗಾಲಯಕ್ಕೆ) ಎಂಬ ಹೊಸ ಕ್ರಮ ಜಾರಿಗೆ ಬರಲಿದೆ. ಅಂದರೆ, ಜನ ತಮಗೇನು ಬೇಕು ಎಂಬುದನ್ನು ಸ್ಥಳೀಯ ವಿಜ್ಞಾನ ಕೇಂದ್ರಗಳಿಗೆ ತಿಳಿಸುತ್ತಾರೆ. ಅದನ್ನು ಪರಿಗಣಿಸಿ ಸಂಶೋಧನೆ ನಡೆಯಬೇಕಿದೆ.

ಇದುವರೆಗೂ ಸಾರ್ವಜನಿಕರ ಹಣದಿಂದ ನಡೆಯುತ್ತಿದ್ದ ವಿಜ್ಞಾನ ಸಂಶೋಧನೆಗಳು ಈಗ ಖಾಸಗಿಯವರು ನೀಡುವ ಹಣಕ್ಕೆ ಕಾಯಬೇಕಿದೆ. ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ (ಸಿಎಸ್‌ಆರ್) ಮತ್ತು ಸಂಶೋಧನೆಗೆ ಹಣ ಎರಡನ್ನೂ ನಿಭಾಯಿಸುವ ಅನಿವಾರ್ಯಕ್ಕೆ ಸಿಲುಕುವ ಖಾಸಗಿ ಕಂಪನಿಗಳು ತಮಗೆ ಬೇಕಾದ ಸಂಶೋಧನೆ ಮತ್ತು ಸಂಸ್ಥೆಗಳಿಗೆ ಮಾತ್ರ ಅನುದಾನ ನೀಡುವ ಸ್ವಾತಂತ್ರ್ಯ ಪಡೆದಿವೆ. ಆಗ ನೈಜ ಅವಶ್ಯಕತೆ ಇರುವ ಸಂಸ್ಥೆಗಳಿಗೆ ಅನುದಾನ ಸಿಗುತ್ತದೆ ಎಂಬ ಯಾವ ಗ್ಯಾರಂಟಿಯೂ ಇರುವುದಿಲ್ಲ.

ಸಂಶೋಧನೆಗೆ ಹಣ ಹೊಂದಿಸುವುದು ಹೇಗೆ ಎಂಬ ಗೊಂದಲದಲ್ಲೇ ಇರುವ ನಾವು, ಜನರ ಬಳಿಗೆ ಹೋಗಿ ಮಾಡುವುದಾದರೂ ಏನು ಎನ್ನುವ ಪ್ರಶ್ನೆ ವಿಜ್ಞಾನಿಗಳದ್ದು. ವೈಜ್ಞಾನಿಕ ಸಂಶೋಧನೆಯನ್ನು ಕಟ್ಟಡ ಅಥವಾ ಸೇತುವೆ ನಿರ್ಮಿಸುವ ಯೋಜನೆ ಎಂಬಂತೆ ಪರಿಗಣಿಸುತ್ತಿರುವ ಅಧಿಕಾರಿಶಾಹಿಯು ದೇಶದ ಸಂಶೋಧನಾ ಪ್ರವೃತ್ತಿಯನ್ನು ಕೊಲ್ಲುತ್ತಿದೆ ಎಂಬ ಅಭಿಪ್ರಾಯ ವಿಜ್ಞಾನ ವಲಯದಲ್ಲಿದೆ. ಸಂಶೋಧನೆಗೆ ಬೇಕಾದ ಅನುದಾನ ಹೆಚ್ಚಿಸಿ, ಸಮಯಕ್ಕೆ ಸರಿಯಾಗಿ ಸಲಕರಣೆ ಮತ್ತು ಪ್ರಯೋಗಾಲಯ ವ್ಯವಸ್ಥೆ ಕಲ್ಪಿಸಿಕೊಟ್ಟರೆ ಮಾತ್ರ ಅಂದುಕೊಂಡ ಸಾಧನೆ ಸಾಧ್ಯ. ಇಲ್ಲದಿದ್ದರೆ, ಈ ಲೇಖನದ ಆರಂಭದಲ್ಲಿ ಎತ್ತಿದ ಪ್ರಶ್ನೆ ಪುನರಾವರ್ತನೆ ಆಗುತ್ತಲೇ ಇರುತ್ತದೆ.

ಚುರುಮುರಿ

ಆಹಾ! ದಾಹ...

• ಮಣ್ಣೆ ರಾಜು

'ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದೆಯಂತೆ. ರಾಜಧಾನಿ ಜನರ ದಾಹಾಕಾರ ತಣಿಸಲು ಜಲಮಂಡಳಿಯ ಜನ ಹೆಣಗಾಡ್ತಿದ್ದಾರಂತೆ ಕಣ್ರೀ' ಅಂದಳು ಸುಮಿ.

'ಮಳೆಗಾಲದಲ್ಲಿ ಮನೆಗಳಿಗೆ ನೀರು ನುಗ್ಗುವ ಕಾಟ, ಬೇಸಿಗೆಯಲ್ಲಿ ನೀರಿಲ್ಲದೆ ಪರದಾಟ. ಎರಡು ಕಾಲದಲ್ಲೂ ಬೆಂಗಳೂರಿಗೆ ನೀರಾ'ವರಿ' ತಪ್ಪಿದ್ದಲ್ಲ. ಮಳೆ ಸುರಿದರೂ ಕಸಿವಿಸಿ, ಬೆವರು ಸುರಿದರೂ ಕಸಿವಿಸಿ. ಆರತಿ ತಗೊಂಡ್ರೆ ಉಷ್ಣ, ತೀರ್ಥ ತಗೊಂಡ್ರೆ ಶೀತ ಎನ್ನುವಂತಾಗಿದೆ ಬೆಂಗಳೂರಿನ ಪರಿಸ್ಥಿತಿ' ಎಂದು ನಕ್ಕ ಶಂಕ್ರಿ.

'ಬೇಸಿಗೆಯಲ್ಲಿ ಬೆವರುಸಾಲೆ, ತ್ವಚೆಯಿಂದ ಸೌಂದರ್ಯ ವರ್ಣ ಹಾಳಾಗಬಹುದೆಂದು ದಿನಕ್ಕೆ ಮೂರು ಬಾರಿ ಸ್ನಾನ ಮಾಡಬೇಡಿ, ಕಾರು, ಬೈಕು, ರಸ್ತೆ ತೊಳೆದು ನೀರನ್ನು ಪೋಲು ಮಾಡಬೇಡಿ ಅಂತ ನೀರು ಮಂಡಳಿಯವರು ಜಲಜಾಗೃತಿ ಮೂಡಿಸುತ್ತಿದ್ದಾರಂತೆ'.

'ಜಲಮೂಲ ಬರಿದಾಗುತ್ತಾ ಜೀವನದಿಗಳೇ ಕಣ್ಣೀರು ಹಾಕುತ್ತಿರುವಾಗ ನದಿ, ಸಮುದ್ರದ ಸಂಪರ್ಕವಿಲ್ಲದ ಬೆಂಗಳೂರಿಗೆ ಜಲಬಾಧೆ ಬಾಧಿಸದೆ ಇರುತ್ತಾ?'

'ಊರಿಗೊಂದು ನದಿ ಎನ್ನುವ ಯೋಜನೆ ಜಾರಿಗೆ ತಂದು, ಬೆಂಗಳೂರು ಪಕ್ಕದಲ್ಲೊಂದು ಸರ್ವಋತು ನದಿ ನಿರ್ಮಾಣ ಮಾಡಿದರೆ ರಾಜಧಾನಿಯ ನೀರಿನ ಬವಣೆಗೆ ಶಾಶ್ವತ ಪರಿಹಾರ ಸಿಗಬಹುದು'.

'ಚರಂಡಿ ನಿರ್ಮಿಸಿ ನೀರು ಹರಿಸಬಹುದು, ನದಿ ನಿರ್ಮಾಣ ಸಾಧ್ಯವಿಲ್ಲ'.

'ಬೆಂಗಳೂರು ಕಟ್ಟುವಾಗ ಕೆಂಪೇಗೌಡರು ನೀರಿನ ವ್ಯವಸ್ಥೆಗೆ ಕೆರೆಗಳನ್ನೂ ಕಟ್ಟಿಸಿದ್ದರು. ನಾವು ಕೆರೆಗಳನ್ನು ಮುಚ್ಚಿ ಕಟ್ಟಡ ಕಟ್ಟಿದ್ದೇವೆ. ಇಂಗಲು, ತಂಗಲು ವ್ಯವಸ್ಥೆಯಿಲ್ಲದೆ ಮಳೆ ನೀರು ಊರುಬಿಟ್ಟು ಹೋಗುತ್ತದೆ. ಪಾರ್ಕು, ಸ್ಟೇಡಿಯಂ ರೀತಿ ಸರ್ಕಾರ ಬೆಂಗಳೂರಿನಲ್ಲಿ ಕೆರೆಕಟ್ಟೆಗಳನ್ನೂ ಕಟ್ಟಿದರೆ ಮಳೆ ನೀರು ಸಂಗ್ರಹಿಸಿ 'ನಮ್ಮ ನೀರು, ನಮ್ಮ ಹಕ್ಕು' ಅಂತ ಜಲ ಸ್ವಾವಲಂಬಿ ಆಗಬಹುದು'.

'ಕೆರೆ ಕಟ್ಟುವುದು ಕಷ್ಟವೇನಲ್ಲ, ಆದರೆ ಕೆರೆ ಕಬಳಿಸುವವರನ್ನು ಕಟ್ಟಿಹಾಕುವುದು ಕಷ್ಟವಾಗಬಹುದು...' ಅಂದ ಶಂಕ್ರಿ.

ಸಂಗತ

ಸಿರಿಗರ ಬಡಿದವರು, ಅನ್ನದೇವರ ಮರೆತವರು

ಅಪೌಷ್ಟಿಕತೆಗೂ ಆಹಾರದ ಪೋಲಿಗೂ ನೇರವಾದ ಸಂಬಂಧ ಇರುವುದನ್ನು ಅಧ್ಯಯನ ವರದಿಗಳು ದೃಢಪಡಿಸಿವೆ

• ಡಾ. ಲಕ್ಷ್ಮಣ ವಿ.ಎ.

ದೇಶದಲ್ಲಿ ಒಬ್ಬ ನಾಗರಿಕನಿಗೆ ಸಿಗಬೇಕಾದ ಕನಿಷ್ಠ ಆಹಾರದ ಸಂಪನ್ಮೂಲ ಸರ್ಕಾರದ ಬಳಿ ಇದ್ದರೂ ಅದನ್ನು ಅರ್ಹರಿಗೆ ತಲಪಿಸುವಲ್ಲಿ ವ್ಯವಸ್ಥೆ ವಿಫಲವಾಗುತ್ತಿದೆ. ಆಹಾರ ವಿತರಣೆಯಲ್ಲಿನ ಗೊಂದಲ, ಪಡಿತರ ಚೀಟಿಯ ಅಲಭ್ಯ, ಅಪೌಷ್ಟಿಕತೆ ಹೆಚ್ಚಳ, ಶಿಶು ಮರಣ ಪ್ರಮಾಣ ಹೆಚ್ಚಳದಂತಹ ಸಂಗತಿಗಳು ಮಾಧ್ಯಮಗಳಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಅಪೌಷ್ಟಿಕತೆಗೂ ಆಹಾರದ ಪೋಲಿಗೂ ನೇರವಾದ ಸಂಬಂಧ ಇರುವುದನ್ನು ಅಧ್ಯಯನ ವರದಿಗಳು ದೃಢಪಡಿಸಿವೆ.

ಬೆಂಗಳೂರಿನಲ್ಲಿ ಆತ್ಮೀಯರೊಬ್ಬರ ಮದುವೆ ಸಮಾರಂಭಕ್ಕೆ ಹೋಗಿದ್ದೆ. ಅದೊಂದು ವೈಭವೋಪೇತ ಮದುವೆ. ಭರ್ಜರಿ ಭೂರಿ ಭೋಜನ. ಸ್ವಾಗತ ಪೇಯ, ಕುರುಕಲು ತಿಂಡಿ, ಹತ್ತು ಹಲವು ತರಹದ ಭಕ್ಷ್ಯ ಭೋಜ್ಯಗಳು. ಇನ್ನು ಊಟದ ಮೇಜಿನ ಮೇಲಂತೂ ಬಗೆ ಬಗೆಯ ಸಿಹಿ, ಖಾರದ ಖಾದ್ಯ, ಪೇಯಗಳು. ತಿನ್ನಲು ಬಹು ಆಯ್ಕೆಗಳಿದ್ದ ಈ ಅವಕಾಶದಲ್ಲಿ, ಯಾವುದು ತಿಂದು ಯಾವುದು ಬಿಡಲಿ ಎಂಬ ಹಪಹಪಿಯಿಂದ ಎಲ್ಲರೂ ತಮ್ಮ ತಮ್ಮ ತಟ್ಟೆಯಲ್ಲಿ ಅರ್ಧದಷ್ಟು ಊಟವನ್ನು ಪೋಲು ಮಾಡಿದ್ದರು. ಇದನ್ನು ನೋಡಿ ಬಲು ಬೇಸರವಾಯಿತು. ಬರೀ ಮದುವೆ, ಗೃಹಪ್ರವೇಶ, ನಾಮಕರಣದ ಸಂಭ್ರಮದಲ್ಲಷ್ಟೇ ಅಲ್ಲ, ಬಹುತೇಕ ದೊಡ್ಡ ದೊಡ್ಡ ಹೋಟೆಲುಗಳಲ್ಲೂ ಈ ರೀತಿ ಅರೆಬರೆ ತಿಂದು ಎದ್ದು ಹೋದವರ ತಟ್ಟೆಗಳನ್ನು ನಾವು ದಿನನಿತ್ಯ ನೋಡುತ್ತೇವೆ.

ಇತ್ತೀಚೆಗೆ ಜರ್ಮನಿಗೆ ಪ್ರವಾಸಕ್ಕೆ ಹೋಗಿ ಬಂದ ನನ್ನ ಗೆಳೆಯ ತನ್ನ ಅನುಭವಗಳನ್ನು ಹಂಚಿಕೊಳ್ಳುತ್ತ, ಅಲ್ಲಿಯ ಹೋಟೆಲುಗಳಲ್ಲಿ ನಾವು ತಟ್ಟೆಯಲ್ಲಿ ಆಹಾರವನ್ನೇನಾದರೂ ಉಳಿಸಿದರೆ ಅದಕ್ಕೆ ದಂಡ ತೆರಬೇಕಾಗುತ್ತದೆ ಎಂದು ಹೇಳಿದ್ದು ಕೇಳಿ ಒಂದು ಕ್ಷಣ ದಂಗಾಗಿದ್ದೆ. ಆಹಾರ ಪೋಲು ಮಾಡುವುದನ್ನು ತಡೆಯಲು ಇದೊಂದು ಒಳ್ಳೆಯ ಉಪಾಯವಲ್ಲವೇ ಎಂದು ಯೋಚಿಸುವಂತಾಯಿತು.

ನಾವು ನೀವೆಲ್ಲಾ ಪ್ರತಿದಿನ ಬೆಳಿಗ್ಗೆ ಎದ್ದು ಒಂದು ಲೋಟ ಕಾಫಿ ಸೇವಿಸುವುದರ ಹಿಂದೆ ಒಬ್ಬ ಕಬ್ಬು ಬೆಳೆಗಾರ, ಕಾಫಿ ಬೆಳೆಗಾರ, ಹಾಲು ವ್ಯಾಪಾರಿಯ ಶ್ರಮದ ಅಖಂಡ ತಪನೆಯ ಫಲವಿರುತ್ತದೆ. ನಮ್ಮ ಸುತ್ತಮುತ್ತ ಬದುಕುವ ಪ್ರಾಣಿ ಪಕ್ಷಿಗಳು ಎಂದೂ ತಮ್ಮ ಆಹಾರವನ್ನು ವೃಥಾ ಪೋಲು ಮಾಡುವುದಿಲ್ಲ ಎಂಬುದು ಸುಮ್ಮನೆ ಗಮನಿಸಿದರೆ ತಿಳಿಯುತ್ತದೆ. ತಮ್ಮ ಹೊಟ್ಟೆ ಹಸಿಯದೆ ಹುಲಿ, ಸಿಂಹ, ಚಿರತೆಯೂ ಬೇಟೆಗೆ ಇಳಿಯುವುದಿಲ್ಲ.

ಇಂತಹ ಸಂದರ್ಭದಲ್ಲಿ ಲೇಖಕ ದೇವನೂರ ಮಹಾದೇವ ಅವರು ಹೇಳಿದ ಒಂದು ಕತೆ ನೆನಪಾಗುತ್ತದೆ: ಚಕ್ರವರ್ತಿಯೊಬ್ಬನಿಗೆ ಇಡೀ ಭೂಮಂಡಲವನ್ನೆಲ್ಲ ಗೆದ್ದು ತನ್ನ ಚಕ್ರಾಧಿಪತ್ಯ ಸ್ಥಾಪಿಸಬೇಕೆಂಬ ಬಯಕೆ. ಅದರಂತೆ ತನ್ನ ಪಕ್ಕದ ರಾಜ್ಯದ ಮೇಲೆ ದಂಡೆತ್ತಿ ಹೋದ. ಘನಘೋರ ಯುದ್ಧವೇ ನಡೆಯಿತು. ಲಕ್ಷಾಂತರ ಸೈನಿಕರು ಮಡಿದರು. ಚಕ್ರವರ್ತಿ ಯುದ್ಧ ಭೂಮಿಯಲ್ಲಿ ತಾನು ಹೊಡೆದುರುಳಿಸಿದ ಸೈನಿಕರ ಶವಗಳತ್ತ ಹಮ್ಮಿನಿಂದ ನೋಡುತ್ತಿದ್ದ. ಅವನಿಗೆ ದಿಗ್ಭ್ರಮೆಯಾಗುವ ದೃಶ್ಯವೊಂದು ಕಂಡುಬಂದಿತು. ಆ ನಾಡಿನ ಆದಿವಾಸಿಯೊಬ್ಬ ಹೆಣವೊಂದನ್ನು ಕಿತ್ತು ಗಬಗಬ ತಿನ್ನುತ್ತಿದ್ದ. ಚಕ್ರವರ್ತಿಯನ್ನು ಕಂಡು ಭಯಗೊಂಡ ಆತ 'ದೊರೆಯೇ ಹಸಿವನ್ನು ತಾಳಲಾರದೆ, ನೀನು ಹೊಡೆದುರುಳಿಸಿದ ಸೈನಿಕನ ಹೆಣವನ್ನು ತಿನ್ನುತ್ತಿದ್ದೇನೆ. ಇದು ನಿನ್ನ ಆಹಾರ, ನಿನ್ನ ಅಪ್ಪಣೆ ಇಲ್ಲದೆ ತಿನ್ನುತ್ತಿದ್ದೇನೆ ಕ್ಷಮಿಸು' ಎಂದ. ಅದಕ್ಕೆ ಚಕ್ರವರ್ತಿಯು 'ನಾನು ನರಮಾಂಸ ಭಕ್ಷಕನಲ್ಲ' ಎಂದ. ಆಗ ಆದಿವಾಸಿ ಹೇಳುತ್ತಾನೆ 'ನೀನು ನರಮಾಂಸ ಭಕ್ಷಕನಲ್ಲ ಎಂದ ಮೇಲೆ ಇಷ್ಟೆಲ್ಲ ಮನುಷ್ಯರನ್ನು ಏಕೆ ಕೊಂದೆ? ನಾನು ಹಸಿವಾದಾಗ ಮಾತ್ರ ಅನಿವಾರ್ಯವಾದರೆ ಕೊಲ್ಲುತ್ತೇನೆ'.

ಈ ಕತೆಯೊಂದು ರೂಪಕವಾಗಿ ನಿಂತು, ಜೀವನವಿಡೀ ದುಡಿದು ಕೂಡಿಟ್ಟು ತನ್ನ ಸಂಪತ್ತನ್ನು ಪ್ರದರ್ಶಿಸಲು ಹಾತೊರೆಯುವ ಸಿರಿಗರ ಬಡಿದವರು ಮೇಲರಿಮೆಯನ್ನು ಪೋಷಿಸಿಕೊಳ್ಳುವ ಕೆಟ್ಟ ಪ್ರದರ್ಶನದಂತೆ ಕಂಡುಬರುತ್ತದೆ. ಹಸಿದಾಗ ಮಾತ್ರ ತಿನ್ನುವ ಆದಿವಾಸಿ ನಮಗೆ ಆದರ್ಶವಾಗಬೇಕು.

ಇತ್ತೀಚೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ರಾಜಕೀಯ ಸಮಾವೇಶವೊಂದರಲ್ಲಿ ಉಳಿದ ಆಹಾರವನ್ನು ಬೀದಿಗೆ ಚೆಲ್ಲುತ್ತಿದ್ದ ದೃಶ್ಯವೊಂದನ್ನು ಪತ್ರಿಕೆಯಲ್ಲಿ ನೋಡಿದೆವು. ಸರಳ ಸಾಮಾಜಿಕ ಜೀವನಕ್ಕೆ ಮೇಲ್ಪಂಕ್ತಿ ಹಾಕಬಹುದಾದ ಜನಪ್ರತಿನಿಧಿಗಳೇ ಇಂತಹ ಅಪಸವ್ಯಗಳಲ್ಲಿ ವ್ಯಸ್ತರಾದರೆ ಜನಸಾಮಾನ್ಯರಿಗೆ ತಲುಪಿಸುವ ಸಂದೇಶವಾದರೂ ಎಂತಹದ್ದು?

'ಅನ್ನ ದೇವರ ಮುಂದೆ ಇನ್ನು ದೇವರಿಲ್ಲ' ಎಂದು ಸರ್ವಜ್ಞ ಸಾರಿದ. ಇಂದಿಗೂ ಕೆಲವೆಡೆ ಸಾರ್ವಜನಿಕ ಭೋಜನ ಸೇವನೆ ಮಾಡುವಾಗ ಅನ್ನ ದೇವರಿಗೆ ಪ್ರಾರ್ಥನೆ ಮಾಡಿ ಕೈ ಮುಗಿದು ಊಟ ಮಾಡುತ್ತೇವೆ. ದೇವಸ್ಥಾನಗಳಲ್ಲಂತೂ ಊಟವನ್ನು 'ಪ್ರಸಾದ' ಎಂದೇ ಸ್ವೀಕರಿಸುತ್ತೇವೆ. ಅಷ್ಟೇ ಏಕೆ, ಊಟ ಮಾಡುವವರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕೆ ಸಾಲ ಕೊಟ್ಟವನೂ ಸಾಲಗಾರ ಊಟ ಮಾಡಿ ಎದ್ದೇಳುವ ತನಕ ಕಾಯುತ್ತಾನೆ ಎಂಬ ನೈತಿಕತೆಯಲ್ಲಿ ಬದುಕುವ ನಾವೆಲ್ಲಾ, ಆಹಾರ ಪೋಲು ಮಾಡುವುದರಲ್ಲೂ ಹಿಂದೆ ಬಿದ್ದಿಲ್ಲ ಎನ್ನುವುದೊಂದು ದುರಂತ.

ಪ್ರತಿ ಅನ್ನದ ಅಗುಳಿನ ಮೇಲೆ ತಿನ್ನುವವನ ಹೆಸರು ಬರೆಯಲಾಗಿರುತ್ತದಂತೆ. ನಮ್ಮಲ್ಲಿ ಕೊಳ್ಳುವ ಶಕ್ತಿ ಇದ್ದ ಮಾತ್ರಕ್ಕೆ ಇನ್ನೊಬ್ಬರ ಆಹಾರವನ್ನು ಕಿತ್ತುಕೊಳ್ಳುವ ಯಾವ ಅಧಿಕಾರವೂ ನಮಗೆ ಇರುವುದಿಲ್ಲ.

ವಾಚಕರ ವಾಣಿ

ನಿಖರ ಮಾಹಿತಿಗೆ ಧಕ್ಕೆ ಬಾರದಿರಲಿ

ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಪ್ರಸಾರವಾಗುವ ವಾರ್ತೆಗಳು ಅಧಿಕೃತವಾಗಿದ್ದು, ಸದಾ ಸ್ಪಷ್ಟ, ನಿಖರ ಮಾಹಿತಿ ನೀಡುತ್ತವೆ ಎಂಬ ನಂಬಿಕೆ ಜನಸಾಮಾನ್ಯರಲ್ಲಿದೆ. ಆದರೆ ಬುಧವಾರದ (ಫೆ. 28) ರಾಷ್ಟ್ರೀಯ ವಿಜ್ಞಾನ ದಿನದಂದು, ಬೆಳಗಿನ 7.05ಕ್ಕೆ ಪ್ರಸಾರವಾಗುವ ಪ್ರದೇಶ ಸಮಾಚಾರದಲ್ಲಿ, ಸರ್ ಸಿ.ವಿ.ರಾಮನ್ ಅವರ ಜನ್ಮದಿನದ ಅಂಗವಾಗಿ ಈ ದಿನವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು. ಅಂದು ರಾಮನ್ ಅವರು ತಮ್ಮ ಸಂಶೋಧನೆಯ 'ರಾಮನ್ ಪರಿಣಾಮ'ವನ್ನು ಜಗತ್ತಿಗೆ ಪರಿಚಯಿಸಿದ ದಿನ. ಅದನ್ನು ಜನ್ಮದಿನ ಎಂದು ತಪ್ಪಾಗಿ ಹೇಳಿದ್ದರಿಂದ ಕೇಳುಗರಲ್ಲಿ ಗೊಂದಲ ಉಂಟಾಯಿತು.

ಇಂಥ ಆಭಾಸಗಳು ಮುಂದಿನ ಪೀಳಿಗೆಯ ದೃಷ್ಟಿಯಿಂದ ಆತಂಕಕಾರಿಯೂ ಹೌದು. ಇಂತಹ ಸಂಗತಿಗಳನ್ನು ಪ್ರಸಾರ ಮಾಡುವಾಗ ಸಂಬಂಧಪಟ್ಟವರು ಹೆಚ್ಚು ಜಾಗರೂಕರಾಗಿ ಇರಬೇಕಾದುದು ಅಗತ್ಯ.

ನಂದಿನಿ ಪ್ರಸಾದ್, ಬೆಂಗಳೂರು

ರಾಜಕೀಯ ಜಾಣ್ಮೆ, ನಿಗೂಢ ಲೆಕ್ಕಾಚಾರ

ದೇಶದ ರಾಜಕಾರಣ ಇಂದು ಸೈದ್ಧಾಂತಿಕ ಬದ್ಧತೆಯ ಮೇಲಷ್ಟೇ ನಿಂತಿಲ್ಲ. ಅಧಿಕಾರ ಹಿಡಿಯಲು ರಾಜಕೀಯ ಪಕ್ಷಗಳಿಗೆ ಬೇಕಿರುವುದು ಸಂಖ್ಯಾಬಲ. ಆ ಸಂಖ್ಯೆ ಗಿಟ್ಟಿಸಿಕೊಳ್ಳಲು ರಾಜಕಾರಣಿಗಳು ಮತ್ತು ಪಕ್ಷಗಳು ನಾನಾ ರೀತಿಯ ಕಸರತ್ತುಗಳನ್ನು, ಗಿಮಿಕ್‌ಗಳನ್ನು ಮಾಡುತ್ತವೆ. ಈ ಕಾರಣದಿಂದ, ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ನ ಅರಬ್ಬಿ ಸಮುದ್ರದ ಕರಾವಳಿ ತೀರದಲ್ಲಿ ಸ್ಕೂಬಾ ಡೈವಿಂಗ್ ಮಾಡಿ ನೀರಿನ ಒಳಗೆ ಹೋಗಿದ್ದನ್ನು ಲಘುವಾಗಿ ನೋಡಲಾಗದು. ನನ್ನ ಪ್ರಕಾರ ಅದೊಂದು ರಾಜಕೀಯ ಜಾಣ್ಮೆ, ಎಲ್ಲರ ಗಮನ ಸೆಳೆಯುವ ತಂತ್ರ.

ಅಧಿಕಾರ ಹಿಡಿಯುವುದೇ ಮುಖ್ಯವಾದಾಗ ನಾಯಕನಾದವನಿಗೆ ಕೆಲವು ನಿಗೂಢ ಲೆಕ್ಕಾಚಾರಗಳು ಇರುತ್ತವೆ. ಅವು ಹೇಳುವಂತಹವಲ್ಲ. ಮಾಡುವಂತಹವು. ಇಲ್ಲಿ ಕೆಲವರು ಮೋದಿ ಅವರನ್ನು ಟೀಕಿಸುತ್ತಾರೆ. ಆದರೆ ಸಾಂವಿಧಾನಿಕ ಹುದ್ದೆಯಾದ ಪ್ರಧಾನಿ ಸ್ಥಾನದಲ್ಲಿ ಇರುವವರ ವಿರುದ್ಧದ ಟೀಕೆಯನ್ನು ಜನರು ಉದ್ಧಟತನವೆಂದೇ ಭಾವಿಸುವ ಸಾಧ್ಯತೆ ಇರುತ್ತದೆ. ಆ ಕಾರಣಕ್ಕೆ, ಲೇವಡಿ ಮಾಡಿದಷ್ಟೂ ವ್ಯಕ್ತಿಬಲ, ಪಕ್ಷಬಲ ಹೆಚ್ಚಿ, ಸಂಖ್ಯಾಬಲ ವೃದ್ಧಿಸುತ್ತಾ ಹೋಗುತ್ತದೆ. ಟೀಕೆಗಳು ನೇಪಥ್ಯಕ್ಕೆ ಸರಿಯುತ್ತವೆ.

ಆರ್.ವೆಂಕಟರಾಜು, ಬೆಂಗಳೂರು

ವ್ಯರ್ಥ ಪ್ರಯೋಗ

ವಿಪ್ ಎಂಬ ಇಂಗ್ಲಿಷ್ ಪದಕ್ಕೆ
ಚಾಟಿ ಎಂದು ಕನ್ನಡದಲ್ಲಿ ಅರ್ಥ
ಅತ್ತಿಂದಿತ್ತ ಹಾರುವ ರಾಜಕೀಯ
ನಾಯಕರಿಗೆ
ಅದನ್ನು ಪ್ರಯೋಗಿಸುವುದೂ ವ್ಯರ್ಥ!

ಮಹಾಂತೇಶ ಮಾಗನೂರ
ಬೆಂಗಳೂರು

ಆತ್ಮಸಾಕ್ಷಿಯೇ ಇಲ್ಲದವರಿಂದ ನಲುಗಿದ 'ಆತ್ಮಸಾಕ್ಷಿ'!

ಪ್ರಸಕ್ತ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ 'ಆತ್ಮಸಾಕ್ಷಿ' ಹೆಸರಿನಲ್ಲಿ ಕಾಂಗ್ರೆಸ್ ಪರವಾಗಿ ಮತ ಚಲಾಯಿಸಿರುವ ಸುದ್ದಿ (ಪ್ರ.ವಾ., ಫೆ. 28) ಓದಿ, ಆತ್ಮಸಾಕ್ಷಿ ಎಂಬ ಪದ ಬಳಕೆ ಚುನಾವಣೆ ರಾಜಕೀಯದ ಚದುರಂಗದಾಟದಲ್ಲಿ ಎಷ್ಟೊಂದು ಅರ್ಥಹೀನವಾಗಿದೆ ಎನ್ನಿಸಿತು. ಅಧಿಕಾರದ ಆಸೆಗಾಗಿ, ತಾವಿದ್ದ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರವನ್ನೇ ಪತನಗೊಳಿಸಿ, ಓಡೋಡಿ ಹೋಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದವರು ಈಗಿನ ಬಿಜೆಪಿ ಶಾಸಕರಾದ ಶಿವರಾಂ ಹೆಬ್ಬಾರ್ ಮತ್ತು ಸೋಮಶೇಖರ್. ಈಗ ಮತ್ತೊಮ್ಮೆ ತಾವಿರುವ ಪಕ್ಷದ ಬೆನ್ನಿಗೆ ಚೂರಿ ಹಾಕಿದ್ದಾರೆ. ಇಬ್ಬರ ಪೈಕಿ ಒಬ್ಬರು ಅಡ್ಡಮತದಾನ ಮಾಡಿದರೆ, ಮತ್ತೊಬ್ಬರು ಮತಗಟ್ಟೆಯತ್ತ ಸುಳಿಯದೆ ತಮಗೆ 'ಆತ್ಮಸಾಕ್ಷಿ' ಇಲ್ಲ ಎಂಬುದನ್ನು ಸಾರಿದ್ದಾರೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಆ ಪಕ್ಷದ ಶಾಸಕರಾಗಿದ್ದ ಜಿ.ಜನಾರ್ದನ ರೆಡ್ಡಿ, ಕಾಂಗ್ರೆಸ್ ಮುಖಂಡರ ವಿರುದ್ಧ ವಿಧಾನಸಭೆಯಲ್ಲಿ ತೋಳೇರಿಸಿ, 'ದಂ ಇದ್ರೆ ಬಳ್ಳಾರಿಗೆ ಬನ್ನಿ' ಎಂದು ಹ್ಞೂಂಕರಿಸಿದ್ದರು. ಆದರೆ ಈಗ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಏಕೈಕ ಸದಸ್ಯರಾಗಿರುವ ಅದೇ ರೆಡ್ಡಿ ಅವರು ಇಷ್ಟು ಬೇಗ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರ ಮತ ಚಲಾಯಿಸಿರುವುದು ಬಹುಶಃ 'ಆತ್ಮಸಾಕ್ಷಿ' ಪರವಾಗಿ ಇರಲು ಸಾಧ್ಯವಿಲ್ಲ. ಇದು ಸ್ವರಕ್ಷಣೆಯ ತಂತ್ರವಾಗಿರಲೇಬೇಕು.

ರೆಡ್ಡಿಯವರ ವಿರುದ್ಧ ವಿಧಾನಸಭೆಯಲ್ಲಿ ತೊಡೆತಟ್ಟಿದ್ದ ಸಿದ್ದರಾಮಯ್ಯ ಅವರು ಆತ್ಮಸಾಕ್ಷಿಯ ಅನುಸಾರ ನಡೆದುಕೊಂಡಿದ್ದೇ ಆಗಿದ್ದರೆ, ರೆಡ್ಡಿ ಕಾಂಗ್ರೆಸ್ ಅಭ್ಯರ್ಥಿ ಪರ ಮತದಾನ ಮಾಡುವುದನ್ನು 'ಆತ್ಮಸಾಕ್ಷಿ'ಯ ಹೆಸರಿನಲ್ಲಿ ನಿರಾಕರಿಸಬೇಕಿತ್ತು. ಅಂದು ಬೆಂಗಳೂರು-ಬಳ್ಳಾರಿ ಜಾಥಾದ ನೇತೃತ್ವ ವಹಿಸಿದ್ದ ಸಿದ್ದರಾಮಯ್ಯ ಇಷ್ಟು ಬೇಗ ರೆಡ್ಡಿಯವರನ್ನು ಮತಗಟ್ಟೆಯಲ್ಲಿ ಒಪ್ಪಿಕೊಂಡಿರುವುದರಿಂದ 'ರಾಜಕಾರಣದಲ್ಲಿ ಶಾಶ್ವತ ಶತ್ರುಗಳಾಗಲೀ ಮಿತ್ರರಾಗಲೀ ಇರಲು ಸಾಧ್ಯವಿಲ್ಲ' ಎಂಬ ಸವಕಲು ನಾಣ್ಯವನ್ನು ಮತ್ತೆ ಚಲಾವಣೆಗೆ ತಂದಂತಾಗಿದೆ. ರಾಜಕಾರಣಿಗಳ ಮಾತುಗಳು ಸದಾ ಮತಪತ್ರ ರಾಜಕೀಯದ ಪರ ಎಂಬುದನ್ನು ಮತದಾರರು ಯಾವತ್ತೂ ಮರೆಯಬಾರದು. ಅಂತೂ ಇಂತೂ, ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ, ಆತ್ಮಸಾಕ್ಷಿಯೇ ಇಲ್ಲದವರಿಂದಾಗಿ 'ಆತ್ಮಸಾಕ್ಷಿ' ಎಂಬ ಪದ 'ನಲುಗುವಂತೆ' ಆಗಿದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಚಲನೆ-ಚಾಲನೆ!

ವರ್ಷ ವರ್ಷಗಳಿಂದ
ಹಳ್ಳಹಿಡಿದಿದ್ದ ಯೋಜನೆಗಳು
ನೋಡನೋಡುತ್ತಲೇ
ಹಳಿಗೆ ಮರಳಿಬಿಡುತ್ತವೆ,
ನೂರಾರು ದಿನಗಳಿಂದ
ಮಕಾಡೆ ಮಲಗಿ
ಗೊರಕೆ ಹೊಡೆಯುತ್ತಿದ್ದ ಕಾಮಗಾರಿಗಳು
ರಾತ್ರಿ ಬೆಳಗಾಗುವುದರೊಳಗೆ
ಎದ್ದು ಸದ್ದು ಮಾಡಿಬಿಡುತ್ತವೆ,
ಅರರೆ, ನಮ್ಮ ಸೇವಾಕಾಂಕ್ಷಿಗಳಿಂದ
ಈ ಬಗೆಯ ಚಲನೆ... ಚಾಲನೆ!
ಇನ್ನೇನಿಹುದು ಕಾರಣ?
ಮುಂದೆ ಬಂದೇಬಿಟ್ಟಿತಲ್ಲ
ಲೋಕಸಭಾ ಚುನಾವಣೆ!

ಮ.ಗು.ಬಸವಣ್ಣ
ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

24.28 ಕೋಟಿ ಜನ ಬಡತನದಿಂದ ಹೊರಗೆ ಬಂದಿದ್ದು
ಕಾಗದದ ಮೇಲಿನ ಅಂದಾಜು ಮಾತ್ರ

● ಜಯಸಿಂಹ ಆರ್.

ದೇಶದ 24.28 ಕೋಟಿಯಷ್ಟು ಜನರನ್ನು ಬಹು ಆಯಾಮದ ಬಡತನದಿಂದ ಹೊರಗೆ ತಂದಿದ್ದೇವೆ ಎಂದು ಕೇಂದ್ರ ಸರ್ಕಾರ ಹೇಳುತ್ತಲೇ ಇದೆ. ಇಷ್ಟು ಜನರು ಬಡತನದಿಂದ ಹೊರಗೆ ಬಂದಿದ್ದಾರೆ ಎಂಬ ನಿರ್ಧಾರಕ್ಕೆ ಸರ್ಕಾರ ಬಂದದ್ದಾದರೂ ಹೇಗೆ ಎಂದು ಪ್ರಶ್ನಿಸಿದರೆ, ಅದಕ್ಕೆ ಅದೊಂದು ಕಾಗದದ ಮೇಲಿನ ಅಂದಾಜು ಅಷ್ಟೆ ಎಂದು ದೃಢವಾಗಿ ಉತ್ತರಿಸಬಹುದು. ನೀತಿ ಆಯೋಗದ ವರದಿಗಳಲ್ಲೇ ಹೇಳಿಕೊಂಡಿರುವಂತೆ ಇದೊಂದು ಅಂದಾಜು ಮತ್ತು ಈ ಅಂದಾಜು ವಾಸ್ತವ ಸ್ಥಿತಿಯನ್ನು ತೋರಿಸುವುದಿಲ್ಲ.

ಆದರೆ ಪ್ರಧಾನಿ, ಹಣಕಾಸು ಸಚಿವರು ಮತ್ತು ಆಡಳಿತಾರೂಢ ಪಕ್ಷದ ನಾಯಕರು ಮಾತ್ರ 24.28 ಕೋಟಿ ಜನರನ್ನು ಬಡತನದಿಂದ ಮೇಲಕ್ಕೆ ಎತ್ತಿದ್ದೇವೆ ಎಂದೇ ಘೋಷಿಸಿಕೊಳ್ಳುತ್ತಿದ್ದಾರೆ.

ನೀತಿ ಆಯೋಗವು ಬಹು ಆಯಾಮದ ಬಡತನ ಸೂಚ್ಯಂಕವನ್ನು ರೂಪಿಸಿದ್ದು 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–ಎನ್‌ಎಫ್‌ಎಚ್‌ಎಸ್' ದತ್ತಾಂಶಗಳ ಆಧಾರದಲ್ಲಿ. ದೇಶದಲ್ಲಿ ಈಗ ಲಭ್ಯವಿರುವ ತೀರಾ ಇತ್ತೀಚಿನ ಎನ್‌ಎಫ್‌ಎಚ್‌ಎಸ್ ವರದಿ 2019–21ನೇ ಅವಧಿಗೆ ಸಂಬಂಧಿಸಿದ್ದು. ಆದರೆ ಅದೇ ದತ್ತಾಂಶಗಳನ್ನು 2022–23ನೇ ಸಾಲಿಗೂ ಅನ್ವಯಿಸಿ, '24.28 ಕೋಟಿ ಜನರನ್ನು ಬಹು ಆಯಾಮದ ಬಡತನದಿಂದ ಮೇಲಕ್ಕೆ ಎತ್ತಲಾಗಿದೆ' ಎಂದು ಘೋಷಿಸಲಾಗಿದೆ. ಆದರೆ ವಾಸ್ತವದಲ್ಲಿ ಇದು ಅಂದಾಜು ಮಾತ್ರ.

ಬಹು ಆಯಾಮದ ಬಡತನ ಸೂಚ್ಯಂಕವನ್ನು ರೂಪಿಸಲು ನೀತಿ ಆಯೋಗವು, 2005–06, 2015–16ನೇ ಸಾಲಿನ ಮತ್ತು 2019–21ರ ಎನ್‌ಎಫ್‌ಎಚ್‌ಎಸ್ ವರದಿಗಳನ್ನು ಆಧಾರವಾಗಿ ಬಳಸಿಕೊಂಡಿತ್ತು. ಎನ್‌ಎಫ್‌ಎಚ್‌ಎಸ್ ವರದಿಯಲ್ಲಿ ಕುಟುಂಬದ ಅಪೌಷ್ಟಿಕತೆ ಮಟ್ಟ, ಆರೋಗ್ಯ ಸೇವೆಗಳ ಲಭ್ಯತೆ, ಮೂಲಸೌಕರ್ಯಗಳ ಲಭ್ಯತೆ, ಆರೋಗ್ಯದ ಮಟ್ಟ, ಶಿಕ್ಷಣದ ಮಟ್ಟ ಮತ್ತಿತರ ದತ್ತಾಂಶಗಳು ಇರುತ್ತವೆ. ನೀತಿ ಆಯೋಗವು ತಾನು ರೂಪಿಸಿಕೊಂಡ ಬಹು ಆಯಾಮದ ಬಡತನ ಸೂಚಿಗಳಿಗೆ ಅಗತ್ಯವಾದ ಮಾಹಿತಿಗಳನ್ನು ಈ ಮೇಲಿನ ದತ್ತಾಂಶಗಳಿಂದ ತೆಗೆದುಕೊಂಡಿದೆ.

ಬಹು ಆಯಾಮದ ಬಡತನ ಸೂಚ್ಯಂಕದ ಸೂಚಿಗಳಾದ ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟದಲ್ಲಿ ಆದ ಬದಲಾವಣೆಗಳನ್ನು ಆಧಾರಿಸಿ ಬಡತನ ಇಳಿಕೆಯಾಗಿದೆಯೇ ಅಥವಾ ಏರಿಕೆಯಾಗಿದೆ ಎಂದು ನಿರ್ಧರಿಸಲಾಗಿದೆ. 2015–16ರಿಂದ 2019–21ರ ನಡುವೆ ಅಪೌಷ್ಟಿಕತೆ, ಶಿಶುಮರಣ ಇಳಿಕೆಯಾಗಿದೆ. ಅಡುಗೆ ಅನಿಲ, ವಿದ್ಯುತ್, ಶುದ್ಧಕುಡಿಯುವ ನೀರು, ಬ್ಯಾಂಕ್ ಖಾತೆ, ಶೌಚಾಲಯ ಲಭ್ಯತೆ ಏರಿಕೆಯಾಗಿದೆ. ಹೀಗಾಗಿ ಜನರ ಜೀವನಮಟ್ಟ ಸುಧಾರಿಸಿದ್ದು, ಬಡತನ ಇಳಿಕೆಯಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ. ಈ ಅವಧಿಯಲ್ಲಿ, ಮೇಲ್ಕಂಡ ಸೂಚಿಗಳಲ್ಲಿ ವಾರ್ಷಿಕ ಸರಾಸರಿ ಶೇ 10.66ರಷ್ಟು ಬದಲಾವಣೆಯಾಗಿದೆ. ಅಂದರೆ ಆರು ವರ್ಷಕ್ಕೆ ಈ ಪ್ರಮಾಣವು ಶೇ 63.94ರಷ್ಟಾಗುತ್ತದೆ. ದೇಶದಲ್ಲಿ ಇದ್ದ ಒಟ್ಟು ಬಡವರಲ್ಲಿ ಶೇ 63.94ರಷ್ಟು ಮಂದಿ ಬಹು ಆಯಾಮದ ಬಡತನದ ವ್ಯಾಪ್ತಿಯಿಂದ ಹೊರಗೆ ಬಂದಿದ್ದಾರೆ ಎಂದು ನಿರ್ಧರಿಸಲಾಗಿದೆ.

2015–16ರ ಮಧ್ಯೆ ಬಡತನದಲ್ಲಿ ಆದ ಇಳಿಕೆಯನ್ನು ಲೆಕ್ಕಹಾಕಲು ನೀತಿ ಆಯೋಗದ ಬಳಿ ಎನ್‌ಎಫ್‌ಎಚ್‌ಎಸ್ ವರದಿಗಳಾದರೂ ಇದ್ದವು. ಆದರೆ 2021–22 ಮತ್ತು 2022–23ನೇ ಸಾಲಿಗೆ ಲೆಕ್ಕಾಚಾರ ಮಾಡಲು ಆಯೋಗದ ಬಳಿ ಯಾವುದೇ ದತ್ತಾಂಶ ಇರಲಿಲ್ಲ. ಹೀಗಿದ್ದೂ ಆಯೋಗವು ಬಡತನ ಇಳಿಕೆಯಾಗಿದೆ ಎಂಬುದನ್ನು ಲೆಕ್ಕಾಚಾರ ಮಾಡಿತು. ಈ ಎರಡು ವರ್ಷಗಳ ಅವಧಿಯಲ್ಲಿ ಬಡತನದ ಪ್ರಮಾಣವು ಪ್ರತಿ ವರ್ಷ ಶೇ 10.66ರಷ್ಟು ಇಳಿಕೆಯಾಗಿದೆ ಎಂದು ಅಂದಾಜಿಸಿತು. ಅದನ್ನೇ 2011–12ರಲ್ಲಿ ದೇಶದಲ್ಲಿ ಇದ್ದರೆಂದು ಹೇಳಲಾದ 27 ಕೋಟಿ ಬಡವರಿಗೆ ಅನ್ವಯಿಸಿತು. ಆ ಮೂಲಕ 2011-12ರಿಂದ 2022–23ರ ಅವಧಿಯಲ್ಲಿ 24.28 ಕೋಟಿ ಬಡವರು ಬಹು ಆಯಾಮದ ಬಡತನದಿಂದ ಹೊರಗೆ ಬಂದಿದ್ದಾರೆ ಎಂದು ಅಂದಾಜಿಸಿತು. ಕೇಂದ್ರದ ಬಿಜೆಪಿ ಸರ್ಕಾರ ಅದನ್ನೇ ಘೋಷಿಸಿ, ದೇಶದಲ್ಲಿ ಬಹು ಆಯಾಮದ ಬಡವರ ಸಂಖ್ಯೆ ಇಳಿಕೆಯಾಗಿದೆ ಎನ್ನುತ್ತಿದೆ.

ಅಪೌಷ್ಟಿಕತೆ ಲೆಕ್ಕ: ರಕ್ತಹೀನತೆ ಕೈಬಿಟ್ಟ ಸರ್ಕಾರ

ಬಹು ಆಯಾಮದ ಬಡತನ ಸೂಚ್ಯಂಕ ಲೆಕ್ಕಾಚಾರದಲ್ಲಿ ಅಪೌಷ್ಟಿಕತೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಜಾಗತಿಕ ಮಟ್ಟದಲ್ಲಿ ಅನುಸರಿಸುವ ಸೂತ್ರದಲ್ಲೂ ಅಪೌಷ್ಟಿಕತೆಗೇ ಹೆಚ್ಚಿನ ಮಹತ್ವ ಇದೆ. ಆದರೆ ಅಪೌಷ್ಟಿಕತೆಗೆ ಸಂಬಂಧಿಸಿದ ಪ್ರಮುಖ ದತ್ತಾಂಶಗಳನ್ನೇ ನೀತಿ ಆಯೋಗವು ಕೈಬಿಟ್ಟಿದೆ.

ಈ ಸೂಚ್ಯಂಕಕ್ಕೆ ಆಯೋಗವು ಆಯ್ಕೆ ಮಾಡಿಕೊಂಡ ವ್ಯಾಪ್ತಿಯು ದೇಶದ ಎಲ್ಲಾ ಜನರನ್ನು ಒಳಗೊಳ್ಳುವುದೇ ಇಲ್ಲ. ಜಾಗತಿಕ ಮಟ್ಟದಲ್ಲಿ ಅನುಸರಿಸಲಾಗುವ ಸೂಚ್ಯಂಕದಲ್ಲಿ ಅಪೌಷ್ಟಿಕತೆಯನ್ನು ಲೆಕ್ಕಹಾಕುವಾಗ ದೇಶವೊಂದರಲ್ಲಿ ಇರುವ 70 ವರ್ಷದೊಳಗಿನ ಎಲ್ಲರನ್ನೂ ಪರಿಗಣಿಸಲಾಗುತ್ತದೆ. ಹೀಗಾಗಿ ಅಲ್ಲಿ ವಾಸ್ತವಕ್ಕೆ ಹತ್ತಿರವಿರುವ ಸ್ಥಿತಿಯ ಚಿತ್ರಣ ದೊರೆಯುತ್ತದೆ. ಆದರೆ ನೀತಿ ಆಯೋಗವು ದೇಶದಲ್ಲಿನ 5 ವರ್ಷದೊಳಗಿನ ಮಕ್ಕಳು, 15–49 ವರ್ಷದ ವಯಸ್ಕರನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡಿದೆ. 5–15 ವರ್ಷದ ಮಕ್ಕಳು ಮತ್ತು 49–70 ವರ್ಷದ ವಯಸ್ಕರನ್ನು ಆಯೋಗವು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಹೀಗಾಗಿ ನೀತಿ ಆಯೋಗವು ಬಹು ಆಯಾಮದ ಬಡತನ ಸೂಚ್ಯಂಕ ವರದಿಯಲ್ಲಿ ಹೇಳುತ್ತಿರುವಂತೆ ದೇಶದಲ್ಲಿನ ಜನರಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ ಶೇ 31 ಎಂಬುದು ವಾಸ್ತವಕ್ಕೆ ಹತ್ತಿರವಾದ ಮಾಹಿತಿಯಲ್ಲ.

ರಕ್ತಹೀನತೆಯನ್ನು ಅಪೌಷ್ಟಿಕತೆಯ ಒಂದು ಲಕ್ಷಣ ಮತ್ತು ಪರಿಣಾಮ ಎಂದು ಪರಿಗಣಿಸಲಾಗುತ್ತದೆ. ಆದರೆ ಬಹು ಆಯಾಮದ ಬಡತನ ಸೂಚ್ಯಂಕವನ್ನು ಲೆಕ್ಕಾಚಾರ ಮಾಡುವಾಗ ಆಯೋಗವು ರಕ್ತಹೀನತೆಯಿಂದ ಬಳಲುತ್ತಿರುವವರ ಪ್ರಮಾಣವನ್ನು ಪರಿಗಣಿಸಿಯೇ ಇಲ್ಲ. ಎನ್‌ಎಫ್‌ಎಚ್‌ಎಸ್–5 ಪ್ರಕಾರ ದೇಶದಲ್ಲಿ ರಕ್ತಹೀನತೆಯಿಂದ ಬಳಲುತ್ತಿರುವ 15–49 ವರ್ಷದ ವಯಸ್ಕರ ಮತ್ತು ಐದು ವರ್ಷದವರೆಗಿನ ಮಕ್ಕಳ ಸರಾಸರಿ ಪ್ರಮಾಣವು ಶೇ 49.8ರಷ್ಟಾಗುತ್ತದೆ. ಇಂತಹ ದೊಡ್ಡ ಪ್ರಮಾಣದ ಸಂಖ್ಯೆಯನ್ನು ಆಯೋಗವು ಬಡತನದ ಲೆಕ್ಕಾಚಾರ ಮಾಡುವಾಗ ಕೈಬಿಟ್ಟಿದೆ. ನೀತಿ ಆಯೋಗವು ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ ಶೇ 31ರಷ್ಟು ಎಂದು ಲೆಕ್ಕಹಾಕಿದ ಕಾರಣಕ್ಕೇ, ಬಡತನದ ವ್ಯಾಪ್ತಿಗೆ ಒಳಪಡುವ ಜನರ ಪ್ರಮಾಣ ಕಡಿಮೆಯಾಗಿದೆ. ಆದರೆ ರಕ್ತಹೀನತೆಯಿಂದ ಬಳಲುತ್ತಿದ್ದ ಜನರ ಪ್ರಮಾಣವನ್ನೂ ಪರಿಗಣಿಸಿದ್ದರೆ, ದೇಶದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಜನರ ಸರಾಸರಿ ಪ್ರಮಾಣವು ಶೇ39.11ರಷ್ಟಾಗುತ್ತಿತ್ತು. ಆಗ ಬಹು ಆಯಾಮದ ಬಡತನದ ವ್ಯಾಪ್ತಿಗೆ ಒಳಪಡುವ ಜನರ ಸಂಖ್ಯೆ ಇನ್ನಷ್ಟು ಹೆಚ್ಚಾಗುತ್ತಿತ್ತು.

31.52%
ದೇಶದ ಜನರಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ (ರಕ್ತಹೀನತೆಯಿಂದ ಬಳಲುತ್ತಿರುವವರನ್ನು ಪರಿಗಣಿಸದೇ ಇದ್ದರೆ)

39.11%
ರಕ್ತಹೀನತೆಯಿಂದ ಬಳಲುತ್ತಿರುವವರನ್ನು ಪರಿಗಣಿಸಿದರೆ ದೇಶದ ಜನರಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ

'ಕೋವಿಡ್ ನಂತರದ ಮಾಹಿತಿ ಒಳಗೊಂಡಿಲ್ಲ'

'ಬಹು ಆಯಾಮ ಬಡತನ ಸೂಚ್ಯಂಕವನ್ನು ಸಿದ್ಧಪಡಿಸಲು ಬಳಸಿಕೊಂಡ ದತ್ತಾಂಶಗಳು ಕೋವಿಡ್ ಅವಧಿಯ ಮತ್ತು ಕೋವಿಡ್ ನಂತರದ ಆರ್ಥಿಕ ಸ್ಥಿತಿಯ ಮಾಹಿತಿಯನ್ನು ಒಳಗೊಂಡಿಲ್ಲ. ಹೀಗಾಗಿ ಬಡತನದ ವಾಸ್ತವ ಸ್ಥಿತಿಯನ್ನು ಇದು ತೆರೆದಿಡುವುದಿಲ್ಲ' ಎಂದು ಇದೇ ಜನವರಿಯಲ್ಲಿ ನೀತಿ ಆಯೋಗವು ಬಿಡುಗಡೆ ಮಾಡಿದ 'ಬಹು ಆಯಾಮದ ಬಡತನ ಸೂಚ್ಯಂಕ: ಪ್ರಗತಿ ಪರಿಶೀಲನಾ ವರದಿ'ಯಲ್ಲಿ ಘೋಷಿಸಿದೆ.

ಸರ್ಕಾರದ ಅನುಕೂಲಕ್ಕೆ ತಕ್ಕಂತೆ ಸೂತ್ರ ಬದಲಾವಣೆ

ಜಾಗತಿಕ ಮಟ್ಟದಲ್ಲಿ ಬಹು ಆಯಾಮದ ಬಡತನ ಸೂಚ್ಯಂಕವನ್ನು ಲೆಕ್ಕಚಾರ ಮಾಡಲು ಅಲ್ಕೈರ್ ಫಾಸ್ಟರ್ ವಿಧಾನವನ್ನು ಬಳಸಲಾಗುತ್ತದೆ. ಈ ಸೂತ್ರವನ್ನೇ ಬಳಸುತ್ತಿದ್ದೇವೆ ಎಂದು ಹೇಳಿಕೊಂಡಿದ್ದರೂ, ನೀತಿ ಆಯೋಗವು ಸಾಕಷ್ಟು ಬದಲಾವಣೆ ಮಾಡಿಕೊಂಡಿದೆ. ಈ ಬದಲಾವಣೆಗಳು ಬಡತನ ಕಡಿಮೆಯಾಗಿದೆ ಎಂದು ತೋರಿಸಲು ಪೂರಕವಾಗುವಂತೆ ಇವೆ.

ಅಲ್ಕೈರ್ ಫಾಸ್ಟರ್ ವಿಧಾನದ ಪ್ರಕಾರ ಆರೋಗ್ಯ ಸೂಚಿಯಲ್ಲಿ ಅಪೌಷ್ಟಿಕತೆ ಮತ್ತು ಶಿಶು–ಮಕ್ಕಳ ಮರಣ ಎಂದ ಎರಡು ಸೂಚಿಗಳನ್ನು ಮಾತ್ರ ಬಳಸಲಾಗುತ್ತದೆ. ಈ ಎರಡಕ್ಕೂ ಸಮಾನವಾದ ಮಹತ್ವ ನೀಡಲಾಗುತ್ತದೆ. ಆದರೆ ನೀತಿ ಆಯೋಗವು ಶಿಶು–ಮಕ್ಕಳ ಮರಣ ಸೂಚಿಯನ್ನು ವಿಭಜಿಸಿ, ಶಿಶು–ಮಕ್ಕಳ ಮರಣ ಪ್ರಮಾಣ ಮತ್ತು ತಾಯ್ತನ ಆರೈಕೆ ಲಭ್ಯತೆ ಎಂದು ಹೊಸ ಸೂಚಿಗಳನ್ನು ರೂಪಿಸಿದೆ.

ಮೂಲ ಸೂತ್ರದಂತೆ ಕುಟುಂಬವೊಂದು ಅಪೌಷ್ಟಿಕತೆಯಿಂದ ಬಳಲುತ್ತಿದ್ದರೆ ಮತ್ತು ಕುಟುಂಬದಲ್ಲಿ ಶಿಶು–ಮಕ್ಕಳ ಮರಣ ಸಂಭವಿಸಿದ್ದರೆ ಅದು ಬಹು ಆಯಾಮದ ಬಡತನದ ವ್ಯಾಪ್ತಿಗೆ ಬರುತ್ತಿತ್ತು. ಆದರೆ ಈಗ ಈ ಸೂಚಿಗಳನ್ನು ಬದಲಿಸಿರುವ ಕಾರಣ, ಕುಟುಂಬವೊಂದು ಅಪೌಷ್ಟಿಕತೆಯಿಂದ ಬಳಲುತ್ತಿದ್ದರೆ ಮತ್ತು ಕುಟುಂಬದಲ್ಲಿ ಶಿಶು–ಮಕ್ಕಳ ಮರಣ ಸಂಭವಿಸಿದ್ದರೂ ಅದು ಬಹು ಆಯಾಮದ ಬಡತನದ ವ್ಯಾಪ್ತಿಗೆ ಬರುವುದಿಲ್ಲ.

ಜಾಗತಿಕ ಮಟ್ಟದ ಸೂತ್ರ

ಬಡತನದ ಸೂಚಿಗಳು	ಇದೆಯೇ ಅಥವಾ ವಂಚಿತರೇ	ಪ್ರತಿ ಸೂಚಿಗೆ ನೀಡಲಾದ ಅಂಕ	ದೊರೆತ ಸೂಚ್ಯಂಕ (ವಂಚಿತರಾಗಿದ್ದರೆ ಮಾತ್ರ)
ಅಪೌಷ್ಟಿಕತೆ	ಇದೆ	1/6	0.17
ಶಿಶು–ಮಕ್ಕಳ ಮರಣ	ಇದೆ	1/6	0.17
ಒಟ್ಟು ಸೂಚ್ಯಂಕ			0.34

● 0.33 ಮತ್ತು ಅದಕ್ಕಿಂತ ಹೆಚ್ಚು ಸೂಚ್ಯಂಕ ದೊರೆತರೆ ಆ ಕುಟುಂಬವನ್ನು ಬಹು ಆಯಾಮದ ಬಡತನದ ಕುಟುಂಬ ಎಂದು ಪರಿಗಣಿಸಲಾಗುತ್ತದೆ. ಮೇಲಿನ ಉದಾಹರಣೆಯಲ್ಲಿ ಕುಟುಂಬಕ್ಕೆ 0.34 ಸೂಚ್ಯಂಕ ದೊರೆತಿರುವ ಕಾರಣ, ಅದು ಬಹು ಆಯಾಮದ ಬಡತನದ ಕುಟುಂಬದ ವ್ಯಾಪ್ತಿಗೆ ಬರುತ್ತದೆ

ಭಾರತದ ನೀತಿ ಆಯೋಗವು ಅನುಸರಿಸುತ್ತಿರುವ ಸೂತ್ರ

ಬಡತನದ ಸೂಚಿಗಳು	ಇದೆಯೇ ಅಥವಾ ವಂಚಿತರೇ	ಪ್ರತಿ ಸೂಚಿಗೆ ನೀಡಲಾದ ಅಂಕ	ದೊರೆತ ಸೂಚ್ಯಂಕ (ವಂಚಿತರಾಗಿದ್ದರೆ ಮಾತ್ರ)
ಅಪೌಷ್ಟಿಕತೆ	ಇದೆ	1/6	0.17
ಶಿಶು–ಮಕ್ಕಳ ಮರಣ	ಇದೆ	1/12	0.083
ತಾಯ್ತನ ಆರೈಕೆ	ದೊರೆತಿದೆ	1/12	0
ಒಟ್ಟು ಸೂಚ್ಯಂಕ			0.25

● 0.33 ಮತ್ತು ಅದಕ್ಕಿಂತ ಹೆಚ್ಚು ಸೂಚ್ಯಂಕ ದೊರೆತರೆ ಆ ಕುಟುಂಬವನ್ನು ಬಹು ಆಯಾಮದ ಬಡತನದ ಕುಟುಂಬ ಎಂದು ಪರಿಗಣಿಸಲಾಗುತ್ತದೆ. ಮೇಲಿನ ಉದಾಹರಣೆಯಲ್ಲಿ ಕುಟುಂಬಕ್ಕೆ 0.25 ಸೂಚ್ಯಂಕ ದೊರೆತಿರುವ ಕಾರಣ, ಅದು ಬಹು ಆಯಾಮದ ಬಡತನದ ಕುಟುಂಬದ ವ್ಯಾಪ್ತಿಗೆ ಬರುವುದಿಲ್ಲ
● ಹೀಗೆಯೇ ಹಲವು ಕುಟುಂಬಗಳನ್ನು ಬಡತನದ ವ್ಯಾಪ್ತಿಯಿಂದ ಹೊರಗೆ ಇಡಲಾಗಿದೆ

ಆಧಾರ: ಕುಟುಂಬ ಗೃಹಬಳಕೆ ವೆಚ್ಚ ಸಮೀಕ್ಷೆ: 2011–12 ಮತ್ತು 2022–23, ಬಹು ಆಯಾಮದ ಬಡತನ ಸೂಚ್ಯಂಕ ವರದಿ–2023, ಬಹು ಆಯಾಮದ ಬಡತನ ಸೂಚ್ಯಂಕ ಪ್ರಗತಿ ಪರಿಶೀಲನಾ ವರದಿ, ಪಿಟಿಐ, ವಿಶ್ವ ಸಂಸ್ಥೆಯ ಬಹು ಆಯಾಮದ ಬಡತನ ಸೂಚ್ಯಂಕ ವರದಿ

ಬಂದಳು ನಿದ್ದೆಯಿಲ್ಲದ 'ನಿದ್ರಾದೇವಿ'!

ರಿಷಿಕಾ, ಪ್ರವೀರ್

'ಸೈರನ್' ಸಿನಿಮಾ ಮೂಲಕ ಚಂದನವನ ಪ್ರವೇಶಿಸಿದ ನಟ ಪ್ರವೀರ್ ಶೆಟ್ಟಿ ಈಗ ಮತ್ತೊಂದು ಭಿನ್ನ ಕಥೆಯ ಸಿನಿಮಾ ಮೂಲಕ ಪ್ರೇಕ್ಷಕರೆದುರಿಗೆ ಬರಲಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ದೊಡ್ಡ ಗಣಪತಿ ದೇವಸ್ಥಾನದಲ್ಲಿ ಚಿತ್ರದ ಮುಹೂರ್ತ ನಡೆದಿದ್ದು, ಕ್ರೇಜಿಸ್ಟಾರ್ ರವಿಚಂದ್ರನ್ 'ನಿದ್ರಾದೇವಿ Next Door' ಸಿನಿಮಾದ ಚಿತ್ರೀಕರಣಕ್ಕೆ ಕ್ಲ್ಯಾಪ್ ಮಾಡಿದರು. ಸುರಾಗ್ ಸಾಗರ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಪ್ರವೀರ್ ಶೆಟ್ಟಿ ಜೊತೆಗೆ ಶೈನ್ ಶೆಟ್ಟಿ ಕೂಡ ಈ ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ರಿಷಿಕಾ ಈ ಸಿನಿಮಾದಲ್ಲಿ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ.

'ಇಬ್ಬರು ನಿದ್ದೆ ಇಲ್ಲದವರ ಪಯಣವಿದು. ಅವರಿಗೆ ಯಾಕೆ ನಿದ್ದೆ ಬರಲ್ಲ? ಇದಕ್ಕೆ ಪರಿಹಾರ ಏನು? ಅದರೊಳಗೆ ಅವರು ಕಂಡುಕೊಳ್ಳುವ ಲವ್ ಸ್ಟೋರಿ ಈ ಚಿತ್ರದ ಕಥಾಹಂದರ' ಎಂದಿದೆ ಚಿತ್ರತಂಡ. ಸುರಾಗ್‌ಗೆ ಇದು ಚೊಚ್ಚಲ ಸಿನಿಮಾವಾಗಿದ್ದು, ಸುಧಾರಾಣಿ, ಶ್ರೀವತ್ಸ, ಕಾರ್ತಿಕ್ ಪತ್ತಾರ್ ಮತ್ತು ಅನುರಾಗ್ ಪಾಟೀಲ್ ಸೇರಿದಂತೆ ಇತರರು ತಾರಾ-ಬಳಗದಲ್ಲಿ ಇದ್ದಾರೆ. ಸೂರಂ ಮೂವೀಸ್ ಬ್ಯಾನರ್‌ನಲ್ಲಿ ಜಯರಾಮ್ ದೇವಸಮುದ್ರ ನಿರ್ಮಿಸಿರುವ ಈ ಚಿತ್ರಕ್ಕೆ ಅಜಯ್ ಕುಲಕರ್ಣಿ ಛಾಯಾಚಿತ್ರಗ್ರಹಣ ಮತ್ತು ನಕುಲ್ ಅಭ್ಯಂಕರ್ ಸಂಗೀತವಿದೆ. ಚಿತ್ರತಂಡ ಈಗಾಗಲೇ ಶೂಟಿಂಗ್ ಆರಂಭಿಸಿದೆ.

ಪುನೀತ್ ಹಾಡುಗಳಿಗೆ ಹೆಜ್ಜೆ

ಇಂದ್ರಜಿತ್ ಲಂಕೇಶ್ ನಿರ್ದೇಶಿಸಿ, ಅವರ ಪುತ್ರ ಸಮರ್ಜಿತ್ ಲಂಕೇಶ್ ನಾಯಕನಾಗಿ ನಟಿಸುತ್ತಿರುವ 'ಗೌರಿ' ಚಿತ್ರೀಕರಣ ಮುಕ್ತಾಯದ ಹಂತ ತಲುಪಿದೆ. ಇದರ ಬೆನ್ನಲ್ಲೇ ಪುನೀತ್ ರಾಜಕುಮಾರ್ ಹುಟ್ಟುಹಬ್ಬಕ್ಕೆ ವಿಶೇಷ ಉಡುಗೊರೆ ನೀಡಲು ಚಿತ್ರತಂಡ ಆಲೋಚಿಸಿದೆ.

ಮಾ.17 ಪುನೀತ್ ಹುಟ್ಟುಹಬ್ಬ. ಅಂದು 'ಗೌರಿ' ಚಿತ್ರತಂಡ ವಿಶೇಷ ಗೀತೆಯೊಂದನ್ನು ಬಿಡುಗಡೆ ಮಾಡಲಿದೆ. ಪುನೀತ್ ಚಿತ್ರದ ಜನಪ್ರಿಯ ಹಾಡುಗಳಿಗೆ ಸಮರ್ಜಿತ್ ಲಂಕೇಶ್ ಜೊತೆ ದಕ್ಷಿಣ ಭಾರತದ ಖ್ಯಾತ ನಟಿ ತಾನ್ಯ ಹೋಪ್ ಹೆಜ್ಜೆ ಹಾಕಲಿದ್ದಾರೆ. ಮೋಹನ್ ಈ ಹಾಡಿಗೆ ನೃತ್ಯ ನಿರ್ದೇಶನ ಮಾಡುತ್ತಿದ್ದಾರೆ.

'ಪುನೀತ್ ಅವರ ಡ್ಯಾನ್ಸ್ ನನಗೆ ಸ್ಫೂರ್ತಿ. ಅವರಿಗೆ ಈ ಗೀತೆಯ ಮೂಲಕ ನಮನ ಸಲ್ಲಿಸುತ್ತಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಹಾಡು ಬಿಡುಗಡೆ ಮಾಡುತ್ತೇವೆ' ಎಂದರು ನಾಯಕ ಸಮರ್ಜಿತ್.

ಸಮರ್ಜಿತ್, ತಾನ್ಯ ಹೋಪ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ನೀಡಬೇಕು ಎಂದು ರೈತರು ಹಲವು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ವೇಳೆ ರೈತ ನಾಯಕ ಜಗಜೀತ್ ಸಿಂಗ್ ಡಲ್ಲೇವಾಲ್ ಅವರು ಹೇಳಿದ್ದಾರೆ ಎನ್ನಲಾದ ಹೇಳಿಕೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಅನ್ನು ಹಂಚಿಕೊಳ್ಳಲಾಗುತ್ತಿದೆ. 'ರಾಮ ಮಂದಿರದ ನಿರ್ಮಾಣದ ನಂತರ ಪ್ರಧಾನಿ ಮೋದಿ ಅವರ ಜನಪ್ರಿಯತೆ ಗಗನಕ್ಕೇರಿದೆ. ರೈತ ಚಳವಳಿಯ ಉದ್ದೇಶವು ಈ ಜನಪ್ರಿಯತೆಯನ್ನು ಕೆಳಗಿಳಿಸುವುದು' ಎಂದು ಜಗಜೀತ್ ಹೇಳಿದ್ದಾರೆ ಎನ್ನುವ ಮಾತುಗಳು ವಿಡಿಯೊದಲ್ಲಿದೆ. ರಾಷ್ಟ್ರೀಯ ಟಿ.ವಿ. ಮಾಧ್ಯಮದಲ್ಲಿ ಹಾಗೂ ಆ ಮಾಧ್ಯಮಗಳ ಪ್ರೈಂಟೈಮ್ ಕಾರ್ಯಕ್ರಮದ ನಿರೂಪಕರು ಈ ವಿಡಿಯೊವನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ತಿರುಚಲಾದ ವಿಡಿಯೊ.

'ದಿ ಅನ್‌ಮ್ಯೂಟ್' ಎನ್ನುವ ಫೇಸ್‌ಬುಕ್ ಖಾತೆಯಲ್ಲಿ ಜಗಜೀತ್ ಅವರು ಮಾಡಿರುವ ಭಾಷಣದ 26 ನಿಮಿಷ ಪೂರ್ಣ ಪಾಠದ ವಿಡಿಯೊ ಇದೆ. 'ರಾಮ ಮಂದಿರದ ವಿಚಾರದಲ್ಲಿ ಮೋದಿ ಅವರ ಜನಪ್ರಿಯತೆ ಈಗ ಹೆಚ್ಚೇ ಇದೆ. ಯಾವುದೇ ಬೇಡಿಕೆ ಇರಲಿ, ಆ ಬೇಡಿಕೆಯನ್ನು ಈಡೇರಿಸದಿದ್ದರೆ ತನಗೆ ರಾಜಕೀಯವಾಗಿ ಹಾನಿಯಾಗುತ್ತದೆ ಅಂತಾದರೆ ಮಾತ್ರವೇ, ಯಾವುದೇ ರಾಜಕಾರಣಿ ಆ ಬೇಡಿಕೆಯನ್ನು ಈಡೇರಿಸುತ್ತಾನೆ. ಒಂದು ವೇಳೆ ಬೇಡಿಕೆ ಈಡೇರಿಸದಿದ್ದರೆ ಹಾನಿಯಾಗುವುದಿಲ್ಲ ಎಂದಿರುವ ಯಾವುದೇ ಬೇಡಿಕೆಯನ್ನು ಈಡೇರಿಸುವುದಿಲ್ಲ. ಮೋದಿ ಅವರ ಜನಪ್ರಿಯತೆ ಇಳಿಸದೇ ಇದ್ದರೆ, ಅವರು ನಮ್ಮ ಬೇಡಿಕೆಯತ್ತ ಗಮನ ಹರಿಸುವುದಿಲ್ಲ' ಎಂದು ಜಗಜೀತ್ ಅವರು ಹೇಳಿದ್ದರು. ಈ ಮಾತುಗಳನ್ನೇ ತಿರುಚಿ, ಎಡಿಟ್ ಮಾಡಿ, ಸುಳ್ಳು ಸುದ್ದಿ ಹಬ್ಬಿಸಲಾಗಿದೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನುಡಿ ಬೆಳಗು

ಬೇರುಗಳನ್ನು ಮರೆಯದಿರೋಣ

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಖ್ಯಾತ ಫುಟ್‌ಬಾಲ್ ತಾರೆ ಕ್ರಿಶ್ಚಿಯಾನೋ ರೊನಾಲ್ಡೋ ಬಹಳ ಕಷ್ಟದಿಂದ ಎತ್ತರಕ್ಕೇರಿದವರು. ಕುಡಿತದ ದಾಸನಾದ ತಂದೆ, ಮನೆಗೆಲಸ ಮಾಡಿ ಮಕ್ಕಳನ್ನು ಸಾಕುತ್ತಿದ್ದ ತಾಯಿ, ಮುರುಕು ಮನೆ, ಅರೆಹೊಟ್ಟೆ, ಬದುಕು ಕಷ್ಟವಿತ್ತು, ಭವಿಷ್ಯ ಅಸ್ಪಷ್ಟವಾಗಿತ್ತು. ಬಹುತೇಕರ ಪ್ರಕಾರ ಈ ಪರಿಸ್ಥಿತಿ ಮೇಲೇಳಲಾಗದ ಪ್ರಪಾತ. ಆದರೆ ರೊನಾಲ್ಡೋ ತಮ್ಮ ಭವಿಷ್ಯದ ಶಿಲ್ಪಿ ತಾವೇ ಆಗುವ ದೃಢ ನಿರ್ಧಾರ ಕೈಗೊಂಡರು. ತಮ್ಮ ಭವಿಷ್ಯ ಇರುವುದು ಫುಟ್‌ಬಾಲ್‌ನಲ್ಲಿಯೇ ಎಂಬುದು ಅವರಿಗೆ ಸ್ಪಷ್ಟವಾಗಿತ್ತು. ಫುಟ್‌ಬಾಲ್ ಅಭ್ಯಾಸ ನಡೆಸಿ ಹಸಿವಾದಾಗ ತಿನ್ನಲು ಹಣವಿಲ್ಲದೇ ಹೋಟೇಲಿನ ಹಿಂಭಾಗಕ್ಕೆ ಹೋಗಿ ಉಳಿದ ಆಹಾರ ಕೊಡುವಂತೆ ರೊನಾಲ್ಡೋ ಕೇಳಿದ್ದೂ ಇದೆ. ಇಂತಹ ರೊನಾಲ್ಡೋ ಈಗ ಜಗತ್ತಿನ ನಂಬರ್ ಒನ್ ಫುಟ್‌ಬಾಲ್ ಆಟಗಾರ. ಬಯಸಿದ್ದೆಲ್ಲ ಪಡೆಯುವ ಅವಕಾಶವಿರುವವರು.

ಇತ್ತೀಚೆಗೆ ರೊನಾಲ್ಡೋ ಲಿಸ್ಬನ್‌ನಲ್ಲಿ ತಾವು ಬಾಲ್ಯದಲ್ಲಿ ವಾಸಿಸುತ್ತಿದ್ದ ಸ್ಥಳವನ್ನು ತೋರಿಸಲೆಂದು ಮಗನನ್ನು ಕರೆದುಕೊಂಡು ಹೋಗಿದ್ದರು. 'ಅಪ್ಪಾ ನಿಜವಾಗಿಯೂ ನೀನು ಇಲ್ಲಿದ್ದೆಯಾ' ಎಂದು ಅಚ್ಚರಿಯಿಂದ ಕೇಳಿದ ಮಗ. ಅದಕ್ಕೇ ರೊನಾಲ್ಡೋ ಹೇಳುತ್ತಾರೆ: 'ಈಗಿನ ಮಕ್ಕಳು ಎಲ್ಲವೂ ಬಹಳ ಸುಲಭವಾಗಿ ಸಿಗುತ್ತವೆ ಎಂದು ತಿಳಿದಿದ್ದಾರೆ. ಅತ್ಯುತ್ತಮ ಬದುಕು, ಮನೆ, ಕಾರು ಎಲ್ಲವೂ ಆಕಾಶದಿಂದ ಉದುರುತ್ತವೆಂದೂ ಭ್ರಮಿಸುತ್ತಾರೆ. ಇವೆಲ್ಲ ಸುಮ್ಮನೇ ಸಿಗುವುದಿಲ್ಲ. ಕೇವಲ ಪ್ರತಿಭೆಯಿಂದಲೂ ಸಿಗುವುದಿಲ್ಲ. ಎಡೆಬಿಡದೇ ಪ್ರಯತ್ನಿಸುವುದರಿಂದ ಮಾತ್ರವೇ ಸಿಗಲು ಸಾಧ್ಯ. ದೃಢ ನಿರ್ಧಾರ ಮತ್ತು ಪರಿಶ್ರಮದಿಂದ ಏನನ್ನು ಬೇಕಾದರೂ ಸಾಧಿಸಬಹುದೆಂದು ನನ್ನ ಮಕ್ಕಳಿಗೆ ಮಾತ್ರವಲ್ಲ ನಾನು ಭೇಟಿಯಾಗುವ ಯುವಕರಿಗೆಲ್ಲ ಹೇಳಲಿಚ್ಛಿಸುತ್ತೇನೆ.'

ತಮಗಿಲ್ಲದಿದ್ದರೂ ಮಕ್ಕಳಿಗಾದರೂ ಎಲ್ಲ ಸೌಲಭ್ಯ ಸಿಗಲಿ ಎಂದು ಪಾಲಕರು ಮಾಡುವ ಪ್ರಾಮಾಣಿಕ ಪ್ರಯತ್ನಗಳೇ ಇಂದು ಮಕ್ಕಳ ಪಾಲಿಗೆ ಶಾಪವಾಗುತ್ತಿವೆ. ದುಡ್ಡು ಮೊಬೈಲ್‌ನಲ್ಲೋ ಎಟಿಎಮ್‌ನಲ್ಲೋ ಇದೆ ಎಂಬುದವರಿಗೆ ಗೊತ್ತೇ ಹೊರತು ಅದಕ್ಕೆ ತಂದೆತಾಯಿ ಎಷ್ಟು ಕಷ್ಟಪಟ್ಟು ದುಡಿಯಬೇಕು ಎಂಬ ಅರಿವಿರುವುದಿಲ್ಲ. ಪಾಲಕರೂ ಅಷ್ಟೇ, ಒಂದು ಪೆನ್ಸಿಲ್ ಕೇಳಿದರೆ ಒಂದು ಬಾಕ್ಸ್ ಪೆನ್ಸಿಲ್, ಒಂದು ಪೆನ್ನು ಕೇಳಿದರೆ ನಾಲ್ಕು ಪೆನ್ನು ಕೊಡಿಸಿ ಹಣದ ಮೌಲ್ಯವನ್ನು ಇಳಿಸಿಬಿಟ್ಟಿದ್ದಾರೆ.

ಹಾಗಾಗಿ ತಮ್ಮ ವಸ್ತುಗಳನ್ನು ಕಾಳಜಿಯಿಂದ ಇಟ್ಟುಕೊಂಡು ಉಪಯೋಗಿಸುವ ಬದಲು ಕಳೆದರೆ ಹೊಸದು ಕೊಂಡರಾಯಿತು ಎನ್ನುವ ಯೋಚನೆ ಈಗಿನ ಮಕ್ಕಳಿಗೆ. ಮಕ್ಕಳು ಆಕಾಶ ಮುಟ್ಟಬೇಕೆನ್ನುವ ಕನಸು ಸಹಜವೇ, ಆದರೆ ಬೇರುಗಳನ್ನು ಮರೆತರೆ ಬದುಕಿಲ್ಲವೆಂಬ ವಾಸ್ತವವನ್ನು, ಮುನ್ನುಗ್ಗುವ ಧಾವಂತದಲ್ಲಿ ಹಿಂದಿರುಗಿ ನೋಡುವ ಅಗತ್ಯವನ್ನು ಜತೆಗೆ ಹಣದ ಮೌಲ್ಯವನ್ನು ಹಿರಿಯರೂ ನೆನಪಿಟ್ಟುಕೊಂಡು ಮಕ್ಕಳಿಗೂ ಕಲಿಸಬೇಕಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 29, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಪಂಚಮಿ ಅಹೋರಾತ್ರ ನಕ್ಷತ್ರ: ಚಿತ್ತಾ ಗಂ. 10-22 ಯೋಗ: ವೃದ್ಧಿ ಗಂ. 17-56 ಕರಣ: ಕೌಲವ ಗಂ. 17-24, ಕುಂಭ ಮಾಸದ 16 ನೇ ದಿನ, ಮಳೆನಕ್ಷತ್ರ: ಶತಭಿಷ 3.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-50 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 18 ಶಬನ್
ಅದೃಷ್ಟ ಸಂಖ್ಯೆ : 6, 3

ಮೇಷ: ಎಲೆಕ್ಟ್ರಾನಿಕ್ಸ್ ಮತ್ತು ಹಾರ್ಡ್‌ವೇರ್ ವಸ್ತುಗಳಿಂದ ಅಧಿಕ ಲಾಭ ಪಡೆಯಲಿದ್ದೀರಿ. ಫಲದಾಯಕವಾದ ಸಲಹೆಗಳು ದೊರಕುತ್ತದೆ. ಆಸ್ತಿ ಖರೀದಿಸುವ ವಿಷಯದಲ್ಲಿ ನಿಧಾನ ಮಾಡಬೇಡಿ.

ವೃಷಭ: ಬಹಳ ದಿನಗಳ ಹಿಂದೆಯೇ ಕೈ ಸೇರಬೇಕಿದ್ದ ಹಣವು ಈ ದಿನದ ನಿಮ್ಮ ಕೈ ಸೇರುವುದು. ಕನಸುಗಳು ಮತ್ತು ಗುರಿಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳಲಿವೆ.

ಮಿಥುನ: ಗೌರವಾನ್ವಿತ ಹುದ್ದೆಯಲ್ಲಿರುವವರಿಗೆ ಅನುಯಾಯಿಗಳ ಸಂಖ್ಯೆ ಹೆಚ್ಚಲಿದೆ. ಮಕ್ಕಳ ಆರೋಗ್ಯದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಕಾಳಜಿ ವಹಿಸಿ. ಲೇವಾದೇವಿ ವ್ಯವಹಾರ ಮಾಡುವವರು ನಷ್ಟ ಅನುಭವಿಸುವಂತಾಗಬಹುದು.

ಕರ್ಕಾಟಕ: ಸಾಂಸಾರಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಯಾಗದಂತೆ ಎಚ್ಚರ ವಹಿಸಿ. ದುರ್ಜನರ ಸಹವಾಸದಿಂದ ಗೌರವ ಮತ್ತು ಹಣ ಕಳೆದುಕೊಳ್ಳು-ವಂತೆ ಆಗುವುದು. ಅವಿವಾಹಿತರಿಗೆ ಶುಭ ಫಲಗಳು ಲಭಿಸುವುದು.

ಸಿಂಹ: ಬಹಳ ದಿನಗಳಿಂದ ಉಳಿದುಕೊಂಡಿದ್ದ ಕೆಲಸ ಮುಂದುವರಿಸಲು ಮತ್ತೆ ಕಾಲ ಕೂಡಿಬರಲಿದೆ. ಶುಭ ಸಮಾರಂಭಗಳಿಗಾಗಲೀ, ಬಂಧು-ಮಿತ್ರರ ಮನೆಗೆ ಭೇಟಿ ನೀಡುವ ಮನಸ್ಸಾಗಲಿದೆ. ಅನಗತ್ಯ ಅಲೆದಾಟಗಳು ತಪ್ಪಲಿದೆ.

ಕನ್ಯಾ: ಹಿರಿಯರ ಆಶೀರ್ವಾದದಿಂದ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಸಿಗಲಿದೆ. ಸ್ನೇಹಿತರೊಬ್ಬರ ನೆರವಿಗೆ ನಿಲ್ಲಬೇಕಾಗಬಹುದು. ತಂದೆಯನ್ನು ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ.

ತುಲಾ: ಅಧಿಕವಾಗಿ ಲಭ್ಯವಿರುವ ಸಮಯವನ್ನು ಕೆಲಸಕ್ಕಾಗಿ ಸದುಪಯೋಗಿಸಿ-ಕೊಳ್ಳುವುದು ಲಾಭದಾಯಕ. ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಬರುವುದು. ಧಾರ್ಮಿಕ ವಿಚಾರದ ಬಗ್ಗೆ ಗಮನಹರಿಸಿ.

ವೃಶ್ಚಿಕ: ಟಿಂಬರ್ ವ್ಯಾಪಾರ ಮಾಡುವವರಿಗೆ ಮತ್ತು ಮನೆಕಟ್ಟಲು ಬೇಕಾದ ಮರದ ಸಾಮಗ್ರಿಗಳನ್ನು ಖರೀದಿಸುವವರಿಗೆ ಲಾಭ ಉಂಟಾಗುವುದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚಿನ ಪರಿಶ್ರಮ ಪಡುವುದು ಉತ್ತಮ.

ಧನು: ಸಹೋದರರಲ್ಲಿ ಅಥವಾ ದಾಂಪತ್ಯದಲ್ಲಿ ಸಣ್ಣಪುಟ್ಟ ವಿಚಾರಗಳಲ್ಲಿ ಮಾನಸಿಕವಾಗಿ ಅಸಮಾಧಾನ ಕಾಡಲಿದೆ. ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ, ಹಾಗೆಯೇ ನಿಮ್ಮ ದುಡಿಮೆಯು ಸಾರ್ಥಕವಾಗಲಿದೆ.

ಮಕರ: ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಆರ್ಥಿಕತೆಗೆ ಸಂಬಂಧಿಸಿದಂತೆ ಅಪವಾದ ಎದುರಾಗುವ ಸಾಧ್ಯತೆ ಇದೆ. ವ್ಯಾಪಾರ ವ್ಯವಹಾರಗಳಿಗೆ ಹೊಸ ತಿರುವು ಸಿಗಲಿದೆ. ರಕ್ಷಣೆ ಕೆಲಸ ಮಾಡುವವರು ಶ್ರಮವಹಿಸಬೇಕಾಗುತ್ತದೆ.

ಕುಂಭ: ಗೃಹ ನಿರ್ಮಾಣದ ಜವಾಬ್ದಾರಿಯು ಜೀವನದಲ್ಲಿ ಸವಾಲಾಗಿ ಬಂದು ಜಯವನ್ನು ತರಲಿದೆ. ವಿವಾಹಕ್ಕೆ ಸಂಬಂಧಪಟ್ಟ ಮಾತುಕತೆಗಳಿಂದ ಭಿನ್ನಾಭಿ-ಪ್ರಾಯಗಳು ದೂರಾಗುವುದು. ಎಲ್ಲಾ ಕಾರ್ಯದಲ್ಲೂ ಅಧಿಕ ಪ್ರಯತ್ನವಿರಲಿ.

ಮೀನ: ಕಾರ್ಯ ಕ್ಷೇತ್ರದಲ್ಲಿ ವಿವಿಧ ರೀತಿಯ ಅಭಿವೃದ್ಧಿಯಿಂದ ಬಹುಮಟ್ಟಿಗೆ ಮನಸ್ಸು ಸಂತೃಪ್ತಗೊಳ್ಳಲಿದೆ. ದಾಕ್ಷಿಣ್ಯ ಸ್ವಭಾವದಿಂದ ನಷ್ಟವನ್ನು ಹೊಂದುವಂತಾಗಲಿದೆ. ಶ್ರಮಕ್ಕೆ ಇಂದು ತಕ್ಕ ಪ್ರತಿಫಲ ಕಾಣುವಿರಿ.

ಪದಬಂಧ 5606

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಸಂಪೂರ್ಣ ಹಾನಿಯಿದು (4)
5.ಮಯನ ಬಳಿ ಕಳೆದ ಕಾಲ (3)
6.ವನದಲ್ಲಿ ತಿಳಿಸಿರುವ ಸುದ್ದಿ (4)
8.ನರಕಾಧಿಪತಿ ಹೊತ್ತಿರುವ ಅಧಿಕ ಒಜ್ಜೆ (4)
12.ಭೂಮಿಗೂ ಆಕಾಶಕ್ಕೂ ನಡುವಣ ಪ್ರದೇಶ (4)
14.ಒಪ್ಪವಾಗಿ ರಾಗದೊಡನೆ ಮೂಡಿದ ಪ್ರೀತಿ (4)
15.ಉತ್ತರದವ ಪಡೆದುಕೊಂಡಿರುವ ಸಂಬಳ (3)
16.ಸಭೆಯನ್ನು ವಿಸರ್ಜಿಸುವುದು (4)

ಮೇಲಿಂದ ಕೆಳಕ್ಕೆ
1.ಸಹಕರಿಸದೇ ಇರುವುದು (5)
2.ಆದಾಯ ಮತ್ತು ಖರ್ಚು (4)
3.ವರ ನೋಡುತ್ತಿರುವ ಕೊಳ (4)
4.ರೋಗ ಮೊದಲಾದವನ್ನು ಗುಣಪಡಿಸುವಿಕೆ (3)
7.ತಪ್ಪನ್ನು ಮನ್ನಿಸುವುದು (2)
9.ನಮ್ಮ ದೇಶವಿದು (3)
10.ಕೆಲಸಕ್ಕೆ ಬಾರದ ಮಾತಿದು (5)
11.ಪುಸ್ತಕ ಅಥವಾ ಪತ್ರಿಕೆಯ ಪುಟ (2)
12.ಅಂಗಾಂಗಗಳಿಗೆಲ್ಲಾ ಸುಗಂಧ ಲೇಪನ (4)
13.ಕ್ಷಮೆಯನ್ನು ಯಾಚಿಸುವುದು (4)
14.ಆಗಸದತ್ತ ನೋಡುತ್ತಿರುವ ಮಡಿವಾಳ (3)



5605ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಸತತ 7.ವಿದ್ರುಮ
9.ಪಾಯಸ 11.ಸಹಗಮನ
12.ಚರಣ 14.ಕಲಹ
16.ತಕಲಿ

ಮೇಲಿಂದ ಕೆಳಕ್ಕೆ:
1.ಆಭಾಸ 2.ಪರಾತ
3.ಕದ್ರು 5.ತಲೆಗಡಿಕ
6.ಪಾಯ 7.ವಿಕಚ
8.ಮಸಣ 9.ಪಾನಕ
10.ಸನ್ನಾಹ 13.ರಥ
15.ಲಜ್ಜೆ 16.ತರ್ಜನಿ
17.ಲಿಲಾವು

ಸುಡೊಕು 5991

2		6		7			5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5990 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಷೇರುಪೇಟೆ ವಹಿವಾಟು 790



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,198
ಇಂದಿನ ಅಂತ್ಯ	21,951
▼	247
ದಿನದ ಕನಿಷ್ಠ	21,915

ವಿನಿಮಯ ದರ

$ ಡಾಲರ್	82.91
£ ಪೌಂಡ್	104.72
€ ಯುರೊ	89.57
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1510 (1510)
ಸೋಯಾ (ರಿಫೈನ್ಡ್)	₹940 (935)
ಸೂರ್ಯಕಾಂತಿ (ರಿಫೈನ್ಡ್)	₹927 (925)
ಪಾಮೋಲಿನ್	₹870 (870)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕೆ.ಜಿ)	₹300-450
ದ್ವಿತಳಿ (ಕೆ.ಜಿ)	₹315-544

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹163.50
ಆರ್‌ಎಸ್‌ಎಸ್-5	₹158.50
ಗುಡ್ ಲಾಟ್	₹144

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2000-2800
ಮಧ್ಯಮ	₹1600-2000
ಸಣ್ಣ	₹1000-1600

ಡಿಸ್ನಿ–ರಿಲಯನ್ಸ್ ಒಪ್ಪಂದಕ್ಕೆ ಅಂಕಿತ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ವಯಾಕಾಮ್ 18 ಮೀಡಿಯಾ ಪ್ರೈವೆಟ್ ಲಿಮಿಟೆಡ್ ಮತ್ತು ವಾಲ್ಟ್ ಡಿಸ್ನಿ ಕಂಪನಿಯು ₹70 ಸಾವಿರ ಕೋಟಿ ಮೊತ್ತದ ಜಂಟಿ ಉದ್ಯಮ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದೆ.

ಈ ಒಪ್ಪಂದದಡಿ ವಯಾಕಾಮ್ 18 ಮತ್ತು ಸ್ಟಾರ್ ಇಂಡಿಯಾ ಒಗ್ಗೂಡಲಿವೆ. ವಹಿವಾಟು ಭಾಗವಾಗಿ ವಯಾಕಾಮ್ 18ಕ್ಕೆ ಸೇರಿದ ಮಾಧ್ಯಮ ಸಂಸ್ಥೆಗಳನ್ನು ಕೋರ್ಟ್ ಅನುಮೋದಿತ ವ್ಯವಸ್ಥೆ ಮೂಲಕ ಸ್ಟಾರ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನಲ್ಲಿ ವಿಲೀನಗೊಳಿಸಲಾಗುತ್ತದೆ. ಒಪ್ಪಂದದಲ್ಲಿ ರಿಲಯನ್ಸ್ ಶೇ 63.16ರಷ್ಟು ಪಾಲು ಹೊಂದಿದ್ದರೆ, ಡಿಸ್ನಿ ಉಳಿದ ಶೇ 36.84ರಷ್ಟು ಪಾಲಿನ ಮೇಲೆ ಒಡೆತನ ಹೊಂದಿದೆ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ಅಲ್ಲದೆ, ಜಂಟಿ ಸಹಭಾಗಿತ್ವದಡಿ ಒಟಿಟಿ ವೇದಿಕೆಗಳ ವ್ಯವಹಾರಕ್ಕೆ ₹11,500 ಕೋಟಿ ಹೂಡಿಕೆ ಮಾಡಲು ರಿಲಯನ್ಸ್ ಒಪ್ಪಿಗೆ ನೀಡಿದೆ.

ಒಪ್ಪಂದ ಮುಗಿದ ಬಳಿಕ ಇದನ್ನು ರಿಲಯನ್ಸ್ ನಿಯಂತ್ರಿಸಲಿದ್ದು, ಜಂಟಿ ಉದ್ಯಮದ ಮುಖ್ಯಸ್ಥರಾಗಿ ನೀತಾ ಅಂಬಾನಿ ಮತ್ತು ಉಪಾಧ್ಯಕ್ಷರಾಗಿ ಬೋಧಿ ಟ್ರೀ ಸಿಸ್ಟಂನ ಸಹ-ಸಂಸ್ಥಾಪಕ ಉದಯ್ ಶಂಕರ್ ಕಾರ್ಯ ನಿರ್ವಹಿಸಲಿದ್ದಾರೆ ಎಂದು ರಿಲಯನ್ಸ್ ಕಂಪನಿ ತಿಳಿಸಿದೆ.

ಷೇರು ಹೂಡಿಕೆದಾರರಿಗೆ ₹6 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿನ ಇಳಿಮುಖ ವಹಿವಾಟು ಸೇರಿದಂತೆ ರಿಲಯನ್ಸ್ ಇಂಡಸ್ಟ್ರೀಸ್, ಬ್ಯಾಂಕ್ ಷೇರುಗಳ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರು ಸೂಚ್ಯಂಕಗಳು ಬುಧವಾರ ಇಳಿಕೆ ದಾಖಲಿಸಿವೆ.

ಹೂಡಿಕೆದಾರರ ಸಂಪತ್ತು ಒಂದೇ ದಿನ ₹6 ಲಕ್ಷ ಕೋಟಿ ಕರಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಶೇ 2ರಷ್ಟು ಕುಸಿದಿದೆ. ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 790 ಅಂಶ ಕುಸಿತ ಕಂಡು 72,304ರಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 247 ಅಂಶ ಇಳಿಕೆ ಕಂಡು 21,951ರಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ವೊಡಾಫೋನ್ ಐಡಿಯಾ ಷೇರು ಇಳಿಕೆ: ಹೂಡಿಕೆದಾರರಿಗೆ ಉತ್ತೇಜನ ನೀಡಲು ನಿಧಿ ಸಂಗ್ರಹಕ್ಕೆ ಆಡಳಿತ ಮಂಡಳಿಯು ಒಪ್ಪಿಗೆ ಕೊಟ್ಟಿರುವ ಬೆನ್ನಲ್ಲೇ ವೊಡಾಫೋನ್ ಐಡಿಯಾ ಲಿಮಿಟೆಡ್‌ನ ಷೇರಿನ ಮೌಲ್ಯ ಶೇ 14ರಷ್ಟು ಇಳಿಕೆ ಕಂಡಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಕ್ರಮವಾಗಿ ಶೇ 13.99 ಮತ್ತು ಶೇ 13.88ರಷ್ಟು ಕಡಿಮೆ ಆಗಿದೆ. ಕಂಪನಿಯ ಮಾರುಕಟ್ಟೆಯ ಮೌಲ್ಯ ಒಂದೇ ದಿನ ₹10,806 ಕೋಟಿ ಇಳಿಕೆಯಾಗಿದೆ. ಪೇಟಿಎಂ ಷೇರಿನ ಮೌಲ್ಯವೂ ಶೇ 4.99ರಷ್ಟು ಇಳಿಕೆ ಆಗಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ₹406.20 ಆಗಿದೆ.

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ – ಸಕಲೇಶಪುರ

ಕೂಳೆ	950-1000
ನಡುಗೋಲು	1050-1100
ರಾಶಿ	1150-1200
ರಾಶಿ ಉತ್ತಮ	1300-1350
ಹೆರಕಿದ್ದು	1900-2000
ಹಸಿರು ಸಾಧಾರಣ	1200-1300
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	500

ಅಡಿಕೆ – ಬಂಟ್ವಾಳ

ಕೋಕ	18000-28500
ಹೊಸತು	28500-34000
ಹಳತು	34000-42500
ಕಾರ್ಕಳ	
ಹೊಸತು	25000-34500
ಹಳತು	30000-43500
ಕುಮಟ	
ಚಿಪ್ಪು	24569-28569
ಕೋಕ	14509-26019
ಫ್ಯಾಕ್ಟರಿ	11509-20899
ಹಳೆಚಾಲಿ	33099-35700
ಹೊಸಚಾಲಿ	30169-33501
ಶಿವಮೊಗ್ಗ	
ಬೆಟ್ಟೆ	45069-54259
ಗೊರಬಲು	20069-33400
ರಾಶಿ	32259-48058
ಸರಕು	58800-74400
ಸಿದ್ದಾಪುರ	
ಬಿಳಿಗೋಟು	24619-27619
ಚಾಲಿ	34899-37319
ಕೋಕ	24699-29000
ಹೊಸಚಾಲಿ	30009-33599
ಕೆಂಪುಗೋಟು	29899-31989
ರಾಶಿ	42899-46239
ತಟ್ಟಿಬೆಟ್ಟೆ	39099-45899
ಶಿರಸಿ	
ಬೆಟ್ಟೆ	34019-45699
ಬಿಳಿಗೋಟು	22199-30400
ಚಾಲಿ	34639-38469
ಕೆಂಪುಗೋಟು	26200-33691
ರಾಶಿ	43208-47001

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	13,900	-	183.05 ಸೇಂಟ್ಸ್
ಎಸಿ	-	7,500	-	
ಆರ್‌ಪಿ	-	13,550	-	ಲಂಡನ್
ಆರ್‌ಸಿ	-	276 on OT	-	3,077 ಡಾಲರ್ಸ್

ಹೆಚ್ಚಿದ ತಾಪಮಾನದಿಂದ ತಗ್ಗಿದ ಬಳಕೆ

ಮೊಟ್ಟೆ ಧಾರಣೆ ಕುಸಿತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಬಿಸಿಲಿನ ಬೇಗೆ ಹೆಚ್ಚುತ್ತಿರುವುದರಿಂದ ಮೊಟ್ಟೆ ಬಳಕೆ ಕಡಿಮೆಯಾಗುತ್ತಿದೆ. ಹಾಗಾಗಿ, ಸಗಟು ಮೊಟ್ಟೆ ಧಾರಣೆಯೂ ಇಳಿಕೆಯಾಗಿದೆ.

ಫೆಬ್ರುವರಿ ಮೊದಲ ವಾರದಲ್ಲಿ ಸಗಟು ದರ ₹600 (ಪ್ರತಿ 100 ಮೊಟ್ಟೆಗಳಿಗೆ) ಇತ್ತು. ಈ ತಿಂಗಳ ಅಂತ್ಯಕ್ಕೆ ₹520ಕ್ಕೆ ಕುಸಿದಿದೆ. ಒಟ್ಟಾರೆ 80 ಪೈಸೆಯಷ್ಟು ಇಳಿಕೆಯಾಗಿದೆ.

ಆದರೆ, ಚಿಲ್ಲರೆ ಅಂಗಡಿ ವ್ಯಾಪಾರಿಗಳು ಬೆಲೆ ಇಳಿಕೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲು ಮನಸ್ಸು ಮಾಡಿಲ್ಲ. ಒಂದು ಮೊಟ್ಟೆಗೆ ₹6.50ರಿಂದ ₹7 ದರಕ್ಕೆ ಮಾರಾಟ ಮಾಡುತ್ತಿದ್ದಾರೆ.

ಜನವರಿಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ಮಾಡುವುದರಿಂದ ಕೇಕ್‌ಗಳ ತಯಾರಿಕೆಗೆ ಮೊಟ್ಟೆಗಳ ಬೇಡಿಕೆ ಹೆಚ್ಚಿರುತ್ತದೆ. ಚಳಿಗಾಲದಲ್ಲಿ ಮನೆ ಸೇರಿದಂತೆ ಹೋಟೆಲ್‌ಗಳಲ್ಲಿ ಹೆಚ್ಚು ಬಳಸಲಾಗುತ್ತದೆ. ಆದರೆ, ಬೇಸಿಗೆ ಅವಧಿಯಲ್ಲಿ ಬಳಕೆ ಪ್ರಮಾಣ ಕಡಿಮೆ ಇರುತ್ತದೆ. ಸಹಜವಾಗಿಯೇ ಧಾರಣೆಯೂ ಇಳಿಕೆಯಾಗುತ್ತದೆ ಎನ್ನುತ್ತಾರೆ ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿಯ (ಎನ್‌ಇಸಿಸಿ) ಪ್ರತಿನಿಧಿಗಳು.

'ಬಿಸಿಯೂಟ ಯೋಜನೆಯಡಿ ಸರ್ಕಾರವು ಶಾಲಾ ಮಕ್ಕಳಿಗೆ ಮೊಟ್ಟೆ ವಿತರಿಸುತ್ತಿದೆ. ಆದರೆ, ಬೇಸಿಗೆ ರಜೆ ವೇಳೆ ಶಾಲೆಗಳಿಗೆ ಮೊಟ್ಟೆ ಪೂರೈಕೆ ಸ್ಥಗಿತವಾಗಲಿದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಧಾರಣೆ ಮತ್ತಷ್ಟು ಇಳಿಕೆಯಾಗಬಹುದು' ಎಂದು ಎನ್‌ಇಸಿಸಿಯ ಮೈಸೂರು ವಿಭಾಗದ ಮಾರಾಟ ಉತ್ತೇಜನ ವಿಭಾಗದ ಅಧಿಕಾರಿ ವಿ. ಶೇಷನಾರಾಯಣ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜ್ಯದ ಬೇಡಿಕೆ ಎಷ್ಟು?: ಪ್ರಸ್ತುತ ದಾವಣಗೆರೆ, ಚಿತ್ರದುರ್ಗ, ಹೊಸಪೇಟೆ, ಬಳ್ಳಾರಿ, ಮೈಸೂರು ಹಾಗೂ ಕೊಪ್ಪಳ ಜಿಲ್ಲೆ ಸೇರಿದಂತೆ ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೊಟ್ಟೆ ಕೋಳಿ ಸಾಕಾಣಿಕೆ ನಡೆಯುತ್ತಿದೆ.

ರಾಜ್ಯದಲ್ಲಿ ಪ್ರತಿನಿತ್ಯ 2.60 ಕೋಟಿಯಷ್ಟು ಮೊಟ್ಟೆಗಳಿಗೆ ಬೇಡಿಕೆಯಿದ್ದು, ಸದ್ಯ ಸುಮಾರು 2.20 ಕೋಟಿಯಷ್ಟು ಮೊಟ್ಟೆಗಳ ಉತ್ಪಾದನೆಯಾಗುತ್ತಿದೆ. ಉಳಿದಂತೆ ತಮಿಳುನಾಡಿನ ನಾಮಕ್ಕಲ್‌ನಿಂದ ನಿತ್ಯ 40 ಲಕ್ಷದಿಂದ 50 ಲಕ್ಷ ಮೊಟ್ಟೆಗಳು ಪೂರೈಕೆಯಾಗುತ್ತವೆ ಎನ್ನುತ್ತಾರೆ ಎನ್‌ಇಸಿಸಿ ಪ್ರತಿನಿಧಿಗಳು.

ಬೆಂಗಳೂರಿನಲ್ಲಿ ದಿನವೊಂದಕ್ಕೆ 90 ಲಕ್ಷದಷ್ಟು ಮೊಟ್ಟೆಗಳು ಬಳಕೆಯಾಗುತ್ತವೆ. ಅಲ್ಲದೆ, ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಇರುವ ಹೋಬೆಲ್ ಕಾರ್ಖಾನೆಯಲ್ಲಿ ಮೊಟ್ಟೆ ಪುಡಿ ತಯಾರಿಸಲಾಗುತ್ತದೆ. ಇಲ್ಲಿಗೆ ನಿತ್ಯ 7 ಲಕ್ಷ ಮೊಟ್ಟೆಗಳು ಪೂರೈಕೆ ಆಗುತ್ತವೆ. ಇಲ್ಲಿ ತಯಾರಾಗುವ ಪುಡಿಯನ್ನು ವಿದೇಶಕ್ಕೆ ರಫ್ತು ಮಾಡಲಾಗುತ್ತದೆ ಎಂದು ವಿವರಿಸುತ್ತಾರೆ.

ರಾಜ್ಯದ ಗಡಿ ಭಾಗದ ಜಿಲ್ಲೆಗಳಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳು ಬೇಡಿಕೆಗೆ ಅನುಗುಣವಾಗಿ ಗೋವಾ, ಮಹಾರಾಷ್ಟ್ರ ಮತ್ತು ಕೇರಳಕ್ಕೂ ಪೂರೈಕೆಯಾಗುತ್ತವೆ ಎನ್ನುತ್ತಾರೆ ಅವರು.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಮೊಟ್ಟೆಗಳ ಉತ್ಪಾದನಾ ಪ್ರಮಾಣ ಕಡಿಮೆ ಇದೆ. ಇದಕ್ಕೆ ಸರ್ಕಾರದ ನಿಯಮಾವಳಿಗಳೇ ಕಾರಣ. ತಮಿಳುನಾಡಿನಲ್ಲಿ ಬಿಸಿಯೂಟಕ್ಕೆ ಪ್ರತಿದಿನ 60 ಲಕ್ಷ ಮೊಟ್ಟೆಗಳನ್ನು ಪೂರೈಸಲಾಗುತ್ತದೆ. ಉತ್ತರ ಪ್ರದೇಶದಲ್ಲಿ ಕೋಳಿ ಸಾಕಾಣಿಕೆದಾರರಿಗೆ ವಿದ್ಯುತ್ ಸಬ್ಸಿಡಿ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಲಾಗಿದೆ. ರಾಜ್ಯದಲ್ಲಿಯೂ ಇಂತಹ ಸವಲತ್ತು ಕಲ್ಪಿಸಿದರೆ ಈ ವಲಯವು ಮತ್ತಷ್ಟು ಪ್ರಗತಿ ಕಾಣಲಿದೆ ಎಂಬುದು ಅವರ ಅನಿಸಿಕೆ.

3ನೇ ತ್ರೈಮಾಸಿಕ ಜಿಡಿಪಿ ಶೇ 6.9ಕ್ಕೆ ಇಳಿಕೆ: ಎಸ್‌ಬಿಐ

ಮುಂಬೈ (ಪಿಟಿಐ): ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ) 2023–24ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಮೂರನೇ ತ್ರೈಮಾಸಿಕದಲ್ಲಿ ಶೇ 6.7ರಿಂದ ಶೇ 6.9ಕ್ಕೆ ಇಳಿಕೆಯಾಗಲಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವರದಿ ಅಂದಾಜಿಸಿದೆ.

ಮೀನುಗಾರಿಕೆ ಹೊರತುಪಡಿಸಿ ಕೃಷಿ ಮತ್ತು ಅದರ ಅವಲಂಬಿತ ವಲಯಗಳ ಬೆಳವಣಿಗೆ ದರ ಇಳಿಕೆಯೇ ಇದಕ್ಕೆ ಕಾರಣ ಎಂದು ಬುಧವಾರ ಬಿಡುಗಡೆಯಾಗಿರುವ ಎಸ್‌ಬಿಐನ ಆರ್ಥಿಕ ಸಂಶೋಧನಾ ವಿಭಾಗ ಸಿದ್ಧಪಡಿಸಿರುವ ವರದಿಯು ತಿಳಿಸಿದೆ.

ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿ ಶೇ 7.6ರಷ್ಟು ದಾಖಲಾಗಿದೆ. ಸರ್ಕಾರದ ಬಂಡವಾಳ ವೆಚ್ಚದ ಹೆಚ್ಚಳ ಮತ್ತು ತಯಾರಿಕಾ ವಲಯದಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಿದ್ದರಿಂದ ಈ ಬೆಳವಣಿಗೆ ದಾಖಲಾಗಿತ್ತು ಎಂದು ಹೇಳಿದೆ.

ಮೂರನೇ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜಿಸಿದೆ. ಎಸ್‌ಬಿಐ ವರದಿಯು ಇದಕ್ಕಿಂತಲೂ ಕಡಿಮೆ ಅಂದಾಜಿಸಿದೆ. ಅಲ್ಲದೆ, ನಾಲ್ಕನೇ ತ್ರೈಮಾಸಿಕದಲ್ಲಿ ಶೇ 6.8ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ.

2023-24ನೇ ಸಾಲಿನ ಖಾರೀಪ್ ಅವಧಿಯಲ್ಲಿ ದೇಶದಲ್ಲಿ 148.5 ದಶಲಕ್ಷ ಟನ್‌ನಷ್ಟು ಆಹಾರ ಧಾನ್ಯಗಳ ಉತ್ಪಾದನೆಯಾಗಲಿದೆ ಎಂದು ಅಂದಾಜಿಸಲಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 4.6ರಷ್ಟು ಉತ್ಪಾದನೆ ಕಡಿಮೆಯಾಗಿದೆ.

ಆದರೆ, 2023–24ರ ರಾಬಿ ಅವಧಿಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಬಿತ್ತನೆ ಪ್ರದೇಶದ ವಿಸ್ತೀರ್ಣದಲ್ಲಿ ಕೊಂಚ ಏರಿಕೆಯಾಗಿದೆ. ಆದರೆ, ಧಾನ್ಯಗಳ ಬಿತ್ತನೆಯು ಶೇ 6.5ರಷ್ಟು ಕಡಿಮೆಯಾಗಿದೆ. ಹಾಗಾಗಿ, ಖಾರೀಪ್ ಅವಧಿಯಲ್ಲಿನ ಉತ್ಪಾ ದನೆ ಕೊರತೆಯನ್ನು ಈ ಅವಧಿಯಲ್ಲಿ ಸರಿದೂಗಿಸಲು ಸಾಧ್ಯವಾಗಿಲ್ಲ ಎಂದು ತಿಳಿಸಿದೆ.

ಎಂಆರ್‌ಪಿಎಲ್ ಎಂ.ಡಿ ಆಗಿ ಶ್ಯಾಮಪ್ರಸಾದ್ ಕಾಮತ್

ಮಂಗಳೂರು: ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್‌ನ (ಎಂಆರ್‌ಪಿಎಲ್) ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಮುಂಡ್ಕೂರು ಶ್ಯಾಮಪ್ರಸಾದ್ ಕಾಮತ್ ಬುಧವಾರ ಅಧಿಕಾರ ವಹಿಸಿಕೊಂಡರು.

ಮಣಿಪಾಲದ ಎಂಐಟಿಯಲ್ಲಿ ಕೆಮಿಕಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಅವರು ಹೈಡ್ರೋಕಾರ್ಬನ್ ಉದ್ಯಮ ಕ್ಷೇತ್ರದಲ್ಲಿ 30 ವರ್ಷಗಳ ಅನುಭವ ಹೊಂದಿದ್ದಾರೆ.

ಶ್ಯಾಮಪ್ರಸಾದ್ ಕಾಮತ್

ಎಂಆರ್‌ಪಿಎಲ್‌ನಲ್ಲಿ ರಿಫೈನರಿ ವಿಭಾಗದ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ, ನಿರ್ವಹಣೆ, ತಾಂತ್ರಿಕ ಸೇವೆ, ಉತ್ಪಾದನಾ ಯೋಜನೆ ರೂಪಿಸುವಲ್ಲಿ, ಸಂಸ್ಕರಣಾಗಾರದಲ್ಲಿ ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಅಳವಡಿಕೆಯಲ್ಲಿ ಕಾಮತ್ ಪ್ರಮುಖ ಪಾತ್ರ ನಿರ್ವಹಿಸಿದ್ದರು ಎಂದು ಎಂಆರ್‌ಪಿಎಲ್‌ನ ಪ್ರಕಟಣೆ ತಿಳಿಸಿದೆ.

ಪಿಎಂ–ಕಿಸಾನ್: ರೈತರ ಖಾತೆಗಳಿಗೆ ಹಣ ಪಾವತಿ

ನವದೆಹಲಿ (ಪಿಟಿಐ): 'ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯಡಿ ಇಲ್ಲಿಯವರೆಗೆ ದೇಶದ ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ₹3 ಲಕ್ಷ ಕೋಟಿ ಪಾವತಿಸಲಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

2018ರ ಡಿಸೆಂಬರ್ 1ರಂದು ಕೇಂದ್ರ ಸರ್ಕಾರವು ಈ ಯೋಜನೆಗೆ ಚಾಲನೆ ನೀಡಿತ್ತು. ಇದರಡಿ ವಾರ್ಷಿಕವಾಗಿ ಒಟ್ಟು ₹6 ಸಾವಿರ ಮೊತ್ತವನ್ನು ಮೂರು ಕಂತುಗಳಲ್ಲಿ ರೈತರ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗುತ್ತದೆ.

'ರೈತರ ಶ್ರೇಯೋಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬದ್ಧವಾಗಿದೆ. ಈ ಯೋಜನೆಯಡಿ ದೇಶದ 9 ಕೋಟಿಗೂ ಹೆಚ್ಚು ರೈತರ ಖಾತೆಗಳಿಗೆ ₹21 ಸಾವಿರ ಕೋಟಿ ಮೊತ್ತವನ್ನು (16ನೇ ಕಂತು) ವರ್ಗಾಯಿಸಲಾಗಿದೆ' ಎಂದು 'ಎಕ್ಸ್'ನಲ್ಲಿ ಬುಧವಾರ ಸಚಿವರು ತಿಳಿಸಿದ್ದಾರೆ.

'ಕೃಷಿ ಕ್ಷೇತ್ರಕ್ಕೆ ಉತ್ತೇಜನ ನೀಡುವ ಮೂಲಕ ಅನ್ನದಾತರ ಬದುಕನ್ನು ಹಸನುಗೊಳಿಸುವುದೇ ಈ ಯೋಜನೆಯ ಗುರಿಯಾಗಿದೆ' ಎಂದು ಹೇಳಿದ್ದಾರೆ.

ವಿಮಾನಯಾನ ವೇದಿಕೆಗಳ ನಿರ್ವಹಣೆ ಜವಾಬ್ದಾರಿ

ಮಾಲ್ದೀವ್ಸ್ ತಲುಪಿದ ಭಾರತೀಯ ನಾಗರಿಕ ಸೇವೆ ತಂಡ

ಮಾಲೆ(ಮಾಲ್ದೀವ್ಸ್)(ಪಿಟಿಐ): ಉಭಯ ದೇಶಗಳ ನಡುವಿನ ಮಾತುಕತೆಯಂತೆ, ನಾಗರಿಕ ಸೇವಾ ಸಿಬ್ಬಂದಿ ಒಳಗೊಂಡ ಭಾರತದ ತಂಡವೊಂದು ಮಾಲ್ದೀವ್ಸ್ ತಲುಪಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಮಾಲ್ದೀವ್ಸ್‌ನಲ್ಲಿರುವ ಭಾರತೀಯ ಸೇನಾ ಸಿಬ್ಬಂದಿಯನ್ನು ವಾಪಸು ಕರೆಸಿಕೊಳ್ಳಲು ಮಾರ್ಚ್ 10ರ ಗಡುವು ಸಮೀಪಿಸುತ್ತಿದ್ದಂತೆಯೇ ಈ ಬೆಳವಣಿಗೆ ನಡೆದಿದೆ.

ದ್ವೀಪ ರಾಷ್ಟ್ರದಲ್ಲಿರುವ ಮೂರು ವಿಮಾನಯಾನ ವೇದಿಕೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಸೇನೆಯ ಬದಲು ಈ ತಂಡಕ್ಕೆ ವಹಿಸಲಾಗುತ್ತದೆ.

'ವಿಮಾನ ಕಾರ್ಯಾಚರಣೆ ಮತ್ತು ನಿರ್ವಹಣೆ ಹೊಣೆ ಹೊತ್ತ ತಂಡವು ಅಡ್ಡು ನಗರವನ್ನು ತಲುಪಿದೆ. ನಿರ್ವಹಣೆ ಜವಾಬ್ದಾರಿಯ ಹಸ್ತಾಂತರ/ಸ್ವೀಕಾರ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ' ಎಂಬ ರಕ್ಷಣಾ ಸಚಿವಾಲಯದ ಹೇಳಿಕೆ ಉಲ್ಲೇಖಿಸಿ ದಿ ಮಾಲ್ದೀವ್ಸ್ ಜರ್ನಲ್ ಡಾಟ್ ಕಾಮ್ ಎಂಬ ಸುದ್ದಿ ಪೋರ್ಟಲ್ ವರದಿ ಮಾಡಿದೆ.

ಮಾಲ್ದೀವ್ಸ್‌ನಲ್ಲಿರುವ ವಿಮಾನಯಾನ ವೇದಿಕೆಗಳ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ಭಾರತೀಯ ಸೇನೆ ನೋಡಿಕೊಳ್ಳುತ್ತಿತ್ತು.

ಮೊಹಮ್ಮದ್ ಮುಯಿಜು ಅವರು ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ, ಮೇ 10ರ ಒಳಗಾಗಿ ಸೇನೆಯನ್ನು ವಾಪಸ್ ಕರೆಸಿಕೊಳ್ಳುವಂತೆ ಭಾರತಕ್ಕೆ ಕೋರಿದ್ದರು.

ಈ ಹಿನ್ನೆಲೆಯಲ್ಲಿ ಫೆಬ್ರುವರಿ 2ರಂದು ದೆಹಲಿಯಲ್ಲಿ ಎರಡೂ ದೇಶಗಳ ವಿದೇಶಾಂಗ ಸಚಿವಾಲಯದ ಅಧಿಕಾರಿಗಳ ಸಭೆಯಲ್ಲಿ ಸೇನೆ ಬದಲು ಭಾರತೀಯ ನಾಗರಿಕ ಸೇವೆ ಸಿಬ್ಬಂದಿಗೆ ಈ ಜವಾಬ್ದಾರಿ ನೀಡಬೇಕು. ಸೇನೆಯನ್ನು ವಾಪಸು ಕರೆಸಿಕೊಳ್ಳುವ ಮೊದಲ ಹಂತದ ಪ್ರಕ್ರಿಯೆ ಮಾರ್ಚ್ 10ರ ಒಳಗಾಗಿ ಪೂರ್ಣಗೊಳಿಸಬೇಕು ಎಂದು ನಿರ್ಧರಿಸಲಾಗಿತ್ತು.



ಮಾಲ್ದೀವ್ಸ್‌ನಲ್ಲಿ ಭಾರತೀಯ ಸೇನೆಯ 88 ಸಿಬ್ಬಂದಿ ಇದ್ದು, ಭಾರತದ ನೆರವಿನಿಂದ ನಿರ್ಮಿಸಲಾಗಿರುವ ಮೂರು ವಿಮಾನಯಾನ ವೇದಿಕೆಗಳ ನಿರ್ವಹಣೆ ಮಾಡುತ್ತಿದ್ದಾರೆ. ಎರಡು ಹೆಲಿಕಾಪ್ಟರ್ ಹಾಗೂ ಒಂದು ಡಾರ್ನಿಯರ್ ವಿಮಾನ ಇದ್ದು, ತುರ್ತು ಸಂದರ್ಭದಲ್ಲಿ ರಕ್ಷಣಾ ಕಾರ್ಯ ಹಾಗೂ ವೈದ್ಯಕೀಯ ಸೇವೆ ಒದಗಿಸಲು ಇವುಗಳನ್ನು ನಿಯೋಜನೆ ಮಾಡಲಾಗಿದೆ.

ಸೇನೆ ಬದಲಾಗಿ, ಇವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ಪರಿಣತಿ ಹೊಂದಿರುವ ಭಾರತೀಯ ನಾಗರಿಕ ಸೇವೆ ಸಿಬ್ಬಂದಿ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಎಂ. ರಾಘವೇಂದ್ರ ರಾವ್ (ರಾಘಣ್ಣಿ)
ಮರಣ: 26.2.2024
–: ಸದಾಸ್ಮರಿಸುವ :–
ಪತ್ನಿ ಮತ್ತು ಕುಟುಂಬವರ್ಗದವರು
ಮೊ: 9880295179 (ವಸಂತ್)

ಎಸ್‌ಐಟಿ ಅಧಿಕಾರಿಗಳ ಕೊಲೆಗೆ ಡಿವೈಎಸ್‌ಪಿ ಯತ್ನ

ಒಂದನೇ ಪುಟದಿಂದ

'ಅವರನ್ನು ಬೈಕ್‌ನಲ್ಲಿ ಹಿಂಬಾಲಿಸಿ ಕಾಫಿ ಬೋರ್ಡ್ ಸಿಗ್ನಲ್ ಬಳಿ ತೆರಳಿ ಕಾರು ತಡೆಯಲಾಯಿತು. ನಮ್ಮೊಂದಿಗೆ ಬರುವಂತೆ ತಿಳಿಸಿದಾಗ, 'ನಿಮಗೆ ಏನು ಮಾಡಬೇಕು ತಿಳಿದಿದೆ. ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ, ನಿಮಗೆ ಗತಿ ಕಾಣಿಸುತ್ತೇನೆ' ಎಂದು ಬೆದರಿಕೆ ಹಾಕಿದರು. ಆಗ ಕಾರಿನಲ್ಲಿದ್ದ ಅವರನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದಾಗ ನನ್ನ ದೇಹದ ಅರ್ಧಭಾಗ ಕಿಟಕಿಯಲ್ಲಿ ಸಿಲುಕಿಕೊಂಡಿತ್ತು. ನನ್ನನ್ನು ಕೊಲ್ಲುವ ಉದ್ದೇಶದಿಂದ ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಅಕ್ಕಪಕ್ಕದ ವಾಹನಗಳಿಗೆ ಡಿಕ್ಕಿ ಹೊಡೆಸಲು ಪ್ರಯತ್ನಿಸಿದ್ದರು. ಬಳಿಕ, ಸ್ಥಳದಿಂದ ಪರಾರಿಯಾದರು' ಎಂದು ದೂರು ನೀಡಿದ್ದಾರೆ.

'ಭಾಸ್ಕರ್ ಅವರ ಎರಡೂ ಕೈ, ಕಾಲುಗಳಿಗೆ ಗಾಯವಾಗಿದ್ದು, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

ಇನ್‌ಸ್ಪೆಕ್ಟರ್ ಬಂಧನ

ಒಂದನೇ ಪುಟದಿಂದ

ಬಿಟ್‌ಕಾಯಿನ್ ಅಕ್ರಮದಲ್ಲಿ ಆರೋಪಿಗಳಿಗೆ ಸಹಕಾರ ನೀಡಿದ್ದ ಆರೋಪದ ಮೇರೆಗೆ ಅವರನ್ನು ಬಂಧಿಸಲಾಗಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನ ನಿವಾಸದಲ್ಲಿ ಲಕ್ಷ್ಮೀಕಾಂತಯ್ಯ ಇದ್ದಾರೆಂಬ ಮಾಹಿತಿ ಆಧರಿಸಿ ಸಿಐಡಿ ಅಧಿಕಾರಿಗಳು ಮನೆಗೆ ತೆರಳಿ ಅವರನ್ನು ಬಂಧಿಸಿದರು. ಬಳಿಕ, ನಗರದ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಲಯ, 9 ದಿನಗಳ ಕಾಲ ಎಸ್‌ಐಟಿ ವಶಕ್ಕೆ ನೀಡಿ ಆದೇಶಿಸಿದೆ.

ಎಸ್‌ಐಟಿ ತಂಡದ ತನಿಖಾಧಿಕಾರಿ ಕೆ.ರವಿಶಂಕರ್ ಅವರು ನೀಡಿದ್ದ ದೂರಿನ ಮೇರೆಗೆ ಎಚ್‌ಎಸ್‌ಆರ್ ಲೇಔಟ್‌ನ ಜಿಸಿಐಡಿ ಟೆಕ್ನಾಲಜೀಸ್ ಸಿಇಒ ಕೆ.ಎಸ್.ಸಂತೋಷ್ ಕುಮಾರ್, ಸಿಸಿಬಿ ಇನ್‌ಸ್ಪೆಕ್ಟರ್‌ಗಳಾದ ಲಕ್ಷ್ಮೀಕಾಂತಯ್ಯ ಹಾಗೂ ಚಂದ್ರಾಧರ, ಆಡುಗೋಡಿ ಟೆಕ್ನಿಕಲ್ ಸಪೋರ್ಟ್ ಸೆಂಟರ್‌ನ ಇನ್‌ಸ್ಪೆಕ್ಟರ್ ಡಿ.ಎಂ.ಪ್ರಶಾಂತ್ ಬಾಬು ಹಾಗೂ ಡಿವೈಎಸ್‌ಪಿ ಶ್ರೀಧರ್ ಕೆ. ಪೂಜಾರ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಈ ಹಿಂದೆ ಸಂತೋಷ್ ಹಾಗೂ ಡಿ.ಎಂ.ಪ್ರಶಾಂತ್ ಬಾಬು ಅವರನ್ನು ಬಂಧಿಸಲಾಗಿತ್ತು.

ಆರೋಪಿಗಳಿಗೆ ಹೇಗೆ ಸಹಕಾರ?: ಕಾಟನ್‌ಪೇಟೆ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಪ್ರಕರಣದ ತನಿಖಾಧಿಕಾರಿ ಆಗಿದ್ದ ಲಕ್ಷ್ಮೀಕಾಂತಯ್ಯ ಅವರು, ಪ್ರಕರಣದ ಇತರೆ ಆರೋಪಿಗಳ ಜತೆ ಸೇರಿಕೊಂಡು ಪೊಲೀಸ್ ವಶದಲ್ಲಿದ್ದ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಮತ್ತು ರಾಬಿನ್ ಖಂಡೇಲ್‌ವಾಲ್‌ನನ್ನು ಅಕ್ರಮವಾಗಿ ಎಚ್‌ಎಸ್‌ಆರ್ ಲೇಔಟ್‌ನ ಜಿಸಿಐಡಿ ಟೆಕ್ನಾಲಜೀಸ್ ಸಂಸ್ಥೆಗೆ ಕರೆದೊಯ್ದಿದ್ದರು. ಅಲ್ಲಿ ಸಂಸ್ಥೆಯ ಸಿಇಒ ಸಂತೋಷ್, ರಾಬಿನ್ ಖಂಡೇಲ್‌ವಾಲ್‌ನ ಕ್ರಿಪ್ಟೊ ವ್ಯಾಲೆಟ್ ಖಾತೆಗಳನ್ನು ಅನಧಿಕೃತವಾಗಿ ಆಕ್ಸೆಸ್ ಮಾಡಿ, ತನ್ನ ಕ್ರಿಪ್ಟೊ ವ್ಯಾಲೆಟ್‌ಗಳಿಗೆ ಸುಮಾರು ಬಿಟ್ ಕಾಯಿನ್‌ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದ. ಇದಕ್ಕೆ ಲಕ್ಷ್ಮೀಕಾಂತಯ್ಯ ಹಾಗೂ ತಲೆಮರೆಸಿಕೊಂಡಿರುವ ಇನ್‌ಸ್ಪೆಕ್ಟರ್ ಚಂದ್ರಾಧರ್ ಸಹಕರಿಸಿದ್ದರು ಎಂದು ಆರೋಪವಿದೆ. ಆರೋಪಿ ರಾಬಿನ್‌ನಿಂದ ವಶಪಡಿಸಿಕೊಂಡಿದ್ದ ಮೊಬೈಲ್ ಅನ್ನು ಲಕ್ಷ್ಮೀಕಾಂತಯ್ಯ ಅವರು ಅನಧಿಕೃತವಾಗಿ ಬಳಸಿ ಸಾಕ್ಷ್ಯ ನಾಶಪಡಿಸಿದ್ದರು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಶ್ರೀಕಿಗೆ ಕಂಪ್ಯೂಟರ್, ಇಂಟರ್‌ನೆಟ್ ಸೌಲಭ್ಯ ಒದಗಿಸಿಕೊಟ್ಟು ಆತನನ್ನು ಸ್ವತಂತ್ರವಾಗಿ ಬಿಟ್ಟಿದ್ದ ಕಾರಣ ಆತ ತನ್ನ ಸ್ನೇಹಿತೆಗೆ ಇ–ಮೇಲ್ ರವಾನಿಸಿದ್ದ. ಶ್ರೀಕಿ ವ್ಯಾಲೆಟ್‌ನಿಂದ ಸಂತೋಷ್ ಕುಮಾರ್ ವ್ಯಾಲೆಟ್‌ಗೆ ಅಕ್ರಮವಾಗಿ ಬಿಟ್ ಕಾಯಿನ್ ವರ್ಗಾವಣೆ ಮಾಡಿಕೊಳ್ಳಲು ಲಕ್ಷ್ಮೀಕಾಂತಯ್ಯ ಸೇರಿದಂತೆ ಇತರೆ ತನಿಖಾಧಿಕಾರಿಗಳೇ ಅವಕಾಶ ಕಲ್ಪಿಸಿದ್ದರು ಎಂದು ಮೂಲಗಳು ಹೇಳಿವೆ.

ಟಿಎಂಸಿ ಮುಖಂಡ ಶಹಜಹಾನ್ ಸಿಬಿಐ ಬಂಧಿಸಬಹುದು: ಹೈಕೋರ್ಟ್

ಕೋಲ್ಕತ್ತ: ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಮತ್ತು ಗ್ರಾಮಸ್ಥರ ಭೂಮಿ ಕಸಿದಿರುವ ಪ್ರಕಣದ ಆರೋಪಿ ಹಾಗೂ ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಅವರನ್ನು ಸಿಬಿಐ, ಜಾರಿ ನಿರ್ದೇಶನಾಲಯ (ಇ.ಡಿ) ಅಥವಾ ರಾಜ್ಯ ಪೊಲೀಸರು ಬಂಧಿಸಬಹುದು ಎಂದು ಕಲ್ಕತ್ತ ಹೈಕೋರ್ಟ್ ಬುಧವಾರ ಹೇಳಿದೆ. ಇ.ಡಿ. ಅಧಿಕಾರಿಗಳ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಮತ್ತು ಪೊಲೀಸರ ಜಂಟಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವುದಕ್ಕೆ ಮಾತ್ರ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು, ಇತರ ಪ್ರಕರಣಗಳಲ್ಲಿ ಶಹಜಹಾನ್ ಅವರನ್ನು ಬಂಧಿಸುವುದಕ್ಕೆ ಯಾವುದೇ ತಡೆ ನೀಡಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಶಿವಜ್ಞಾನಂ ನೇತೃತ್ವದ ನ್ಯಾಯಪೀಠವು ಸ್ಪಷ್ಟಪಡಿಸಿದೆ.

ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಅವರನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ನೇತೃತ್ವದಲ್ಲಿ ಕೋಲ್ಕತ್ತದಲ್ಲಿ ಬುಧವಾರ ಧರಣಿ ನಡೆಯಿತು –ಪಿಟಿಐ ಚಿತ್ರ

ಜನವರಿ 5ರಂದು ಇ.ಡಿ ಅಧಿಕಾರಿಗಳ ಮೇಲೆ ಗುಂಪೊಂದು ದಾಳಿ ನಡೆಸಿದ ಬಳಿಕ ಶಹಜಹಾನ್ ಅವರು ತಲೆಮರೆಸಿಕೊಂಡಿದ್ದಾರೆ.

ನಂದಿಗ್ರಾಮಕ್ಕೆ ಹೋಲಿಸಬೇಡಿ: ನಂದಿಗ್ರಾಮ ಮತ್ತು ಸಿಂಗೂರ್‌ನಲ್ಲಿ ನಡೆದಿದ್ದ ಭೂಸ್ವಾಧೀನ ವಿರೋಧಿ ಪ್ರತಿಭಟನೆ ಮತ್ತು ಸಂದೇಶ್‌ಖಾಲಿಯ ಪ್ರಕರಣವನ್ನು ಹೋಲಿಕೆ ಮಾಡಬೇಡಿ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

ಮುಂಬೈ ಧಾರಣೆ

ಶೇಂಗಾ 28-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1520)
ಒಂದು ವಾರದ ಡೆಲಿವರಿ	1515 (1515)
ಸೋಯಾ ಕಚ್ಚಾ	915 (925)
ಪಾಮ್ ವಾರದ ಡೆಲಿವರಿ	868 (868)
ಸೂರ್ಯಕಾಂತಿ ಎಣ್ಣೆ ಕಚ್ಚಾ	862 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹61,950 (61,950)
ಬೆಳ್ಳಿ ಕೆ.ಜಿ ₹69,400 (69,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಜ್ಯಸಭೆ: ಏಪ್ರಿಲ್‌ನಲ್ಲಿ ಎನ್‌ಡಿಎಗೆ ಬಹುಮತ?

ನವದೆಹಲಿ(ಪಿಟಿಐ): ನೂತನವಾಗಿ ಚುನಾಯಿತರಾದವರು ಪ್ರತಿಜ್ಞಾವಿಧಿ ಸ್ವೀಕರಿಸಿದ ಮೇಲೆ ಹಾಗೂ ಖಾಲಿ ಇರುವ 6 ಸ್ಥಾನಗಳಿಗೆ ನಾಮನಿರ್ದೇಶನ ಪ್ರಕ್ರಿಯೆ ಪೂರ್ಣಗೊಂಡ ನಂತರ, ಬಿಜೆಪಿ ನೇತೃತ್ವದ ಎನ್‌ಡಿಎಗೆ ರಾಜ್ಯಸಭೆಯಲ್ಲಿ ಏಪ್ರಿಲ್‌ನಲ್ಲಿ ಬಹುಮತ ಸಿಗಲಿದೆ.

ರಾಷ್ಟ್ರಪತಿಗಳು 12 ಸ್ಥಾನಗಳಿಗೆ ನಾಮನಿರ್ದೇಶನ ಮಾಡುತ್ತಾರೆ. ಈ ಪೈಕಿ, ಈಗಾಗಲೇ ಕೆಲ ನಾಮನಿರ್ದೇಶಿತ ಸದಸ್ಯರು ಬಿಜೆಪಿಗೆ ಸೇರ್ಪಡೆಯಾಗಿರುವುದರಿಂದ, ತೆರವಾಗಿರುವ 6 ಸ್ಥಾನಗಳಿಗೆ ನಾಮನಿರ್ದೇಶನ ಮಾಡಲಾಗುತ್ತದೆ.

245 ಸದಸ್ಯ ಬಲದ ರಾಜ್ಯಸಭೆಯಲ್ಲಿ ಸದ್ಯ, ಎನ್‌ಡಿಎ ಸದಸ್ಯ ಬಲ 113 ಇದೆ. ಸರಳ ಬಹುಮತಕ್ಕೆ 123ರ ಗಡಿ ತಲುಪಬೇಕು. ಹೀಗಾಗಿ, ನೂತನ ಸದಸ್ಯರ ಪ್ರಮಾಣವಚನ ಸ್ವೀಕಾರ ಹಾಗೂ ಖಾಲಿ ಸ್ಥಾನಗಳಿಗೆ ನಾಮನಿರ್ದೇಶನ ಪ್ರಕ್ರಿಯೆಯಿಂದ ಎನ್‌ಡಿಎ ಈ ಬಹುಮತಕ್ಕೆ ಅಗತ್ಯವಿರುವಷ್ಟು ಸಂಖ್ಯಾಬಲ ಹೊಂದಲಿದೆ.

ಈ ಸಂಖ್ಯಾಬಲದ ಗಡಿ ತಲುಪಿದ ಮೇಲೆ, ಪ್ರಮುಖ ಮಸೂದೆಗಳಿಗೆ ಅಂಗೀಕಾರ ಪಡೆಯಲು ಎನ್‌ಡಿಎಗೆ ಸಾಧ್ಯವಾಗಲಿದೆ. ಈ ವರೆಗೆ, ಕೆಲ ಪಕ್ಷೇತರರು ಹಾಗೂ ನಾಮನಿರ್ದೇಶಿತ ಸದಸ್ಯರ ನೆರವು ಪಡೆದು, ಮಸೂದೆಗಳಿಗೆ ಅಂಗೀಕಾರ ಪಡೆಯುತ್ತಿತ್ತು.

ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಸಂಖ್ಯಾಬಲ 30ಕ್ಕೆ ಇಳಿದಿದೆ. ಹೀಗಾಗಿ, ಕಾಂಗ್ರೆಸ್ ಒಳಗೊಂಡಂತೆ ಮೇಲ್ಮನೆಯಲ್ಲಿ ವಿರೋಧ ಪಕ್ಷಗಳ ಪಾಳಯದ ಸದಸ್ಯರ ಸಂಖ್ಯೆ 100ಕ್ಕಿಂತ ಕಡಿಮೆಯಾಗಿದೆ.

6 ನದಿಪಾತ್ರಗಳ ಸ್ವಚ್ಛತೆ: 12 ಸಂಸ್ಥೆಗಳಿಂದ ಅಧ್ಯಯನ

ನವದೆಹಲಿ(ಪಿಟಿಐ): ಕರ್ನಾಟಕದಲ್ಲಿ ಹರಿಯುವ ಕೃಷ್ಣಾ, ಕಾವೇರಿ ಸೇರಿದಂತೆ ದೇಶದ ಪ್ರಮುಖ 6 ನದಿಪಾತ್ರಗಳ ಸ್ವಚ್ಛತಾ ಕಾರ್ಯ ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಕುರಿತು ಅಧ್ಯಯನ ನಡೆಸಿ, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸುವುದಕ್ಕಾಗಿ ದೇಶದ 12 ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಶೆಖಾವತ್ ಬುಧವಾರ ಹೇಳಿದ್ದಾರೆ.

ಈ ಸಂಬಂಧ, ಜಲ ಶಕ್ತಿ ಸಚಿವಾಲಯದ ರಾಷ್ಟ್ರೀಯ ನದಿ ಸಂರಕ್ಷಣಾ ನಿರ್ದೇಶನಾಲಯ(ಎನ್‌ಆರ್‌ಸಿಡಿ) ಹಾಗೂ 12 ಸಂಸ್ಥೆಗಳು ಒಪ್ಪಂದಕ್ಕೆ ಸಹಿ ಹಾಕಿವೆ.

ನರ್ಮದಾ, ಗೋದಾವರಿ, ಪೆರಿಯಾರ್ ಹಾಗೂ ಮಹಾನದಿ ಈ ಯೋಜನೆಯಲ್ಲಿರುವ ಇತರ ನದಿಗಳಾಗಿವೆ. ಕಾವೇರಿ ನದಿಪಾತ್ರ ನಿರ್ವಹಣಾ ಯೋಜನೆ ಕುರಿತ ಅಧ್ಯಯನವನ್ನು ಬೆಂಗಳೂರಿನ ಐಐಎಸ್‌ಸಿ ಹಾಗೂ ತಿರುಚ್ಚಿಯ ಎನ್‌ಐಟಿ ನಡೆಸಲಿವೆ. ಮಹಾನದಿಗೆ ಸಂಬಂಧಿಸಿದ ಯೋಜನೆ ಅಧ್ಯಯನವನ್ನು ಐಐಟಿ–ರಾಯಪುರ ಹಾಗೂ ಐಐಟಿ–ರೂರ್ಕೆಲಾ ನಡೆಸಲಿದ್ದರೆ, ನರ್ಮದಾ– ಐಐಟಿ ಇಂದೋರ್ ಹಾಗೂ ಐಐಟಿ ಗಾಂಧಿನಗರ, ಗೋದಾವರಿ– ಐಐಟಿ ಹೈದರಾಬಾದ್ ಹಾಗೂ ನಾಗ್ಪುರ ಎನ್‌ಇಇಆರ್‌ಇ, ಪೆರಿಯಾರ್ ನದಿಪಾತ್ರ ನಿರ್ವಹಣೆ ಕುರಿತ ಯೋಜನೆಯ ಅಧ್ಯಯನವನ್ನು ಐಐಟಿ ಪಾಲಕ್ಕಾಡ್ ಹಾಗೂ ಎನ್‌ಐಟಿ ಕಲ್ಲಿಕೋಟೆ ನಡೆಸಲಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel
29/04/2024 ಮತ್ತು 05/05/2024ರಿಂದ 22ದಿನಗಳ ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ ಬದರಿನಾಥ್, ಕೇದಾರನಾಥ್, ಕಾಶ್ಮೀರ, ಗುಲ್ಮಾರ್ಗ್, ವೈಷ್ಣೋದೇವಿ, ಅಮೃತಸರ, ಕಾಶಿ, ಅಯೋಧ್ಯ ಇತ್ಯಾದಿ 13ದಿನಗಳ ಚಾರದಾಮ್ ಮತ್ತು 27/6/2024ರಿಂದ ಅಮರನಾಥ್ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್, 164/3 ಮಿನರ್ವ ಬಸ್–ಸ್ಟಾಪ್ ಎದುರು ಆರ್.ವಿ.ರಸ್ತೆ. ಬೆಂಗಳೂರು–04. 8105657052/ 9480182865.

EDUCATION CORNER

ಸ್ಪರ್ಧಾಮಿತ್ರ
FREE WORKSHOP ON MARCH 3RD @ 10 AM
KAS - Prelims & Mains
NEW BATCH STARTS ON MARCH 4TH
ONLINE & OFFLINE CLASSES
ಕನ್ನಡ & ENGLISH MEDIUM
WEEK DAYS & WEEK END CLASSES
Opp Maruthi Medicals, Near Attigppe Metro station, Service Road, RPC Lay, Bangalore 40
9535111188 / 9535111199

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

General
ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy
REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9731810277 | 080- 45557163/164
*Conditions apply

ಎ ಪ್ಲಸ್ ಕೆಟಗರಿಯಲ್ಲಿ ವಿರಾಟ್, ರೋಹಿತ್ • ಸಿ ಕೆಟಗರಿಯಲ್ಲಿ ಕನ್ನಡಿಗ ಪ್ರಸಿದ್ಧ ಕೃಷ್ಣ

ಬಿಸಿಸಿಐ ಗುತ್ತಿಗೆ: ಇಶಾನ್, ಅಯ್ಯರ್ ಔಟ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕೇಂದ್ರ ಗುತ್ತಿಗೆಯಿಂದ ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ಅವರನ್ನು ಕೈಬಿಡಲಾಗಿದೆ. ರಾಷ್ಟ್ರೀಯ ತಂಡದಲ್ಲಿ ಇಲ್ಲದಿರುವಾಗ ರಣಜಿ ಟೂರ್ನಿಯಲ್ಲಿ ತಮ್ಮತವರು ರಾಜ್ಯದ ತಂಡದಲ್ಲಿ ಆಡಲು ಇಶಾನ್ ಮತ್ತು ಶ್ರೇಯಸ್ ಅವರಿಗೆ ಸೂಚಿಸಲಾಗಿತ್ತು. ಅದರೆ ಅವರಿಬ್ಬರೂ ಅದನ್ನು ಪಾಲಿಸದ ಕಾರಣ ಬಿಸಿಸಿಐ ಈ ಕ್ರಮ ಕೈಗೊಂಡಿದೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಅವರನ್ನು ಎ ಪ್ಲಸ್ ವಿಭಾಗಕ್ಕೆ ಸೇರ್ಪಡೆ ಮಾಡಲಾಗಿದೆ. 2023–24ನೇ ಸಾಲಿಗೆ ಕೇಂದ್ರೀಯ ಗುತ್ತಿಗೆ ಪಡೆದ ಆಟಗಾರರ ಪಟ್ಟಿಯನ್ನು ಬಿಸಿಸಿಐ ಬುಧವಾರ ಬಿಡುಗಡೆ ಮಾಡಿದೆ. ಆರ್. ಅಶ್ವಿನ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಕೆ.ಎಲ್. ರಾಹುಲ್, ಶುಭಮನ್ ಗಿಲ್ ಮತ್ತು ಹಾರ್ದಿಕ್ ಪಾಂಡ್ಯ ಅವರು ಎ ಕೆಟಗರಿ ಯಲ್ಲಿದ್ದಾರೆ. ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್ ಮತ್ತು ಯಶಸ್ವಿ ಜೈಸ್ವಾಲ್ ಬಿ ಕೆಟಗರಿಯಲ್ಲಿ ಸ್ಥಾನ ಗಳಿಸಿದ್ದಾರೆ.

15 ಆಟಗಾರರು ಸಿ ಕೆಟಗರಿಯಲ್ಲಿ ಸ್ಥಾನ ಗಳಿಸಿದ್ದಾರೆ. ರಿಂಕು ಸಿಂಗ್, ತಿಲಕ್ ವರ್ಮಾ, ಋತುರಾಜ್ ಗಾಯಕವಾಡ್, ಶಾರ್ದೂಲ್ ಠಾಕೂರ್, ಶಿವಂ ದುಬೆ, ರವಿ ಬಿಷ್ಣೋಯಿ, ಜಿತೇಶ್ ಶರ್ಮಾ, ವಾಷಿಂಗ್ಟನ್ ಸುಂದರ್, ಮುಕೇಶ್ ಕುಮಾರ್, ಸಂಜು ಸ್ಯಾಮ್ಸನ್, ಅರ್ಷ ದೀಪ್ ಸಿಂಗ್, ಕೆ.ಎಸ್. ಭರತ್, ಪ್ರಸಿದ್ಧ ಕೃಷ್ಣ, ಆವೇಶ್ ಖಾನ್ ಮತ್ತು ರಜತ್ ಪಾಟೀದಾರ್ ಈ 15 ಆಟಗಾರರು.


ಶ್ರೇಯಸ್ ಅಯ್ಯರ್

ಇಶಾನ್ ಕಿಶನ್

ರಾಷ್ಟ್ರೀಯ ಆಯ್ಕೆ ಸಮಿತಿಯು ಶಿಫಾರಸಿನಂತೆ ಆಕಾಶ್ ದೀಪ್, ವೈಶಾಖ ವಿಜಯಕುಮಾರ್, ಉಮ್ರಾನ್ ಮಲಿಕ್, ಯಶ್ ದಯಾಳ್ ಮತ್ತು ವಿದ್ವತ್ ಕಾವೇರಪ್ಪ ಅವರಿಗೆ ವೇಗದ ಬೌಲಿಂಗ್ ವಿಭಾಗದಲ್ಲಿ ಗುತ್ತಿಗೆ ನೀಡಲಾಗಿದೆ.

'ವಾರ್ಷಿಕ ಗುತ್ತಿಗೆಗೆ ಶ್ರೇಯಸ್ ಅಯ್ಯರ್ ಮತ್ತು ಇಶಾನ್ ಕಿಶನ್ ಅವರನ್ನು ಪರಿಗಣಿಸಲಾಗಿಲ್ಲ. ಬಂದಿರುವ ಶಿಫಾರಸುಗಳಲ್ಲಿ ಅವರನ್ನು ತೆಗೆದುಕೊಂಡಿಲ್ಲ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

'ಎಲ್ಲ ಆಟಗಾರರೂ ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡುವುದಕ್ಕೆ ಆದ್ಯತೆ ಕೊಡಬೇಕು. ಅವರು ರಾಷ್ಟ್ರೀಯ ತಂಡದಲ್ಲಿ ಇರದ ಸಮಯದಲ್ಲಿ ಇದು ಕಡ್ಡಾಯ' ಎಂದು ಬಿಸಿಸಿಐ ಹೇಳಿದೆ.

25 ವರ್ಷದ ಇಶಾನ್ ಕಿಶನ್, ಕಳೆದ ವರ್ಷ ದಕ್ಷಿಣ ಆಫ್ರಿಕಾ ಪ್ರವಾಸದಿಂದ ವೈಯಕ್ತಿಕ ಕಾರಣ ನೀಡಿ ಅರ್ಧದಲ್ಲೇ ಸ್ವದೇಶಕ್ಕೆ ಮರಳಿದ್ದರು. ಆದರೆ ಬಿಡುವಾಗಿದ್ದರೂ ಜಾರ್ಖಂಡ್ ಪರ ರಣಜಿ ಟ್ರೋಫಿಯಲ್ಲಿ ಆಡದೇ, ಐಪಿಎಲ್ ಸಿದ್ಧತೆಯತ್ತ ತೊಡಗಿದ್ದ ಅವರ ವರ್ತನೆ ಬಿಸಿಸಿಐ ಕೆಂಗಣ್ಣಿಗೆ ಗುರಿಯಾಗಿತ್ತು.

ಇಂಗ್ಲೆಂಡ್ ವಿರುದ್ಧ ಸರಣಿಯಿಂದ ಕೈಬಿಟ್ಟ ನಂತರ, ಶ್ರೇಯಸ್ ಅಯ್ಯರ್ ಅವರು ಮುಂಬೈ ತಂಡದ ಪರ ಕ್ವಾರ್ಟರ್‌ಫೈನಲ್ ಪಂದ್ಯಕ್ಕೆ ಲಭ್ಯರಿದ್ದರೂ ಆಡಿರಲಿಲ್ಲ. ಕೈತುಂಬಾ ಸಂಪಾದಿಸಲು ಅವಕಾಶ ಇರುವ ಐಪಿಎಲ್ ಕಡೆಗಷ್ಟೇ ಆದ್ಯತೆ ನೀಡಿ ಪ್ರಥಮ ದರ್ಜೆ ಪಂದ್ಯ ಗಳನ್ನು ನಿರ್ಲಕ್ಷಿಸುವ ಯುವ ಆಟಗಾರ ರಿಗೆ ಬಿಸಿಸಿಐ ಈ ನಿರ್ಧಾರದ ಮೂಲಕ ಎಚ್ಚರಿಕೆಯ ಸಂದೇಶ ರವಾನಿಸಿದೆ.

ಈ ಬಾರಿಯ ಪಟ್ಟಿಯಲ್ಲಿ ಸ್ಥಾನ ಪಡೆದವರಿಗೆ ನೀಡಲಾಗುವ ವೇತನದ ಕುರಿತು ಉಲ್ಲೇಖ ಮಾಡಲಾಗಿಲ್ಲ. ಈ ಮೊದಲು ವಾರ್ಷಿಕವಾಗಿ ಎ ಪ್ಲಸ್‌ಗೆ ₹ 7 ಕೋಟಿ, ಎ ವಿಭಾಗಕ್ಕೆ ₹ 5 ಕೋಟಿ, ಬಿ ವಿಭಾಗಕ್ಕೆ ₹ 3 ಕೋಟಿ, ಸಿ ವಿಭಾಗಕ್ಕೆ ₹ 1 ಕೋಟಿ ಮತ್ತು ಪಂದ್ಯದ ಸಂಭಾವನೆ ನೀಡಲಾಗುತ್ತಿತ್ತು. ನಿರ್ದಿಷ್ಟ ಅವಧಿಯಲ್ಲಿ ಕನಿಷ್ಠ ಮೂರು ಟೆಸ್ಟ್ ಅಥವಾ ಎಂಟು ಏಕದಿನ ಅಥವಾ 10 ಟಿ20 ಪಂದ್ಯಗಳನ್ನು ಆಡಿದಲ್ಲಿ ಅವರು ಪ್ರೊರೇಟಾ ಆಧಾರದಲ್ಲಿ 'ಸಿ' ಕೆಟಗರಿಗೆ ಅರ್ಹತೆ ಪಡೆಯುತ್ತಾರೆ.

ಪೂಜಾರ, ಶಿಖರ್ ಇಲ್ಲ: ಗುತ್ತಿಗೆ ಕಳೆದುಕೊಂಡ ಆಟಗಾರರಲ್ಲಿ ಚೇತೇಶ್ವರ ಪೂಜಾರ, ಶಿಖರ್ ಧವನ್, ಉಮೇಶ್ ಯಾದವ್ ಮತ್ತು ಯಜುವೇಂದ್ರ ಚಾಹಲ್ ಒಳಗೊಂಡಿದ್ದಾರೆ. ಇವರೆಲ್ಲರೂ ಆಯ್ಕೆಗಾರರ ಅವಕೃಪೆಗೆ ಒಳಗಾಗಿದ್ದರು. 33 ವರ್ಷದ ಚಾಹಲ್ ಅವರು ಹೆಚ್ಚು ಪಂದ್ಯಗಳನ್ನಾಡುವ ಮೂಲಕ ಮತ್ತೆ ಗುತ್ತಿಗೆ ಪಟ್ಟಿಯಲ್ಲಿ ಸ್ಥಾನ ಪಡೆಯಲು ಅವಕಾಶವಿದೆ.

ಟೆಸ್ಟ್ ರ್‍ಯಾಂಕಿಂಗ್: ಯಶಸ್ವಿ 12ನೇ ಸ್ಥಾನಕ್ಕೆ

ದುಬೈ (ಪಿಟಿಐ): ಭಾರತದ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಬುಧವಾರ ಪ್ರಕಟವಾದ ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ 12ನೇ ಸ್ಥಾನಕ್ಕೇರಿದ್ದಾರೆ.

ವಿಕೆಟ್ ಕೀಪರ್ ಬ್ಯಾಟರ್ ಧ್ರುವ ಜುರೆಲ್ ಅವರೂ 31 ಸ್ಥಾನಗಳ ಬಡ್ತಿ ಪಡೆದು 69ನೇ ಸ್ಥಾನಕ್ಕೆ ಜಿಗಿದಿದ್ದಾರೆ.


ಯಶಸ್ವಿ ಜೈಸ್ವಾಲ್

ಸದ್ಯ ಇಂಗ್ಲೆಂಡ್ ಎದುರು ನಡೆಯುತ್ತಿರುವ ಟೆಸ್ಟ್ ಸರಣಿಯ ಆರಂಭಕ್ಕೂ ಮುನ್ನ ಜೈಸ್ವಾಲ್ ಅವರು 69ನೇ ಸ್ಥಾನದಲ್ಲಿದ್ದರು. ನಾಲ್ಕು ಟೆಸ್ಟ್‌ಗಳು ಮುಗಿದ ನಂತರ ಅವರು 12ನೇ ಸ್ಥಾನಕ್ಕೇರಿದ ಅಮೋಘ ಸಾಧನೆ ಮಾಡಿದ್ದಾರೆ. ಈ ಸರಣಿಯಲ್ಲಿ ಅವರು ಎರಡು ದ್ವಿಶತಕ ಗಳಿಸಿದ್ದಾರೆ. ಅಲ್ಲದೇ 600ಕ್ಕೂ ಹೆಚ್ಚು ರನ್‌ಗಳನ್ನು ಕಲೆಹಾಕಿದ್ದಾರೆ.

ರಾಂಚಿಯಲ್ಲಿ ಈಚೆಗೆ ಮುಗಿದ ಟೆಸ್ಟ್‌ನಲ್ಲಿ ಶ್ರೇಷ್ಠ ಆಟಗಾರ ಗೌರವ ಗಳಿಸಿದ ಜುರೆಲ್ ಕೂಡ ಗಮನಾರ್ಹ ಏರಿಕೆ ಸಾಧಿಸಿದ್ದಾರೆ.

ಇಂಗ್ಲೆಂಡ್ ತಂಡದ ಬ್ಯಾಟರ್ ಜೋ ರೂಟ್ ಅವರು ಅಗ್ರ ಮೂವರಲ್ಲಿ ಸ್ಥಾನ ಪಡೆದಿದ್ದಾರೆ. ಬೌಲರ್‌ಗಳ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ ಅಗ್ರಸ್ಥಾನದಲ್ಲಿದ್ದಾರೆ. ಆರ್. ಅಶ್ವಿನ್ ಎರಡನೇ ಸ್ಥಾನದಲ್ಲಿದ್ದಾರೆ. ಆಲ್‌ರೌಂಡರ್‌ಗಳಲ್ಲಿ ರವೀಂದ್ರ ಜಡೇಜ ಮೊದಲ ಸ್ಥಾನದಲ್ಲಿದ್ದಾರೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಮಹಿಳೆಯರ ಪ್ರೀಮಿಯರ್ ಲೀಗ್ ಪಂದ್ಯದ ವೇಳೆ ಅಭಿಮಾನಿಯೊಬ್ಬ ಮೈದಾನಕ್ಕೆ ನುಗ್ಗಿದಾಗ ಪಿಚ್‌ಗೆ ಬರದಂತೆ ಆತನನ್ನು ಯು.ಪಿ. ವಾರಿಯರ್ಸ್ ವಿಕೆಟ್ ಕೀಪರ್ ಅಲಿಸಾ ಹೀಲಿ ತಳ್ಳಿದರು (ಎಡಚಿತ್ರ). ಯುಪಿ ವಾರಿಯರ್ಸ್ ತಂಡದ ಕಿರಣ್ ನವಗಿರೆ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಡಬ್ಲ್ಯುಪಿಎಲ್: ಮುಂಬೈ ಇಂಡಿಯನ್ಸ್‌ಗೆ ನಿರಾಸೆ

ಕಿರಣ್ ಅಬ್ಬರ: ವಾರಿಯರ್ಸ್‌ಗೆ ಜಯ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ಸಿಕ್ಸರ್, ಬೌಂಡರಿಗಳ ಚಿತ್ತಾರ ಬಿಡಿಸಿದ ಕಿರಣ್ ನವಗಿರೆ ಯುಪಿ ವಾರಿಯರ್ಸ್ ತಂಡಕ್ಕೆ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಮೊದಲ ಜಯದ ಕಾಣಿಕೆ ನೀಡಿದರು.

ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಒಡ್ಡಿದ್ದ 162 ರನ್‌ಗಳ ಗೆಲುವಿನ ಗುರಿಯನ್ನು ವಾರಿಯರ್ಸ್ ತಂಡವು 21 ಎಸೆತಗಳು ಬಾಕಿಯಿರುವಂತೆಯೇ ಮುಟ್ಟಿತು. 7 ವಿಕೆಟ್‌ಗಳಿಂದ ಜಯಿಸಿತು. ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಜಯಿಸಿದ್ದ ಮುಂಬೈ ಮೊದಲ ಸೋಲು ಅನುಭವಿಸಿತು.

ಟಾಸ್ ಗೆದ್ದ ಯುಪಿ ವಾರಿಯರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ತಂಡವು ಹೆಯಲಿ ಮ್ಯಾಥ್ಯೂಸ್ (55; 47ಎ, 4X9, 6X1) ಅವರ ಅಬ್ಬರದ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 161 ರನ್ ಗಳಿಸಿತು.

ಯು.ಪಿ ತಂಡದ ಫೀಲ್ಡರ್‌ಗಳು ಹೆಯಲಿಯ ಮೂರು ಕ್ಯಾಚ್‌ಗಳನ್ನು ಕೈಚೆಲ್ಲಿ ಪರಿತಪಿಸಿದರು. ಅಲ್ಲದೇ ಬಹಳಷ್ಟು ಮಿಸ್‌ಫೀಲ್ಡ್‌ಗಳನ್ನೂ ಮಾಡಿ ರನ್‌ಗಳನ್ನು ಬಿಟ್ಟುಕೊಟ್ಟರು.

ಆದರೆ ಆ ಎಲ್ಲ ಲೋಪಗಳನ್ನು ಮರೆಯುವಂತೆ ಮಾಡಿದ್ದು ಮಹಾರಾಷ್ಟ್ರದ ಹುಡುಗಿ ಕಿರಣ್ ನವಗಿರೆ (57; 31ಎ, 4X6, 6X4) ಮತ್ತು ನಾಯಕಿ ಅಲಿಸಾ ಹೀಲಿ (33; 29ಎ, 4X5) ಅವರ ಆಟ. ಮುಂಬೈ ಬೌಲರ್‌ಗಳನ್ನು ದಂಡಿಸಿದರು.

ಮೊದಲ ಪವರ್‌ಪ್ಲೇನಲ್ಲಿಯೇ ವಿಕೆಟ್ ನಷ್ಟವಿಲ್ಲದೇ 61 ರನ್‌ಗಳು ತಂಡದ ಖಾತೆಗೆ ಹರಿದುಬಂದವು. ಅದರಲ್ಲೂ ಕಿರಣ್ ಆಟಕ್ಕೆ ಚೆಂಡು ನಾಲ್ಕು ಬಾರಿ ಗ್ಯಾಲರಿಗೆ ಹೋಗಿ ಬಿತ್ತು.

ಪಂದ್ಯ ನೋಡಲು ಸೇರಿದ್ದ ಏಳು ಸಾವಿರಕ್ಕೂ ಹೆಚ್ಚು ಜನರು ಖುಷಿಯಿಂದ ಕುಣಿದಾಡಿ ಸಂಭ್ರಮಿಸಿದರು. ಇವರಿಬ್ಬರ ಜೊತೆಯಾಟದಲ್ಲಿ ಕೇವಲ 9 ಓವರ್‌ಗಳಲ್ಲಿ ತಂಡವು 94 ರನ್ ಸೇರಿಸಿತು. ಆದರೆ ಹತ್ತನೇ ಓವರ್‌ನಲ್ಲಿ ಅಮೆಲಿಯಾ ಕೆರ್ ಎಸೆತವನ್ನು ಆಡಲು ಮುನ್ನುಗ್ಗಿ ಬೀಟ್ ಆದ ಕಿರಣ್ ಅವರು ಯಷ್ಟಿಕಾ ಭಾಟಿಯಾ ಮಾಡಿದ ಸ್ಟಂಪಿಂಗ್‌ಗೆ ಔಟಾದರು.

ನಂತರದ ಓವರ್‌ನಲ್ಲಿ ಮಧ್ಯಮವೇಗಿ ಐಸಿ ವಾಂಗ್ ಅವರು ತಹಲಿಯಾ ಮೆಕ್‌ಗ್ರಾ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಇನ್ನೊಂದು ಎಸೆತದಲ್ಲಿ ಅಲಿಸಾ ಹೀಲಿ ಅವರು ಬ್ಯಾಕ್‌ವರ್ಡ್ ಪಾಯಿಂಟ್ ಫೀಲ್ಡರ್ ಸೈಕಾ ಇಷಾಕ್ ಅವರಿಗೆ ಸುಲಭ ಕ್ಯಾಚಿತ್ತರು. ಈ ಹಂತದಲ್ಲಿ ಮುಂಬೈ ತಂಡವು ಗೆಲುವಿನ ಹಾದಿಗೆ ಮರಳುವ ವಿಶ್ವಾಸದಲ್ಲಿತ್ತು.

ಆದರೆ, ಅದಕ್ಕೆ ಗ್ರೇಸ್ ಹ್ಯಾರಿಸ್ (ಔಟಾಗದೆ 38; 17ಎ, 4X6, 6X1) ಮತ್ತು ದೀಪ್ತಿ ಶರ್ಮಾ (ಔಟಾಗದೆ 27; 20ಎ) ಅವಕಾಶ ಕೊಡಲಿಲ್ಲ. ಅವರಿಬ್ಬರೂ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 65 ರನ್‌ಗಳನ್ನು ಸೇರಿಸಿದರು. ಅದರಿಂದಾಗಿ ಯು.ಪಿ ತಂಡವು ಜಯ ಸಂಭ್ರಮ ಆಚರಿಸಿತು.

ಹರ್ಮನ್ ವಿಶ್ರಾಂತಿ: ಮುಂಬೈ ಇಂಡಿಯನ್ಸ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಸ್ನಾಯುಸೆಳೆತದ ಕಾರಣ ಪಂದ್ಯದಲ್ಲಿ ಆಡಲಿಲ್ಲ. ಅವರ ಬದಲಿಗೆ ನಥಾಲಿ ಶಿವರ್ ಬ್ರಂಟ್ ಅವರು ತಂಡವನ್ನು ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 161 (ಹೆಯಲಿ ಮ್ಯಾಥ್ಯೂಸ್ 55, ಯಷ್ಟಿಕಾ ಭಾಟಿಯಾ 26, ಅಮೆಲಿಯಾ ಕೆರ್ 23, ನಥಾಲಿ ಶಿವರ್ ಬ್ರಂಟ್ 19, ಪೂಜಾ ವಸ್ತ್ರಕರ್ 18, ಐಸಿ ವಾಂಗ್ 15, ಗ್ರೇಸ್ ಹ್ಯಾರಿಸ್ 20ಕ್ಕೆ1) ಯು.ಪಿ. ವಾರಿಯರ್ಸ್: 16.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 163 (ಅಲಿಸಾ ಹೀಲಿ 33, ಕಿರಣ್ ನವಗಿರೆ 57, ಗ್ರೇಸ್ ಹ್ಯಾರಿಸ್ ಔಟಾಗದೆ 38, ದೀಪ್ತಿ ಶರ್ಮಾ ಔಟಾಗದೆ 27, ಐಸಿ ವಾಂಗ್ 30ಕ್ಕೆ2)

ಫಲಿತಾಂಶ: ಯು.ಪಿ. ವಾರಿಯರ್ಸ್ ತಂಡಕ್ಕೆ 7 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ಕಿರಣ್ ನವಗಿರೆ.

ಇಂದಿನ ಪಂದ್ಯ
ರಾಯಲ್ ಚಾಲೆಂಜರ್ಸ್ ಬೆಂಗಳೂರು–ಡೆಲ್ಲಿ ಕ್ಯಾಪಿಟಲ್ಸ್
ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಮೈದಾನಕ್ಕೆ ನುಗ್ಗಿದ ಅಭಿಮಾನಿ

ಡಬ್ಲ್ಯುಪಿಎಲ್ ಪಂದ್ಯವು ನಡೆಯುತ್ತಿದ್ದ ಸಂದರ್ಭದಲ್ಲಿಯೇ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಅಭಿಮಾನಿಯೊಬ್ಬ ಮೈದಾನದೊಳಕ್ಕೆ ನುಗ್ಗಿದ ಘಟನೆ ನಡೆಯಿತು.

ಮುಂಬೈ ಇಂಡಿಯನ್ಸ್ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಈ ಘಟನೆ ನಡೆಯಿತು. ಡಿ ಕಾರ್ಪೋರೇಟ್ ಗ್ಯಾಲರಿಯಲ್ಲಿದ್ದ ವ್ಯಕ್ತಿಯೊಬ್ಬ ಬೇಲಿ ದಾಟಿ ಒಳನುಗ್ಗಿದ. ಆತನ ಕೈಯಲ್ಲಿ ರಾಯಲ್ ಚಾಲೆಂಜರ್ ಬೆಂಗಳೂರು ತಂಡದ ಜೆರ್ಸಿ ಇತ್ತು. ಪಿಚ್‌ನತ್ತ ಧಾವಿಸುತ್ತಿದ್ದ ಆತನನ್ನು ಯು.ಪಿ. ವಾರಿಯರ್ಸ್ ತಂಡದ ವಿಕೆಟ್‌ಕೀಪರ್ ತಡೆಯಲು ಯತ್ನಿಸಿದರು. ನಂತರ ಭದ್ರತಾ ಸಿಬ್ಬಂದಿಯು ಆತನನ್ನು ವಶಕ್ಕೆ ಪಡೆದು ಹೊರಗೆ ಕರೆದೊಯ್ದರು.

ಅಂತಿಮ ಟೆಸ್ಟ್‌ಗೂ ರಾಹುಲ್ ಅಲಭ್ಯ?

ನವದೆಹಲಿ (ಪಿಟಿಐ): ಭಾರತ ತಂಡದ ಹಿರಿಯ ಬ್ಯಾಟರ್ ಕೆ.ಎಲ್.ರಾಹುಲ್ ಅವರು ಬಲತೊಡೆಯ ನೋವಿನಿಂದ ಪೂರ್ಣ ಗುಣಮುಖರಾಗದ ಕಾರಣ, ಧರ್ಮಶಾಲಾದಲ್ಲಿ ನಡೆಯಲಿರುವ ಐದನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್‌ನಲ್ಲಿ ಆಡುವ ಸಾಧ್ಯತೆಯಿಲ್ಲ.

ಸರಣಿಯ ಮೊದಲ ಟೆಸ್ಟ್‌ನಲ್ಲಿ ಆಡಿದ್ದ ರಾಹುಲ್ ಉಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದರು. ಬಿಸಿಸಿಐ ಪ್ರಕಾರ ಅವರು ರಾಜಕೋಟ್‌ನಲ್ಲಿ ನಡೆದ ಮೂರನೇ ಟೆಸ್ಟ್‌ಗೆ ಮೊದಲು ಶೇ 90ರಷ್ಟು ಗುಣಮುಖರಾಗಿದ್ದರು. ತೊಡೆಯ ನೋವಿಗೆ ತಜ್ಞವೈದ್ಯರ ಸಲಹೆ ಪಡೆಯಲು ರಾಹುಲ್ ಈಗ ಲಂಡನ್‌ಗೆ ತೆರಳಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ಈಗಾಗಲೇ ಸರಣಿ ಗೆದ್ದುಕೊಂಡಿರುವ ಭಾರತ ಅವರನ್ನು ಕೊನೆಯ ಟೆಸ್ಟ್‌ನಲ್ಲಿ ಆಡಿಸುವ ಸಾಹಸಕ್ಕೆ ಕೈಹಾಕುವ ಸಾಧ್ಯತೆ ಕಡಿಮೆ. ಮಾರ್ಚ್ 7ರಂದು ಧರ್ಮಶಾಲಾದಲ್ಲಿ ಈ ಟೆಸ್ಟ್ ನಡೆಯಲಿದೆ.

ಐಪಿಎಲ್ ಶುರುವಾಗುವ ವೇಳೆಗೆ ಫಿಟ್ನೆಸ್ ಪಡೆದುಕೊಳ್ಳುವ ಅಗತ್ಯ ಅವರಿಗೆ ಎದುರಾಗಿದೆ. ಲಖನೌ ಸೂಪರ್‌ಜೈಂಟ್ಸ್ ತಂಡದ ನೇತೃತ್ವ ವಹಿಸಿರುವ ರಾಹುಲ್ ಮಧ್ಯಮ ಕ್ರಮಾಂಕದಲ್ಲಿ ಆಡುವ ಸಾಧ್ಯತೆಯಿದೆ. ಅಮೆರಿಕ ಮತ್ತು ಕೆರಿಬಿಯನ್‌ನಲ್ಲಿ ನಡೆಯುವ ಟಿ20 ವಿಶ್ವಕಪ್‌ಗೆ ಭಾರತ ತಂಡದ ಆಯ್ಕೆಗೆ ಐಪಿಎಲ್‌ನ ಪ್ರದರ್ಶನವೂ ಗಣನೆಗೆ ಬರುವ ಸಾಧ್ಯತೆಯಿದೆ.


ಕೆ.ಎಲ್ ರಾಹುಲ್

'ಮುಂದೆ ಸಾಕಷ್ಟು ಕ್ರಿಕೆಟ್ ಆಡಲು ಇದೆ- ಐಪಿಎಲ್ ನಂತರ ಟಿ20 ಟೂರ್ನಿಗೆ ಆಯ್ಕೆಯ ರೇಸ್‌ನಲ್ಲಿ ರಾಹುಲ್ ಇದ್ದಾರೆ. ನಂತರ ವರ್ಷದ ಕೊನೆಗೆ ನ್ಯೂಜಿಲೆಂಡ್, ಆಸ್ಟ್ರೇಲಿಯಾ ಸರಣಿ ಇದೆ. ಹೀಗಾಗಿ ಅವರಿಗೆ ಚೇತರಿಕೆಗೆ ಇನ್ನಷ್ಟು ಸಮಯ ನೀಡುವುದು ಒಳಿತು' ಎಂದು ಐಪಿಎಲ್ ಮೂಲವೊಂದು ಪಿಟಿಐಗೆ ತಿಳಿಸಿದೆ.

ತೊಡೆನೋವಿನ ಸಮಸ್ಯೆಯಿಂದಾಗಿಯೇ ಅವರು ಕಳೆದ ವರ್ಷವೂ ಸುಮಾರು ನಾಲ್ಕು ತಿಂಗಳು ತಂಡದಿಂದ ಹೊರಗಿರಬೇಕಾಯಿತು.

ಪಡಿಕ್ಕಲ್‌ಗೆ ಅವಕಾಶ?

ಅಂತಿಮ ಟೆಸ್ಟ್‌ನಲ್ಲಿ ರಜತ್ ಪಾಟೀದಾರ್ ಬದಲು ದೇವದತ್ತ ಪಡಿಕ್ಕಲ್ ಆಡುವ ಸಾಧ್ಯತೆಯಿದೆ. ಮಧ್ಯಪ್ರದೇಶದ ರಜತ್, ಆರು ಇನಿಂಗ್ಸ್‌ಗಳಿಂದ 63 ರನ್ ಗಳನ್ನಷ್ಟೇ ಗಳಿಸಿದ್ದಾರೆ. ಕಾರ್ಯಭಾರತ ನಿರ್ವಹಣೆ ಭಾಗವಾಗಿ ನಾಲ್ಕನೇ ಟೆಸ್ಟ್‌ಗೆ ವಿಶ್ರಾಂತಿ ಪಡೆದಿದ್ದ ಜಸ್‌ಪ್ರೀತ್ ಬೂಮ್ರಾ ಅವರು ಅಂತಿಮ ಟೆಸ್ಟ್‌ಗೆ ಮರಳುವ ಸಾಧ್ಯತೆ ದಟ್ಟವಾಗಿದೆ.

100 ಮೀ. ಫ್ರೀಸ್ಟೈಲ್: ಧಿನಿಧಿ ಸಾಧನೆ

ನವದೆಹಲಿ (ಪಿಟಿಐ): ಭಾರತದ ಉದಯೋನ್ಮುಖ ಈಜುಗಾರ್ತಿ ಧಿನಿಧಿ ದೇಸಿಂಗು, ಫಿಲಿಪೀನ್ಸ್‌ನ ಕೆಪಾಸ್‌ನಲ್ಲಿ ನಡೆಯುತ್ತಿರುವ 11ನೇ ಏಷ್ಯನ್ ಗ್ರೂಪ್ ಈಜು ಚಾಂಪಿಯನ್‌ಷಿಪ್‌ನ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯನ್ನು 'ಭಾರತದ ಶ್ರೇಷ್ಠ ಅವಧಿ'ಯಲ್ಲಿ ಪೂರೈಸಿ ಗಮನ ಸೆಳೆದಳು.

14 ವರ್ಷದ ಬೆಂಗಳೂರಿನ ಈಜುಗಾರ್ತಿ ಬುಧವಾರ 57.33 ಸೆಕೆಂಡುಗಳಲ್ಲಿ ಸ್ಪರ್ಧೆಯನ್ನು ಪೂರೈಸಿ, ಕೆನಿಷಾ ಗುಪ್ತಾ ಹೆಸರಿನಲ್ಲಿದ್ದ ಹಳೆಯ ದಾಖಲೆ (57.35 ಸೆ.) ಮುಳುಗಿಸಿದರು. ಜಪಾನ್‌ನ ಮಿನಾಮಿ ಯು (56.45 ಸೆ.) ಚಿನ್ನದ ಪದಕ ಗಳಿಸಿದರೆ, ಕೊರಿಯಾದ ಸುಮ್ ಯಿ ಲಿ (56.57 ಸೆ.) ಬೆಳ್ಳಿ ಹಾಗೂ ವಿಯೆಟ್ನಾಮಿನ ಹೀನ್ ಗುಯೆನ್ (56.69ಸೆ.) ಕಂಚಿನ ಪದಕ ಪಡೆದರು.

ಭಾರತದಲ್ಲಿ, ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಶ್ರೇಷ್ಠ ಅವಧಿಯನ್ನು ರಾಷ್ಟ್ರೀಯ ದಾಖಲೆ ಎಂದು ಪರಿಗಣಿಸಲಾಗುತ್ತದೆ. ಇತರ ಈಜು ಕೂಟಗಳಲ್ಲಿ ರಾಷ್ಟ್ರೀಯ ದಾಖಲೆ ಮುರಿದರೆ ಅದನ್ನು 'ಭಾರತದ ಶ್ರೇಷ್ಠ ಅವಧಿ' ಎನ್ನಲಾಗುತ್ತದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ 700 ವಿಕೆಟ್ ಹೊಸ್ತಿಲಲ್ಲಿ ಜಿಮ್ಮಿ ಆ್ಯಂಡರ್ಸನ್

ನವದೆಹಲಿ (ಪಿಟಿಐ): ಇಂಗ್ಲೆಂಡ್ ತಂಡದ ದಿಗ್ಗಜ ವೇಗದ ಬೌಲರ್ ಜಿಮ್ಮಿ ಆ್ಯಂಡರ್ಸನ್, ಸುದೀರ್ಘ ವೃತ್ತಿ ಜೀವನ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್ ಎಲ್ಲ ಮಾದರಿಗಳಲ್ಲಿಯೂ ಸೇರಿ ಸಾವಿರ ವಿಕೆಟ್ ಗಳಿಕೆಯ ಸನಿಹದಲ್ಲಿದ್ದಾರೆ.

ಟೆಸ್ಟ್ ಮಾದರಿಯಲ್ಲಿ ಇನ್ನೆರಡು ವಿಕೆಟ್ ಗಳಿಸಿದರೆ 700ರ ಗಡಿ ಮುಟ್ಟಲಿದ್ದಾರೆ. ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಮತ್ತು ಆಸ್ಟ್ರೇಲಿಯಾದ, ದಿವಂಗತ ಶೇನ್ ವಾರ್ನ್ ಅವರ ನಂತರ ಈ ಸಾಧನೆ ಮಾಡಿದ ಮೂರನೇ ಬೌಲರ್ ಆಗಲಿದ್ದಾರೆ.

ಆ್ಯಂಡರ್ಸನ್

41 ವರ್ಷದ ಆ್ಯಂಡರ್ಸನ್ ಈಗಲೂ ಇಂಗ್ಲೆಂಡ್ ತಂಡದ ಬೌಲಿಂಗ್ ವಿಭಾಗದ ಮುಂದಾಳು. ತಾವು ಭಾರತದ ವೇಗಿ ಜಹೀರ್ ಖಾನ್ ಅವರಿಂದ ಬಹಳಷ್ಟು ಕಲಿತಿರುವುದಾಗಿ ನೆನಪಿಸಿಕೊಂಡಿದ್ದಾರೆ.

'ಜಹೀರ್ ಖಾನ್ ಅವರ ಬೌಲಿಂಗ್ ಅನ್ನು ಯಾವಾಗಲೂ ನೋಡುತ್ತಿದ್ದೆ. ಅದರಿಂದ ಬಹಳಷ್ಟು ಕಲಿತೆ. ಅವರು ರಿವರ್ಸ್ ಸ್ವಿಂಗ್ ಮಾಡುತ್ತಿದ್ದ ರೀತಿ, ಬೌಲಿಂಗ್ ಮಾಡಲು ರನ್ ಅಪ್ ತೆಗೆದುಕೊಂಡಾಗ ಚೆಂಡನ್ನು ಮುಚ್ಚಿ ಹಿಡಿಯುತ್ತಿದ್ದ ಕೌಶಲಗಳು ನನ್ನನ್ನು ಬಹಳ ಆಕರ್ಷಿಸಿದ್ದವು. ಅಂತಹ ತಂತ್ರಗಳನ್ನು ಕಲಿಯಲು ನಾನು ಪ್ರಯತ್ನಿಸಿದೆ' ಎಂದು ಜಿಯೊ ಸಿನಿಮಾ ಜೊತೆಗೆ ಸಂದರ್ಶನದಲ್ಲಿ ಹೇಳಿದ್ದಾರೆ.

ಜರ್ಮನ್ ಓಪನ್: 2ನೇ ಸುತ್ತಿಗೆ ಸತೀಶ್, ಆಕರ್ಷಿ

ಮುಲ್ಹೀಮ್ ಅನ್ ಡೆರ್ ರುರ್ (ಜರ್ಮನಿ), (ಪಿಟಿಐ): ಭಾರತದ ಆಟಗಾರರಾದ ಸತೀಶ್ ಕುಮಾರ್ ಕರುಣಾಕರನ್ ಮತ್ತು ಆಕರ್ಷಿ ಕಶ್ಯಪ್, ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 50ನೇ ಸ್ಥಾನದಲ್ಲಿರುವ ಕರುಣಾಕರನ್ 21-18, 19-21, 21-19 ರಿಂದ 45ನೇ ಕ್ರಮಾಂಕದಲ್ಲಿರುವ ಮಿಶಾ ಜಿಲ್ಬರ್‌ಮನ್ (ಇಸ್ರೇಲ್) ಅವರನ್ನು ಸೋಲಿಸಿದರು.

ಆಕರ್ಷಿ ಕಶ್ಯಪ್ 21-23, 21-17, 21-11 ರಿಂದ ಉಕ್ರೇನ್‌ನ ಪೊಲಿನಾ ಬುಹ್ರೋವಾ ಅವರನ್ನು 63 ನಿಮಿಷಗಳಲ್ಲಿ ಸೋಲಿಸಿದರು. ವಿಶ್ವ ಕ್ರಮಾಂಕದಲ್ಲಿ 43ನೇ ಸ್ಥಾನದಲ್ಲಿರುವ ಆಕರ್ಷಿ ಮುಂದಿನ ಪಂದ್ಯದಲ್ಲಿ ಡೆನ್ಮಾರ್ಕ್ ಆಟಗಾರ್ತಿ ಮಿಯಾ ಬ್ಲಿಚ್‌ಫೆಲ್ಡ್ ಅವರನ್ನು ಎದುರಿಸಲಿದ್ದಾರೆ.

ಟೆನಿಸ್: ಕ್ವಾರ್ಟರ್‌ಗೆ ರೋಹನ್–ಎಬ್ಡೆನ್

ದುಬೈ (ಪಿಟಿಐ): ಅಗ್ರ ಶ್ರೇಯಾಂಕದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಜೋಡಿಯು ದುಬೈ ಟೆನಿಸ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಆದರೆ, ಸಿಂಗಲ್ಸ್‌ನಲ್ಲಿ ಭಾರತದ ಅಗ್ರಗಣ್ಯ ಆಟಗಾರ ಸುಮಿತ್ ನಗಾಲ್ ಆರಂಭಿಕ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿರುವ ಭಾರತದ ರೋಹನ್ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಜೋಡಿಯು 16ರ ಘಟ್ಟದ ಪಂದ್ಯದಲ್ಲಿ 7-6(4), 7-6(5) ರಿಂದ ಟುನೀಶಿಯಾದ ಸ್ಕಂದರ್ ಮನ್ಸೌರಿ ಮತ್ತು ಪಾಕಿಸ್ತಾನದ ಐಸಾಮ್-ಉಲ್-ಹಕ್ ಖುರೇಷಿ ವಿರುದ್ಧ ನೇರ ಸೆಟ್‌ಗಳಿಂದ ಜಯ ಸಾಧಿಸಿದರು. ಈ ಜೋಡಿಯು ಕ್ವಾರ್ಟರ್ ಫೈನಲ್‌ನಲ್ಲಿ ಉರುಗ್ವೆಯ ಏರಿಯಲ್ ಬೆಹರ್ ಮತ್ತು ಜೆಕ್ ಗಣರಾಜ್ಯದ ಆ್ಯಡಂ ಪಾವ್ಲಾಸೆಕ್ ಅವರನ್ನು ಎದುರಿಸಲಿದೆ.

ಕನ್ನಡಿಗ ರೋಹನ್ ಬೋಪಣ್ಣ

ಭಾರತದ ಯೂಕಿ ಭಾಂಬ್ರಿ ಮತ್ತು ಡಚ್‌ನ ರಾಬಿನ್ ಹಾಸೆ ಜೋಡಿಯೂ ಎಂಟರ ಘಟ್ಟ ಪ್ರವೇಶಿಸಿತು. ಈ ಜೋಡಿ 6-7(6), 6-3, 10-8ರಿಂದ ಕಜಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಮತ್ತು ಫ್ರಾನ್ಸ್‌ನ ಆಡ್ರಿಯನ್ ಮನ್ನಾರಿನೊ ಅವರನ್ನು ಹಿಮ್ಮೆಟ್ಟಿಸಿತು.

ನಗಾಲ್‌ಗೆ ಸೋಲು: ಸುಮಿತ್ ನಗಾಲ್ 32ರ ಘಟ್ಟದ ಪಂದ್ಯದಲ್ಲಿ 4-6, 7-5, 1-6ರಿಂದ ಇಟಲಿಯ ಲೊರೆಂಜೊ ಸೋನೆಗೊ ವಿರುದ್ಧ ಸೋತರು.

2029ರಲ್ಲಿ ಲೋಕಸಭೆ, ವಿಧಾನಸಭೆ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ: ಕಾನೂನು ಆಯೋಗ ಚಿಂತನೆ

ಏಕಕಾಲಕ್ಕೆ ಚುನಾವಣೆಗೆ ಶಿಫಾರಸು ಸಾಧ್ಯತೆ

ನವದೆಹಲಿ (ಪಿಟಿಐ): ಸಂವಿಧಾನದಲ್ಲಿ 'ಒಂದು ದೇಶ, ಒಂದು ಚುನಾವಣೆ' ಕುರಿತ ಹೊಸ ಅಧ್ಯಾಯವನ್ನು ಸೇರಿಸಲು ಹಾಗೂ 2029ರ ಮಧ್ಯದಲ್ಲಿ ದೇಶದಾದ್ಯಂತ ಲೋಕಸಭೆ, ರಾಜ್ಯಗಳ ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಕಾನೂನು ಆಯೋಗ ಶಿಫಾರಸು ಮಾಡುವ ಸಾಧ್ಯತೆಗಳಿವೆ.

ಏಕಕಾಲದ ಚುನಾವಣೆಗಳಿಗೆ ಸಂಬಂಧಿಸಿದಂತೆ ಹೊಸ ಅಧ್ಯಾಯ ಅಥವಾ ಭಾಗವನ್ನು ಸೇರಿಸಲು ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ನಿವೃತ್ತ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ಅವರ ನೇತೃತ್ವದ ಆಯೋಗ ಶಿಫಾರಸು ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮುಂದಿನ ಐದು ವರ್ಷಗಳಲ್ಲಿ ವಿಧಾನಸಭೆಗಳ ಅವಧಿಯನ್ನು 'ಮೂರು ಹಂತಗಳಲ್ಲಿ' ಹೊಂದಾಣಿಕೆ ಮಾಡಬಹುದು ಎಂದು ಸಮಿತಿ ಶಿಫಾರಸು ಮಾಡಲಿದೆ. ಇದರಿಂದ 2029ರ ಮೇ– ಜೂನ್‌ನಲ್ಲಿ 19ನೇ ಲೋಕಸಭಾ ಚುನಾವಣೆಯ ಜತೆಗೆ ಮೊದಲ ಬಾರಿಗೆ ಏಕಕಾಲದಲ್ಲಿ ವಿಧಾನಸಭಾ ಚುನಾವಣೆಗಳನ್ನು ನಡೆಸಲು ಸಾಧ್ಯವಾಗುತ್ತದೆ ಎನ್ನಲಾಗಿದೆ.

ಹೊಸ ಅಧ್ಯಾಯದಲ್ಲಿ ಏನಿರಲಿದೆ: ಸಂವಿಧಾನದ ಹೊಸ ಅಧ್ಯಾಯವು ಲೋಕಸಭೆ, ರಾಜ್ಯ ವಿಧಾನಸಭೆಗಳು, ಪಂಚಾಯತ್‌ಗಳು ಮತ್ತು ಪುರಸಭೆಗಳಿಗೆ 'ಏಕಕಾಲಕ್ಕೆ ಚುನಾವಣೆ', 'ಏಕಕಾಲಕ್ಕೆ ಚುನಾವಣೆಯ ಸುಸ್ಥಿರತೆ' ಹಾಗೂ 'ಸಾಮಾನ್ಯ ಮತದಾರರ ಪಟ್ಟಿ'ಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿರುತ್ತದೆ ಎಂದು ಮೂಲಗಳು ವಿವರಿಸಿವೆ.

ವಿಧಾನಸಭೆಗಳ ಐದು ವರ್ಷಗಳ ಅವಧಿಯನ್ನು ಮೂರು ಹಂತಗಳಲ್ಲಿ ಹೊಂದಾಣಿಕೆ ಮಾಡಬಹುದು. ಅದರ ಪ್ರಕಾರ ಮೊದಲ ಹಂತದಲ್ಲಿ, ರಾಜ್ಯ ವಿಧಾಸಭೆಗಳ ಅವಧಿಯನ್ನು ಮೂರು ಅಥವಾ ಆರು ತಿಂಗಳವರೆಗೆ ಮೊಟಕುಗೊಳಿಸ ಬೇಕಾಗುತ್ತದೆ.

ಒಂದು ವೇಳೆ ಸರ್ಕಾರವು ಅವಿಶ್ವಾಸದಿಂದ ಪತನವಾದರೆ ಅಥವಾ ಬಹುಮತ ಕಳೆದುಕೊಂಡರೆ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಂಡ ಸರ್ಕಾರ ರಚಿಸಬಹುದು. ಈ ಸೂತ್ರವೂ ಕಾರ್ಯ ನಿರ್ವಹಿಸದಿದ್ದರೆ ಸದನದ ಉಳಿದ ಅವಧಿಗೆ ಹೊಸ ಚುನಾವಣೆಗಳನ್ನು ನಡೆಸಲು ಕಾನೂನು ಆಯೋಗ ಶಿಫಾರಸು ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಕಾನೂನು ಆಯೋಗದ ಹೊರತಾಗಿ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಯು ಲೋಕಸಭೆ, ರಾಜ್ಯ ವಿಧಾನಸಭೆಗಳು, ಪುರಸಭೆಗಳು ಮತ್ತು ಪಂಚಾಯತ್‌ಗಳಿಗೆ ಸಂವಿಧಾನ ಮತ್ತು ಕಾನೂನು ಚೌಕಟ್ಟಿನೊಳಗೆ ಏಕಕಾಲದಲ್ಲಿ ಹೇಗೆ ಚುನಾವಣೆ ನಡೆಸಬಹುದು ಎಂಬುದರ ಕುರಿತು ವರದಿ ಸಿದ್ಧಪಡಿಸುತ್ತಿದೆ.

ಮುಂದಿನ ಲೋಕಸಭಾ ಚುನಾವಣೆಯ ಜತೆಗೆ ಕನಿಷ್ಠ ಐದು ವಿಧಾನಸಭೆಗಳಿಗೆ ಚುನಾವಣೆಗಳು ನಡೆಯುವ ಸಾಧ್ಯತೆ ಇದೆ. ಮಹಾರಾಷ್ಟ್ರ, ಹರಿಯಾಣ ಮತ್ತು ಜಾರ್ಖಂಡ್ ರಾಜ್ಯಗಳಿಗೆ ಈ ವರ್ಷದ ಕೊನೆಯಲ್ಲಿ ಚುನಾವಣೆಗಳು ನಡೆಯಲಿವೆ.

ಮುಂದಿನ ವರ್ಷ ಬಿಹಾರ, ದೆಹಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದರೆ, ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೇರಿ ಮತ್ತು ಕೇರಳದಲ್ಲಿ 2026ರಲ್ಲಿ ಹಾಗೂ ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್ ಮತ್ತು ಮಣಿಪುರದಲ್ಲಿ 2027ರಲ್ಲಿ ಚುನಾವಣೆಗಳು ನಡೆಯಲಿವೆ.

ತ್ರಿಪುರಾ, ಮೇಘಾಲಯ, ನಾಗಾಲ್ಯಾಂಡ್, ಕರ್ನಾಟಕ, ಮಿಜೋರಾಂ, ಛತ್ತೀಸಗಢ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ತೆಲಂಗಾಣ ವಿಧಾನಸಭೆಗಳಿಗೆ 2028ರಲ್ಲಿ ಚುನಾವಣೆಗಳು ನಡೆಯಬಹುದು ಎಂದು ಅಂದಾಜಿಸಲಾಗಿದೆ.

'ಮಾತೃತ್ವ ರಜೆ: ತಾರತಮ್ಯಕ್ಕೆ ಅವಕಾಶ ಇಲ್ಲ'

ಕೋಲ್ಕತ್ತ (ಪಿಟಿಐ): ಮಾತೃತ್ವ ರಜೆಯ ವಿಚಾರದಲ್ಲಿ ಗುತ್ತಿಗೆ ನೌಕರರು ಹಾಗೂ ಕಾಯಂ ನೌಕರರಿಗೆ ಭಿನ್ನ ನಿಯಮಗಳನ್ನು ಅನ್ವಯಿಸಲು ಅವಕಾಶವಿಲ್ಲ ಎಂದು ಹೇಳಿರುವ ಕಲ್ಕತ್ತ ಹೈಕೋರ್ಟ್, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರಿಗೆ ಪರಿಹಾರದ ರೂಪದಲ್ಲಿ, ಸಂಬಳ ಸಹಿತ ಮಾತೃತ್ವ ರಜೆಯನ್ನು ಕೊಡುವಂತೆ ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ನಿರ್ದೇಶನ ನೀಡಿದೆ.

ಅರ್ಜಿದಾರ ಮಹಿಳೆಯು 2011ರ ಆಗಸ್ಟ್‌ನಲ್ಲಿ ಆರ್‌ಬಿಐಗೆ ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ಸೇರಿದ್ದರು. ತಮಗೆ 180 ದಿನಗಳ ಸಂಬಳ ಸಹಿತ ಮಾತೃತ್ವ ರಜೆಯನ್ನು ಆರ್‌ಬಿಐ ನೀಡದೆ ಇದ್ದುದನ್ನು ಪ್ರಶ್ನಿಸಿ ಅವರು ಕೋರ್ಟ್ ಮೆಟ್ಟಿಲೇರಿದ್ದರು. ಅವರ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಆರ್.ಬಿ. ಚೌಧರಿ ನಡೆಸಿದ್ದರು.

ಆರ್‌ಬಿಐ ತನ್ನ ನೌಕರರಿಗೆ ಮಾತೃತ್ವ ಸೌಲಭ್ಯಗಳನ್ನು ಒದಗಿಸುತ್ತದೆ. ಆದರೆ ಈ ಸೌಲಭ್ಯಗಳನ್ನು ಅರ್ಜಿದಾರರಿಗೆ ನೀಡದೆ ಇರುವುದು ತಾರತಮ್ಯದ ನಡೆ. ಇಂಥದ್ದಕ್ಕೆ ಅವಕಾಶ ಇಲ್ಲ ಎಂದು ಚೌಧರಿ ಅವರು ಆದೇಶದಲ್ಲಿ ಹೇಳಿದ್ದಾರೆ. ಅರ್ಜಿದಾರರಿಗೆ ಮಾತೃತ್ವ ರಜೆಯನ್ನು ನೀಡದೆ ಇರುವುದು 'ಮಾತೃತ್ವ ಸೌಲಭ್ಯಗಳ ಕಾಯ್ದೆ 1961'ರ ಅನ್ವಯ ಅಪರಾಧ ಎಂದು ಕೂಡ ಅವರು ಹೇಳಿದ್ದಾರೆ.

ಮಹಿಳೆಗೆ ಮಾತೃತ್ವದ ಸೌಲಭ್ಯಗಳನ್ನು ನಿರಾಕರಿಸಲು ಆರ್‌ಬಿಐಗೆ ಅನುವು ಮಾಡಿಕೊಟ್ಟರೆ, ಸಂಬಳ ರಹಿತ ರಜೆಯನ್ನು ಮಾತ್ರ ಆಕೆಗೆ ನೀಡಿದರೆ, ಅಂತಹ ಕ್ರಮವು ತುಂಬು ಗರ್ಭಿಣಿಯಾಗಿದ್ದಾಗಲೂ ಆ ಮಹಿಳೆಗೆ ಕೆಲಸ ಮಾಡಲು ಒತ್ತಾಯಿಸಿದಂತೆ ಆಗಬಹುದು. ಆಗ ಆಕೆಯ ಹಾಗೂ ಭ್ರೂಣದ ಜೀವಕ್ಕೆ ಅಪಾಯ ಎದುರಾಗಬಹುದು ಎಂದು ನ್ಯಾಯಮೂರ್ತಿ ಬಸು ಅವರು ಆದೇಶದಲ್ಲಿ ಹೇಳಿದ್ದಾರೆ.

'ಆ ರೀತಿ ಮಾಡಿದರೆ ಸಾಮಾಜಿಕ ನ್ಯಾಯದ ಉದ್ದೇಶವು ಈಡೇರುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಅರ್ಜಿದಾರ ಮಹಿಳೆಯು ಆರು ತಿಂಗಳ ಮಾತೃತ್ವ ರಜೆ ಕೋರಿ 2012ರ ನವೆಂಬರ್‌ನಲ್ಲಿ ಮನವಿ ಸಲ್ಲಿಸಿದ್ದರು. ಮನವಿಯನ್ನು ತಿರಸ್ಕರಿಸುವ ಸಂದರ್ಭದಲ್ಲಿ ಆರ್‌ಬಿಐ ಕಡೆಯಿಂದ ಯಾವುದೇ ಸಂದೇಶ ಬಂದಿರಲಿಲ್ಲ. ಆದರೆ 2013ರ ಮಾರ್ಚ್‌ನಲ್ಲಿ ಪತ್ರವೊಂದನ್ನು ರವಾನಿಸಿದ ಆರ್‌ಬಿಐ, ಗುತ್ತಿಗೆ ನಿಯಮಗಳ ಅಡಿಯಲ್ಲಿ ತಮಗೆ ಮಾತೃತ್ವ ರಜೆ ನೀಡಲು ಅವಕಾಶ ಇಲ್ಲ ಎಂದು ಹೇಳಿತು. ಕರ್ತವ್ಯಕ್ಕೆ ಗೈರಾದರೆ ಅದನ್ನು ಸಂಬಳ ರಹಿತ ರಜೆ ಎಂದು ಪರಿಗಣಿಸಲಾಗುತ್ತದೆ ಎಂದು ಕೂಡ ತಿಳಿಸಲಾಯಿತು.

ಅತ್ಯಂತ ಕಿರಿಯ ಅಧಿಕಾರಿ ಹುದ್ದೆಯಲ್ಲಿ ಇರುವವರಿಗೆ ಸಿಗುವ ವೈದ್ಯಕೀಯ ಸೌಲಭ್ಯಗಳು ಮಾತ್ರ ತಮಗೆ ಸಿಗುತ್ತವೆ ಎಂದು ಮಹಿಳೆಗೆ ಆರ್‌ಬಿಐ ಅಧಿಕಾರಿಗಳು ಹೇಳಿದ್ದರು.

ಮಣಿಪುರ: ಕಮಾಂಡೊಗಳಿಂದ ಸಾಂಕೇತಿಕ 'ಶಸ್ತ್ರ ತ್ಯಾಗ' ಪ್ರತಿಭಟನೆ

ಇಂಫಾಲ್(ಪಿಟಿಐ): ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಎಸ್‌ಪಿ) ನಿವಾಸದ ಮೇಲೆ ಗುಂಪೊಂದು ದಾಳಿ ನಡೆಸಿದ್ದನ್ನು ಖಂಡಿಸಿ, ಮಣಿಪುರ ಪೊಲೀಸ್‌ನ ನೂರಾರು ಕಮಾಂಡೊಗಳು ಸಾಂಕೇತಿಕ 'ಶಸ್ತ್ರ ತ್ಯಾಗ' ಮಾಡುವ ಮೂಲಕ ಬುಧವಾರ ಪ್ರತಿಭಟನೆ ವ್ಯಕ್ತಪಡಿಸಿದರು.

ಮೈತೇಯಿ ಸಮುದಾಯದ ಅರಂಬಾಯಿ ತೆಂಗೋಲ್ ಸಂಘಟನೆ ಕಾರ್ಯಕರ್ತರ ಗುಂಪೊಂದು, ಇಂಫಾಲ್ ನಗರದ ವಾಂಗ್‌ಖಿ ಪ್ರದೇಶದಲ್ಲಿರುವ ಎಎಸ್‌ಪಿ ಎಂ. ಅಮಿತ್ ಸಿಂಗ್ ಅವರ ನಿವಾಸದ ಮೇಲೆ ಮಂಗಳವಾರ ರಾತ್ರಿ ದಾಳಿ ನಡೆಸಿತ್ತಲ್ಲದೇ, ಹಲವು ಸುತ್ತು ಗುಂಡು ಹಾರಿಸಿತ್ತು. ನಂತರ ಅವರನ್ನು ಅಪಹರಿಸಿತ್ತು.

ಕೇಂದ್ರ ಹಾಗೂ ರಾಜ್ಯ ಪೊಲೀಸ್ ಪಡೆಗಳು ಕ್ಷಿಪ್ರ ಕಾರ್ಯಾಚರಣೆ ನಡೆಸಿ, ಅಮಿತ್ ಸಿಂಗ್ ಅವರನ್ನು ರಕ್ಷಿಸಿವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಬೆಳವಣಿಗೆ ಬೆನ್ನಲ್ಲೇ, ಅಸ್ಸಾಂ ರೈಫಲ್ಸ್‌ನ ನಾಲ್ಕು ತುಕಡಿಗಳನ್ನು ಜಿಲ್ಲೆಯಲ್ಲಿ ನಿಯೋಜಿಸಲಾಗಿದೆ.

'ಎಎಸ್‌ಪಿ ನಿವಾಸದ ಮೇಲಿನ ದಾಳಿಯನ್ನು ಖಂಡಿಸಿ ಪಶ್ಚಿಮ ಇಂಫಾಲ್ ಜಿಲ್ಲೆಯ ಕಮಾಂಡೊಗಳು ತಾವು ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿಗಳಲ್ಲಿ ಸಾಂಕೇತಿಕವಾಗಿ ಶಸ್ತ್ರ ತ್ಯಾಗ ಮಾಡುವ ಮೂಲಕ ಪ್ರತಿಭಟನೆ ನಡೆಸಿದ್ದಾರೆ. 'ಮಂಗಳವಾರ ರಾತ್ರಿ ಸಂಘಟನೆಯ ಕಾರ್ಯಕರ್ತರ ಗುಂಪು ದಾಳಿ ನಡೆಸಿತು. ವಾಹನ ಕಳವು ಪ್ರಕರಣಕ್ಕೆ ಸಂಬಂಧಿಸಿ ಸಂಘಟನೆಯ ಆರು ಜನರನ್ನು ಅಮಿತ್ ಸಿಂಗ್ ಈಚೆಗೆ ಬಂಧಿಸಿದ್ದರು. ಇದೇ ಕಾರಣಕ್ಕೆ ಅಧಿಕಾರಿ ಮೇಲೆ ದಾಳಿ ನಡೆಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅವರ ನಿವಾಸದ ಆವರಣದಲ್ಲಿ ನಿಲುಗಡೆ ಮಾಡಲಾಗಿದ್ದ ನಾಲ್ಕು ವಾಹನಗಳಿಗೆ ಹಾನಿ ಮಾಡಿರುವ ಗುಂಪು, ಮನೆಯ ಕಿಟಕಿ ಹಾಗೂ ಹೂಕುಂಡಗಳನ್ನು ಒಡೆದು ಹಾಕಿದೆ.

ಆರು ಜನರ ಬಿಡುಗಡೆಗೆ ಒತ್ತಾಯಿಸಿ, ಮೈತೇಯಿ ಸಮುದಾಯದ ಮಹಿಳೆಯರ ಗುಂಪು 'ಮೀರಾ ಪೈಬೀಸ್' ಸದಸ್ಯರು ಪ್ರತಿಭಟನೆ ನಡೆಸಿ, ರಸ್ತೆ ಬಂದ್ ಮಾಡಿದ್ದರು.

ಪ್ರೊ ಕಬಡ್ಡಿ ಲೀಗ್: ಹಾಲಿ ಚಾಂಪಿಯನ್ ಜೈಪುರ, ಪಟ್ನಾಗೆ ನಿರಾಸೆ

ಪ್ರಶಸ್ತಿ ಸುತ್ತಿಗೆ ಪುಣೇರಿ, ಹರಿಯಾಣ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಮೇಲೆ 31–27ರಲ್ಲಿ ನಾಲ್ಕು ಪಾಯಿಂಟ್‌ಗಳ ಹೋರಾಟದ ಜಯಗಳಿಸಿದ ಹರಿಯಾಣ ಸ್ಟೀಲರ್ಸ್ ತಂಡ ಬುಧವಾರ ಪ್ರೊ ಕಬಡ್ಡಿ ಲೀಗ್‌ನಲ್ಲಿ ಮೊದಲ ಬಾರಿ ಫೈನಲ್‌ಗೆ ತಲುಪಿತು. ಶುಕ್ರವಾರ ನಡೆಯುವ ಫೈನಲ್‌ನಲ್ಲಿ ಹರಿಯಾಣ ತಂಡ, ಕಳೆದ ಸಲದ ರನ್ನರ್ ಅಪ್ ಪುಣೇರಿ ಪಲ್ಟನ್ ತಂಡವನ್ನು ಎದುರಿಸಲಿದೆ.

ಗಚ್ಚಿಬೌಲಿ ಕ್ರೀಡಾ ಸಂಕೀರ್ಣದಲ್ಲಿ ಬುಧವಾರ ನಡೆದ ಲೀಗ್‌ನ ಹತ್ತನೇ ಆವೃತ್ತಿಯ ಮೊದಲ ಸೆಮಿ ಫೈನಲ್‌ನಲ್ಲಿ ಪುಣೇರಿ ತಂಡ ಸ್ಫೂರ್ತಿದಾಯಕ ಪ್ರದರ್ಶನ ನೀಡಿ 37–21 ರಲ್ಲಿ 16 ಪಾಯಿಂಟ್‌ಗಳಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿ ಸತತ ಮೂರನೇ ಸಲ ಫೈನಲ್ ಪ್ರವೇಶಿಸಿತ್ತು. ಈ ಬಾರಿ ಯಾವ ತಂಡ ಗೆದ್ದರೂ ಮೊದಲ ಸಲ ಚಾಂಪಿಯನ್ ಆಗಲಿದೆ.

ಟೂರ್ನಿಯುದ್ದಕ್ಕೂ ಉತ್ತಮ ರೈಡಿಂಗ್ ಪ್ರದರ್ಶಿಸಿರುವ ಜೈಪುರದ ತಂಡದ ಸ್ಟಾರ್ ರೈಡರ್ ಅರ್ಜುನ್ ದೇಶ್ವಾಲ್ 14 ಪಾಯಿಂಟ್ಸ್ ಕಲೆಹಾಕಿದರೂ, ಅವರಿಗೆ ಉಳಿದ ಆಟಗಾರರಿಂದ ಉತ್ತಮ ಬೆಂಬಲ ದೊರೆಯಲಿಲ್ಲ. ಹರಿಯಾಣದ ಪ್ರಮುಖ ರೈಡರ್ ವಿನಯ್ 11 ಪಾಯಿಂಟ್ಸ್ ಗಳಿಸಿ ಗಮನ ಸೆಳೆದರು. ಅವರಿಗೆ ಲೆಫ್ಟ್ ರೈಡರ್ ಶಿವಂ ಪತಾರೆ (7 ಪಾಯಿಂಟ್ಸ್) ಅವರಿಂದ ಉತ್ತಮ ಬೆಂಬಲ ದೊರೆಯಿತು.

ಪಂದ್ಯದ ಬಹುಪಾಲು ಅವಧಿಗೆ ಹರಿಯಾಣ ತಂಡ ಮುನ್ನಡೆ ಸಾಧಿಸಿತ್ತು. ವಿರಾಮದ ವೇಳೆಗೆ 19–13ರಲ್ಲಿ ಲೀಡ್ ಪಡೆದಿತ್ತು.

ಪುಣೇರಿ ಮೇಲುಗೈ: ಇದಕ್ಕೆ ಮೊದಲು ಪುಣೇರಿ ತಂಡ ಎರಡೂ ಅವಧಿಯಲ್ಲಿ ಅಧಿಕಾರಯುತ ಪ್ರದರ್ಶನ ನೀಡಿತು. ಪುಣೇರಿ ಪರ ಅಸ್ಲಂ ಮುಸ್ತಾಫಾ ಮತ್ತು ಪಂಕಜ್ ಮೋಹಿತೆ ತಲಾ ಏಳು ಅಂಕಗಳನ್ನು ಗಳಿಸಿ ರೈಡಿಂಗ್‌ನಲ್ಲಿ ಬಹುಪಾಲು ಅಂಕ ಕಲೆಹಾಕಿದರು. ಟ್ಯಾಕ್ಲಿಂಗ್‌ನಲ್ಲಿ ಇರಾನ್‌ನ ಮೊಹಮದ್ ರೇಝಾ ಚಿಯೆನ್ನಾ ಐದು ಪಾಯಿಂಟ್ಸ್ ಕಲೆಹಾಕಿದರು.

ಪುಣೇರಿ ಪಲ್ಟನ್ ವಿರಾಮದ ವೇಳೆಗೆ 9 ಪಾಯಿಂಟ್‌ಗಳ (20–11) ಮುನ್ನಡೆ ಸಾಧಿಸಿತ್ತು. ಅಸ್ಲಂ ಬಳಗ, ವಿರಾಮಕ್ಕೆ ಮೊದಲು ಮತ್ತು ನಂತರ ತಲಾ ಒಮ್ಮೆ ಎದುರಾಳಿ ಪಟ್ನಾ ತಂಡವನ್ನು ಆಲೌಟ್ ಮಾಡಿತು.

ಮೂರು ಬಾರಿಯ ಚಾಂಪಿಯನ್ ಪಟ್ನಾ ಪರ ನಾಯಕ ಸಚಿನ್ (5 ಪಾಯಿಂಟ್ಸ್) ಹೋರಾಟ ತೋರಿದರೂ ಅವರಿಗೆ ಉಳಿದವರಿಂದ ಬೆಂಬಲ ದೊರೆಯಲಿಲ್ಲ.

ಮೊದಲ 9 ನಿಮಿಷಗಳಲ್ಲಿ ಇತ್ತಂಡಗಳು ಜಿದ್ದಾಜಿದ್ದಿನ ಹೋರಾಟದಲ್ಲಿ ತೊಡಗಿದವು.ಆದರೆ 11ನೇ ನಿಮಿಷದಲ್ಲಿ 10-8ರಲ್ಲಿ ಮೊದಲ ಬಾರಿ ಮುನ್ನಡೆ ಸಾಧಿಸಿದ ಬಿ.ಸಿ.ರಮೇಶ್ ತರಬೇತಿಯ ಪುಣೇರಿ ತಂಡ ನಂತರ ಅದನ್ನು ಪಂದ್ಯದುದ್ದಕ್ಕೂ ಉಳಿಸಿಕೊಂಡಿತು. 16ನೇ ನಿಮಿಷ ಪೈರೇಟ್ಸ್ ತಂಡ ಮೊದಲ ಸಲ ಆಲೌಟ್ ಆಯಿತು.

ಹೈದರಾಬಾದ್‌ನಲ್ಲಿ ಬುಧವಾರ ನಡೆದ ಪ್ರೊ ಕಬಡ್ಡಿ ಲೀಗ್‌ನ ಸೆಮಿಫೈನಲ್ ಪಂದ್ಯದಲ್ಲಿ ಪುಣೇರಿ ಪಲ್ಟನ್ ಮತ್ತು ಪಟ್ನಾ ಪೈರೇಟ್ಸ್ ತಂಡಗಳ ನಡುವೆ ಹಣಾಹಣಿ

‘ಹಾಕಿ ಇಂಡಿಯಾದಲ್ಲಿ ಒಡಕಿಲ್ಲ’

ನವದೆಹಲಿ (ಪಿಟಿಐ): ಹಾಕಿ ಇಂಡಿಯಾ ಸಿಇಒ ಎಲೆನಾ ನಾರ್ಮನ್ ಅವರು ಆರೋಪಿಸಿರುವ ರೀತಿ ತಮ್ಮ ನಡುವೆ ಯಾವುದೇ ಒಡಕು ಇಲ್ಲ ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಮತ್ತು ಮಹಾ ಕಾರ್ಯದರ್ಶಿ ಭೋಲಾನಾಥ್ ಸಿಂಗ್ ಬುಧವಾರ ಹೇಳಿದ್ದಾರೆ. ತಾವು ಒಗ್ಗಟ್ಟಾಗಿದ್ದು, ಕ್ರೀಡೆಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿರುವುದಾಗಿ ಹೇಳಿಕೆ ನೀಡಿದ್ದಾರೆ.

ದಿಲೀಪ್ ಟಿರ್ಕಿ

ನಾರ್ಮನ್ ಅವರು ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹಾಕಿ ಇಂಡಿಯಾದಲ್ಲಿ ಎರಡು ಬಣಗಳಿವೆ. ಟಿರ್ಕಿ ಮತ್ತು ಸಿಂಗ್ ನಡುವೆ ಕಲಹ ನಡೆಯುತ್ತಿದ್ದು, ಸಂಸ್ಥೆಯಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ ಎನ್ನುವ ವಾತಾವರಣ ಇದೆ’ ಎಂದು ಆಸ್ಟ್ರೇಲಿಯಾದ 49 ವರ್ಷ ವಯಸ್ಸಿನ ಎಲೆನಾ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ದೂರಿದ್ದರು.

ಆದರೆ ಟಿರ್ಕಿ ಮತ್ತು ಸಿಂಗ್ ಅವರು ಜಂಟಿ ಹೇಳಿಕೆಯಲ್ಲಿ ಎಲೆನಾ ಆರೋಪಗಳನ್ನು ನಿರಾಕರಿಸಿದ್ದಾರೆ. ‘ಇತ್ತೀಚೆಗೆ ಹಾಕಿ ಇಂಡಿಯಾದಿಂದ ಹೊರಹೋಗುತ್ತಿರುವ ಅಧಿಕಾರಿಗಳು ಸಂಸ್ಥೆಯಲ್ಲಿ ಬಣಗಳು ಇವೆ ಎಂದು ಮಾಧ್ಯಮಗಳ ಮುಂದೆ ಹೇಳುತ್ತಿದ್ದಾರೆ. ಇದು ಸರ್ವಥಾ ಸರಿಯಲ್ಲ. ನಾವು ಒಗ್ಗಟ್ಟಾಗಿದ್ದು, ಈ ಹಿಂದಿನಂತೆ ಕ್ರೀಡೆಯ ಹಿತಾಸಕ್ತಿ ಲಕ್ಷಿಸಿ ಕಾರ್ಯನಿರ್ವಹಿಸುತ್ತಿದ್ದೇವೆ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಹಾಕಿ ಇಂಡಿಯಾ ಭಾರತದಲ್ಲಿ ಆಟದ ಏಳಿಗೆ, ಅಭಿವೃದ್ಧಿಗಾಗಿ ಬದ್ಧವಾಗಿರುವ ಸ್ವಾಯತ್ತ ಸಂಸ್ಥೆ. ಹಿಂದಿನಿಂದಲೂ ತಂಡಗಳನ್ನು ಮತ್ತು ಆಟಗಾರರನ್ನು ಸಂಸ್ಥೆ ಸಮಾನವಾಗಿ ಕಾಣುತ್ತಿದೆ. ಸಂಸ್ಥೆಯಲ್ಲೂ ಸಮಾನತೆಯ ವಾತಾವರಣ ಇದೆ’ ಎಂದು ಸ್ಪಷ್ಟಪಡಿಸಿದ್ದಾರೆ.

ದೀರ್ಘಕಾಲ ಸಿಇಒ ಆಗಿದ್ದ ನಾರ್ಮನ್ ಅವರ ರಾಜೀನಾಮೆ ಹಾಕಿ ಇಂಡಿಯಾಕ್ಕೆ ಎರಡನೇ ಹೊಡೆತ ಎನಿಸಿದೆ. ಕೆಲವೇ ದಿನಗಳ ಹಿಂದೆ ಮಹಿಳಾ ತಂಡದ ಕೋಚ್ ಯಾನೆಕ್ ಶೋಪ್ಮನ್ ಅವರು ರಾಜೀನಾಮೆ ನೀಡಿದ್ದರು. ಅವರೂ ಕೆಲಸ ಮಾಡಲು ಯೋಗ್ಯ ವಾತಾವರಣ ಇಲ್ಲ ಎಂದಿದ್ದರು. ಅಷ್ಟೇ ಅಲ್ಲ, ಹಾಕಿ ಇಂಡಿಯಾವು, ಮಹಿಳಾ ಹಾಕಿ ಕಡೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ದೂರಿದ್ದರು

ನರೀಂದರ್ ಬಾತ್ರಾ ಹಾಕಿ ಇಂಡಿಯಾ ಮುಖ್ಯಸ್ಥರಾಗಿದ್ದ ಸಂದರ್ಭದಲ್ಲಿ, 2011ರಲ್ಲಿ ಎಲೆನಾ ನಾರ್ಮನ್ ಸಂಸ್ಥೆಯ ಮೊದಲ ಸಿಇಒ ಆಗಿ ನೇಮಕಗೊಂಡಿದ್ದರು.

‘ಹಾಕಿ ಇಂಡಿಯಾದಲ್ಲಿ ಎರಡು ಬಣಗಳಿವೆ. ಅಧ್ಯಕ್ಷ ದಿಲೀಪ್ ಟಿರ್ಕಿ ಮತ್ತು ನನ್ನನ್ನು ಒಳಗೊಂಡ ಒಂದು ಗುಂಪು. ಕಾರ್ಯದರ್ಶಿ ಬೋಲಾನಾಥ್, ಕಾರ್ಯನಿರ್ವಾಹಕ ನಿರ್ದೇಶಕ ಕಮಾಂಡರ್ ಆರ್.ಕೆ.ಶ್ರೀವಾಸ್ತವ ಮತ್ತು ಖಜಾಂಚಿ ಶೇಖರ್ ಜೆ.ಮನೋಹರನ್ ನೇತೃತ್ವದ ಇನ್ನೊಂದು ಗುಂಪು ಇದೆ’ ಎಂದಿದ್ದರು ಎಲೆನಾ.

‘ಅಲ್ಲಿರುವ (ಹಾಕಿ ಇಂಡಿಯಾ) ಕೆಲವರಿಗೆ ಅಧಿಕಾರವಷ್ಟೇ ಬೇಕಿದೆ. ದಿಲೀಪ್ ಒಳ್ಳೆಯ ವ್ಯಕ್ತಿ. ಭಾರತ ಹಾಕಿಯ ಏಳಿಗೆಯನ್ನಷ್ಟೇ ಅಪೇಕ್ಷಿಸಿರುವವರು’ ಎಂದು ಹೇಳಿದ್ದರು.

ಸೆಮಿಗೆ ಕರ್ನಾಟಕ

ಬೆಂಗಳೂರು: ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಪಡೆದಿದ್ದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಾರ್ಖಂಡ್ ವಿರುದ್ಧ ಡ್ರಾ ಸಾಧಿಸಿ, ಸೆಮಿಫೈನಲ್ ಪ್ರವೇಶಿಸಿತು.

ಜಮ್ಶೆಡ್‌ಪುರದಲ್ಲಿ ನಡೆದ ಪಂದ್ಯಕ್ಕೆ ಬುಧವಾರ ಮಳೆಯಿಂದಾಗಿ ಅಡಚಣೆ ಉಂಟಾಯಿತು. ಮುನ್ನಡೆಯನ್ನು ಆಧರಿಸಿ ಫಲಿತಾಂಶ ಘೋಷಣೆ ಮಾಡಲಾಯಿತು.

ಕರ್ನಾಟಕ ತಂಡವು ಮಾರ್ಚ್ 3ರಿಂದ ನಾಗ್ಪುರದಲ್ಲಿ ನಡೆಯಲಿರುವ ಸೆಮಿಫೈನಲ್‌ನಲ್ಲಿ ವಿದರ್ಭ ತಂಡವನ್ನು ಎದುರಿಸಲಿದೆ. ಕರ್ನಾಟಕ ರಣಜಿ ತಂಡದಲ್ಲಿದ್ದ ಧೀರಜ್ ಗೌಡ ಮತ್ತು ಅನೀಶ್ ಕೆ.ವಿ. ತಂಡಕ್ಕೆ ಮರಳಿದ್ದಾರೆ.

ಮತ್ತೊಂದು ಸೆಮಿಫೈನಲ್‌ನಲ್ಲಿ ಉತ್ತರ ಪ್ರದೇಶ–ಮುಂಬೈ ತಂಡಗಳು ಮುಖಾಮುಖಿಯಾಗಲಿವೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ 113.3 ಓವರ್‌ಗಳಲ್ಲಿ 405 (ಪ್ರಖರ ಚತುರ್ವೇದಿ 147, ಸ್ಮರಣ್ ಆರ್. 106). ಜಾರ್ಖಂಡ್ 124.5 ಓವರ್‌ಗಳಲ್ಲಿ 362 (ರಾಬಿನ್ ಮಿಂಜ್ 137, ಕೌನೈನ್ ಕುರೇಶಿ 102). ಎರಡನೇ ಇನಿಂಗ್ಸ್: ಕರ್ನಾಟಕ 28 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 94 (ಪ್ರಖರ ಚತುರ್ವೇದಿ ಔಟಾಗದೆ 73)

ಸೆಮಿಫೈನಲ್‌ಗೆ ಕರ್ನಾಟಕ ತಂಡ: ಸ್ಮರಣ್ ಆರ್. (ನಾಯಕ), ಮ್ಯಾಕ್ನೀಲ್ ಎಚ್. ನೊರೊನ್ಹಾ, ಅನೀಶ್ವರ್ ಗೌತಮ್ (ಉಪನಾಯಕ), ಅನೀಶ್ ಕೆ.ವಿ, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ಮೊಹ್ಸಿನ್ ಖಾನ್, ರಾಜವೀರ್ ವಾಧ್ವಾ, ಮೊನೀಶ್ ರೆಡ್ಡಿ, ಲೋಚನ್ ಗೌಡ (ವಿಕೆಟ್ ಕೀಪರ್), ಪ್ರಖರ ಚತುರ್ವೇದಿ, ಪಾರಸ್ ಗುರುಬಕ್ಷ್ ಆರ್ಯ, ಮನ್ವಂತ್ ಕುಮಾರ್ ಎಲ್, ಧೀರಜ್ ಜೆ. ಗೌಡ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9844478636; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com